ವಿಶ್ವವಾಣಿ
ವಿಶ್ವಾಸವೇ ವಿಶ್ವ

## ಗಂಗಾಜಲ ಉಡುಗೊರೆ

ಮಾರಿಷಸ್‌ಗೆ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷ ಧರಮ್ ಗೋಖುಲ್ ಅವರನ್ನು ಭೇಟಿಯಾಗಿ ಮಹಾಕುಂಭ ಮೇಳದ ಗಂಗಾಜಲವನ್ನು ಉಡುಗೊರೆಯಾಗಿ ನೀಡಿದರು.

### ಸೊಂಪಾದ ಪುಟಗಳು

ಮಗುವಿನ ಜೀವನಚರಿತ್ರೆಯನ್ನು ಬರೆದ ಪ್ರಾತಃಸ್ಮರಣೀಯರು
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ 6

ಮತ್ತೆ ಬೊಫೋರ್ಸ್ ಫಿರಂಗಿ ಸದ್ದು!
ಲೋಕಮತ
ಲೋಕೇಶ್ ಕಾಯರ್ಗ 7


### ದಾರಿದೀಪೋಕ್ತಿ



ಸಮುದ್ರಕ್ಕೆ ನೀವು ಎಷ್ಟೇ ಸಕ್ಕರೆಯ ಮೂಟೆಯನ್ನು ಸುರಿದರೂ ಅದರ ನೀರು ಸಿಹಿಯಾಗುವುದಿಲ್ಲ. ಅದೇ ರೀತಿ ನೀವು ಕೆಟ್ಟ, ಸ್ವಾರ್ಥ ಮತ್ತು ದ್ವೇಷ ಭಾವವುಳ್ಳವರಿಗೆ ಎಷ್ಟೇ ಒಳ್ಳೆಯದನ್ನು ಮಾಡಿದರೂ ಅವರು ತಮ್ಮ ಗುಣವನ್ನು ಬಿಡುವುದಿಲ್ಲ. ಕೆಲವು ಸಲ ನಮ್ಮ ಪಾಡಿಗೆ ನಾವಿರುವುದೂ ಒಳ್ಳೆಯದೇ.

### ವಕ್ರತುಂಡೋಕ್ತಿ



ವಯಸ್ಸಾಗುವುದು ಕಡ್ಡಾಯ. ಬುದ್ಧಿ ಬರುವುದು ಐಚ್ಛಿಕ.

## ಸವದತ್ತಿ ದೇಗುಲಕ್ಕೆ ಪ್ರಸಾದ ನೆರವು

**ಬೆಂಗಳೂರು:** ಪ್ರಸಾದ್ (PRASHAD) ಯೋಜನೆ ಅಡಿಯಲ್ಲಿ ಬೆಳಗಾವಿಯ ಸವದತ್ತಿಯಲ್ಲಿರುವ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನದ ಅಭಿವೃದ್ಧಿ ಯೋಜನೆಗೆ ಕೇಂದ್ರ ಪ್ರವಾಸೋದ್ಯಮ ಸಚಿವಾಲಯ ಅನುಮೋದನೆ ನೀಡಿದೆ. ₹18.37 ಕೋಟಿ ವೆಚ್ಚದಲ್ಲಿ ಯಾತ್ರಿಕರ ಆಗಮನ ಕೇಂದ್ರ, ಕೆಫೆಟೇರಿಯಾ, ಪ್ರಥಮ ಚಿಕಿತ್ಸಾ ಕೇಂದ್ರ ಮತ್ತು ಇತರ ಆಧುನಿಕ ಸೌಲಭ್ಯಗಳನ್ನು ದೇವಸ್ಥಾನದಲ್ಲಿ ಅಭಿವೃದ್ಧಿಪಡಿಸಲಾಗುವುದು.

## ಕುಕ್ಕೆಗೆ ನಟಿ ಕತ್ರಿನಾ ಭೇಟಿ

**ಮಂಗಳೂರು:** ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಬಾಲಿವುಡ್ ನಟಿ ಕತ್ರಿನಾ ಕೈಫ್ ಅವರು ಸ್ನೇಹಿತರೊಂದಿಗೆ ಮಂಗಳವಾರ ಆಗಮಿಸಿದರು. ಶ್ರೀಕ್ಷೇತ್ರದಲ್ಲಿ ಮಂಗಳವಾರ ಹಾಗೂ ಬುಧವಾರ ಅವರಿದ್ದು, ಸರ್ಪ ಸಂಸ್ಕಾರ ಸೇವೆ ಹಾಗೂ ನಾಗಪ್ರತಿಷ್ಠೆ ಪೂಜೆಗಳಲ್ಲಿ ಭಾಗಿಯಾಗಲಿದ್ದಾರೆ.

### ಮಾತಂದ್ರೆ ಮಾತು

ಯತ್ನಾಳ ಅವರನ್ನು ಕೆಲವರು ಯಡಿಯೂರಪ್ಪ ವಿರುದ್ಧ ಮಾತನಾಡಲು ಎತ್ತಿ ಕಟ್ಟಿದ್ದಾರೆ. ಅವರನ್ನು ಚೂರಿಯಂತೆ ಬಳಸುತ್ತಿದ್ದಾರೆ. ಹಿಂದೆ ನನ್ನನ್ನೂ ಇದೇ ರೀತಿ ಬಳಸಿಕೊಂಡಿದ್ದರು, ಬಳಿಕ ನನಗೆ ಜ್ಞಾನೋದಯ ವಾಯಿತು. ಪಕ್ಷದ ಅಧ್ಯಕ್ಷರ ವಿರುದ್ಧ ಮಾತನಾಡುವವರು ಮುಖ್ಯಮಂತ್ರಿಯೂ ಆಗಲ್ಲ, ಪಕ್ಷದ ಅಧ್ಯಕ್ಷರೂ ಆಗಲ್ಲ.

- ಎಂ.ಪಿ.ರೇಣುಕಾಚಾರ್ಯ
ಮಾಜಿ ಸಚಿವ

### ಫನ್‌ತರಂಗ

- ರಘುಪತಿ ಶೃಂಗೇರಿ -




# ಗ್ಯಾರಂಟಿ ಸಮಿತಿ ಅಧಿಕಾರಕ್ಕೆ ಗರಂ

## ಶಾಸಕರ ಹಕ್ಕುಚ್ಯುತಿ ಆರೋಪ, ಸದನದಲ್ಲಿ ಕೋಲಾಹಲ

ವಿಶ್ವವಾಣಿ ಸುದ್ದಿಮನೆ

**ವಿಧಾನಸಭೆ:** ಇಷ್ಟು ದಿನ ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿಯಲ್ಲಾಗುತ್ತಿರುವ ಕುಂಠಿತಕ್ಕೆ ಸಂಬಂಧಿಸಿದಂತೆ ಸರಕಾರದ ವಿರುದ್ಧ ಮುಗಿಬೀಳುತ್ತಿದ್ದ ಪ್ರತಿಪಕ್ಷ ಬಿಜೆಪಿ, ಮಂಗಳವಾರ ಗ್ಯಾರಂಟಿ ಅನುಷ್ಠಾನ ಸಮಿತಿ ಕುರಿತು ಪ್ರಶ್ನೆ ಎತ್ತಿದ್ದು, ಈ ಕುರಿತ ವಾದ ವಿವಾದದಲ್ಲಿಯೇ ಮಂಗಳವಾರದ ಕಲಾಪ ಕಳೆದು ಹೋಯಿತು.

ಮಂಗಳವಾರ ಬೆಳಗ್ಗೆ ಪ್ರಶ್ನೋತ್ತರ ಅವಧಿಯಲ್ಲಿ ತುರುವೇಕೆರೆ ಶಾಸಕ ಎಂ.ಟಿ.ಕೃಷ್ಣಪ್ಪ ಅವರು ಗ್ಯಾರಂಟಿ ಅನುಷ್ಠಾನ ಸಮಿತಿಗೆ ಸಂಬಂಧಿಸಿದಂತೆ ಪ್ರಶ್ನಿಸಿದ್ದರು. ಜಿಲ್ಲಾ ಹಾಗೂ ತಾಲೂಕು ಮಟ್ಟದ ಅನುಷ್ಠಾನ ಸಮಿತಿಗೆ ನೇಮಕಗೊಂಡಿರುವ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರಿಗೆ ನೀಡುತ್ತಿರುವ ವೇತನ, ಸಭಾಭತ್ಯೆಗೆ ಸಂಬಂಧಿಸಿದಂತೆ ಪ್ರಶ್ನಿಸಿದ್ದರು. ಇದಕ್ಕೆ ಸರಕಾರದಿಂದ ಉತ್ತರ ಬರುವ ಮೊದಲೇ, ಬಿಜೆಪಿ ಶಾಸಕರು, ತಾಲೂಕು ಮಟ್ಟದಲ್ಲಿ ಶಾಸಕರಿರುವಾಗ ಈ ಸಮಿತಿಯ ಅಗತ್ಯವೇನಿದೆ? ಕಾಂಗ್ರೆಸ್ ಕಾರ್ಯಕರ್ತರಿಗೆ 'ಗಂಜಿ ಕೇಂದ್ರ'ವಾಗಿ ಪರಿವರ್ತನೆ ಮಾಡಲು ಈ ರೀತಿ ಮಾಡಲಾಗಿದೆ. ಈ ಸಮಿತಿಯಿಂದ ಶಾಸಕರ ಹಕ್ಕುಚ್ಯುತಿಯಾಗುತ್ತದೆ ಎಂದು ವಾಗ್ದಾಳಿ ನಡೆಸಿದರು. ಬಿಜೆಪಿಗರ ಈ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸಿಗರು ತಿರುಗೇಟು ನೀಡಿದರು.

ಈ ವೇಳೆ ಆಡಳಿತ-ಪ್ರತಿಪಕ್ಷ ಶಾಸಕರ ನಡುವೆ ವಾಕ್ಸಮರ ನಡೆಯಿತು. ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಬಗ್ಗೆ ಪರಿಶೀಲಿಸಲು ಸಮಿತಿ ರಚಿಸಲಾಗಿದೆ. ಇದಕ್ಕೆ ಶಾಸಕರನ್ನು ಅಧ್ಯಕ್ಷರನ್ನು ಮಾಡುವ ಯಾವುದೇ ಪ್ರಸ್ತಾಪ ಸರಕಾರದ ಮುಂದಿಲ್ಲ. ಈ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚಿಸಿ ಮುಂದಿನ ಕ್ರಮಕೈಗೊಳ್ಳುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮಿತಿಯನ್ನು ಸಮರ್ಥಿಸಿಕೊಂಡರು. ಈ ನಡೆಯನ್ನು ತೀವ್ರವಾಗಿ ಖಂಡಿಸಿದ ಬಿಜೆಪಿ ಶಾಸಕರು ಬಾವಿಗಿಳಿದು ಪ್ರತಿಭಟನೆ ನಡೆಸಿದರು.

→ 4

ತಾಲೂಕುಗಳಿಗೆ ಶಾಸಕರೇ ಸುಪ್ರೀಂ. ನಾವೆಲ್ಲ ಚುನಾವಣೆಯಲ್ಲಿ ಗೆದ್ದು ಬಂದಿದ್ದೇವೆ. ಆದರೆ ಸರಕಾರ ನಾಮನಿರ್ದೇಶನ ಮಾಡಿರುವ ಕಾಂಗ್ರೆಸ್ ಕಾರ್ಯಕರ್ತರ ಕೆಳಗೆ ಕೆಲಸ ಮಾಡಲು ಸಾಧ್ಯವಿಲ್ಲ. ಗ್ಯಾರಂಟಿ ಎನ್ನುವುದು ಕಾಂಗ್ರೆಸ್ ಯೋಜನೆಯಾದರೂ, ಜಾರಿಯಾದ ಬಳಿಕ ಎಲ್ಲ ಪಕ್ಷದ ಶಾಸಕರು ಈ ಸಮಿತಿಯ ಮೇಲ್ವಿಚಾರಣೆ ಮಾಡಬೇಕು. ಇಲ್ಲವಾದರೆ ತಪ್ಪಾಗುತ್ತದೆ.

- **ಆರ್.ಅಶೋಕ,** ಪ್ರತಿಪಕ್ಷ ನಾಯಕ

52 ಸಾವಿರ ಕೋಟಿ ರೂಪಾಯಿಯ ಬೃಹತ್ ಯೋಜನೆ ಜನರಿಗೆ ತಲುಪುತ್ತಿದೆಯೋ ಇಲ್ಲವೋ ಎಂಬುದನ್ನು ಮನೆ, ಮನೆಗೆ ತೆರಳಿ ಪರೀಕ್ಷೆ ಮಾಡಿ. ಜನರಿಗೆ ಉಪಯೋಗವಾಗುತ್ತಿದೆಯೋ ಇಲ್ಲವೋ ಎಂದು ತಿಳಿಯಲು ಕಾರ್ಯಕರ್ತರಿಗೆ ಅವಕಾಶ ಮಾಡಿಕೊಟ್ಟರೆ ಅದನ್ನು ನಿಮ್ಮ ಕೈಯಲ್ಲಿ ತಡೆದುಕೊಳ್ಳಲು ಆಗುತ್ತಿಲ್ಲ. ಅದಕ್ಕೆ ಈ ರೀತಿಯ ಅನವಶ್ಯಕ ಆರೋಪ ಮಾಡುತ್ತಿದ್ದಾರೆ.

- **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

### ಬಿಜೆಪಿಗರ ಆಗ್ರಹವೇನು?

- ಗ್ಯಾರಂಟಿ ಅನುಷ್ಠಾನವನ್ನು ಗಮನಿಸಲು ಪ್ರತ್ಯೇಕ ಸಮಿತಿಯ ಅಗತ್ಯವೇನಿದೆ?
- ಸಮಿತಿ ಮಾಡಿದ್ದರೂ ಸ್ಥಳೀಯ ಶಾಸಕರನ್ನೇ ಈ ಸಮಿತಿಗಳಿಗೆ ಅಧ್ಯಕ್ಷರನ್ನಾಗಿ ಮಾಡಿ
- ಕಾಂಗ್ರೆಸ್ ಕಾರ್ಯಕರ್ತರಿಗೆ ಸ್ಥಾನ ನೀಡಲು, ತೆರಿಗೆ ಹಣ ವ್ಯರ್ಥ ಮಾಡುವುದು ಒಪ್ಪಲ್ಲ

### ಕಾಂಗ್ರೆಸಿಗರ ಸಮರ್ಥನೆ

- ಪಕ್ಷದ ಕಾರ್ಯಕರ್ತರಿಗೆ ಸರಕಾರದ ಭಾಗವಾಗುವ ಹಕ್ಕಿದೆ
- ಗ್ಯಾರಂಟಿ ಯೋಜನೆ ಜಾರಿಯಾದಾಗಿನಿಂದ ಬಿಜೆಪಿಯ ಈ ರೀತಿಯ ಲೋಪ ಹುಡುಕುತ್ತಿದೆ.
- ಬಿಜೆಪಿಯವರು ಮಹಾರಾಷ್ಟ್ರದಲ್ಲಿ ಆರ್‌ಎಸ್‌ಎಸ್‌ನವರಿಗೆ ಅವಕಾಶ ನೀಡಿರುವಾಗ, ಇದರಲ್ಲಿ ತಪ್ಪೇನಿದೆ?

ರನ್ಯಾ ಮನೆ ಮೇಲೆ ಸಿಬಿಐ ದಾಳಿ | ಸಿಎಂ, ಡಿಸಿಎಂ ಮಾತುಕತೆ | ಮುಂದುವರಿದ ರಾಜಕೀಯ ಜಟಾಪಟಿ

# ರನ್ಯಾ ಪ್ರಕರಣ ಡಿಜಿಪಿ ಪಾತ್ರದ ತನಿಖೆ

**ಬೆಂಗಳೂರು:** ಚಿನ್ನ ಕಳ್ಳಸಾಗಣೆ ಆರೋಪಿ ನಟಿ ರನ್ಯಾ ರಾವ್ ಪ್ರಕರಣಕ್ಕೆ ರಾಜಕೀಯ ನಂಟು ಬೆಸೆದುಕೊಂಡಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಗೌಪ್ಯ ಸಭೆ ನಡೆಸಿರುವ ಮಧ್ಯೆಯೇ ಶಿಷ್ಟಾಚಾರ ಸೌಲಭ್ಯ ನೀಡಿರುವ ಸಂಬಂಧ ತನಿಖೆ ನಡೆಸಲು ಹಿರಿಯ ಐಎಎಸ್ ಅಧಿಕಾರಿಯನ್ನು ನೇಮಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ. ಇದೇ ವೇಳೆ ಸಿಬಿಐ ರನ್ಯಾ ಅವರ ಮನೆ ಮೇಲೆ ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡಿದೆ.

ಪ್ರಕರಣದಲ್ಲಿ ರನ್ಯಾ ಜತೆ ಕೆಲ ಹಾಲಿ, ಮಾಜಿ ಸಚಿವರ ಸಂಪರ್ಕ ಇದೆ ಎಂಬ ವದಂತಿ ಬೆನ್ನಲ್ಲೇ ಬಿಜೆಪಿ ರಾಜ್ಯಾಧ್ಯಕ್ಷರ ಹೆಸರು ಕೇಳಿಬಂದಿರುವುದು ಪ್ರಕರಣಕ್ಕೆ ಹೊಸ ತಿರುವು ನೀಡಿದೆ. ಪ್ರಕರಣ ಸಂಬಂಧ ಹಲವು ಆಯಾಮಗಳ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಅವರು ವಿಧಾನಸೌಧದಲ್ಲಿ ಸರಕಾರದ ನಡೆ ಯಾವ ರೀತಿ ಇರಬೇಕೆಂಬುದರ ಕುರಿತು ಮಹತ್ವದ ಸಮಾಲೋಚನೆ ನಡೆಸಿದ್ದಾರೆ. ಈ ವೇಳೆ ಯಾರನ್ನೂ ಒಳಕ್ಕೆ ಬಿಟ್ಟುಕೊಳ್ಳದೇ ಇಬ್ಬರೂ ನಾಯಕರು ಮಾತುಕತೆ ನಡೆಸಿರುವ ವೇಳೆಯಲ್ಲಿಯೇ ಸಿಐಡಿ ಎಂಟ್ರಿ ಆಗಿದೆ.

→ 4

### ಆದೇಶದ ಪ್ರಮುಖ ಅಂಶ

- ಪ್ರಕರಣದಲ್ಲಿ ಐಪಿಎಸ್ ಅಧಿಕಾರಿ ರಾಮಚಂದ್ರ ರಾವ್ ಪಾತ್ರದ ಬಗ್ಗೆ ತನಿಖೆ ನಡೆಸುವುದು ಅಗತ್ಯ
- ಶಿಷ್ಟಾಚಾರ ಸೌಲಭ್ಯಗಳನ್ನು ಪಡೆದುಕೊಳ್ಳಲು ಕಾರಣವಾದ ಅಂಶ, ಸಂದರ್ಭಗಳ ಕುರಿತು ತಿಳಿಯಬೇಕು
- ತನಿಖಾಧಿಕಾರಿಗಳು ತನಿಖೆಯನ್ನು ತಕ್ಷಣ ಪ್ರಾರಂಭಿಸಬೇಕು. ಒಂದು ವಾರದೊಳಗೆ ವರದಿ ಸಲ್ಲಿಸಬೇಕು

## ವಿಜಯೇಂದ್ರಗೆ ಪ್ರಿಯಾಂಕ್ ಸವಾಲ್

ರನ್ಯಾ ರಾವ್ ಉನ್ನತ ಪೊಲೀಸ್ ಅಧಿಕಾರಿಯೊಬ್ಬರ ಪುತ್ರಿಯಾಗಿರುವ ಕಾರಣ ಸರಕಾರದ ವ್ಯವಸ್ಥೆಯ ಮೇಲೆ ಕರಿನೆರಳು ಆವರಿಸಿದೆ. ಈ ಪ್ರಕರಣ ನಮ್ಮ ರಾಜ್ಯಕ್ಕೂ ಕಳಂಕ ತಂದಿದ್ದು, ಈ ಹಿನ್ನೆಲೆ ಸಿಎಂ ಸಿದ್ದರಾಮಯ್ಯ ಅವರು ಈ ಪ್ರಕರಣದ ಕುರಿತು ವಾಸ್ತವ ಸ್ಥಿತಿ ಜನತೆಗೆ ತಿಳಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದರು. ಇದಕ್ಕೆ ತಿರುಗೇಟು ನೀಡಿರುವ ಸಚಿವ ಪ್ರಿಯಾಂಕ್ ಖರ್ಗೆ, ವಿಜಯೇಂದ್ರ ಕೂಡ ದುಬೈಗೆ ಹೋಗಿ ಬರುತ್ತಾರೆ. ಅವರದ್ದೇ ಪಕ್ಷದ ಬಸನಗೌಡ ಪಾಟೀಲ್ ಯತ್ನಾಳ್ ಅವರು ಹೇಳುವಂತೆ ವಿಜಯೇಂದ್ರ ಅವರಿಗೆ ದುಬೈ ಬಗ್ಗೆ ಬಹಳಷ್ಟು ಅನುಭವ ಇದೆ. ಇದನ್ನು ನಾವಲ್ಲ ಹೇಳಿರೋದು. ದುಬೈನಲ್ಲಿ ವಿಜಯೇಂದ್ರ ಅವರ ಸಾಕಷ್ಟು ದುಡ್ಡಿದೆ ಎಂದು ಯತ್ನಾಳ್ ಅವರೇ ಹೇಳಿದ್ದಾರೆ. ಹಾಗಾಗಿ ವಿಜಯೇಂದ್ರ ಅವರಿಗೆ ಈ ವಿಚಾರ ಗೊತ್ತಿರಬಹುದು. ಅವರಿಗೆ ಮಾಹಿತಿ ಇದ್ದರೆ ಕೊಡಲಿ, ಬೇಕಾದರೆ ತನಿಖೆ ಮಾಡಿಸುತ್ತೇವೆ. ಈಗ ತನಿಖೆ ನಡೆಸುತ್ತಿರೋ ಸಿಬಿಐ, ಡಿಆರ್‌ಐ ಅವರದ್ದೇ ಸಂಸ್ಥೆ. ಸುಮ್ಮನೆ ಗಾಳಿಯಲ್ಲಿ ಗುಂಡು ಹಾರಿಸುವ ಬದಲು ದಾಖಲೆಗಳಿದ್ದರೆ ಕೊಡಿ ಸ್ವಾಮಿ..ಎಂದು ಪ್ರಿಯಾಂಕ್ ಖರ್ಗೆ ಸವಾಲು ಹಾಕಿದ್ದಾರೆ.

## ಬಲೂಚಿಸ್ತಾನ ಬಂಡುಕೋರರಿಂದ 6 ಮಂದಿ ಪಾಕ್ ಸೈನಿಕರ ಹತ್ಯೆ

# ಪಾಕ್ ರೈಲು ಹೈಜಾಕ್ 120 ಮಂದಿ ಒತ್ತೆಸೆರೆ

**ಇಸ್ಲಾಮಾಬಾದ್:** ಪಾಕಿಸ್ತಾನದ ಬಲೂಚಿಸ್ತಾನದಲ್ಲಿ 120 ಪ್ರಯಾಣಿಕರಿದ್ದ ರೈಲನ್ನು ಬಲೂಚ್ ಲಿಬರೇಷನ್ ಆರ್ಮಿಯ (ಬಿಎಲ್‌ಎ) ಉಗ್ರರು ಮಂಗಳವಾರ ಹೈಜಾಕ್ ಮಾಡಿದ್ದಾರೆ. ರೈಲಿನಲ್ಲಿದ್ದ ಪ್ರಯಾಣಿಕರನ್ನು ಒತ್ತೆಯಾಳುಗಳಾಗಿ ಇರಿಸಿಕೊಳ್ಳಲಾಗಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಕ್ವೆಟ್ಟಾದಿಂದ ಜಾಫರ್ ಎಕ್ಸ್‌ಪ್ರೆಸ್ ರೈಲು ಪೇಶಾವರ್‌ಗೆ ತೆರಳುತ್ತಿತ್ತು. ಈ ವೇಳೆ ಬಿಎಲ್‌ಎ ಉಗ್ರರು ಹಳಿಗಳನ್ನು ಸ್ಫೋಟಿಸಿ ರೈಲನ್ನು ತಡೆದಿದ್ದಾರೆ. ನಂತರ 9 ಬೋಗಿಗಳಲ್ಲಿ ಇದ್ದ ಪ್ರಯಾಣಿಕರನ್ನು ಒತ್ತೆಯಾಳುಗಳಾಗಿ ಇರಿಸಿಕೊಂಡಿದ್ದಾರೆ. ಹೈಜಾಕ್ ವೇಳೆ ಉಗ್ರರು ಹಾಗೂ ಪಾಕಿಸ್ತಾನದ ಭದ್ರತಾ ಸಿಬ್ಬಂದಿ ನಡುವೆ ಗುಂಡಿನ ಚಕಮಕಿ ನಡೆದಿದ್ದು, 6 ಜನ ರಕ್ಷಣಾ ಸಿಬ್ಬಂದಿ ಮೃತಪಟ್ಟಿದ್ದಾರೆ. ಹಲವು ಪ್ರಯಾಣಿಕರು ಗಾಯಗೊಂಡಿದ್ದಾರೆ.

ಈ ಬಗ್ಗೆ ಬಿಎಲ್‌ಎ ಉಗ್ರ ಸಂಘಟನೆ ಹೇಳಿಕೆ ಬಿಡುಗಡೆ ಮಾಡಿದ್ದು, ರೈಲು ಹೈಜಾಕ್ ಮಾಡಿರುವುದನ್ನು ಒಪ್ಪಿಕೊಂಡಿದೆ. ಪಾಕಿಸ್ತಾನ ಸೇನೆ ಕಾರ್ಯಾಚರಣೆ ನಡೆಸಿದರೆ ಪ್ರಯಾಣಿಕರನ್ನು ಕೊಲ್ಲಲಾಗುವುದು ಎಂದು ಬಿಎಲ್‌ಎ ವಕ್ತಾರರೊಬ್ಬರು ತಿಳಿಸಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಪ್ರಯಾಣಿಕರನ್ನು ಸುರಕ್ಷಿತವಾಗಿ ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪಾಕ್ ಸರಕಾರ ತಿಳಿಸಿದೆ.

### ಹೈಜಾಕ್‌ಗೆ ಕಾರಣವೇನು?

ಬಲೂಚ್ ಲಿಬರೇಷನ್ ಆರ್ಮಿಯು (ಬಿಎಲ್‌ಎ) ಪಾಕಿಸ್ತಾನದಿಂದ ಬಲೂಚಿಸ್ತಾನ ಪ್ರಾಂತ್ಯವನ್ನು ಪ್ರತ್ಯೇಕ ದೇಶವನ್ನಾಗಿ ಮಾಡಲು ಹೋರಾಟ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಯಾಣಿಕರ ರೈಲನ್ನು ಹೈಜಾಕ್ ಮಾಡಿದೆ. ಈ ಹಿಂದೆ ಕೂಡ ಬಿಎಲ್‌ಎ ಹಲವಾರು ಸ್ಫೋಟ ಪ್ರಕರಣಗಳಲ್ಲಿ ಭಾಗಿಯಾಗಿ ನೂರಾರು ಜನರನ್ನು ಹತ್ಯೆ ಮಾಡಿದೆ.

## ಮ್ಯಾನ್ಮಾರ್‌ನಲ್ಲಿ ವಂಚನೆಗೊಳಗಾಗಿದ್ದ 28 ಕನ್ನಡಿಗರು ವಾಪಸ್

**ದೆಹಲಿ:** ಉದ್ಯೋಗ ಅರಸಿ ವಿದೇಶಕ್ಕೆ ತೆರಳಿ ವಂಚನೆಗೆ ಒಳಗಾಗಿದ್ದ ನಾಲ್ವರು ಮಹಿಳೆಯರು ಸೇರಿ 28 ಮಂದಿ ಕನ್ನಡಿಗರನ್ನು ವಿದೇಶಾಂಗ ಸಚಿವಾಲಯ ರಕ್ಷಣೆ ಮಾಡಿದೆ. ರಕ್ಷಣೆಗೊಳಗಾದವರನ್ನು ದೆಹಲಿಯ ಕರ್ನಾಟಕ ಭವನದ ಅಧಿಕಾರಗಳ ನೆರವಿನೊಂದಿಗೆ ರಾಜ್ಯಕ್ಕೆ ಕಳುಹಿಸಿಕೊಡಲಾಗಿದೆ.

ಸೋಶಿಯಲ್ ಮೀಡಿಯಾ ಮೂಲಕ ಉದ್ಯೋಗ ನೀಡುವ ಭರವಸೆ ನೀಡಿ 283 ಭಾರತೀಯರನ್ನು ಥಾಯ್ಲೆಂಡ್‌ಗೆ ಕರೆಸಿಕೊಳ್ಳಲಾಗಿತ್ತು. ಅಲ್ಲಿಗೆ ತೆರಳಿದ್ದ ಭಾರತೀಯರನ್ನು ರಸ್ತೆ ಮಾರ್ಗದ ಮೂಲಕ ಮ್ಯಾನ್ಮಾರ್‌ಗೆ ಕರೆದುಕೊಂಡು ಹೋಗಲಾಗಿತ್ತು. ಅಲ್ಲಿ ಪಾಸ್‌ಪೋರ್ಟ್ ಕಿತ್ತುಕೊಂಡು ಕೆಲಸ ಮಾಡಿಸಿಕೊಳ್ಳಲಾಗುತ್ತಿತ್ತು. ಒತ್ತೆಯಾಳಾಗಿಟ್ಟುಕೊಂಡಿದ್ದ ಭಾರತೀಯರನ್ನು ದಿನಕ್ಕೆ 15 ಗಂಟೆಗೂ ಅಧಿಕ ಕೆಲಸ ಮಾಡಿಸಲಾಗುತ್ತಿತ್ತು. ಈ ವಿಷಯ ವಿದೇಶಾಂಗ ಸಚಿವಾಲಯ ಗಮನಕ್ಕೆ ಬಂದ ಬಳಿಕ ವಂಚನೆಗೊಳಗಾದವರನ್ನು ಗುರುತಿಸಿ ಮ್ಯಾನ್ಮಾರ್, ಥಾಯ್ಲೆಂಡ್ ರಾಯಭಾರ ಕಚೇರಿಗಳ ಮೂಲಕ ಭಾರತಕ್ಕೆ ವಾಪಸ್ ಕಳುಹಿಸಲಾಯಿತು. ಭಾರತಕ್ಕೆ ಬಂದ 28 ಕನ್ನಡಿಗರನ್ನು ಕರ್ನಾಟಕ ಭವನದ ಅಧಿಕಾರಿಗಳು ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಗೆ ಕಳುಹಿಸಿದ್ದಾರೆ.

## ಕೇಂದ್ರ ಬೆಳೆ ಕೊರತೆ ಪಾವತಿಯಡಿ ಪರಿಹಾರಕ್ಕೆ ಸಿದ್ದರಾಮಯ್ಯ ಮನವಿ

# ಕೆಂಪು ಮೆಣಸು ಧಾರಣೆ ಕುಸಿತ: ಕೇಂದ್ರಕ್ಕೆ ರಾಜ್ಯ ಪತ್ರ

**ಬೆಂಗಳೂರು:** ಮೆಣಸಿನ ಕಾಯಿ ಬೆಲೆಯಲ್ಲಿ ತೀವ್ರ ಕುಸಿತ ಕಂಡಿರುವ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹ್ವಾಣ್ ಅವರಿಗೆ ಪತ್ರ ಬರೆದು, ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಲ್ಲಿ ಬೆಲೆ ಕೊರತೆ ಪಾವತಿ ಮಾಡುವಂತೆ ಕೋರಿದ್ದಾರೆ.

ಮೋದಿ ಹಾಗೂ ಶಿವರಾಜ್ ಸಿಂಗ್ ಚೌಹ್ವಾಣ್ ಅವರಿಗೆ ಬರೆದಿರುವ ಪತ್ರದಲ್ಲಿ, ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಕೆಂಪು ಮೆಣಸಿನ ಕಾಯಿ ಬೆಳೆದಿರುವ ಲಕ್ಷಾಂತರ ರೈತರು ದರ ಕುಸಿತದಿಂದ ಕಂಗಾಲಾಗಿದ್ದಾರೆ ಎಂಬ ಅಂಶವನ್ನು ಉಲ್ಲೇಖಿಸಿದ್ದಾರೆ. ಆಂಧ್ರಪ್ರದೇಶದಲ್ಲಿ ರೈತರು ಬೆಳೆದ ಕೆಂಪು ಮೆಣಸಿನ ಕಾಯಿಗೆ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಕೇಂದ್ರ ಸರಕಾರ ಅನುಮೋದನೆ ನೀಡಿದೆ. ಉತ್ಪಾದನೆಯ ಶೇ.25ರವರೆಗಿನ ವ್ಯಾಪ್ತಿ ಯೊಂದಿಗೆ ಪ್ರತಿ ಕ್ವಿಂಟಾಲ್‌ಗೆ 11,781 ರು. ಕನಿಷ್ಠ ಮಧ್ಯಸ್ಥಿಕೆ ಬೆಲೆ ನಿಗದಿ ಪಡಿಸಿದೆ. ಈ ಯೋಜನೆಯನ್ನು ರಾಜ್ಯದ ರೈತರಿಗೂ ವಿಸ್ತರಿಸಬೇಕು ಎಂದು ಉಲ್ಲೇಖಿಸಿದ್ದಾರೆ.

ರಾಜ್ಯದಲ್ಲಿ ಗುಂಟೂರು ಮೆಣಸಿನಕಾಯಿ ಉತ್ಪಾದನಾ ವೆಚ್ಚವನ್ನು ಕ್ವಿಂಟಾಲ್ 12,675 ರು.ಗಳನ್ನು ಕೃಷಿ ಬೆಲೆ ಆಯೋಗ ನಿಗದಿ ಮಾಡಿದೆ. ಆದರೆ ರೈತರು ಅದನ್ನು ಈಗ ಪ್ರತಿ ಕ್ವಿಂಟಾಲ್ 8,300 ರು. ನಂತೆ ಮಾರಾಟ ಮಾಡುವ ಪರಿಸ್ಥಿತಿ ಬಂದಿದೆ. ಹೀಗಾಗಿ ಆರ್ಥಿಕ ಸಂಕಷ್ಟಕ್ಕೆ ಗುರಿಯಾಗಿದ್ದಾರೆ ಎಂಬ ಅಂಶವನ್ನು ಕೇಂದ್ರ ಸರಕಾರದ ಗಮನಕ್ಕೆ ತಂದಿದ್ದಾರೆ.

ದೇಶದ ಅತ್ಯಂತ ಹಿಂದುಳಿದ ಮತ್ತು ಬರಪೀಡಿತ ಪ್ರದೇಶವಾಗಿರುವ ಕಲ್ಯಾಣ ಕರ್ನಾಟಕ ಕೆಂಪು ಮೆಣಸಿನಕಾಯಿ ಕೃಷಿಯನ್ನೇ ಅವಲಂಬಿಸಿದೆ. ಸಾವಿರಾರು ಸಣ್ಣ ಹಾಗೂ ಅತಿ ಸಣ್ಣ ರೈತರು ಇದನ್ನೇ ನೆಚ್ಚಿಕೊಂಡಿದ್ದಾರೆ. ಈ ಬೆಳೆಗಾರರು ನಿರ್ಲಕ್ಷಿಸಿದರೆ ಆರ್ಥಿಕ ಹೊರೆ ಹೆಚ್ಚಾಗುತ್ತಿದೆ. ರೈತರನ್ನು ಸಾಲದ ದವಡೆಗೆ ತಳ್ಳುತ್ತಾರೆ. ಹೀಗಾಗಿ ಆಂಧ್ರ ಪ್ರದೇಶದಂತೆ ಕರ್ನಾಟಕಕ್ಕೂ ಬೆಲೆ ಕೊರತೆ ಪಾವತಿ ಯೋಜನೆ ವಿಸ್ತರಿಸಬೇಕೆಂದು ಪತ್ರದಲ್ಲಿ ಮನವಿ ಮಾಡಿದ್ದಾರೆ.

## ಖರ್ಗೆ ಕ್ಷಮೆ

**ದೆಹಲಿ:** ರಾಷ್ಟ್ರೀಯ ಶಿಕ್ಷಣ ನೀತಿ ಕುರಿತ ಚರ್ಚೆ ವೇಳೆ ಲೋಕಸಭೆ ಪ್ರತಿ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಬಳಸಿದ 'ಸರ್ವಾ ಧಿಕಾರ' ಎಂಬ ಅಸಂಸ ದೀಯ ಪದ ರಾಜ್ಯಸಭೆಯಲ್ಲಿ ಮಂಗಳವಾರ ಕೋಲಾಹಲಕ್ಕೆ ಕಾರಣವಾಯಿತು. ಕೂಡಲೇ, ಖರ್ಗೆ ಅವರು ಉಪಸಭಾಪತಿಗಳ ಕ್ಷಮೆ ಕೋರಿದರು. ನಾನು ಬಳಸಿದ ಪದಗಳು ಪೀಠ ಕುರಿತಾಗಿರಲಿಲ್ಲ ಬದಲಿಗೆ ಕೇಂದ್ರ ಸರಕಾರವನ್ನು ಉದ್ದೇಶಿಸಿ ಹೇಳಿದ್ದೆ. ಕ್ಷಮಿಸಿ, ನಾನು ನಿಮ್ಮ ಕುರಿತು ಮಾತನಾಡಿರಲಿಲ್ಲ. ನನ್ನ ಹೇಳಿಕೆಗಳಿಂದ ನಿಮ್ಮ ಮನಸ್ಸಿಗೆ ನೋವಾಗಿದ್ದರೆ ಕ್ಷಮೆ ಕೇಳುವೆ.

## ಝೆಲೆನ್ಸ್ಕಿ ಕ್ಷಮೆ



**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ನಡುವೆ ಓವಲ್ ಆಫೀಸ್‌ನಲ್ಲಿ ನಡೆದ ವಿವಾದಾತ್ಮಕ ಸಭೆಯ ನಂತರ, ಝೆಲೆನ್ಸ್ಕಿ ಟ್ರಂಪ್‌ಗೆ ಪತ್ರ ಬರೆದು ಕ್ಷಮೆಯಾಚಿಸಿದ್ದಾರೆ ಎಂದು ಟ್ರಂಪ್ ಅವರ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್ ತಿಳಿಸಿದ್ದಾರೆ. ಈ ಸಭೆಯಲ್ಲಿ ಇಬ್ಬರು ನಾಯಕರ ನಡುವೆ ಮಾತಿನ ಚಕಮಕಿ ನಡೆದಿದ್ದು, ದ್ವಿಪಕ್ಷೀಯ ಸಂಬಂಧಗಳು ಹದಗೆಟ್ಟಿತ್ತು. ಝೆಲೆನ್ಸ್ಕಿ ಅಧ್ಯಕ್ಷರಿಗೆ ಪತ್ರ ಕಳುಹಿಸಿದ್ದಾರೆ.

ಹಂಪಿ ಪ್ರಕರಣದ ಬಳಿಕ ಎಚ್ಚೆತ್ತ ಸರಕಾರ | ಹತ್ಯಾಚಾರಿಗಳಿಗೆ ನ್ಯಾಯಾಂಗ ಬಂಧನ

# ರೆಸಾರ್ಟ್‌ನಲ್ಲಿ ಸುರಕ್ಷತಾ ಮಾರ್ಗಸೂಚಿ

ವಿಶ್ವವಾಣಿ ಸುದ್ದಿಮನೆ

**ಬೆಂಗಳೂರು:** ರಾಜ್ಯಾದ್ಯಂತ ನಾಯಿಕೊಡೆಯಂತೆ ಹೋಂ ಸ್ಟೇ, ರೆಸಾರ್ಟ್‌ಗಳು ತಲೆ ಎತ್ತಿದ್ದು, ಇಸ್ರೇಲ್ ಮಹಿಳೆ, ರೆಸಾರ್ಟ್ ಮಾಲಕಿ ಮೇಲೆ ಗ್ಯಾಂಗ್‌ರೇಪ್ ಪ್ರಕರಣದ ನಂತರ ಇಂತಹ ಸ್ಥಳಗಳಲ್ಲಿ ಭದ್ರತೆ ಸುರಕ್ಷತೆ ಬಗ್ಗೆ ಕ್ರಮ ಕೈಗೊಳ್ಳುವಂತೆ ಮಾಲೀಕರಿಗೆ ಸರಕಾರ ಎಚ್ಚರಿಕೆ ನೀಡಿದೆ.

ಕೊಪ್ಪಳದ ಸಣಾಪುರ ರೆಸಾರ್ಟ್ ಮಾಲಕಿ ಹಾಗೂ ಇಸ್ರೇಲ್ ಮಹಿಳೆ ಮೇಲೆ ಗ್ಯಾಂಗ್‌ರೇಪ್ ಪ್ರಕರಣದಿಂದಾಗಿ ಹಂಪಿ ಪ್ರವಾಸಿತಾಣದ ಮೇಲೆ ದುಷ್ಪರಿಣಾಮ ಬೀರಿದೆ. ಈ ಸಂಬಂಧ ಎಚ್ಚೆತ್ತುಕೊಂಡ ಕರ್ನಾಟಕ ಗೃಹ ಇಲಾಖೆ ಪ್ರವಾಸಿ ತಾಣಗಳಲ್ಲಿನ ರೆಸಾರ್ಟ್, ಹೋಮ್‌ಸ್ಟೇಗಳಲಿ ಪ್ರವಾಸಿಗರ ಭದ್ರತೆ, ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕು. ಹಾಗೇ ನಿರ್ಜನ ಪ್ರದೇಶಗಳಿಗೆ ಪ್ರವಾಸಿಗರನ್ನು ಕೊರೆದೊಯ್ಯುವಾಗ ಪೊಲೀಸ್ ಠಾಣೆಗೆ ಮಾಹಿತಿ ನೀಡಿ ಅನುಮತಿ ಪಡೆಯುವುದು ಕಡ್ಡಾಯ ಎಂದು ಸುತೋಲೆಯ ಮೂಲಕ ಸೂಚನೆ ನೀಡಲಾಗಿದೆ.

ಮುಖ್ಯಮಂತ್ರಿ ಅವರ ಸೂಚನೆ ಮೇರೆಗೆ ಗೃಹ ಇಲಾಖೆಯು ಹೋಮ್‌ಸ್ಟೇಗಳು ಪ್ರವಾಸಿಗರ ಭದ್ರತೆ, ಸುರಕ್ಷತೆಗೆ ಕ್ರಮ ಕೈಗೊಳ್ಳಬೇಕು. ನಿರ್ಜನ ಪ್ರದೇಶಗಳಿಗೆ ಪ್ರವಾಸಿಗರನ್ನು ಕೊರೆದೊಯ್ಯುವಾಗ ಪೊಲೀಸ್ ಠಾಣೆಗೆ ಮಾಹಿತಿ ನೀಡಿ ಅನುಮತಿ ಪಡೆಯುವುದು ಕಡ್ಡಾಯ. ಪೊಲೀಸ್ ಅಥವಾ ಅರಣ್ಯ ಇಲಾಖೆಯಿಂದ ಪೂರ್ವಾನುಮತಿ ಪಡೆಯದೆ ಪ್ರವಾಸಿಗರನ್ನು ಕರೆದೊಯ್ದು ದುರ್ಘಟನೆ ಸಂಭವಿಸಿದರೆ ರೆಸಾರ್ಟ್, ಹೋಂಸ್ಟೇಗಳ ಮಾಲೀಕರೇ ಜವಾಬ್ದಾರರು. ಅಲ್ಲದೆ, ದುಷ್ಕರ್ಮಿಗಳಿಂದ ಅಥವಾ ಕಾಡು ಪ್ರಾಣಿಗಳಿಂದ ತೊಂದರೆಯಾದರೆ ರೆಸಾರ್ಟ್, ಹೋಮ್‌ಸ್ಟೇ ಮಾಲೀಕರೇ ಸಂಪೂರ್ಣ ಜವಾಬ್ದಾರರಾಗಲಿದ್ದು, ಕಾನೂನಿನ ಅನ್ವಯ ಶಿಕ್ಷಾರ್ಹ ಅಪರಾಧಕ್ಕೆ ಒಳಪಡುತ್ತಾರೆಂದು ಸುತ್ತೋಲೆಯಲ್ಲಿ ಎಚ್ಚರಿಕೆ ನೀಡಲಾಗಿದೆ.



### ಸಾಣಾಪುರ ಘಟನೆ: 3ನೇ ಆರೋಪಿ ಬಂಧನ

**ಕೊಪ್ಪಳ:** ಜಿಲ್ಲೆಯ ಗಂಗಾವತಿ ತಾಲೂಕಿನ ಸಾಣಾಪುರದಲ್ಲಿ ಇತ್ತೀಚೆಗೆ ನಡೆದ ಪ್ರವಾಸಿಗರ ಮೇಲಿನ ಹಲ್ಲೆ ಪ್ರಕರಣದಲ್ಲಿ ಪರಾರಿಯಾಗಿದ್ದ ಮೂರನೇ ಆರೋಪಿ ಶರಣ ಬಸವರಾಜ ಎಂಬಾತನನ್ನು ಪೊಲೀಸರು ತಮಿಳುನಾಡಿನಲ್ಲಿ ಬಂಧಿಸಲಾಗಿದೆ. ಬಳಿಕ ಗಂಗಾವತಿಗೆ ಕರೆತಂದು ಸಾಣಾಪುರದ ಸಮೀಪ ಘಟನೆ ನಡೆದ ಸ್ಥಳ ಮಹಜರು ಮಾಡಲಾಯಿತು. ಬಳಿಕ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು.

ವಕೀಲೆ ಜೀವಾ ಆತ್ಮಹತ್ಯೆಗೆ ಕುಮ್ಮಕ್ಕು ಆರೋಪ

# ಡಿವೈಎಸ್‌ಪಿ ಕನಕಲಕ್ಷ್ಮೀ ಬಂಧನ



**ಬೆಂಗಳೂರು:** ಭೋವಿ ನಿಗಮದಲ್ಲಿ ನಡೆದ ಅಕ್ರಮ ತನಿಖೆ ಎದುರಿಸಿದ್ದ ವಕೀಲೆ ಹಾಗೂ ಉದ್ಯಮಿ ಜೀವಾ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಡಿವೈಎಸ್‌ಪಿ ಕನಕಲಕ್ಷ್ಮೀ ಅವರನ್ನು ಎಸ್‌ಐಟಿ ಅಧಿಕಾರಿಗಳು ಬಂಧಿಸಿದ್ದಾರೆ. ಅವರಿಗೆ 14 ದಿನ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ವಕೀಲೆ ಜೀವಾ, ನನ್ನ ಆತ್ಮಹತ್ಯೆಗೆ ಡಿವೈಎಸ್‌ಪಿ ಕನಕಲಕ್ಷ್ಮೀ ಕಾರಣ ಎಂದು 13 ಪುಟಗಳ ಸುದೀರ್ಘ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದರು. ಮಂಗಳವಾರ ಬೆಳಗ್ಗೆ ಕನಕಲಕ್ಷ್ಮೀ ಎಸ್‌ಐಟಿ ವಿಚಾರಣೆಗೆ ಹಾಜರಾಗಿದ್ದಾಗ ಬಂಧಿಸಲಾಗಿದೆ. ಈ ಹಿಂದೆ ಎರಡು ಬಾರಿ ಕನಕಲಕ್ಷ್ಮೀ ಅವರ ಹೇಳಿಕೆಯನ್ನು ಎಸ್‌ಐಟಿ ದಾಖಲು ಮಾಡಿತ್ತು.

**ಸಿಐಡಿ ಅಧಿಕಾರಿಗಳ ವಿರುದ್ಧ ಪ್ರಕರಣ:** ಜೀವಾ ಅವರ ಕಿರಿಯ ಸಹೋದರಿ ಸಂಗೀತಾ ಅವರು ನೀಡಿದ ದೂರಿನಲ್ಲಿ ವಿಚಾರಣೆ ನೆಪದಲ್ಲಿ ಸಿಐಡಿ ಅಧಿಕಾರಿಗಳು ತನ್ನ ಅಕ್ಕ ಜೀವಾಗೆ ಅವಮಾನ ಮಾಡಿದ್ದಾರೆ. ಅಂತೆಯೇ ಹಣಕ್ಕ ಬೇಡಿಕೆ ಇರಿಸಿದ್ದಾರೆ ಎಂದು ಆರೋಪಿಸಿದ್ದರು. ಈ ದೂರಿನ ಮೇರೆಗೆ ಬನಶಂಕರಿ ಠಾಣೆ ಪೊಲೀಸರು ಸಿಐಡಿ ಅಧಿಕಾರಿಗಳ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ಮತ್ತು ಭ್ರಷ್ಟಾಚಾರ ತಡೆ ಕಾಯಿದೆಯಡಿ ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಂಡಿದ್ದರು. ಆತ್ಮಹತ್ಯೆಗೂ ಮುನ್ನ ಮಹಿಳಾ ಉದ್ಯಮಿ ಜೀವಾ 13 ಪುಟಗಳ ಡೆತ್‌ನೋಟ್ ಬರೆದಿದ್ದಾರೆ. ಅದರಲ್ಲಿ ಭೋವಿ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣ ಸಂಬಂಧ ಸಿಐಡಿ ಅಧಿಕಾರಿಗಳ ವಿಚಾರಣೆ ವಿಚಾರ ಪ್ರಸ್ತಾಪಿಸಿದ್ದಾರೆ. ಸಿಐಡಿ ವಿಚಾರಣೆಯಿಂದ ನನಗೆ ಅವಮಾನವಾಗಿದ್ದು, ಮಾನಸಿಕವಾಗಿ ನೊಂದಿದ್ದೇನೆ ಎಂದು ಉಲ್ಲೇಖಿಸಿದ್ದಾರೆ ಎಂದು ತಿಳಿದುಬಂದಿದೆ.

### ಏನಿದು ಪ್ರಕರಣ?

ಭೋವಿ ನಿಗಮ ಅಕ್ರಮ ಸಂಬಂಧ ಜೀವಾರನ್ನು ಸಿಐಡಿ ವಿಚಾರಣೆಗೆ ಒಳಪಡಿಸಿತ್ತು. ಆದರೆ ಕಿರುಕುಳದ ಆರೋಪ ಮಾಡಿ ಜೀವಾ ಆತ್ಮಹತ್ಯೆ ಮಾಡಿಕೊಂಡಿದ್ದರು. ಭೋವಿ ನಿಗಮದಲ್ಲಿ ಒಟ್ಟು 34 ಕೋಟಿ ರು. ಅಕ್ರಮ ಹಣ ವರ್ಗಾವಣೆಯಾಗಿದೆ. ಇದರಲ್ಲಿ ಜೀವಾ ಮಾಲೀಕತ್ವದ ಸಂಸ್ಥೆ ಅನ್ನಿಕಾ ಎಂಟರ್‌ಪ್ರೈಸಸ್‌ಗೆ 7.16 ಕೋಟಿ ರು., ಅವರ ಸಹೋದರಿ ಹೆಸರಲ್ಲಿರುವ ಹರ್ನಿತಾ ಕ್ರಿಯೇಷನ್ಸ್‌ಗೆ 3.79 ಕೋಟಿ ರು. ವರ್ಗಾವಣೆ ಆಗಿತ್ತು. ಇನ್ನುಳಿದ ಹಣ ಮಾಜಿ ಎಂಡಿ ಗಳ ಆಪ್ತರ ಪಾಲುದಾರಿಕೆಯ ಸಂಸ್ಥೆಗಳಿಗೆ ವರ್ಗವಾಗಿತ್ತು. ಈ ಪ್ರಕರಣದ ಬಗ್ಗೆ ಆಂತರಿಕ ತನಿಖೆ ನಡೆಸಲು ಗೃಹ ಇಲಾಖೆ ಮುಂದಾಗಿತ್ತು.

## ಸಮಾಚಾರ ಸಣ್ಣದಲ್ಲ

### ಕ್ರಿಸ್ಟಲ್ ಮೌಂಟ್ ಶಾಲಾ ವಾರ್ಷಿಕೋತ್ಸವ

**ಬೀದರ್:** ನಗರದ ಕ್ರಿಸ್ಟಲ್ ಮೌಂಟ್ ಪಬ್ಲಿಕ್ ಶಾಲೆಯ ವಾರ್ಷಿಕೋತ್ಸವ ಸಮಾರಂಭ ಜರುಗಿತು. ಶಾಲೆಯ ಅಧ್ಯಕ್ಷ ವೀಣಾ ಕುಮಾರಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣ ಅತ್ಯಮೂಲ್ಯವಾಗಿದೆ. ವಿದ್ಯಾರ್ಥಿಗಳಿಗೆ ಗುಣಮಟ್ಟ ಶಿಕ್ಷಣ ನೀಡಲು ನಮ್ಮ ಸಂಸ್ಥೆ ಶ್ರಮಿಸುತ್ತಿದೆ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸವಿತಾ ಖಾದ್ರೊಸ್, ಐರಾನ್ ಡಿಸೋಜಾ ಮಾತನಾಡಿದರು. ಸಂಸ್ಥೆಯ ಉಪಾಧ್ಯಕ್ಷ ಶಾಂತಕುಮಾರಿ, ಕಾರ್ಯದರ್ಶಿ ಎಲ್ವಿನ್ ಗೀತಾ, ಸುಕನ್ಯಾ, ಕಿರಣ, ಸ್ಟೆಫಿ ಸುಶಾಂತ್, ವಸಂತ ಚಿದ್ರಿ, ಪಾಂಡುರಂಗ ಬಿರಾದಾರ, ಶರಣಪ್ಪ, ಮಧುಕರ್ ರಾವ್ ಇತರರಿದ್ದರು. ಇದೇ ಸಂದರ್ಭದಲ್ಲಿ ನಿವೃತ್ತ ಸೈನಿಕರಿಗೆ ಗೌರವಿಸಲಾಯಿತು. ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಶಾಲಾ ಮಕ್ಕಳಿಂದ ಜರುಗಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನ ಸೆಳೆದವು.

### ಪ್ರತಿಭಟನಾ ರ್‍ಯಾಲಿ ಇಂದು

**ಬೀದರ:** ಭಾರತೀಯ ಬೌದ್ಧ ಮಹಾ ಸಭೆ ಬೀದರ ಜಿಲ್ಲಾ ಹಾಗೂ ಎಲ್ಲ ತಾಲೂಕಿನ ಸಹಯೋಗದೊಂದಿಗೆ ಮಾ. 12 ರಂದು ಹಮ್ಮಿಕೊಂಡಿರುವ ಮಹಾ ಬೋದಿ ಮಹಾ ವಿಹಾರ ಬುದ್ದಗಯಾ ಮುಕ್ತಿ ಅಂದೋಲನ ನಿಮಿತ್ತವಾಗಿ ಹಮ್ಮಿಕೊಂಡಿರುವ ಪ್ರತಿಭಟನಾ ರ್‍ಯಾಲಿಯನ್ನು ಬೆಳಗ್ಗೆ 11 ಗಂಟೆ ನಗರದ ಶಾಹ ಗಂಜದ ಡಾ.ಬಿ.ಆರ್.ಅಂಬೇಡ್ಕರ ಭವನದಿಂದ 12 ಗಂಟೆಗೆ ಅಂಬೇಡ್ಕರ್ ವೃತ್ತದ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಪ್ರತಿಭಟನಾ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ. ಈ ಪ್ರತಿಭಟನಾ ರ್‍ಯಾಲಿಯಲ್ಲಿ ಸಮಾಜ ಚಿಂತಕರು, ಬುದ್ದಿ ಜೀವಿಗಳು, ದಲಿತ ಸಂಘಟನೆ ಸಂಘಟನೆಗಳ ಪ್ರಮುಖರು, ಬೌದ್ದ ಉಪಾಸಕ, ಉಪಾಸಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಭಾರತೀಯ ಬೌದ್ದ ಮಹಾ ಸಭೆಯ ಜಿಲ್ಲಾಧ್ಯಕ್ಷ ರಾಜಪ್ಪಾ ಗುನ್ನಳ್ಳಿಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಹೋಳಿ ಹಬ್ಬ: ಮದ್ಯ ಮಾರಾಟ ನಿಷೇಧ

**ಬೀದರ:** ಜಿಲ್ಲೆಯಲ್ಲಿ ಹೋಳಿ ಹಬ್ಬವನ್ನು ಶಾಂತಿಯುತವಾಗಿ ಆಚರಿಸಲು ಯಾವುದೇ ಅಹಿತಕರ ಘಟನೆ ನಡೆಯದಂತೆ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 21 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಬೀದರ, ಹುಮನಾಬಾದ, ಬಸವಕಲ್ಯಾಣ, ಔರಾದ್(ಬಿ), ಕಮಲನಗರ, ಹುಲಸೂರ ಹಾಗೂ ಚಿಟಗುಪ್ಪಾ ತಾಲೂಕಿನಾದ್ಯಂತ ಮಾ.13 ರ ಸಾಯಂಕಾಲ 6 ಗಂಟೆಯಿಂದ ಮಾ.14 ರ ಮಧ್ಯರಾತ್ರಿ 12 ಗಂಟೆಯ ವರೆಗೆ ಹಾಗೂ ಭಾಲ್ಕಿ ತಾಲೂಕಿನಾದ್ಯಂತ ಮಾ.13 ರ ಸಾಯಂಕಾಲ 6 ಗಂಟೆಯಿಂದ ಮಾ.15 ರ ಮಧ್ಯರಾತ್ರಿ 12 ಗಂಟೆಯವರೆಗೆ ಎಲ್ಲ ವಿಧದ ಮದ್ಯದಂಗಡಿಗಳನ್ನು ಮುಚ್ಚಲು ಹಾಗೂ ಮದ್ಯ ಮಾರಾಟ ಮಾಡುವುದನ್ನು ನಿಷೇಧಿಸಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಆದೇಶ ಹೊರಡಿಸಿದ್ದಾರೆ.

### ಮಕ್ಕಳ ಬಳಕೆ: ಶಿಕ್ಷಣ ಇಲಾಖೆಯಿಂದ ದೂರು

**ಕೆಂಭಾವಿ:** ಶಾಲೆಯಲ್ಲಿ ಇದ್ದ ಕೊಳವೆ ಬಾವಿಯ ಪೈಪ್ ಮೇಲೆತ್ತಲು ಶಾಲೆಯ ಮಕ್ಕಳನ್ನು ಬಳಸಿಕೊಂಡ ಘಟನೆ ನಡೆದು ಐದು ದಿನಗಳ ಬಳಿಕ ಕೊನೆಗೂ ಶಾಲೆಯ ವಿರುದ್ಧ ಶಿಕ್ಷಣ ಇಲಾಖೆ ಸೋಮವಾರ ರಾತ್ರಿ ಕೆಂಭಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಪಟ್ಟಣದ ಸುರಪುರ-ಹುನಗುಂದ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವ ಜ್ಞಾನದೀಪ ಶಾಲೆಯಲ್ಲಿ ಈ ಘಟನೆ ನಡೆದಿದ್ದು ಈ ಬಗ್ಗೆ ಎಲ್ಲೆಡೆ ವಿಡಿಯೋ ಸಹ ವೈರಲ್ ಆಗಿತ್ತು. ಶಾಲೆಯ ಕಂಪೌಂಡ್ ಬಳಿ ಇದ್ದ ಕೊಳವೆ ಬಾವಿ ಕೆಟ್ಟಿದ್ದು ಇದರ ದುರಸ್ತಿಗೆ 300 ಕ್ಕು ಹೆಚ್ಚು ಆಳವಿರುವ ಪೈಪ್ ಮೇಲೆತ್ತಲು ಶಾಲಾ ಮುಖ್ಯಸ್ಥರು ಮತ್ತು ಸಿಬ್ಬಂದಿ ಶಾಲೆಯ ಮಕ್ಕಳನ್ನು ಬಳಸಿಕೊಂಡ ಘಟನೆ ಜರುಗುತ್ತಿದ್ದಂತೆ ಖುದ್ದಾಗಿ ಮಕ್ಕಳ ಹಿತರಕ್ಷಣಾ ಸಮಿತಿ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಈ ಘಟನೆಯ ಬಗ್ಗೆ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಗುತ್ತಿದ್ದಂತೆ ಭಾರಿ ಜನಾಕ್ರೋಶ ವ್ಯಕ್ತವಾಗಿತ್ತು. ಕೊನೆಗೂ ಮಕ್ಕಳ ಹಕ್ಕುಗಳ ಆಯೋಗ ಮತ್ತು ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳ ಆದೇಶಕ್ಕೆ ಮಣಿದ ಕ್ಷೇತ್ರ ಶಿಕ್ಷಣಾಧಿಕಾರಿ ಯಲ್ಲಪ್ಪ ಕಾಡ್ಲೂರ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳ ತಂಡ ಸೋಮವಾರ ಪೊಲೀಸ್ ಠಾಣೆಗೆ ಆಗಮಿಸಿ ಘಟನೆ ಬಗ್ಗೆ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ಸವಿಸ್ತಾರ ಅರ್ಜಿ ಸಲ್ಲಿಸಿ ಪ್ರಕರಣ ದಾಖಲಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

# ಲಿಂಗ ತಾರತಮ್ಯ ಉತ್ತಮವಲ್ಲ

## ಮಹಿಳೆಯರಿಂದ, ಮಹಿಳೆಯರಿಗಾಗಿ ಜಿಲ್ಲಾಡಳಿತದಿಂದ ಮಹಿಳಾ ದಿನಾಚರಣೆಯಲ್ಲಿ ಡಿಸಿ ಶಿಲ್ಪಾ ಶರ್ಮಾ ಹೇಳಿಕೆ

**ಬೀದರ:** ಮಹಿಳೆ ಜಗತ್ತಿನ ಅದ್ಭುತ ಶಕ್ತಿಯಾಗಿದ್ದು, ಸರಕಾರಿ ಸೇವೆ ಮಾಡುವ ಮಹಿಳೆಯರು ಕುಟುಂಬ ಹಾಗೂ ಕಚೇರಿ ಎರಡನ್ನು ಸರಿದೂಗಿಸಿಕೊಂಡು ಹೋಗುತ್ತಾರೆ ಎಂದು ಜಿಲ್ಲಾದಿಕಾರಿ ಶಿಲ್ಪಾ ಶರ್ಮಾ ಅಭಿಪ್ರಾಯಪಟ್ಟರು.

ಜಿಲ್ಲಾ ರಂಗಮಂದಿರದಲ್ಲಿ ಜಿಲ್ಲಾಡಳಿತದಿಂದ ಏರ್ಪಡಿಸಲಾದ ವಿಶೇಷ ಮಹಿಳಾ ದಿನಾಚರಣೆಯಲ್ಲಿ ಅವರು ಮಾತನಾಡಿದ ಅವರು ವೇದಿಕೆಯಲ್ಲಿ ಎಲ್ಲರೂ ಮಹಿಳೆಯರೇ ಸ್ಥಾನವನ್ನು ಅಲಂಕರಿಸಿರುವುದಕ್ಕೆ ಹರ್ಷ ವ್ಯಕ್ತಪಡಿಸಿ ಮುಂಬರುವ ದಿನಮಾನಗಳಲ್ಲಿ ಎಲ್ಲ ಕಾರ್ಯಕ್ರಮಗಳಲ್ಲಿ ಶೇ.50 ರಷ್ಟು ಮಹಿಳೆಯರು ವೇದಿಕೆಯಲ್ಲಿ ಉಪಸ್ಥಿತರಿರಬೇಕು ಎಂದರು.

ಮಹಿಳೆಯರು ಮನೆಯಲ್ಲಿ ಗಂಡು, ಹೆಣ್ಣು ಮಕ್ಕಳಲ್ಲಿ ಯಾವುದೇ ರೀತಿಯ ತಾರತಮ್ಯ ಮಾಡದೆ ಸರಿಸಮಾನವಾಗಿ ಪರಿಗಣಿಸಿದರೆ ಮುಂಬರುವ ದಿನಮಾನಗಳಲ್ಲಿ ಪ್ರತಿ ಕ್ಷೇತ್ರದಲ್ಲಿ ಶೇ.50 ರಷ್ಟು ಮಹಿಳಾ ಪ್ರತಿನಿಧಿಗಳನ್ನು ಕಾಣಬಹುದಾಗಿದೆ ಎಂದು ತಿಳಿಸಿದರು.

ಇಡೀ ರಂಗಮಂದಿರ ತುಂಬೆಲ್ಲ ಮಹಿಳೆಯರೇ ಭಾಗಿಯಾಗಿದ್ದು ವಿಶೇಷವಾಗಿತ್ತು. ಮುಕ್ತವಾಗಿ ಚರ್ಚೆಗಳು ನಡೆದವು.

ಈ ಕಾರ್ಯಕ್ರಮದಲ್ಲಿ ಹಂಸಾ ಗಿರೀಶ ಬದೋಲೆ, ಶೈನಿ ಪ್ರದೀಪ ಗುಂಟಿ, ಗೀತಾ ಶಿವಕುಮಾರ ಶೀಲವಂತ, ಬೀದರ ವಿಶ್ವವಿದ್ಯಾಲಯದ ಕುಲಸಚಿವರಾದ ಸುರೇಖಾ, ಜಿಲ್ಲಾ ಸಹಕಾರ ಸಂಘಗಳ ಉಪನಿರ್ದೇಶಕರಾದ ಮಂಜುಳಾ ಸಿ.ಎಸ್. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶಿಂಧು ಎಸ್. ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ಸುರೇಖಾ ಮುನ್ನಳ್ಳಿ, ಹುಮನಾಬಾದ ತಹಸೀಲ್ದಾರ ಅಂಜುಮ, ಹುಮನಾಬಾದ ಕಾರ್ಯನಿರ್ವಾಹಕ ಅಧಿಕಾರಿ ದೀಪಿಕಾ ನಾಯರ, ಜಿಲ್ಲಾ ಸಾಂಖ್ಯಿಕ ಅಧಿಕಾರಿ ಸುವರ್ಣಾ, ಹಿ.ವ. ಕಲ್ಯಾಣ ಇಲಾಖೆಯ ಸುಜಾತಾ, ಮೀನುಗಾರಿಕೆ ಇಲಾಖೆಯ ಜಾನವಿ, ಅಂಚೆ ಇಲಾಖೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಮಂಗಲಾ ಭಾಗವತ, ಎಡಿಎಲ್ಆರ್ ಗಳಾದ ಶ್ವೇತಾ, ರಾಜೇಶ್ವರಿ, ಸಾಹಿತಿಗಳಾದ ಪಾರ್ವತಿ ಸೋನಾರೆ, ಸ್ತ್ರೀ ರೋಗ ತಜ್ಞರಾದ ಉಮಾ ದೇಶಮುಖ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಮಹಿಳಾ ಅಧಿಕಾರಿಗಳು ಸೇರಿದಂತೆ ಇಲಾಖೆಯ ಮಹಿಳ ಸಿಬ್ಬಂದಿ ಉಪಸ್ಥಿತರಿದ್ದರು

ಬೀದರ ಜಿಲ್ಲಾಡಳಿತ ಕಚೇರಿಯಲ್ಲಿ ಮಹಿಳಾ ದಿನಾಚರಣೆ ಕಾರ್ಯಕ್ರಮ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಉದ್ಘಾಟಿಸಿದರು.

> ಕೆಲಸ ಮಾಡುವ ಮಹಿಳೆಯರು ಕಚೇರಿಗೆ ಬರುವ ಮುನ್ನ ಮನೆಯಲ್ಲಿ ಎಲ್ಲ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸಿ ಕಚೇರಿಗೆ ಹಾಜರಾಗುತ್ತಾರೆ. ಸರಕಾರಿ ಸೇವೆಯ ಮಾಸಿಕ ವೇತನ ಆರ್ಥಿಕತೆಯ ದೃಷ್ಟಿಯಿಂದ ಪರಿಗಣಿಸಲಾಗುತ್ತದೆ. ಅವರ ಕೌಟುಂಬಿಕ ಮನೆಗೆಲಸ ಲೆಕ್ಕಕ್ಕೆ ಬರುವುದಿಲ್ಲ. ಅಡುಗೆ, ಮನೆಗೆಲಸ ಮಾಡಿ ಕಚೇರಿಗೆ ಬರುವ ಮಹಿಳೆಯರ ಸೇವೆ ಶ್ಲಾಘನೀಯ.
>
> -ಶಿಲ್ಪಾ ಶರ್ಮಾ, ಜಿಲ್ಲಾಧಿಕಾರಿ

### ಸಮಾಜದಲ್ಲಿ ಗೌರವ ನೀಡಬೇಕು

**ಕುಟುಂಬ ನಿರ್ವಹಿಸುವ ಹೆಣ್ಣನ್ನು ಸದಾ ಗೌರವದಿಂದ ಕಾಣ ಬೇಕು. ಹೆಣ್ಣನ್ನು ಗೌರವಿಸುವ ಕುಟುಂಬ ನೆಮ್ಮದಿಯಿಂದ ಕೂಡಿರುತ್ತದೆ. ಮಹಿಳೆಯರು ಸ್ವಾಭಿಮಾನದಿಂದ ಬದುಕ ಬೇಕು. ಅವರಿಗೆ ಸಮಾಜದಲ್ಲಿ ಗೌರವ ನೀಡಿದರೆ ಸಾಕು ಅದನ್ನೇ ತನ್ನ ಸಾಧನೆಯ ಮೆಟ್ಟಿಲನ್ನಾಗಿ ಮಾಡಿಕೊಂಡು ಧೈರ್ಯದಿಂದ ಮುನ್ನಡೆಯಲು ಮಹಿಳೆಗೆ ಸಾಧ್ಯ ವಾಗುತ್ತದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.**

# ಹಚ್ಚೇವು ಕನ್ನಡದ ದೀಪ ಕಾರ್ಯಕ್ರಮ

**ಔರಾದ್:** ಕನ್ನಡ ನನ್ನ ಭಾಷೆ ಎಂಬ ಆತ್ಮ ಗೌರವ ಪ್ರತಿ ಕನ್ನಡಿಗನಲ್ಲೂ ಇದ್ದರೆ ಭಾಷೆ ಉಳಿಸಿ, ಬೆಳೆಸಲು ಯಾವ ಹೋರಾಟವೂ ಬೇಕಿಲ್ಲ. ಆದ್ದರಿಂದ ಪ್ರತಿಯೊಬ್ಬರಿಗೂ ಕನ್ನಡ ಅಭಿಮಾನದ ಭಾಷೆಯಾಗಲಿ ಎಂದು ಉದ್ಯಮಿ ಗೌರವ ದೇಶಮುಖ ಹೇಳಿದರು. ತಾಲೂಕಿನ ಸಿದ್ದರಾಮೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ ಮಂಗಳವಾರ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣಶೆಟ್ಟಿ ಬಣ)ದಿಂದ ನಡೆದ ಜ್ಞಾನ ದೇಗುಲದಲ್ಲಿ ಹಚ್ಚೇವು ಕನ್ನಡದ ದೀಪ ಕಾರ್ಯಕ್ರಮ ಉದ್ಘಾಟಿಸಿದರು.

ಸಂಪನ್ಮೂಲ ಶಿಕ್ಷಕ ಪ್ರಕಾಶ ದೇಶಮುಖ ಮಾತನಾಡಿ, ಪ್ರತಿಯೊಬ್ಬರಿಗೂ ಕನ್ನಡ ನೆಲ, ಜಲ, ಭಾಷೆ ಬಗ್ಗೆ ಅಭಿಮಾನವಿರಬೇಕು. ಆಂಗ್ಲ ಭಾಷೆ ವ್ಯಾಮೋಹಕ್ಕೆ ಒಳಗಾಗದೆ ಕನ್ನಡ ನಾಡಿನ ಮಾತೃಭಾಷೆಯಾದ ಕನ್ನಡವನ್ನು ಎಲ್ಲರೂ ಉಳಿಸಿ ಬೆಳೆಸಬೇಕು. ಪಾಲಕರು ಮಕ್ಕಳಿಗೆ ಮೊದಲು ಕನ್ನಡ ಕಲಿಸಿ ಕನ್ನಡ ನಾಡಿಗೆ ಗೌರವ ಸಲ್ಲಿಸಬೇಕು ಎಂದು ಹೇಳಿದರು.

ಎಎಸ್ಐ ಸುನಿಲಕುಮಾರ ಕೋರೆ ಮಾತನಾಡಿ, ಕನ್ನಡ ಭಾಷೆಯಲ್ಲಿ ವ್ಯಾಸಂಗ ಮಾಡಿದವರು ಉನ್ನತ ಹುದ್ದೆಯಲ್ಲಿದ್ದಾರೆ. ವಿದ್ಯಾರ್ಥಿಗಳು ನಿರ್ಧಿಷ್ಟವಾದ ಗುರಿಯನ್ನು ಇಟ್ಟುಕೊಂಡು ಉತ್ತಮ ರೀತಿಯಲ್ಲಿ ವ್ಯಾಸಂಗ ಮಾಡಿದರೆ ಮಾತ್ರ ಯಶಸ್ಸುಗಳಿಸಲು ಸಾಧ್ಯ ಎಂದರು.

ಪತ್ರಕರ್ತ ಸಂಘದ ತಾಲೂಕು ಅಧ್ಯಕ್ಷ ಶಿವಾನಂದ ಮೊಕ್ತೆದಾರ್ ಮಾತನಾಡಿದರು. ಪ್ರಾಂಶುಪಾಲ ನವೀಲಕುಮಾರ ಉತ್ಕಾರ್ ಮಾತನಾಡಿದರು. ಕರವೇ ತಾಲೂಕು ಅಧ್ಯಕ್ಷ ಅನಿಲ ದೇವಕತ್ತೆ, ಸಂತಪೂರ ವಲಯ ಅಧ್ಯಕ್ಷ ಸಂತೋಷ ಮಡಿವಾಳೆ, ಮುನ್ನು ಹಕ್ಕೆ ಅನೇಕರಿದ್ದರು. ರೇಣುಕಾ, ನಿಖಿತಾ ಸ್ವಾಗತ ಗೀತೆ ಹಾಡಿದರು. ಭವಾನಿ ವಚನಗಾಯನ ಮಾಡಿದರು. ಉಪನ್ಯಾಸಕ ಶಿವಪುತ್ರ ಧರಣೆ ಸ್ವಾಗತಿಸಿದರು.

> **ಗಡಿ ತಾಲೂಕಿನ ಅನೇಕ ಗ್ರಾಮಗಳಲ್ಲಿ ಅನ್ಯ ಭಾಷೆಯ ಪ್ರಭಾವ ಹೆಚ್ಚಾಗಿದ್ದು, ಗಡಿಯಲ್ಲಿನ ಪ್ರತಿಯೊಬ್ಬರು ಕನ್ನಡ ಉಳಿಸಿ, ಬೆಳೆಸುವ ಕೆಲಸ ಮಾಡಬೇಕು ಎಂದರು. ಇನ್ನೂ ರಾಜ್ಯದ ಗ್ರಾಮೀಣ ಭಾಗದಲ್ಲಿ ಇನ್ನೂ ಕನ್ನಡ ಸದೃಢವಾಗಿದೆ.**
>
> -ಗೌರವ ದೇಶಮುಖ, ಉದ್ಯಮಿ

ಸಿದ್ದರಾಮೇಶ್ವರ ಕಾಲೇಜ್‌ನಲ್ಲಿ ಹಚ್ಚೇವು ಕನ್ನಡದ ದೀಪ ಕಾರ್ಯಕ್ರಮ ಜರುಗಿತು.

# ಹೆಣ್ಣುಮಕ್ಕಳ ಆತ್ಮಸ್ಥೈರ್ಯ ಕುಗ್ಗಿಸಬೇಡಿ: ನ್ಯಾ.ರೇಖಾ

**ಯಾದಗಿರಿ:** ಅಪ್ರಾಪ್ತ ವಯಸ್ಸಿನ ಬಾಲಕಿಯರ ಬಾಲ್ಯವಿವಾಹ ಮಾಡುವ ಮೂಲಕ ಅವರ ಮಾನಸಿಕ, ಆತ್ಮಸ್ಥೈರ್ಯ ಕುಗ್ಗಿಸುವ ಕೆಲಸ ಸಮಾಜದಲ್ಲಿ ಆಗಬಾರದು ಎಂದು ಸತ್ರ ನ್ಯಾಯಾಧೀಶೆ ಬಿ.ಎಸ್.ರೇಖಾ ಅವರು ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಏರ್ಪಡಿಸಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ನಗರಸಭೆ ಅಧ್ಯಕ್ಷ ಕು.ಲಲಿತಾ ಅನಪುರ ಮಾತನಾಡಿ, ಮಹಿಳೆಯರಿಗೆ ಸಮಾಜದಲ್ಲಿ, ಸಮಾನತೆ ಗೌರವಾದರದಿಂದ ನೋಡಬೇಕೆಂದರು.

ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶರಾದ ಮರೆಯಪ್ಪ ಮಾತನಾಡಿ, ವಿಶ್ವಸಂಸ್ಥೆಯು 1975 ರಲ್ಲಿ ಸಾರ್ವತ್ರಿಕವಾಗಿ,ಈ ದಿನಾಚರಣೆ ಘೋಷಿಸಿ ಮಾ.8 ರಂದು ಮಹಿಳೆಯರ ವಿಶ್ವ ದಿನಾ ಚರಣೆಯಾಗಿ ಆಚರಣೆಗೆ ಅವಕಾಶ ಮಾಡಿದೆ. ಗಂಡು ಹೆಣ್ಣು ಒಂದೇ ನಾಣ್ಯದ ಎರಡು ಮುಖ ಗಳಿದ್ದಂತೆ. ಮಹಿಳೆಯರು ಇಂದು ಪ್ರತಿ ಕ್ಷೇತ್ರ ದಲ್ಲೂ ಸಾಧನೆ ಮಾಡುತ್ತಿದ್ದು, ಯಾದಗಿರಿ ಜಿಲ್ಲೆಯಲ್ಲಿಯೂ ಮಹಿಳಾ ಅಧಿಕಾರಿಗಳು ಸಾಧನೆ ಗೈಯ್ಯುತ್ತಿದ್ದಾರೆ ಎಂದರು.

ಜಿಲ್ಲಾಧಿಕಾರಿ ಡಾ.ಸುಶೀಲ.ಬಿ ಮಾತನಾಡಿ, ಮಹಿಳೆ ಮತ್ತು ಪುರುಷರು ಎಂಬ ಭೇದಭಾವ ತೊಲಗಬೇಕು. ಮಹಿಳೆಯರಿಗೆ ಶಿಕ್ಷಣ,ಉದ್ಯೋಗ ಹಾಗೂ ಎಲ್ಲಕ್ಷೇತ್ರಗಳಲ್ಲೂ ಸಮಾನ ಅವಕಾಶ ಸಿಗಬೇಕು. ಹೆಣ್ಣು ಮಕ್ಕಳು ಪರಿಪೂರ್ಣ ವಿದ್ಯಾವಂತರಾಗುವವರೆಗೆ ಸಾಧನೆ ಮಾಡಲು ಅಸಾಧ್ಯ. ಕಾರಣ ಹೆಣ್ಣು ಮಗುವಿಗೆ ಕಡ್ಡಾಯವಾಗಿ ಶಿಕ್ಷಣದ ಹಕ್ಕು ದೊರಕಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಜಿಲ್ಲಾಧಿಕಾರಿಗಳು, ನಗರಸಭೆ ಅಧ್ಯಕ್ಷರನ್ನು, ಮಹಿಳಾ ಅಧಿಕಾರಿ ಗಳನ್ನು, ಸಾಧನೆಗೈದ ಮಹಿಳಾ ಕ್ರೀಡಾಪಟುಗಳು, ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಧನೆಗೈದ ವರನ್ನು ಸನ್ಮಾನಿಸಲಾಯಿತು.ಯಾದಗಿರಿ ಸ್ಪರ್ಧೆಗಳನ್ನು ನಡೆಸಲಾಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ವೀರಣಗೌಡ ಅವರು ಸ್ವಾಗತಿಸಿದರು. ಜಿಪಂ ಸಿಇಒ ಲವೀಶ್ ಒರಡಿಯಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್, ಸಹಾಯಕ ಆಯುಕ್ತರಾದ ಹಂಪಣ್ಣ ಸಜ್ಜನ್, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಅಧಿಕಾರಿರಾಜು ಬಾವಿ ಹಳ್ಳಿ, ಅಧಿಕಾರಿಗಳು ಉಪಸ್ಥಿತರಿದ್ದರು.

ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಏರ್ಪಡಿಸಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಸತ್ರ ನ್ಯಾಯಾಧೀಶೆ ಬಿ.ಎಸ್.ರೇಖಾ ಉದ್ಘಾಟಿಸಿದರು.

> **ಮಹಿಳೆಯರ ಮೇಲೆ ಅನೇಕ ರೀತಿಯಲ್ಲಿ ಶೋಷಣೆ ನಡೆಯುತ್ತಿವೆ. ಜನ್ಮ ಸಮಯದಲ್ಲಿ ಹೆಣ್ಣು ಮಗು ಬೇಡವೆಂಬ ತಾರತಮ್ಯ ಹುಟ್ಟಿದ ನಂತರ ಶಿಕ್ಷಣ ನೀಡಲು ನಿರಾಕರಣೆ, ವಿವಾಹಕ್ಕೆ ಖರ್ಚು ಮಾಡಿದ ಮೇಲೆ ಆಸ್ತಿ ಪಾಲು ನೀಡಲು ನಿರಾಕರಣೆ,ಕೆಲಸದ ಸಂದರ್ಭದಲ್ಲಿ ಶೋಷಣೆ ಹೀಗೆ ಹಲವು ರೀತಿಯಲ್ಲಿ ಶೋಷಣೆಗಳ ಜೊತೆಗೆ ಬಾಲ್ಯವಿವಾಹದಂತಹ ಸಾಮಾಜಿಕ ಪಿಡುಗು ಮೂಲಕ ಆತ್ಮಸ್ಥೈರ್ಯ ಕುಗ್ಗಿಸುವ ಕೆಲಸಗಳು ಅವ್ಯಾಹತವಾಗಿ ನಡೆಯುತ್ತಿದ್ದು, ಸಮಾಜದಲ್ಲಿ ಇದು ನಿಲ್ಲಬೇಕು.**
>
> -ಬಿ.ಎಸ್.ರೇಖಾ, ಸತ್ರ ನ್ಯಾಯಾಧೀಶೆ

# ಲೋಕ ಅದಾಲತ್:52,812 ಪ್ರಕರಣ ಇತ್ಯರ್ಥ

**ಬೀದರ:** ಜಿಲ್ಲೆಯಲ್ಲಿ ಮಾ.8 ರಂದು ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಜಿಲ್ಲೆಯಾದ್ಯಾಂತ ಒಟ್ಟು 52,812 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿ 28,03,91,766 ರು. ಪರಿಹಾರವನ್ನು ಕಕ್ಷಿದಾರರಿಗೆ ಒದಗಿಸಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರಕಾಶ ಬನಸೋಡೆ ಹೇಳಿದರು.

ಮಂಗಳವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ದ ಕಚೇರಿ ಸಭಾಂಗಣದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಾದ್ಯಂತ 10,044 (ಪೆಂಡಿಂಗನಲ್ಲಿನ) ಪ್ರಕರಣ ಗಳನ್ನು ಇತ್ಯರ್ಥ ಗೊಳಿಸಲಾಗಿದ್ದು 12,83,46,917 ರು.ವಸೂಲಾತಿ ಮತ್ತು ಪರಿಹಾರ ಒದಗಿಸಲಾಗಿದೆ. ಜಿಲ್ಲೆಯಾದ್ಯಾಂತ ಒಟ್ಟು 42, 768 ವ್ಯಾಜ್ಯ ಪೂರ್ವ ಪ್ರಕರಣ ಇತ್ಯರ್ಥಗೊಳಿಸಲಾಗಿದ್ದು 15,20, 44,849 ರು.ವಸೂಲಾತಿ ಮತ್ತು ಪರಿಹಾರ ಒದಗಿಸಲಾಗಿದೆ ಎಂದು ಹೇಳಿದರು. ಈ ಬಾರಿಯ ಲೋಕ ಅದಾಲತ್‌ನಲ್ಲಿ ವೈವಾಹಿಕ ವ್ಯಾಜ್ಯವನ್ನು ಇತ್ಯರ್ಥಪಡಿಸಿ ಸಂದಾನದ ಮೂಲಕ 7 ಜೋಡಿ ದಂಪತಿಯನ್ನು ರಾಜಿ ಸಂಧಾನದ ಮೂಲಕ ಒಂದು ಮಾಡಲಾಗಿದೆ ಹಾಗೂ ನ್ಯಾಯಾಲಯಗಳಲ್ಲಿ ಬಾಕಿ ಇರುವ ಒಟ್ಟು 8 ಹಳೆಯ ಪ್ರಕರಣ ಇತ್ಯರ್ಥ ಪಡಿಸಲಾಗಿದೆ ಎಂದರು.

ಲೋಕ ಅದಲಾತ್‌ನಲ್ಲಿ ಎಲ್ಲ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸಹಕರಿಸಿದ ಎಲ್ಲ ಇಲಾಖೆ ಯವರಿಗೂ ಹಾಗೂ ಜಿಲ್ಲೆಯಾ ದ್ಯಾಂತ ಹೆಚ್ಚಿನ ಪ್ರಚಾರ ಕೈಗೊಂಡ ಪತ್ರಿಕಾ ಮಾದ್ಯಮ ದವರಿಗೂ ಪ್ರಾಧಿಕಾರದ ಮೂಲಕ ಅಭಿನಂದನೆ ಸಲ್ಲಿಸಿದರು. ಈ ಪತ್ರಿಕಾ ಗೋಷ್ಠಿಯಲ್ಲಿ ಜಗದೀಶ್ವರ ದೊರೆ, ಆಕಾಶ ಸಜ್ಜನಶೆಟ್ಟಿ, ನಾಗರಾಜ, ಪ್ರೀತಿ, ಜೀವನ ಉಪಸ್ಥಿತರಿದ್ದರು.

# ರೇಣುಕಾಚಾರ್ಯರ ಜಯಂತಿ: ಪೂರ್ವಭಾವಿ ಸಭೆ

**ಯಾದಗಿರಿ/ವಡಗೇರಾ:** ಪಟ್ಟಣದ ತಹಸೀಲ್ದಾರ್ ಕಛೇರಿಯ ಸಭಾಂಗಣದಲ್ಲಿ ತಾಲೂಕು ಆಡಳಿತ ಮತ್ತು ಕಲ್ಯಾಣ ಕರ್ನಾಟಕ ಬೇಡ ಜಂಗಮ ಕ್ಷೇಮಾಭಿವೃದ್ಧಿ ಸಂಘ ಸಹಯೋಗದಲ್ಲಿ ಜಗದ್ಗುರು ರೇಣುಕಾಚಾರ್ಯ ಜಯಂತಿಯ ಪೂರ್ವಭಾವಿ ಸಭೆ ಮಾ.11ರಂದು ಜರುಗಿತು.

ತಹಸೀಲ್ದಾರರ ಕಚೇರಿಯ ಸಭಾಭವನದಲ್ಲಿ ಸಭೆಯ ಅಧ್ಯಕ್ಷತೆ ವಹಿಸಿ ತಹಸೀಲ್ದಾರರಾದ ಶ್ರೀನಿವಾಸ ಚಾಪೆಲ್ ಮಾತನಾಡಿ, ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಮಾ.12ರಂದು ಜಗದ್ಗುರು ರೇಣುಕಾಚಾರ್ಯ ಜಯಂತಿ ಅರ್ಥಪೂರ್ಣವಾಗಿ ಆಚರಿಸ ಲಾಗುವುದು. ಸಮಾಜದವರು ಭಾಗವಹಿಸಿ, ಯಶಸ್ವಿಗೊಳಿಸಬೇಕು. ರೇಣುಕಾಚಾರ್ಯರು ನೀಡಿದ ಕೊಡುಗೆ ಅಪಾರವಾಗಿದ್ದು, ಅವರ ಆದರ್ಶಗಳ ಪರಿಪಾಲನೆಯೊಂದಿಗೆ ಒಳ್ಳೆಯ ಬದುಕಿಗೆ ಮುಂದಾಗಬೇಕು ಎಂದರು. ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮವನ್ನು ನಾವೆಲ್ಲರೂ ವಿಜೃಂಭಣೆಯಿಂದ ಪ್ರತಿವರ್ಷದಂತೆ ಆಚರಿಸೋಣ ಎಂದು ತಿಳಿಸಿದರು.

ಕಲ್ಯಾಣ ಕರ್ನಾಟಕ ಬೇಡ ಜಂಗಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಗೌರಿಶಂಕರ ಹಿರೇಮಠ , ಕಾರ್ಯದರ್ಶಿ ಮಲ್ಲಿಕಾರ್ಜುನ.ಎಸ್.ನಾಗೋಲಿ ಮಠ ಅಬಿಶಿಹಾಳ, ಖಜಾಂಚಿ ಶಿವರಾಜಯ್ಯಸ್ವಾಮಿ ಹೀರೆಮಠ ತುಮಕೂರು, ರಾಚಯ್ಯಸ್ವಾಮಿ ಹೀರೆಮಠ ಚನ್ನೂರು, ಚಂದ್ರಶೇಖರಯ್ಯ ಸ್ವಾಮಿ ಗುಬ್ಬಿ, ಮಲ್ಲಯ್ಯ ಸ್ವಾಮಿ ಗೋಂದೆನೂರ, ಶಾಂತಮೂರ್ತಿಸ್ವಾಮಿ ಚನ್ನೂರ, ದೇವಿಂದ್ರಯ್ಯಸ್ವಾಮಿ ರೊಟ್ನಡಗಿ, ಶರಣಯ್ಯಸ್ವಾಮಿ ಸ್ಥಾವರ ಮಠ ವಡಗೇರಾ, ಬನ್ನಯ್ಯಸ್ವಾಮಿ ದಾನಯ್ಯನೋರ ವಡಗೇರಾ, ಸಂಗುಸ್ವಾಮಿ, ವಿಶ್ವರಾಧ್ಯಸ್ವಾಮಿ ಬಸ್ಸಯ್ಯಸ್ವಾಮಿ ಪಾಲ್ಗೊಂಡಿದ್ದರು.

# ಅಪ್ರೆಂಟಿಸ್ ತರಬೇತಿಗೆ 120 ವಿದ್ಯಾರ್ಥಿಗಳು ಆಯ್ಕೆ

**ಹುಮನಾಬಾದ:** ಪಟ್ಟಣದ ಶ್ರೀವೀರಭದ್ರೇಶ್ವರ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಇಂದು ಬೃಹತ್ ಅಪ್ರೆಂಟಿಸಿಪ್ ಮೇಳ ಎಂ ಆರ್ ಎಫ್ ಟೈರ್ಸ್ ಕಂಪನಿ ಸಂಗಾರೆಡ್ಡಿ ಪ್ಲಾಂಟ್ ನಿಂದ ಏರ್ಪಡಿಸಲಾಗಿತ್ತು. ಈ ಮೇಳದಲ್ಲಿ ತಾಲೂಕಿನ ಸರಕಾರಿ ಹಾಗೂ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಯಿಂದ 200 ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಹಾಜರಾಗಿದ್ದರು.

120 ಜನ ವಿದ್ಯಾರ್ಥಿಗಳು ಶಿಶುಕ್ಷು ತರಬೇತಿಗಾಗಿ ಆಯ್ಕೆಯಾಗಿದ್ದಾರೆ. ಕ್ಯಾಂಪಸ್ ಸಂದರ್ಶನದಲ್ಲಿ ಎಂಆರ್‌ಎಫ್ ಕಂಪನಿಯ ಮ್ಯಾನೇಜರ್ ರಮೇಶ್, ಪ್ರತಾಪ್, ಸ್ನೇಹಲತಾ, ವೆಂಕಟರಾಮಲು, ಮಲ್ಲಿಕಾರ್ಜುನ ರವರು ಸಂದರ್ಶನ ನಡೆಸಿದರು ಕಾರ್ಯಕ್ರಮವನ್ನು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಕಲಬುರ್ಗಿ ವಿಭಾಗೀಯ ಜಂಟಿ ನಿರ್ದೇಶಕ ರಾಜೇಶ್ ಬಾವಗಿ ಉದ್ಘಾಟಿಸಿ ಮಾತನಾಡಿ, ಇಂದಿನ ಡಿಜಿಟಲ್ ಕಾಲದಲ್ಲಿ ಕೌಶಲ್ಯಕ್ಕೆ ಹೆಚ್ಚಿನ ಬೇಡಿಕೆ ಇದ್ದು ತಾವೆಲ್ಲರೂ ಐಟಿಐ ಪಾಸಾದ ನಂತರ ಒಳ್ಳೆ ಒಳ್ಳೆ ಕಂಪನಿಗಳಿಗೆ ಅಲಿದಾಡುವ ಬದಲು ತಮ್ಮ ಹತ್ತಿರ ಒಳ್ಳೆ ಕೌಶಲ್ಯ ವಿದ್ದರೆ ಉದ್ಯೋಗವು ತಮ್ಮ ಮನೆ ಬಾಗಿಲಿಗೆ ಬರುತ್ತದೆ ಎಂದು ವಿವರಿಸಿದರು.

ಉಪ ನಿರ್ದೇಶಕ ಬಸವರಾಜ ಕನ್ಮಸ್ ಅವರು ಮಾತನಾಡಿ, ಸಂದರ್ಶನದಲ್ಲಿ ಶಿಶುಕ್ಷು ಪಡೆಯಲು ಆಯ್ಕೆಯಾಗಿರುವ ತರಬೇತಿದಾರರಿಗೆ ಶುಭ ಹಾರೈಸಿದರು.

ಪ್ರಾಚಾರ್ಯರಾದ ಶಿವಕುಮಾರ್ ಮಾತನಾಡಿದರು. ವಿಶ್ವನಾಥ ಬಿರಾದರ ತರಬೇತಿ ಅಧಿಕಾರಿ ಕಾರ್ಯಕ್ರಮವನ್ನು ನಿರೂಪಣೆ ಮಾಡಿದರು. ಆರತಿ ಮಣ್ಣೂರ ಕಿರಿಯ ತರಬೇತಿ ಅಧಿಕಾರಿ ಅವರು ಸ್ವಾಗತಿಸಿದರು.ಕಾರ್ಯಕ್ರಮದಲ್ಲಿ ಸಂಸ್ಥೆಯ ಸಿಬ್ಬಂದಿಯವರಾದ ರಮೇಶ. ಇಂದುಶೇಖರ, ಮಲ್ಲಿಕಾರ್ಜುನ, ಅಶೋಕ, ಜಗದೀಶ, ಶಶಿಕಾಂತರೆಡ್ಡಿ, ರಾಜೇಶ, ಅಮರದೀಪ, ಸತೀಶ ನಿರ್ಮಲೆ, ಶಿವಪ್ರಕಾಶ, ಮಲ್ಲಮ್ಮ, ನಿವೇದಿತಾ, ತನುಜಾ, ವೈಶಾಲಿ ಉಪಸ್ಥಿತರಿದ್ದರು.

ಇಂದು ಬೃಹತ್ ಅಪ್ರೆಂಟಿಸಿಪ್ ಮೇಳ ಎಂ ಆರ್ ಎಫ್ ಟೈರ್ಸ್ ಕಂಪನಿ ಸಂಗಾರೆಡ್ಡಿ ಪ್ಲಾಂಟ್ ನಿಂದ ಏರ್ಪಡಿಸಲಾಗಿತ್ತು.

# ಗ್ರಾಪಂ ಅಧಿಕಾರಿಗಳ ಅಕ್ರಮ ಆರೋಪ: ದೂರು

**ಹುಣಸಗಿ:** ತಾಲೂಕಿನ ಅಗ್ನಿ ಗ್ರಾಪಂದಲ್ಲಿ ಗ್ರಾಮ ಸಭೆ ಮಾಡದೆ ಕ್ರೀಯಾ ಯೋಜನೆಯನ್ನು ರೂಪಿಸಿ ಗ್ರಾಪಂ ಅಧಿಕಾರಿಗಳು ಅಕ್ರಮಕ್ಕೆ ಮುಂದಾಗಿದ್ದಾರೆ ಎಂದು ಗ್ರಾಪಂ ಸದಸ್ಯರು ಆರೋಪಿಸಿ ತಾಲೂಕು ಪಂಚಾಯಿತಿ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.

ಈ ವೇಳೆ ಗ್ರಾಪಂ ಸದಸ್ಯ ಇಸ್ಮಾಯಿಲ್ ಪಾಡಿಶಾ ಮಾತನಾಡಿ, ಸರಕಾರದ ನಿಯಮದ ಪ್ರಕಾರ ಯಾವುದೇ ಗ್ರಾಮ ಸಭೆ ಮಾಡದೇ ಗ್ರಾ.ಪಂ ಅಧಿಕಾರಿ 2025-26 ನೇ ಸಾಲಿನ ಕ್ರಿಯಾ ಯೋಜನೆ ಮಾಡಿದ್ದಾರೆ. ಈ ಕ್ರೀಯಾ ಯೋಜನೆಯಲ್ಲಿ ಒಂದೇ ಸರ್ವೆ ನಂಬರ್ ಗಳಲ್ಲಿ 10 ಕಾಮಗಾರಿಗಳು ಕ್ರೀಯಾ ಯೋಜನೆಯಲ್ಲಿ ಸೇರಿಸಿದ್ದಾರೆ. ಇದನ್ನು ಗಮನಿಸಿದರೆ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಬಾರಿ ಪ್ರಮಾಣದ ಅಕ್ರಮವೆಸಗಲು ಅಧಿಕಾರಿಗಳು ಮುಂದಗಿದ್ದಾರೆ ಎಂದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಗ್ರಾ.ಪಂ ಅಧ್ಯಕ್ಷ, ಗ್ರಾಪಂ ಅಧಿಕಾರಿ, ಕಂಪ್ಯೂಟರ್ ಆಪರೇಟರ್ ತಮಗೆ ಬೇಕಾದವರ ಹಾಗೂ ಅವರಿಗೆ ಹಣ ಕೊಟ್ಟವರಿಗೆ ಮಾತ್ರ ಕೆಸಲವನ್ನು ನೊಂದಣಿ ಮಾಡಿ ಲಕ್ಷಾಂತರ ಹಣವನ್ನು ಉಳ್ಳವರ ಪಾಲಾಗಲು ಅಧಿಕಾರಿಗಳು ಸಹಕರಿಸಿದ್ದಾರೆ.

ರೈತರ ಒಂದು ಕೆಲಸವನ್ನು ಇಟ್ಟಿರುವುದಿಲ್ಲಾ, ಕೇಳಿದರೆ ಈ ಪ್ಲಾನ್ ಮುಗಿದಿದೆ ಮುಂದಿನ ಪ್ಲಾನನಲ್ಲಿ ನಿಮ್ಮ ಕೆಲಸವನ್ನು ಇಡುತ್ತೇನೆ ಎಂದು ಅಧಿಕಾರಿಗಳು ಉಡಾಫೆ ಉತ್ತರವನ್ನು ನೀಡುತ್ತಿದ್ದಾರೆ. ಆದ ಕಾರಣ 2025-26 ಸಾಲಿನ ರೂಪಿಸಿರುವ ಕ್ರೀಯಾ ಯೋಜನೆಯನ್ನು ಕೂಡಲೇ ರದ್ದು ಗೊಳಿಸಿ ಹೊಸ ಕ್ರೀಯಾ ಯೋಜನೆ ರೂಪಿಸಬೇಕು.

2025-26 ನೇ ಸಾಲಿನ ಅಗ್ನಿ ಗ್ರಾಪಂನಲ್ಲಿ ಕೆಲಸದಲ್ಲಿ ತಾರತಮ್ಯ ತೋರುತ್ತಿದ್ದಾರೆ. ಅದಕ್ಕಾಗಿ ಇದರ ಬಗ್ಗೆ ವಿಚಾರಣೆ ಮಾಡಿ ನಮ್ಮ ಅಗ್ನಿ ಗ್ರಾಪಂಯ ಕ್ರೀಯಾ ಯೋಜನೆಯನ್ನು ಸರಕಾರದ ನಿಯಮದ ಪ್ರಕಾರ ರೂಪಿಸಬೇಕು ಕ್ರೀಯಾ ಯೋಜನೆ ರೂಪಿಸಬೇಕು ಒಂದು ವೇಳೆ ಇದರ ಬಗ್ಗೆ ನಿಷ್ಕಾಳಜಿ ವಹಿಸಿದರೆ ಹೋರಾಟ ಮಾಡಬೇಕಾಗುತ್ತದೆ ಎಂದು ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಅಶೋಕ ಅಗ್ನಿ, ಭೀಮಾಶಂಕರ್ ದೊರಿ, ಕಾಶಿರಾಯ ದೊರಿ, ಮರಳಸಿದ್ದಪ್ಪ ಅಗ್ನಿ ಇದ್ದರು.



ಗ್ರಾಪಂ ಸದಸ್ಯರು ತಾಪಂ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು.

ಪುರಸಭೆ ಕಾರ್ಯಾಲಯ ಜೇವರ್ಗಿ
ಡಾ। ಬಿ.ಆರ್.ಅಂಬೇಡ್ಕರ್ ಪುತ್ಥಳಿ ಹತ್ತಿರ, ಬಿ.ಬಿ. ಮುಖ್ಯರಸ್ತೆ, ಜೇವರ್ಗಿ-585310
ತಾ।। ಜೇವರ್ಗಿ ಜಿ। ಕಲಬುರಗಿ
ಇ-ಮೇಲ್: kajewargi.tmo@gmail.com, ಅಂತರ್ಜಾಲ: www.jewargitown.mrc.gov.in
ಸಂ.ಪುಸಜೇ/ಹರಾಜು/2024-25 ದಿನಾಂಕ: 10.03.2025

ಪ್ರಕಟಣೆ

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಜೇವರ್ಗಿ ಪುರಸಭೆ ವತಿಯಿಂದ 2025-26ನೇ ಸಾಲಿಗಾಗಿ (01.04.2025 ರಿಂದ 31.03.2026ರವರೆಗೆ) ಈ ಕೆಳಕಾಣಿಸಿದಂತೆ ಬಹಿರಂಗ ಲೀಲಾವನ್ನು ದಿನಾಂಕ: 19.03.2025 ರಂದು ಬೆಳಿಗ್ಗೆ 11:00 ಗಂಟೆಗೆ ಪುರಸಭೆ ಕಾರ್ಯಾಲಯದಲ್ಲಿ ನಡೆಸಲಾಗುವುದು. ಇಚ್ಛೆಯುಳ್ಳ ಗುತ್ತಿಗೆದಾರರು ಈ ಕೆಳಗಿನಂತೆ ಠೇವಣಿ ಇಟ್ಟು ಲೀಲಾವಿನಲ್ಲಿ ಭಾಗವಹಿಸಬಹುದು.

| | |
|---|---|
| 1. ಸಂತೆ ಹರಾಜು | ರೂ. 25000/- ಠೇವಣಿ |
| 2. ಟೋಲ್ ಟೆಕ್ಸ್ ಹರಾಜು | ರೂ. 10000/- ಠೇವಣಿ |
| 3. ಕೊಂಡವಾಡ ಹರಾಜು | ರೂ. 5000/- ಠೇವಣಿ |

ಲೀಲಾವನ್ನು ಪಡೆಯುವ ಗುತ್ತಿಗೆದಾರರು 3 ದಿನಗಳೊಳಗಾಗಿ ಲೀಲಾವಿನ ಸಂಪೂರ್ಣ ಹಣ ಪಾವತಿ ಮಾಡತಕ್ಕದ್ದು ಹಾಗೂ ಸದರಿ ಗುತ್ತಿಗೆ ಅವಧಿಯು ದಿನಾಂಕ: 01.04.2025 ರಿಂದ 31.03.2026 ರವರೆಗೆ ಮಾತ್ರ ಜಾರಿಯಲ್ಲಿರುತ್ತದೆ.
ಷರಾ: ಠೇವಣಿ ಕಟ್ಟುವ ಸಮಯ ದಿನಾಂಕ: 19.03.2025 ರಂದು ಬೆಳಿಗ್ಗೆ 10:00 ರಿಂದ 10:30 ಗಂಟೆ ಒಳಗಾಗಿ
ವಿ.ಸೂ: ಷರತ್ತುಗಳನ್ನು ಹಾಗೂ ವಿವಿಧ ದರಗಳನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸುವುದು ಅಥವಾ ಕಛೇರಿ ನೋಟಿಸ್ ಬೋರ್ಡ್‌ನಲ್ಲಿ ನೋಡುವುದು.
ಸಹಿ/-
ಮುಖ್ಯಾಧಿಕಾರಿಗಳು
ಪುರಸಭೆ ಜೇವರ್ಗಿ

# ಮಹಿಳಾ ಸಮಾನತೆ ಸಾರಿದ ಬಸವಾದಿ ಶರಣರು

**ಬೀದರ್:** 12ನೇ ಶತಮಾನದಲ್ಲಿ ಬಸವಾದಿ ಶರಣರು ಸ್ತ್ರೀಯರಿಗೆ ಸ್ವಾತಂತ್ರ್ಯ ಕಲ್ಪಿಸಿ ಸಮಾನತೆ ತಂದು ಕೊಟ್ಟರು ಎಂದು ಭಾಲ್ಕಿಯ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಹೇಳಿದರು.

ತಾಲೂಕಿನ ಬಗದಲ್ ಗ್ರಾಮದಲ್ಲಿ ಆಯೋಜಿಸಿದ್ದ ತಿಂಗಳ ಅರಿವಿನ ಜ್ಯೋತಿ ಕಾರ್ಯಕ್ರಮದ ವಾರ್ಷಿಕೋತ್ಸವ ಮತ್ತು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿದರು.

ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಸಾಕ್ಷಾತ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ಸ್ತ್ರೀ ಕುಲಕ್ಕೆ ದೈವತ್ವದ ಸ್ಥಾನಮಾನ ಕೊಟ್ಟ ಬಸವಾದಿ ಶರಣರ ಆದರ್ಶಗಳು ಮಹಿಳೆಯರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಹಾಯಕ ಕೃಷಿ ನಿರ್ದೇಶಕಿ ಆರತಿ ಪಾಟೀಲ್ ಮಾತನಾಡಿ, ಇಂದು ಸ್ತ್ರೀ ಸಮಾನತೆಗೆ ಆದ್ಯತೆ ಸಿಕ್ಕಿದೆ ಅಂದರೆ ಇದಕ್ಕೆ ಮೂಲ ಕಾರಣ 12ನೇ ಶತಮಾನದ ಬಸವಾದಿ ಶರಣರು ಎಂದು ತಿಳಿಸಿದರು. ಇಂದುಮತಿ ಅಕ್ಕ ಮಾತನಾಡಿದರು. ಮನ್ನಾಎಖ್ಖೆಳ್ಳಿಯ ಬಸವ ಮಹಾಮಠದ ಮೈತ್ರಾದೇವಿ ತಾಯಿ ಸಮ್ಮುಖ ವಹಿಸಿದ್ದರು. ಚಿನ್ಮಯಿ ದೀಪ್ತಿ ಅವರ ಮಾತನಾಡಿದರು.



ಭಾಲ್ಕಿಯ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರು ಬಸವ ಪಟ್ಟದ್ದೇವರು ಹಲವರನ್ನು ಸನ್ಮಾನಿಸ ಲಾಯಿತು.

### ಗೌರವ ಸನ್ಮಾನ

**ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಮಹಿಳೆಯರನ್ನು ಸತ್ಕರಿಸ ಲಾಯಿತು. ಈ ಸಂದರ್ಭದಲ್ಲಿ ಇಂದುಮತಿ ಕಾಶಿನಾಥ ಕೋಟೆ, ನಾಗಶೆಟ್ಟಿ ಚಾಮಾ, ಶರಣಪ್ಪ ಪಿನ್ನಾ, ಶಾಂತಪ್ಪ ಧಡಿಮಾಳ, ವಿದ್ಯಾವತಿ ಸಜ್ಜನಶೆಟ್ಟಿ, ಕರುಣಾ ಶಟಕಾರ, ಸುಗಮ್ಮ ನಾವದಗೇರೆ ಸೇರಿದಂತೆ ಹಲವರು ಇದ್ದರು. ಸಂಗೀತ ಕಲಾವಿದೆ ನಿವೇ ದಿತಾ ಸ್ವಾಮಿ ವಚನ ಗಾಯನ ನಡೆಸಿ ಕೊಟ್ಟರು. ಶಿವಲೀಲಾ ಚಟ್ನಹಳ್ಳಿ ಸ್ವಾಗತಿಸಿದರು. ಸಂಗೀತ ಕಲಾವಿದ ವೈಜಿ ನಾಥ ಸಜ್ಜನಶೆಟ್ಟಿ ನಿರೂಪಿಸಿದರು. ಅಂಬುಜಾ ಹಮ್ಮಾ ವಂದಿಸಿದರು.**

# ನೀರಿನ ಸಮಸ್ಯೆಗೆ ಜಿಲ್ಲಾಡಳಿತ ಗಮನಹರಿಸಲಿ

**ಶಹಾಪುರ:** ಫೆಬ್ರುವರಿ ತಿಂಗಳಲ್ಲಿ ಬೇಸಿಗೆ ಕಾವು ಹೆಚ್ಚಾದಂತೆ ಜಿಲ್ಲೆಯಲ್ಲಿ ಕುಡಿಯುವ ನೀರಿನ ಹಾಹಾಕಾರವೂ ಸಹ ಉಲ್ಬಣಗೊಂಡಿದೆ. ಆದಕಾರಣ ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಜಿಲ್ಲಾಡಳಿತ ಮುಂದಾಗಬೇಕಿದೆ ಎಂದು ಬಿಜೆಪಿ ಯುವ ಮುಖಂಡ ಕರಣ ಸುಬೇದಾರ ಆಗ್ರಹಿಸಿದ್ದಾರೆ.

ಜಿಲ್ಲೆಯಲ್ಲಿರುವ 112 ಗ್ರಾಪಂಗಳಲ್ಲಿ ಒಟ್ಟು 484 ನೀರು ಶುದ್ಧೀಕರಣ ಘಟಕಗಳಿದ್ದ, ಇವುಗಳಲ್ಲಿ 200ಕ್ಕೂ ಹೆಚ್ಚು ದುರಸ್ತಿಗೆ ಬಂದಿವೆ. ಆರೋ ಪ್ಲಾಂಟ್‌ಗಳ ನಿರ್ವಹಣೆಗೆ ಹಣದ ಕೊರತೆಯಿಂದಾಗಿ ನೀರು ಸರಬರಾಜಿಗೆ ಅಡಚಣೆಯಾಗಿದೆ. ಪ್ರತಿ ಪಂಚಾಯಿತಿಯ 15 ನೇ ಹಣಕಾಸು ಯೋಜನೆಯಡಿ ಇವುಗಳ ದುರಸ್ತಿ, ಹೊಸ ಆರೋ ಪ್ಲಾಂಟ್ ಸ್ಥಾಪನೆಗೆ ಹಣ ಮೀಸಲಿಡಬೇಕು. ಕಳೆದ ವರ್ಷ ಜಿಲ್ಲೆಯ ವಡಗೇರ ತಾಲೂಕಿನ ಹಂಚಿನಾಳ ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ಜನ ಜಾನುವಾರುಗಳು ಪರದಾಡುವ ಪರಿಸ್ಥಿತಿ ನಿರ್ಮಾಣವಾದ ಕಾರಣ 24 ತಾಸುಗಳಲ್ಲಿ ಗ್ರಾಮದ ಸಮಸ್ಯೆಗಳು ಪರಿಹರಸದಿದ್ದರೆ ಲೋಕಸಭಾ ಚುನಾವಣೆ ಮತದಾನ ಬಹಿಷ್ಕರಿಸಲಾಗುವುದು ಎಂದು ಗ್ರಾಮಸ್ಥರು ಹೋರಾಟ ರೂಪಿಸಿದ್ದರು.

ಪ್ರಸಕ್ತ ವರ್ಷದ ಬೇಸಿಗೆ ಪ್ರಾರಂಭದಲ್ಲಿ ವಡಗೇರ ತಾಲೂಕಿನ ಕ್ಯಾತನಾಳ ಹಂಚಿನಾಳ ಪಂಚಾಯತ್‌ಗಳಲ್ಲಿ ನೀರಿನ ಸಮಸ್ಯೆ ಎದುರಾಗಲಿದ್ದು ಜನರ ಹೋರಾಟಕ್ಕೆ ಪರಿಹಾರ ದೊರಕುವ ನಿಟ್ಟಿನಲ್ಲಿ ಜಿಲ್ಲಾಡಳಿತ ಕಾರ್ಯ ನಿರ್ವಹಿಸಬೇಕಾಗಿದೆ. ಜಿಲ್ಲೆಯಲ್ಲಿ ನೀರಿನ ಸಮಸ್ಯೆ ಆಗದಂತೆ ಜಿಲ್ಲಾಡಳಿತ ವಿಶೇಷ ತಂಡ ರಚಿಸಿ ನೀರಿನ ಸಮಸ್ಯೆ ಆಗುವ ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸುವ ಮೂಲಕ ಜನರಿಗೆ ನೇರವಾಗಬೇಕು ಒಂದು ವೇಳೆ ನಿರ್ಲಕ್ಷ್ಯ ಮಾಡಿದರೆ ಜನರ ಜತೆ ಜಿಪಂ ಕಚೇರಿ ಎದುರು ಖಾಲಿ ಕೊಡಗಳೊಂದಿಗೆ ಬೃಹತ್ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದರು.

> **ಬಿಸಿಲೂ ಹೆಚ್ಚಾಗುತ್ತಿರುವುದರಿಂದ ಸರ್ಕಾರದಿಂದ ಪ್ರತಿ ಗ್ರಾಮಗಳಲ್ಲಿ ಜನ ದಟ್ಟಣೆ ಪ್ರದೇಶದಲ್ಲಿ ಶುದ್ಧ ಕುಡಿಯುವ ನೀರಿನ ಅರವಟಿಕೆ ಅಳವಡಿಸಬೇಕು ಇದರಿಂದ ಜನರು ತಮ್ಮ ಧಣಿವು ಆರಿಸಿಕೊಳ್ಳಲು ಸಹಕಾರಿ ಆಗುತ್ತೆ.**
>
> -ಕರಣ ಸುಬೇದಾರ, ಬಿಜೆಪಿ ಯುವ ಮುಖಂಡರು

## ಸಮಾಚಾರ ಸಣ್ಣದಲ್ಲ

### ನೀರಿನ ಕರ ಪಾವತಿಸಲು ಗ್ರಾಹಕರಿಗೆ ಸೂಚನೆ

**ಕಲಬುರಗಿ:** ಕಲಬುರಗಿ ನಗರದಲ್ಲಿ ಎಲ್ ಆಂಡ್ ಟಿ ಕಂಪನಿಯಿಂದ ಈಗಾಗಲೇ ಪ್ರಯೋಗಿಕವಾಗಿ ಐವಾನ್ ಶಾಹಿ ಏರಿಯಾ ಹಾಗೂ ಓಝಾ ಲೇಔಟ್‌ಗಳಲ್ಲಿ 24ಥ7 ನಿರಂತರ ನೀರು ಸರಬರಾಜು ಮಾಡಲಾಗುತ್ತಿದ್ದು, ನೀರಿನ ಕರವನ್ನು ಬಾಕಿ ಉಳಿಸಿಕೊಂಡಿರುವ ಕಲಬುರಗಿ ನಗರದ ಗ್ರಾಹಕರು ನೀರಿನ ಕರವನ್ನು ಪಾವತಿಸಿ ಈ ಯೋಜನೆಯನ್ನು ಯಶಸ್ವಿ ಅನುಷ್ಠಾನಕ್ಕೆ ಸಹಕರಿಸಬೇಕೆಂದು ಕಲಬುರಗಿ ಯೋಜನಾ ಅನುಷ್ಠಾನ ಘಟಕದ (ಕುಸ್ಸೆಂಪ್)-ಕೆಯುಐಡಿಎಫ್‌ಸಿ ಕಾರ್ಯಪಾಲಕ ಅಭಿಯಂತರರು ಗ್ರಾಹಕರಲ್ಲಿ ಮನವಿ ಮಾಡಿದ್ದಾರೆ. ಕಲಬುರಗಿ ನಗರದ ಗ್ರಾಹಕರು ಸುಮಾರು 73 ಕೋಟಿ ರು.ಗಳ ನೀರಿನ ಕರದ ಬಾಕಿ ಉಳಿಸಿಕೊಂಡಿದ್ದು, ನಿರಂತರ ನೀರು ಸರಬರಾಜು ಯೋಜನೆ ಯಶಸ್ವಿ ಅನುಷ್ಠಾನ ಮತ್ತು ನಿರ್ವಹಣೆಗಾಗಿ ನೀರಿನ ಕರ ಸಂಗ್ರಹಿಸುವುದು ಅವಶ್ಯವಾಗಿದೆ. ಸಾರ್ವಜನಿಕರು ನೀರಿನ ಕರವನ್ನು ಕರ್ನಾಟಕ ಒನ್, ಮಹಾನಗರ ಪಾಲಿಕೆಯ ಆನ್‌ಲೈನ್‌ನಲ್ಲಿ ನೀರಿನ ಬಿಲ್ ವಿತರಕರ ಹತ್ತಿರ ಇರುವ ಕ್ಯೂಆರ್ ಕೋಡ್ ಮೂಲಕ ಕಲಬುರಗಿಯ ಎಲ್ ಆಂಡ್ ಟಿ ಕಂಪನಿ ಸ್ಥಾಪಿಸಿರುವ ಕ್ಯಾಶ್ ಕೌಂಟರ್‌ಗಳಲ್ಲಿ ನೀರಿನ ಕರ ತುಂಬಿ ಮಹಾನಗರ ಪಾಲಿಕೆಗೆ ಸಹಕರಿಸಬೇಕು.

### ಹೋಳಿ ಹಬ್ಬಕ್ಕಾಗಿ ವಿಶೇಷ ರೈಲು ವ್ಯವಸ್ಥೆ

**ಕಲಬುರಗಿ:** ಹೋಳಿ ಹಬ್ಬದ ನಿಮಿತ್ತ ಬೆಂಗಳೂರು-ಕಲಬುರಗಿ ಮಧ್ಯೆ ನಾಲ್ಕು ವಿಶೇಷ ರೈಲು ಓಡಿಸಲಾಗುವುದು ಎಂದು ಕೇಂದ್ರ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ. ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ನಿಲ್ದಾಣದಿಂದ ಮಾ.13, 14ರಂದು ರಾತ್ರಿ 9.15ಕ್ಕೆ ಹೊರಡುವ ರೈಲು ಮರುದಿನ ಬೆಳಗ್ಗೆ ಕಲಬುರಗಿ ತಲುಪಲಿದೆ. ಇಲ್ಲಿಂದ 14, 15ರಂದು ಬೆಳಗ್ಗೆ 9.35ಕ್ಕೆ ಹೊರಡುವ ರೈಲು ರಾತ್ರಿ 8ಕ್ಕೆ ಬೆಂಗಳೂರು ತಲುಪಲಿದೆ. ಶಹಾಬಾದ್, ಯಾದಗಿರಿ, ಕೃಷ್ಣಾ, ರಾಯಚೂರು, ಮಂತ್ರಾಲಯಂ ರಸ್ತೆ, ಆದೋನಿ, ಗುಂತಕಲ್, ಅನಂತಪುರ, ಧರ್ಮಾವರಂ ಮತ್ತು ಯಲಹಂಕಗಳಲ್ಲಿ ನಿಲ್ಲಲಿದ್ದು, ಮುಂಗಡ ಟಿಕೆಟ್ ಬುಕ್ಕಿಂಗ್ ಮಾಡಬಹುದು. ಪುಣೆಯ ದೌಂಡ್‌ಗೆ ಕಲಬುರಗಿಯಿಂದ ಮಾ.10, 11, 12, 14, 15, 17, 18, 19, 21 ಮತ್ತು 22ರಂದು ರಾತ್ರಿ 10.22ಕ್ಕೆ ರೈಲು ಹೊರಡಲಿದೆ. ಮಾ.10, 11, 12, 14, 15, 17, 18, 19, 21, 22ರಂದು ಬೆಳಗ್ಗೆ 11.20ಕ್ಕೆ ದೌಂಡ್‌ನಿಂದ ಕಲಬುರಗಿಗೆ ಬರಲಿದೆ.

### ಅರ್ಜಿ ಸಲ್ಲಿಕೆಗೆ ದಿನಾಂಕ ವಿಸ್ತರಣೆ

**ಕಲಬುರಗಿ:** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ (ಆಂಗ್ಲ ಮಾಧ್ಯಮ) ಶಾಲೆಗಳಿಗೆ ಹಾಗೂ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ (ಸಿ.ಬಿ.ಎಸ್.ಸಿ) ಶಾಲೆಗಳಲ್ಲಿ 6ನೇ ತರಗತಿಗೆ 2025-26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಕೆ ಕೊನೆಯ ದಿನಾಂಕವನ್ನು 2025ರ ಮಾ25ರವರೆಗೆ ವಿಸ್ತರಿಸಲಾಗಿದೆ ಎಂದು ಕಲಬುರಗಿ ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ. ಪ್ರವೇಶ ಪಡೆಯಲಿಚ್ಚಿಸುವ ಅಲ್ಪಸಂಖ್ಯಾತರ ಸಮುದಾಯದ (ಮುಸ್ಲಿಂ, ಕ್ರೈಸ್ತ, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ) ವಿದ್ಯಾರ್ಥಿಗಳಿಗೆ ಶೇ. 75 ಹಾಗೂ ಇತರೆ ವರ್ಗಗಳ ವಿದ್ಯಾರ್ಥಿಗಳಿಗೆ ಶೇ. 25 ರಷ್ಟು ಸ್ಥಾನಗಳು ಮೀಸಲಿದ್ದು, ಇದರಲ್ಲಿ ಬಾಲಕಿಯರಿಗೆ ಶೇ. 50 ರಷ್ಟು ಸ್ಥಾನಗಳನ್ನು ಮೀಸಲಿರಿಸಲಾಗಿದೆ. ಇಚ್ಛೆಯುಳ್ಳ ಅಭ್ಯರ್ಥಿಗಳು ಸೇವಾ ಸಿಂಧು ಪೋರ್ಟಲ್‌ನಲ್ಲಿ https://sevasindhuservices.karnataka.gov.in ಆನ್‌ಲೈನ್ ಮೂಲಕ ಅರ್ಜಿಗಳನ್ನು ಇಲಾಖೆಯವಸತಿ ಶಾಲೆಗಳಲ್ಲಿ ಅಥವಾ ತಾಲ್ಲೂಕ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಲ್ಲಿ 2025ರ ಮಾರ್ಚ್ 25 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿಯನ್ನು, ದೂರವಾಣಿ ಸಂಖ್ಯೆ.08472-247260 ಹಾಗೂ https://dom.karnataka.gov.in ಹಾಗೂ ರಾಜ್ಯ ಸಹಾಯವಾಣಿ 827779990ಗೆ ಸಂಪರ್ಕಿಸಲು ಕೋರಲಾಗಿದೆ.

### ಶುಲ್ಕ ಮರುಪಾವತಿಗೆ ಅವಧಿ ವಿಸ್ತರಣೆ

**ಕಲಬುರಗಿ:** ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1ರ ಅಲೆಮಾರಿ/ಅರೆ-ಅಲೆಮಾರಿ ವಿದ್ಯಾರ್ಥಿಗಳಿಂದ ''ಶುಲ್ಕ ಮರುಪಾವತಿ'' ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 2025ರ ಮಾರ್ಚ್ 30 ರವರೆಗೆ ವಿಸ್ತರಿಸಲಾಗಿದೆ ಎಂದು ಕಲಬುರಗಿ ಹಿಂದುಳಿದ ವರ್ಗಗಳ ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ. ಆನ್‌ಲೈನ್ ಮೂಲಕ https://ssp.postmatric.karnataka.gov.in ವೆಬ್‌ಸೈಟ್‌ದಲ್ಲಿ 2025ರ ಮಾರ್ಚ್ 30 ರವರೆಗೆ ಅರ್ಜಿ ಸಲ್ಲಿಸಬೇಕು. ಈ ಹಿಂದೆ ಅರ್ಜಿ ಸಲ್ಲಿಕೆ ಕೊನೆಯ ದಿನಾಂಕ 15-03-2025ಕ್ಕೆ ನಿಗದಿಪಡಿಸ'ಲಾಗಿತ್ತು. ಹೆಚ್ಚಿನ ಮಾಹಿತಿಗಾಗಿ ಇಲಾಖಾ ಸಹಾಯವಾಣಿ ದೂರವಾಣಿ ಸಂಖ್ಯೆ 8050770005 ಸಂಪರ್ಕಿಸಬಹುದು.

{ಎಚ್.ಡಿ.ದೇವೇಗೌಡ } ಮಾಜಿ ಪ್ರಧಾನಿ

**ವಿಶ್ವವಿದ್ಯಾಲಯಗಳು ಸ್ಥಿತಿ ದಯನೀಯವಾಗಿದೆ. ಕೇಂದ್ರ ಶಿಕ್ಷಣ ಸಚಿವಾಲಯ ಕೂಡಲೇ ಮಧ್ಯಪ್ರವೇಶಿಸಿ ಅನುದಾನ ಬಿಡುಗಡೆ ಮಾಡಬೇಕು. ಈ ವಿಷಯದಲ್ಲಿ ರಾಜಕೀಯ ಮಾಡುವುದು ಬೇಡ.**

ಕೇಂದ್ರೀಯ ವಿಶ್ವವಿದ್ಯಾಲಯದ 8ನೇ ಘಟಿಕೋತ್ಸವ | 36 ಪಿ.ಎಚ್.ಡಿ ಪದವಿ ಪ್ರದಾನ | ಇಸ್ರೋ ಅಧ್ಯಕ್ಷ ನಾರಾಯಣನ್ ಕಿವಿಮಾತು

# ಸಮಾಜದ ಋಣ ತೀರಿಸುವ ಹೊಣೆ ಮರೆಯದಿರಿ

**ವಿಶ್ವವಾಣಿ ಸುದ್ದಿಮನೆ** ಕಲಬುರಗಿ

ಉನ್ನತ ಶಿಕ್ಷಣ ಪಡೆದು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಿಂದ ಹೊರಬರುವ ವಿದ್ಯಾರ್ಥಿಗಳು ಹಡೆದವರ ಋಣದಿಂದ ಹಿಡಿದು ತಮ್ಮನ್ನು ಬೆಳೆಸುವಲ್ಲಿ ಪ್ರಧಾನ ಪಾತ್ರ ವಹಿಸಿದ ಸಮಾಜದ ಋಣ ತೀರಿಸುವ ಹೊಣೆ ನಿಭಾಯಿಸಬೇಕೆಂದು ಇಸ್ರೋ ಅಧ್ಯಕ್ಷ ಹಾಗೂ ಬಾಹ್ಯಾಕಾಶ ಇಲಾಖೆಯ ಕಾರ್ಯದರ್ಶಿ, ಹಿರಿಯ ವಿಜ್ಞಾನಿ ಡಾ.ವಿ. ನಾರಾಯಣನ್ ಕರೆ ನೀಡಿದರು.

ಕಡಗಂಚಿ ಸಮೀಪದ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ವಿವಿಧೋದ್ದೇಶ ಸಭಾ ಭವನದಲ್ಲಿ ಎಂಟನೇ ಘಟಿಕೋತ್ಸವ ಉದ್ಘಾಟಿಸಿ ಪ್ರಧಾನ ಭಾಷಣ ಪ್ರಸ್ತುತಪಡಿಸಿದ ಅವರು, ಒಬ್ಬ ಸಮರ್ಥ ವಿದ್ಯಾರ್ಥಿ ರೂಪುಗೊಳ್ಳಬೇಕಾದರೆ ಆತನ ಪೋಷಕರು ತಮ್ಮ ವರ್ತಮಾನ ಮತ್ತು ಭವಿಷ್ಯ ಒಳಗೊಂಡಂತೆ ಬದುಕಿನ ಎಲ್ಲವನ್ನೂ ವ್ಯಯಿಸುತ್ತಾರೆ. ಇದರ ಜೊತೆಗೆ ದೇಶದ ಅಭಿವೃದ್ಧಿಗಾಗಿ ತೆರಿಗೆ ಪಾವತಿಸುವ ಜನಸಾಮಾನ್ಯನಿಂದ ಹಿಡಿದು ಸಮಾಜದ ಪ್ರತಿಯೊಂದು ವಿಭಾಗ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಆತನ ಕೈ ಹಿಡಿದು ನಡೆಸಿರುತ್ತದೆ. ಹಾಗಾಗಿ, ಎಂಥದ್ದೇ ಪರಿಸ್ಥಿತಿ ಎದುರಾದರೂ ಸಮಾಜದ ಋಣ ತೀರಿಸುವ ನಿಟ್ಟಿನಲ್ಲಿ ಹಿಂದೆ ಬೀಳಬಾರದು ಎಂದು ಕಿವಿಮಾತು ಹೇಳಿದರು.

ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಶೇ.97.5ರಷ್ಟು ಜನಸಂಖ್ಯೆ ಬಡತನ ರೇಖೆಗಿಂತಲೂ ಕೆಳಗಿತ್ತು. ಮೇಲಾಗಿ, ಕೇವಲ 32 ವರ್ಷವಿದ್ದ ಜನರ ಜೀವಿತಾವಧಿ ಈಗ 71 ವರ್ಷಕ್ಕೆ ತಲುಪಿದೆ. ಆ ಅವಧಿಯಲ್ಲಿ ಕೇವಲ ಶೇ.12ರ ಆಸುಪಾಸಿನಲ್ಲಿದ್ದ ಸಾಕ್ಷರತೆ ಇಂದು ಶೇ. 79.7 ಹಂತಕ್ಕೆ ತಲುಪಿದೆ. ಇಂತಹ ಸಾಧನೆಯ ಹಿಂದೆ ದೇಶವು ಎಲ್ಲ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆಯೇ ಪ್ರಮುಖ ಕಾರಣವಾಗಿದೆ. ಅದರಲ್ಲೂ ಮುಖ್ಯವಾಗಿ ಹಸಿರುಕ್ರಾಂತಿಯ ಮೂಲಕ ಆಹಾರ ಉತ್ಪಾದನೆಯಲ್ಲಿ ಗಣನೀಯ ಸಾಧನೆ ಮಾಡಿದೆ. ಇದರ ಜೊತೆಗೆ, ಶ್ವೇತಕ್ರಾಂತಿ, ಬೂದುಕ್ರಾಂತಿ, ನೀಲಿಕ್ರಾಂತಿ ಹಾಗೂ ಹಳದಿ ಕ್ರಾಂತಿಯ ಮೂಲಕ ದೇಶ ಬಹುತೇಕ ಎಲ್ಲ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವುದರ ಹಿಂದೆ ಈ ದೇಶದ ರೈತರು, ವಿಜ್ಞಾನಿಗಳು, ತೆರಿಗೆ ಪಾವತಿಸುವ ಜನಸಾಮಾನ್ಯರ ಕೊಡುಗೆ ಸಾಕಷ್ಟಿದೆ ಎಂಬುದನ್ನು ಯಾರೂ ಮರೆಯುವಂತಿಲ್ಲ ಎಂದರು.

ಸ್ವಾತಂತ್ರ್ಯದ ಸಂದರ್ಭದಲ್ಲಿ ಕೇವಲ 2825 ಪ್ರಾಥಮಿಕ ಶಾಲೆಗಳಿದ್ದ ದೇಶದಲ್ಲಿ ಇಂದು 8.40 ಲಕ್ಷ ಶಾಲೆಗಳು, 742 ಮೆಡಿಕಲ್ ಕಾಲೇಜುಗಳು, 4351 ಎಂಜಿನಿಯರಿಂಗ್ ಕಾಲೇಜುಗಳಿದ್ದು, ಬಾಹ್ಯಾಕಾಶ ಸಂಶೋಧನಾ ಕ್ಷೇತ್ರ, ಪರಮಾಣು ಶಕ್ತಿ, ಕೃಷಿ ಸೇರಿದಂತೆ ಬಹುತೇಕ ಎಲ್ಲ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಯಾಗಿದೆ. ಈ ಸಾಧನೆ ಇದೇ ರೀತಿ ಮುಂದೆ ಸಾಗುತ್ತಾ ಹೋಗಬೇಕಾದರೆ ಉನ್ನತ ಶಿಕ್ಷಣ ಪಡೆದ ವಿದ್ಯಾರ್ಥಿಗಳು ತಮ್ಮ ತಮ್ಮ ಆಸಕ್ತ ಕ್ಷೇತ್ರದಲ್ಲಿ ಗಣನೀಯ ಕೊಡುಗೆ ನೀಡಬೇಕೆಂದು ಸಲಹೆ ನೀಡಿದರು.

ಕೇಂದ್ರೀಯ ವಿಶ್ವವಿದ್ಯಾಲಯದ 8ನೇ ಘಟಿಕೋತ್ಸವ ನಡೆಯಿತು.

**36 ಪಿ.ಎಚ್.ಡಿ ಪದವಿ ಪ್ರದಾನ:** ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ 8ನೇ ಘಟಿಕೋತ್ಸವದಲ್ಲಿ ಈ ಬಾರಿ 36 ಸಂಶೋಧನಾರ್ಥಿಗಳು ಪಿ.ಎಚ್.ಡಿ ಪದವಿ ಸ್ವೀಕರಿಸಿದರು. ಡಾ.ಅಪ್ಪಗೆರೆ ಸೋಮಶೇಖರ ಮಾರ್ಗದರ್ಶನದಲ್ಲಿ ಕನ್ನಡ ಅಧ್ಯಯನ ವಿಭಾಗದ ಸಂಶೋಧನಾ ವಿದ್ಯಾರ್ಥಿ ನಂದಪ್ಪ ಮಂಡಿಸಿದ ದಲಿತ ಚಳವಳಿಯ ಅನುಭವ ಕಥನ ಮಹಾಪ್ರಬಂಧಕ್ಕೆ ಪಿ.ಎಚ್.ಡಿ ಪದವಿ ಸ್ವೀಕರಿಸಿದರು. ಇದರ ಜತೆಗೆ, ಭೂಗೋಳ, ಇಂಗ್ಲಿಷ್, ಅರ್ಥಶಾಸ್ತ್ರ, ವಾಣಿಜ್ಯ, ಮನಃಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ ಸೇರಿದಂತೆ ವಿವಿಧ ವಿಷಯಗಳ ಮೇಲೆ ಸಂಶೋಧನಾರ್ಥಿಗಳು ಪಿ.ಎಚ್.ಡಿ ಪದವಿ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಸಿಯುಕೆ ಕುಲಾಧಿಪತಿ ವಿಜಯಕೇಶವ ಗೋಖಲೆ ಅಧ್ಯಕ್ಷತೆ ವಹಿಸಿದ್ದರು. ವಿವಿ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಪ್ರಾಸ್ತಾವಿಕವಾಗಿ ಮಾತನಾಡಿದರು. . ಆರ್.ಆರ್.ಬಿರಾದಾರ್, ಪರೀಕ್ಷಾ ವಿಭಾಗದ ಕಂಟ್ರೋಲರ್ ಡಾ.ಕೋಟಾ ಸಾಯಿಕೃಷ್ಣ, ಡಾ.ಗಣಪತಿ ಸಿನ್ನೂರ ಸೇರಿದಂತೆ ಪದವಿ, ಸ್ನಾತಕೋತ್ತರ ವಿದ್ಯಾರ್ಥಿಗಳೊಂದಿಗೆ ಪೋಷಕರು ಘಟಿಕೋತ್ಸವದಲ್ಲಿ ಪಾಲ್ಗೊಂಡಿದ್ದರು.

#### 35 ವಿದ್ಯಾರ್ಥಿಗಳಿಗೆ ಚಿನ್ನದ ಪದಕ

**ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಎಂಟನೇ ಘಟಿಕೋತ್ಸವದಲ್ಲಿ 35 ವಿದ್ಯಾರ್ಥಿಗಳು ಚಿನ್ನದ ಪದಕ ಸ್ವೀಕರಿಸಿದರು. ಈ ಪೈಕಿ ಬಿ.ಟೆಕ್ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿ ಬುರ್ರ ಮಸ್ತಾನ್ ವೇದಸಾಯಿ ಸಾಹಿತ್ಯ ನಿತಿನ್ ಪ್ರಥಮ ರ್‍ಯಾಂಕ್ ಜತೆಗೆ ಎರಡು ಚಿನ್ನದ ಪದಕಗಳನ್ನು ಸ್ವೀಕರಿಸಿದರು. ಎರಡು ಚಿನ್ನದ ಪದಕಗಳ ಪೈಕಿ ಪ್ರತಿಷ್ಠಿತ ಪ್ರೊ.ಎ.ಎಂ.ಪಠಾಣ್ ಚಿನ್ನದ ಪದಕವನ್ನು ಸಹ ಅವರು ಸ್ವೀಕರಿಸಿದರು. ಕನ್ನಡ ವಿಭಾಗದ ವಿದ್ಯಾರ್ಥಿನಿ ಶೋಭಾ ಪ್ರಥಮ ರ್‍ಯಾಂಕ್ ಪಡೆದಿದ್ದು, ಚಿನ್ನದ ಪದಕಕ್ಕೆ ಭಾಜನರಾದರು. ಇದೇವೇಳೆ, ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದಲ್ಲಿ ಪ್ರಥಮ ರ್‍ಯಾಂಕ್ ನೊಂದಿಗೆ ಪದ್ಮಜಾ ಪಿ.ಜಿ. ಹಾಗೂ ಇಂಗ್ಲಿಷ್ ವಿಭಾಗದಲ್ಲಿ ಪ್ರಥಮ ರ್‍ಯಾಂಕ್ ಜತೆಗೆ ಎಚ್.ವಾಣಿ ಚಿನ್ನದ ಪದಕ ಸ್ವೀಕರಿಸಿದರು. ಇದೇವೇಳೆ, 197 ವಿದ್ಯಾರ್ಥಿಗಳು ಪದವಿ ಹಾಗೂ 627 ವಿದ್ಯಾರ್ಥಿ ಗಳು ಸ್ನಾತಕೋತ್ತರ ಪದವಿ ಪ್ರಮಾಣ ಪತ್ರ ಸ್ವೀಕರಿಸಿದರು.**

#### ಡಾ.ನಾರಾಯಣನ್ ಶಕ್ತಿವರ್ಧಕ ಕ್ಯಾಪ್ಸೂಲ್‌ಗಳು

- ಅಧ್ಯಯನದ ಚಟ ಮಹಾನ್ ಶಕ್ತಿ ಸಂಪನ್ಮೂಲ
- ಹೊಂದಾಣಿಕೆರಹಿತ ಬದ್ಧತೆ ಉನ್ನತ ಸಾಧನೆಯ ಹಿಂದಿನ ಶಕ್ತಿ
- ಚಾರಿತ್ರ್ಯ ಆಂತರಿಕ ಶಕ್ತಿ ವರ್ಧಕಕ್ಕೆ ಪೂರಕ
- ಕನಸುಗಳು ಆಂತರಿಕ ವೃದ್ಧಿಯ ಮೇಲ್ವಿಚಾರಕರು
- ಆತ್ಮವಿಶ್ವಾಸ ಇದ್ದರೆ ಮಾತ್ರ ಸ್ವಯಂ ಪ್ರೇರಣಾಶಕ್ತಿ
- ಜಾಗೃತ ಮನಸ್ಥಿತಿಯ ರಿಸ್ಕ್ ಮಾತ್ರ ಸಹಾಯಕಾರಿ
- ನಾಯಕತ್ವ ಗುಣಕ್ಕೆ ಸಹೃದಯತೆಯೇ ಭೂಷಣ

## ಮಧ್ಯವರ್ತಿಗಳ ಹಾವಳಿ ತಡೆಗೆ ತೊಗರಿ ಖರೀದಿ ಕೇಂದ್ರ

**ಆಳಂದ:** ಮಧ್ಯವರ್ತಿಗಳ ಹಾವಳಿ ಇಲ್ಲದೇ ರೈತರ ಖಾತೆಗೆ ಹಣ ಜಮಾ ಮಾಡುವ ಮೂಲಕ ಸರಕಾರ ರೈತರ ನೆರವಿಗೆ ನಿಂತಿದೆ, ರೈತರು ಹೆಚ್ಚಿನ ಸಂಖ್ಯೆಯಲ್ಲಿ ತೊಗರಿ ಕೇಂದ್ರಗಳಿಗೆ ತೊಗರಿ ಹಾಕುವ ಮೂಲಕ ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕೆಂದು ಕೆಎಂಎಫ್ ಅಧ್ಯಕ್ಷ ಆರ್.ಕೆ.ಪಾಟೀಲ್ ಅವರು ಹೇಳಿದರು.

ಪಟ್ಟಣದ ಹೊರ ವಲಯದ ಸಂಗೋಳಗಿ (ಜಿ)ಯಲ್ಲಿ ಆಳಂದ ಪ್ರಾಥಮಿಕ ಕೃಷಿ ಪತ್ತಿನ ಸಹಕಾಯ ಸಂಘದಿಂದ ಅಡಿಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ನಿಯಮಿತ, ಕಲಬುರಗಿ ಶಾಖೆ ಹಾಗೂ ಕೇಂದ್ರ ಸರಕಾರದ ಬೆಂಬಲ ಬೆಲೆ ಯೋಜನೆಯಡಿ ನ್ಯಾಫೆಡ್ ಸಂಸ್ಥೆಯ ಪರವಾಗಿ 2024-25ನೇ ಸಾಲಿನ ಎಫ್.ಎಕ್ಯೂ ಗುಣಮಟ್ಟದ ತೊಗರಿ ಖರೀದಿ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದರು.

ತಾಲೂಕಿನಲ್ಲಿ ಈ ಸಲ ತೊಗರಿ ಉತ್ತಮ ಫಸಲು ಬಂದಿತ್ತು, ನೆಟೆರೋಗದಿಂದ ಬಳಹಷ್ಟು ರೈತರ ತೊಗರಿ ಹಾಳಾಗಿದೆ, ಈಗಾಗಲೇ ಸರಕಾರ ಹಾಳಾದ ತೊಗರಿ ಮಾಹಿತಿ ಸಂಗ್ರಹಿಸಿ ಪರಿಹಾರ ಚಿಂತನೆಯಲ್ಲಿ ಇದೆ ಹಾಗೂ ಮಾರುಕಟ್ಟೆಯಲ್ಲಿ ಬೆಲೆ ಕುಸಿದಿದ್ದರಿಂದ ರೈತರು ಮತ್ತೆ ಸಂಕಷ್ಟಕ್ಕೆ ಸಿಲುಕ್ಕಿದ್ದಾರೆ ಇದನ್ನು ಮನಗಂಡು ಸರಕಾರ 450 ರೂ ಪ್ರೋತ್ಸಾಹ ಧನ ನೀಡುತ್ತಿದ್ದಾರೆ ಎಂದರು.

ಕೃಷಿ ಪತ್ತಿನ ಸಹಕಾರ ಸಂಘ ಅಧ್ಯಕ್ಷ ಭಾರತ ವಿಭೂತೆ ಪಾಟೀಲ್, ಉಪಾಧ್ಯಕ್ಷ ಶಿವಾನಂದ ನಾಗೂರೆ ಹಾಗೂ ಬಸವಣ್ಣಪ್ಪ ಪಾಟೀಲ್, ದಿನೇಶ ಪಾಟೀಲ್, ಹಣಮಂತರಾವ , ಶ್ರೀಶೈಲ ವಿಭೂತೆ ಪಾಟೀಲ್, ಸುನೀಲ ಹತ್ತಿ, ಪಂಡಿತ ಶೇರಿಕರ, ಬಸು ಪಾಟೀಲ್, ಸಂಜಯ ನಾಯಕ, ಗುಲಾಬ ಹುಸೇನ ಟಪ್ಪೇವಾಲೆ ಉಪಸ್ಥಿತರಿದ್ದರು.

**ಒಬ್ಬ ರೈತ ಪ್ರತಿ ಎಕರೆಗೆ 4 ಕ್ವಿಂಟಲ್ ನಂತೆ ಗರಿಷ್ಠ 10 ಎಕರೆಯ 40 ಕ್ವಿಂಟಲ್ ತೊಗರಿ ಮಾರಾಟ ಮಾಡಲು ಅವಕಾಶ ಇರುತ್ತದೆ. ಪ್ರತಿ ಕ್ವಿಂಟಲ್‌ಗೆ ಕೇಂದ್ರ ಸರಕಾರದಿಂದ 7550 ರು., ರಾಜ್ಯ ಸರಕಾರದಿಂದ ಸಹಾಯ ಧನ 450 ರು. ಹಾಗೂ ಈಗಾಗಲೇ 200ಕ್ಕೂ ಹೆಚ್ಚು ರೈತರು ನೋಂದಣಿ ಮಾಡಿಕೊಂಡಿದ್ದಾರೆ.**

**-ಮಹಾದೇವ ಪಾಟೀಲ್**
ಮುಖ್ಯಕಾರ್ಯನಿರ್ವಾಹಣಾಧಿಕಾರಿ

## ಉನ್ನತ ಶಿಕ್ಷಣದ ಜತೆಗೆ ಸಮಾಜಕ್ಕೆ ಕೊಡುಗೆ ನೀಡಿ

ಡಾ.ಬಸವರಾಜ ಪಾಟೀಲ್ ಸಲಹೆ | ಚಿತ್ತಾಪುರದಲ್ಲಿ ಎಸ್‌ಎಸ್‌ಕೆ ಶಾಲೆಯ ದಶಮಾನೋತ್ಸವ

**ಚಿತ್ತಾಪುರ:** ಇಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳು ಮುಂದೆ ಉನ್ನತ ಸ್ಥಾನದೊಂದಿಗೆ ಇನ್ನೊಂದಿಷ್ಟು ಜನತೆಗೆ ಕೆಲಸ ಕೊಡುವವರಾಗಬೇಕು, ಅದು ಬಿಟ್ಟು ಬೇಡುವವರು ಆಗಬಾರದು ಎಂದು ಭಾರತ ವಿಕಾಸ ಸಂಗಮ, ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ಸಂರಕ್ಷಕ ಹಾಗೂ ರಾಜ್ಯಸಭಾ ಮಾಜಿ ಸದಸ್ಯ ಡಾ.ಬಸವರಾಜ ಪಾಟೀಲ್ ಸೇಡಂ ಹೇಳಿದರು.

ವರುಣ ನಗರದಲ್ಲಿನ ಶ್ರೀ ಗುರು ರಾಘವೇಂದ್ರ ಟ್ರಸ್ಟ್‌ನ ದಿ.ಶ್ರೀ ಶೇಷಗಿರಿರಾವ್ ಎಸ್. ಕುಲಕರ್ಣಿ ಪ್ರಾಥಮಿಕ ಮತ್ತು ಪ್ರೌಢ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹಮ್ಮಿಕೊಂಡಿದ್ದ ದಶಮಾನೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿ, ಇಂದು ಮಕ್ಕಳ ಬಾಳಿಗೆ ಬೆಳಕಾಗುವ ಶಿಕ್ಷಣ ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳು, ಶಿಕ್ಷಕರು ಹಾಗೂ ಪಾಲಕರು ಚಿಂತನೆ ನಡೆಸಬೇಕು ಎಂದು ಸಲಹೆ ನೀಡಿದರು.

ಹುಬ್ಬಳ್ಳಿ ಡಿವೈಎಸ್‌ಪಿ ಡಾ.ವಿನೋದ ಮುತ್ತೇದಾರ್ ಮಾತನಾಡಿ, ಮಕ್ಕಳು ಅಂಕಗಳ ಮೇಲಿನ ಭಯವನ್ನು ಬಿಟ್ಟು ಉತ್ತಮ ಶಿಕ್ಷಣ ಪಡೆಯಲು ಪ್ರಯತ್ನಿಸಬೇಕು. ಬದುಕಿನಲ್ಲಿ ಗುರಿ ಮುಖ್ಯ, ಅದನ್ನು ತಲುಪಲು ನಿರಂತರ ಪ್ರಯತ್ನ ಅಗತ್ಯ. ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ನೀಡುವ ಶ್ರೇಷ್ಠ ಜವಾಬ್ದಾರಿ ಶಿಕ್ಷಕರ ಮೇಲಿದ್ದು, ಅದನ್ನು ಸಮರ್ಪಕವಾಗಿ ನಿಭಾಯಿಸಬೇಕು ಎಂದು ಹೇಳಿದರು.

ಪಿಎಸ್‌ಐ ಶ್ರೀಶೈಲ್ ಅಂಬಾಟಿ ಮಾತನಾಡಿದರು. ಟ್ರಸ್ಟ್ ಅಧ್ಯಕ್ಷ ವೆಂಕಟೇಶ ಆರ್.ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು.

ಟ್ರಸ್ಟ್ ಕಾರ್ಯದರ್ಶಿ ರವಿ ಎಸ್.ಕುಲಕರ್ಣಿ, ಉಪಾಧ್ಯಕ್ಷ ಶ್ರೀನಿವಾಸ ಕುಲಕರ್ಣಿ, ಪ್ರಮುಖರಾದ ಮಹಾದೇವಮ್ಮ ಸ್ವಾಟಿ, ಸುರೇಶ ಕುಲಕರ್ಣಿ, ವಿಶ್ವನಾಥ ಭಾಗೋಡಿ, ಶಿವ ಪಾಟೀಲ್, ನಾಗರಾಜ ಕುಲಕರ್ಣಿ, ಸಾಯಬಣ್ಣ ಹೋಳಿಕಟ್ಟಿ, ಸುರೇಶ ಗೊಂಗಾಣ, ಜ್ಯೋತಿ ಕುಲಕರ್ಣಿ, ಹಣಮಂತ ಹೋಳಿಕಟ್ಟಿ, ಪರಮೇಶ್ವರಿ, ಆರತಿ, ಕಾವ್ಯ ಜ್ಯೋತಿ, ಸಂತೋಷಿ, ರೇಣುಕಾ, ಗಂಗಮ್ಮ, ತಾರಮ್ಮ, ಪ್ರೀತಿ, ಪಾವನಿ, ಫಿರ್ದೋಸ್ ಇತರರಿದ್ದರು.

ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ ವಾಡಿಯ ಭಾರತಿ ದಾಸ್, ಸವಿತಾ, ಚಿತ್ತಾಪುರದ ಸ್ನೇಹಾ ಎಂ. ಪೋತರೆಡ್ಡಿ ಅವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು. ಮುಖ್ಯಗುರು ವರುಣಕುಮಾರ ಕುಲಕರ್ಣಿ ವರದಿ ವಾಚಿಸಿದರು. ಶಶಾಂಕ ಪಾಟೀಲ್ ಸ್ವಾಗತಿಸಿದರು. ಸೃಷ್ಟಿ, ಶ್ರೀಗೌರಿ, ಭಾವನಾ, ದೀಪಿಕಾ ನಿರೂಪಣೆ ಮಾಡಿದರು.

ಚಿತ್ತಾಪುರದಲ್ಲಿ ಹಮ್ಮಿಕೊಂಡಿದ್ದ ಶ್ರೀ ಗುರು ರಾಘವೇಂದ್ರ ಟ್ರಸ್ಟ್ ನ ದಿ.ಶ್ರೀ ಶೇಷಗಿರಿರಾವ್ ಎಸ್. ಕುಲಕರ್ಣಿ ಪ್ರಾಥಮಿಕ ಮತ್ತು ಪ್ರೌಢ ಆಂಗ್ಲ ಮಾಧ್ಯಮ ಶಾಲೆಯ ದಶಮಾನೋತ್ಸವ ಸಮಾರಂಭದಲ್ಲಿ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ ಶಿಕ್ಷಕರನ್ನು ಸನ್ಮಾನಿಸಲಾಯಿತು. ಡಾ.ಬಸವರಾಜ ಪಾಟೀಲ್ ಸೇಡಂ, ಡಾ.ವಿನೋದ ಮುತ್ತೇದಾರ್, ಮಹಾದೇವಮ್ಮ ಸ್ವಾಟಿ, ಶ್ರೀಶೈಲ್, ವೆಂಕಟೇಶ ಕುಲಕರ್ಣಿ, ರವಿ ಕುಲಕರ್ಣಿ, ವರುಣಕುಮಾರ ಇತರರಿದ್ದರು.

**ಶಿಕ್ಷಣದೊಂದಿಗೆ ಸಂಸ್ಕಾರವೂ ಅಗತ್ಯವಾಗಿದೆ. ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾಗಿ ಅವರ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಕರು ಶ್ರಮಿಸಬೇಕು. ವಿದ್ಯಾರ್ಥಿಗಳು ಸತತ ಅಧ್ಯಯನ, ಪರಿಶ್ರಮದೊಂದಿಗೆ ಉತ್ತಮ ಭವಿಷ್ಯ ರೂಪಿಸಿಕೊಳ್ಳುವುದರ ಜತೆಗೆ ಸದೃಢ ದೇಶ ನಿರ್ಮಾಣಕ್ಕೆ ಶ್ರಮಿಸಬೇಕು.**

**- ಡಾ.ಬಸವರಾಜ ಪಾಟೀಲ್** ಸೇಡಂ
ರಾಜ್ಯಸಭಾ ಮಾಜಿ ಸದಸ್ಯ

## ಚಿಂಚೋಳಿ ಮಠದ ಜಾತ್ರಾಮಹೋತ್ಸವ ಸಂಪನ್ನ

ಕಷ್ಟ ಬಂದರು ವಿನಯದಿಂದ ಭಕ್ತಿ ಪ್ರದರ್ಶಿಸಬೇಕು: ಡಾ. ಚನ್ನವೀರ ಶಿವಾಚಾರ್ಯರು

**ಚಿಂಚೋಳಿ:** ಹಾರಕೂಡ ಶ್ರೀ ಮಠದ ಜಾತ್ರೆ, ಕರೆದುಕೊಂಡು ಬರುವ ಜಾತ್ರೆ ಅಲ್ಲ. ಭಕ್ತರು ಹುಡಿಕಿಕೊಂಡು ಬರುವ ಜಾತ್ರೆ, ಚಿಂಚೋಳಿ ಶ್ರೀ ಹಾರಕೂಡ ಚನ್ನಬಸವ ಶಿವಯೋಗಿಗಳ ಜಾತ್ರೆ ಆಗಿದೆ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀಮಠದ ಪೀಠಾಧಿಕಾರಿ ಡಾ. ಚನ್ನವೀರ ಶಿವಾಚಾರ್ಯರು ಹೇಳಿದರು.

ಅವರು ಚಿಂಚೋಳಿ ಪಂಚಲಿಂಗೇಶ್ವರ ಬುಗ್ಗಿ ತೇರು ಮೈದಾನದಲ್ಲಿ ಜರುಗಿದ ಹಾರಕೂಡ ಶ್ರೀಮಠದ 74ನೇ ಜಾತ್ರಾಮಹೋತ್ಸವ ಶಿವಾನುಭವ ಚಿಂತನ ಕಾರ್ಯಕ್ರಮದ ಪಾವನ ಸಾನಿಧ್ಯವನ್ನು ವಹಿಸಿ ಮಾತನಾಡಿ, ಶ್ರೀಮಠದ ಜಾತ್ರೆಗೆ ಹೈದ್ರಾಬಾದ, ಬೆಂಗಳೂರು, ಯಾದಗಿರಿ, ಬೀದರ, ಮಹಾರಾಷ್ಟ್ರ, ಹುಮ್ನಾಬಾದ್, ಸುರುಪೂರ, ಸೇಡಂ ಗಳಿಂದ ಜನರು ಹರಿದು ಬರುತ್ತಾರೆ. ಈ ಜಾತ್ರೆ, ಚಿಕ್ಕ ಜಾತ್ರೆ ಅಲ್ಲ, ಭಕ್ತರು ಹೂಡಿಕೊಂಡು ಬರುವ ಜಾತ್ರೆ, ಶಿವಯೋಗಿಗಳ ಜಾತ್ರೆ ಆಗಿದೆ. ಜೀವನದಲ್ಲಿ ಏನೇ ಕಷ್ಟಗಳು ಬಂದರು ವಿನಯ ಭಕ್ತಿಯಿಂದ ಒಳ್ಳೆಯ ಕೆಲಸ ಮಾಡಬೇಕು. ಸಂತೋಷದಲ್ಲಿರುವಾಗ ಚಪ್ಪಾಳೆ ತಟ್ಟಲು ಬರುವ ನೂರು ಕೈಗಳಿಗಿಂತ ಕಷ್ಟದಲ್ಲಿರುವಾಗ ಕಣ್ಣೀರು ವರೆಸುವ ಒಂದು ಕೈ ಶ್ರೇಷ್ಠ. ಮಾಡುವ ಉತ್ತಮ ಕೆಲಸಗಳಿಂದ ಜೀವನ ಸಾರ್ಥವಾಗಲಿದೆ. ವಿಚಾರಗಳನ್ನು ಆಚಾರಣೆಯಲ್ಲಿತಂದು ಜೀವನ ಸಾಗಿಸಿದಂತವರು ಕಲ್ಯಾಣ ಕರ್ನಾಟಕದ ಶರಣರು ಎಂದರು.

ಉಪ್ಪಿನಬೆಟಗೇರಿ ಕುಮಾರ ವೀರೂಪಾಕ್ಷ ಮಹಾಸ್ವಾಮಿಗಳು ಸಾನಿಧ್ಯ ವಹಿಸಿ ಮಾತನಾಡಿದರು. ಕಲಬುರಗಿ ಮಾಜಿ ಸಂಸದ ಡಾ. ಉಮೇಶ ಜಾಧವ, ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಸುಭಾಷ ರಾಠೋಡ ಮಾತನಾಡಿದರು. ನಾಲ್ವರಿಗೆ 5 ಗ್ರಾಂ. ಚಿನ್ನ, ಫಲಕದೊಂದಿಗೆ ಚೆನ್ನಶ್ರೀ ಪ್ರಶಸ್ತಿ ಪುರಸ್ಕರಿಸಲಾಯಿತು. ಪಟ್ಟಣದ ಸಾವಿತ್ರಿ ಸುರೇಶ ಮೇದಾ ಹಾಗೂ ಶಕುಂತಲಾ ಬಸವರಾಜ ಹೊಸಪೇಟ ದಂಪತಿಗಳಿಗೆ ವಿಶೇಷ ಸತ್ಕಾರ ಶ್ರೀಗಳಿಂದ ನೆರವೇರಿಸಿದರು. ಜಂಗಿ ಕುಸ್ತಿಯಲ್ಲಿ ವಿಜೇತ ಪಡೆದ ಅಜೀತ್ ಖೋದಂಪೂರನಿಗೆ ಬೆಳ್ಳಿ ಖಡಗ ಮತ್ತು ನಗದು 5 ಸಾವಿರ ರೂಪಾಯಿ ಬಹುಮಾನ ವಿತರಿಸಲಾಯಿತು. ಪುರಸಭೆ ಅಧ್ಯಕ್ಷ ಆನಂದ ಟೈಗರ್ , ಡಾ. ವಿಕ್ರಮ ವೈಜಿನಾಥ ಪಾಟೀಲ್, ಬಾಬು ಹೊನ್ನನಾಯಕ, ಗೌತಮ ಪಾಟೀಲ್, ಅಶೋಕ ಮೋಗ್ದಂಪೂರ ಅವರು ಇದ್ದರು.

ನಾಲ್ವರಿಗೆ 5 ಗ್ರಾಂ. ಚಿನ್ನ, ಫಲಕದೊಂದಿಗೆ ಚೆನ್ನಶ್ರೀ ಪ್ರಶಸ್ತಿ ಪುರಸ್ಕರಿಸಲಾಯಿತು.

## ಚಿರತೆ ದಾಳಿ: ಸ್ವಲ್ಪದರಲ್ಲೇ ಕುರುಗಾಹಿ ಬಚಾವ್

**ಜೇವರ್ಗಿ:** ತಾಲೂಕಿನ ರೇವನೂರ ಗ್ರಾಮ ದಲ್ಲಿ ಕುರಿಗಾಹಿ ನಿಂಗಪ್ಪ ತಂದೆ ಮಾಳಪ್ಪ ಪೂಜಾರಿ (45) ಮಂಗಳವಾರ ಬೆಳಗ್ಗೆ 8 ಗಂಟೆಗೆ ಹೊಲದಲ್ಲಿ ಕುರಿಗಳನ್ನು ಮೇಯಿಸು ವಾಗ ಚಿರತೆಯು ಏಕಾಏಕಿ ದಾಳಿ ಮಾಡಿ ಕುರಿಗಾಹಿಯನ್ನು ಗಂಭೀರವಾಗಿ ಗಾಯಗೊಳಿಸಿದೆ.

ಸುದ್ದಿ ತಿಳಿಯುತ್ತಲೇ ಗ್ರಾಮಸ್ಥರು ಸೇರಿಕೊಂಡು ಯ ಕುರಿಗಾಹಿಯನ್ನು ಜೇವರ್ಗಿ ಪಟ್ಟಣ್ಣದ ಸರಕಾರಿ ಆಸ್ಪತ್ರೆಯಲ್ಲಿ ದಾಖಲಾಗಿಸಿದ್ದು ಸದ್ಯ ವೈದ್ಯರು ಚಿಕಿತ್ಸೆಯನ್ನು ನೀಡಿದ್ದು ಕುರಿಗಾಹಿಯು ಪ್ರಾಣಾಪಾಯದಿಂದ ಪಾರಾಗಿದ್ದು ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ಜೇವರ್ಗಿ ವಲಯ ಅರಣ್ಯ ಅಧಿಕಾರಿಗಳಾದ ಸಿದ್ದಣ್ಣಗೌಡ ಪಾಟೀಲ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದಿವೆ ಕುರಿಗಾಹಿ ರಕ್ತದ ಮಾದರಿಯನ್ನು ತೆಗೆದುಕೊಂಡು ಜಿಲ್ಲಾ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು ಎಂದು ತಿಳಿಸಿದರು ಹಾಗೂ ಚಿರತೆಯನ್ನು ಸೆರೆ ಹಿಡಿಯಲು ವಿಶೇಷವಾದ ತಂಡವನ್ನು ರಚಿಸುವುದಾಗಿ ಎಂದು ಭರವಸೆ ನೀಡಿದರು.

ಜೇವರ್ಗಿ ಪೊಲೀಸ ಅಧಿಕಾರಿಗಳು ಆಸ್ಪತ್ರೆಗೆ ಧಾವಿಸಿ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕ್ರಮಕ್ಕೈಗೊಂಡಿದಾರೆ.

ಕುರಿಗಾಹಿ ರೈತನಿಗೆ ಸೂಕ್ತವಾದ ಪರಿಹಾರ ನೀಡಬೇಕು ಎಂದು ರೈತ ಸಂಘದ ತಾಲೂಕುಅಧ್ಯಕ್ಷ ಪಂಚಯ್ಯ ಹಿರೇಮಠ ಆಗ್ರಹಿಸಿದ್ದಾರೆ. ಈ ಸಂದರ್ಭದಲ್ಲಿ ಭೀಮಾಶಂಕರ ಬಿಲ್ಲಾಡ ಮಹಾಂತೇಶ ಹಾದಿಮನಿ ಪರಮೇಶ ಬಿರಾಳ ಸಿದ್ದಣ್ಣ ಗೌಡ ಮಾವನೂರ ಮುನೀರ್ ಪಾಶ ಕಳ್ಳಿ ಸೇರಿದಂತೆ ಇತರರಿದ್ದರು.

ಸಚಿವ ಸಂಪುಟ ಉಪ ಸಮಿತಿ ಆಕ್ಷೇಪ, 15 ದಿನಗಳಿಗೊಮ್ಮ: ಸಚಿವ ಪ್ರಿಯಾಂಕ್ ಖರ್ಗೆ

## 371(ಜೆ) ಅಡಿ ನೇಮಕಾತಿ, ಮುಂಬಡ್ತಿ ಪ್ರಕ್ರಿಯೆಯಲ್ಲಿ ವಿಳಂಬ

**ಕಲಬುರಗಿ/ಬೆಂಗಳೂರು:** ಕಲ್ಯಾಣ ಕರ್ನಾಟಕ ಭಾಗದಲ್ಲಿ ಹುದ್ದೆಗಳ ನೇಮಕಾತಿ, ಮುಂಬಡ್ತಿ, ಜೇಷ್ಠತೆಯಲ್ಲಿ ಲೋಪದೋಷ ಮುಂತಾದ ಪ್ರಕ್ರಿಯೆಗಳು ಮಂದಗತಿಯಲ್ಲಿ ನಡೆಯುತ್ತಿರುವುದನ್ನು ಆಕ್ಷೇಪಿಸಿದ 371 (ಜೆ) ಅಡಿ ಹೊರಡಿ ಸಲಾಗಿರುವ ಆದೇಶಗಳ ಅನುಷ್ಠಾನದ ಪ್ರಗತಿ ಪರಿಶೀಲನೆ ಮತ್ತು ಪರಾಮರ್ಶನೆ ಕುರಿತ ಸಂಪುಟ ಉಪ ಸಮಿತಿ ಪ್ರತಿ ಹದಿನೈದು ದಿನಗಳಿಗೊಮ್ಮೆ ಸಭೆ ಸೇರಿ ಸರಕಾರದ ಐದು ಇಲಾಖೆಗಳ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಲು ಅಧ್ಯಕ್ಷರಾದ ಪ್ರಿಯಾಂಕ್ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆ ತೀರ್ಮಾನಿಸಿತು.

ಸಭೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯ ಸದಸ್ಯರಾದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಅರಣ್ಯ ಸಚಿವ ಈಶ್ವರ ಖಂಡ್ರೆ, ಪೌರಾಡಳಿತ ಸಚಿವ ರಹೀಂಖಾನ್ ಭಾಗವಹಿಸಿ ಹಲವಾರು ಸಲಹೆ ಸೂಚನೆಗಳನ್ನು ನೀಡಿದರು.

ಸೋಮವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಸಂಪುಟ ಉಪ ಸಮಿತಿ ಸಭೆಯಲ್ಲಿ ಸರಕಾದ ವಿವಿಧ ಇಲಾಖೆಗಳ ಮುಖ್ಯಸ್ಥರು ಸಭೆಗೆ ಬಾರದೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುತ್ತಿರುವುದನ್ನು ತೀವ್ರವಾಗಿ ಖಂಡಿಸಿತಲ್ಲದೆ, ಸಭೆಗೆ ಬರುವ ಕಿರಿಯ ಅಧಿಕಾರಿಗಳು ವಿಷಯವನ್ನು ತಿಳಿದುಕೊಳ್ಳದೆ ಅಭಾಸವನ್ನುಂಟು ಮಾಡುತ್ತಿರುವ ಬಗ್ಗೆ ಸಂಪುಟ ಉಪ ಸಮಿತಿಯು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿತು. ಮುಂದಿನ ಸಭೆಗಳಿಗೆ ಹಾಜರಾಗದ ಹಿರಿಯ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ಜಾರಿಗೊಳಿಸುವ ಮೂಲಕ ಕಠಿಣ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಕಳೆದ ಸಭೆಯಲ್ಲಿ ನಡೆದ ನಡಾವಳಿಗಳಿಗೆ ಸಂಬಂಧಿಸಿದಂತೆ ಅನುಪಾಲನ ವರದಿ ಸಲ್ಲಿಸದ ಒಳಾಡಳಿತ ಇಲಾಖೆ, ಅಬಕಾರಿ ಇಲಾಖೆ ಹಾಗೂ ಪೊಲೀಸ್ ವೈರ್‌ಲೆಸ್ ಘಟಕ ಇಲಾಖೆಗಳಿಗೂ ನೋಟಿಸ್ ಜಾರಿ ಮಾಡುವಂತೆ ತಿಳಿಸಲಾಯಿತು.

ಮುಂದಿನ ಸಭೆಗೆ ಸಂಬಂಧಿಸಿದ ಇಲಾಖೆಗಳ ಮುಖ್ಯಸ್ಥರು ಹಾಜರಾಗುವುದರೊಂದಿಗೆ ಕಾನೂನು ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ವಿವಿಧ ಹುದ್ದೆಗಳ ನೇಮಕಾತಿ, ಮುಂಬಡ್ತಿ, ಜೇಷ್ಠತೆಯಲ್ಲಿ ಲೋಪದೋಷ ಪ್ರಕರಣಗಳಲ್ಲಿ ನ್ಯಾಯಾಲಯಗಳನ್ನು ಪ್ರತಿನಿಧಿಸುತ್ತಿರುವ ವಕೀಲರನ್ನು ಆಹ್ವಾನಿಸಬೇಕೆಂದು ಸಚಿವ ಸಂಪುಟ ಉಪ ಸಮಿತಿಯ ಅಧ್ಯಕ್ಷಪ್ರಿಯಾಂಕ್ ಖರ್ಗೆ ತಿಳಿಸಿದರು.

ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಬೆಂಗಳೂರಿನ ವಿಧಾನ ಸೌಧದಲ್ಲಿ ಸಂಪುಟ ಉಪಾಸಮಿತಿ ಸಭೆ ನಡೆಸಿದರು.

#### ಕಾರಣ ತಿಳಿದು ನೋಟಿಸ್ ಜಾರಿಗೆ ಆದೇಶ

**ಬೆಂಗಳೂರಿನ ಅಪೆಕ್ಸ್ ಬ್ಯಾಂಕ್ ನಿ. 371(ಜೆ) ಪಾಲಿಸದೇ ಇರುವ ಹಿನ್ನೆಲೆಯಲ್ಲಿ ಸ್ಥಳೀಯ ವೃಂದದ ಅಧಿಕಾರಿಗಳು ಹಾಗೂ ನೌಕರರಿಗೆ ಮುಂಬಡ್ತಿ ಹಾಗೂ ಸೇವಾ ಜೇಷ್ಠತೆ ಪರಿಗಣಿಸಲು ಕಳೆದ ಸಭೆಯಲ್ಲಿ ಸೂಚನೆ ನೀಡಲಾಗಿದ್ದರೂ ಇಂದಿನ ಸಭೆಗೆ ಸಹಕಾರ ಇಲಾಖೆಯ ಯಾವುದೇ ಅಧಿಕಾರಿಗಳು ಬಾರದೆ ಗೈರು ಹಾಜರಾಗಿರುವುದನ್ನು ಗಂಭೀರವಾಗಿ ಪರಿಗಣಿಸಿದ ಸಭೆ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸನ್ನುನೀಡಲು ನಿರ್ದೇಶಿಸಲಾಯಿತು.**

## ಶಿಕ್ಷಕರ ಪಟ್ಟಿ ಕ್ರೋಢೀಕರಿಸಿ ಜ್ಯೇಷ್ಠತೆ ಮೇಲೆ ಬಡ್ತಿ

**ಕಲಬುರಗಿ:** ಪ್ರಸ್ತುತ ಪ್ರೌಢಶಾಲಾ ಸಹ ಶಿಕ್ಷಕರುಗಳಿಗೆ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡುವ ಕುರಿತಂತೆ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರ ಹಂತದಲ್ಲಿ ನಾಲ್ಕು ವಿಭಾಗಗಳ ಪ್ರೌಢಶಾಲಾ ಶಿಕ್ಷಕರ ಪಟ್ಟಿಯನ್ನು ಪಡೆದು ಕ್ರೋಢೀಕರಿಸಲಾಗುತ್ತಿದ್ದು, ಒಂದೇ ಸಾಮಾನ್ಯ ಅರ್ಹತಾ ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಲು ಕ್ರಮವಹಿಸಲಾಗುತ್ತಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ವಿಧಾನ ಪರಿಷತ್ ನಲ್ಲಿ ಈ ಕುರಿತು ಶಶಿಲ್ ನಮೋಶಿ ಅವರು ಪ್ರಶ್ನೆಗೆ ಉತ್ತರಿಸಿ, ಪ್ರೌಢ ಶಾಲಾ ಸಹ ಶಿಕ್ಷಕರಿಗೆ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡುವ ಪ್ರಕ್ರಿಯೆಯ ಬಗ್ಗೆ ತ್ವರಿತವಾಗಿ ನಿಯಮಾನುಸಾರ ಕ್ರಮವಹಿಸಲಾಗುವುದು ಎಂದು ಹೇಳಿದರು.

ಕಳೆದ 13 ವರ್ಷಗಳಿಂದ ಪ್ರೌಢಶಾಲಾ ಶಿಕ್ಷಕರಿಗೆ ಪದವಿ ಪೂರ್ವ ಕಾಲೇಜಿಗೆ ಉಪನ್ಯಾಸಕರಾಗಿ ಬಡ್ತಿ ನೀಡದಿರಲು ಕಾರಣಗಳೇನು.? ಈ ವಿಳಂಬದಿಂದಾಗಿ ಸಾಕಷ್ಟು ಶಿಕ್ಷಕರು ಸುದೀರ್ಘ ಸೇವೆ ಮಾಡಿ ಬಡ್ತಿ ಇಲ್ಲದೆ ನಿವೃತ್ತಿ ಹೊಂದುತ್ತಿದ್ದು, ಅನ್ಯಾಯಕ್ಕೊಳಗಾಗುತ್ತಿರುವ ವಿಷಯದ ಕುರಿತು ಶಶಿಲ್ ನಮೋಶಿ ಸರಕಾರವನ್ನು ತೀಕ್ಷ್ಣವಾಗಿ ಪ್ರಶ್ನಿಸಿದರು.

## ಸಮಾಚಾರ ಸಣ್ಣದಲ್ಲ

### ಅತ್ತೆ-ಸೊಸೆ ಜಗಳ: ತಾಯಿ, ಮಗ ಆತ್ಮಹತ್ಯೆ

**ಹಾಸನ:** ಕೌಟುಂಬಿಕ ಕಲಹ ಹಿನ್ನೆಲೆ ಕೆರೆಗೆ ಹಾರಿ ತಾಯಿ-ಮಗ ಆತ್ಮಹತ್ಯೆ ಮಾಡಿಕೊಂಡ ಘಟನೆ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲೂಕಿನ ಕಬ್ಬಳಿ ಗ್ರಾಮದಲ್ಲಿ ನಡೆದಿದೆ. ಜಯಂತಿ (60), ಭರತ್ (35) ಆತ್ಮಹತ್ಯೆಗೆ ಶರಣಾದ ತಾಯಿ-ಮಗ. ಭರತ್ ಕಳೆದ ಎಂಟು ತಿಂಗಳ ಹಿಂದಷ್ಟೇ ಅರಸೀಕೆರೆ ತಾಲೂಕು ಬಾಗೂರನಹಳ್ಳಿ ಗ್ರಾಮದ ಯುವತಿಯೊಂದಿಗೆ ವಿವಾಹವಾಗಿದ್ದರು. ಅತ್ತೆ-ಸೊಸೆ ನಡುವೆ ಹೊಂದಾಣಿಕೆ ಇಲ್ಲದೆ ಪದೇಪದೇ ಜಗಳ ನಡೆಯುತ್ತಿತ್ತು. ಇದೇ ಕಾರಣಕ್ಕೆ ಭರತ್ ಪತ್ನಿ ಮನೆಬಿಟ್ಟು ತವರು ಮನೆಗೆ ಹೋಗಿದ್ದರು. ಕುಟುಂಬಸ್ಥರು ಹಾಗೂ ಗ್ರಾಮಸ್ಥರು ಎರಡು ಬಾರಿ ರಾಜಿ ಪಂಚಾಯ್ತಿ ಮಾಡಿದ್ದರು. ಆದರೂ ಭರತ್ ಪತ್ನಿ ಗಂಡನ ಜತೆ ಇರದೇ ತವರು ಮನೆಗೆ ಹೋಗಿದ್ದರು. ಇದರಿಂದ ಮನನೊಂದಿದ್ದ ಭರತ್ ಹಾಗೂ ತಾಯಿ ಜಯಂತಿ ಕೆರೆಗೆ ಜಿಗಿದು ಆತ್ಮಹತ್ಯೆಗೆ ಶರಣಾಗಿದ್ದಾರೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
12.03.2025
ಸಂಜೆ: 06.55 ರಿಂದ 08.05 ರವರೆಗೆ

ಬುಧವಾರದ ಅತಿಥಿ
ಶ್ರೀಮತಿ ನಾಗರತ್ನ ಸಾಲಗಾಮೆ
ವಿಷಯ
ಗೌರಮ್ಮನ ವಚನಗಳು
vishwavani.news

# ಒಂದು ವರ್ಷವಾದರೂ ಯಂತ್ರೋಪಕರಣ ಬಿಲ್ ಬಾಕಿ

## ಕೊಳವೆಬಾವಿಗೆ ಬಿದ್ದಿದ್ದ ಬಾಲಕನ ರಕ್ಷಣಾ ಕಾರ್ಯಾಚರಣೆ

## ಬಾಕಿ ಹಣಕ್ಕಾಗಿ ಡಿಸಿ ಕಚೇರಿಗೆ ಅಲೆಯುತ್ತಿರುವ ಮಾಲೀಕರು

ಬಸವರಾಜ್ ಎಸ್.ಉಳ್ಳಾಗಡ್ಡಿ ವಿಜಯಪುರ

ಕಳೆದ ವರ್ಷ ಇಂಡಿ ತಾಲೂಕಿನ ಲಚ್ಯಾಣದಲ್ಲಿ ಕೊಳವೆ ಬಾವಿಗೆ ಬಿದ್ದಿದ್ದ ಬಾಲಕನ ಯಶಸ್ವಿ ರಕ್ಷಣಾ ಕಾರ್ಯಾಚರಣೆಯನ್ನು ರಾಜ್ಯದ ಜನತೆ ಮರೆತಿಲ್ಲ. ಅಪದ್ಬಾಂಧವರಂತೆ ಯಂತ್ರೋಪಕರಣಗಳನ್ನು ತಂದು ಅಹರ್ನಿಶಿ ಕೆಲಸ ಮಾಡಿದವರಿಗೆ ಎಲ್ಲೆಡೆಯಿಂದ ವ್ಯಾಪಕ ಪ್ರಶಂಸೆ ವ್ಯಕ್ತವಾಗಿತ್ತು. ಆದರೆ ಅವರಿಗೆ ಕಳೆದ ಒಂದು ವರ್ಷದಿಂದ ಯಂತ್ರೋಪಕರಣ ಬಾಕಿ ಬಿಲ್ ಪಾವತಿಯಾಗದೆ ಜಿಲ್ಲಾಡಳಿತದ ಕಚೇರಿಯಿಂದ ಕಚೇರಿಗೆ ಅಲೆದಾಡುವಂತಾಗಿದೆ.

**ಪ್ರಕರಣದ ವಿವರ:** 2024ರ ಏಪ್ರಿಲ್ 03ರಂದು ಲಚ್ಯಾಣದಲ್ಲಿ ಕೊಳೆಬಾವಿಗೆ ಬಿದ್ದಿದ್ದ ಬಾಲಕ ಸಾತ್ವಿಕ ಗುಜಗೊಂಡನನ್ನು ಸ್ಥಳೀಯರ ಜೆಸಿಬಿ, ಹಿಟ್ಯಾಚಿ, ಟ್ರ್ಯಾಕ್ಟರ್ ಬ್ರೇಕರ್ಸ್, ಬೋರ್‌ವೆಲ್ ಕ್ಯಾಮೆರಾ ಹೀಗೆ ಹಲವು ಯಂತ್ರೋಪಕರಣಗಳನ್ನು ಬಳಸಿ ರಕ್ಷಣಾ ತಂಡವು ಸತತ 22 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬಾಲಕ ಸಾತ್ವಿಕನನ್ನು ಸಾವಿನ ದವಡೆಯಿಂದ ಪಾರುಮಾಡಿ ಹೊರಗೆ ತರುವಲ್ಲಿ ಯಶಸ್ವಿಯಾಗಿತ್ತು. ಆದರೆ ಜಿಲ್ಲಾಡಳಿತ ಬಳಸಿದ್ದ ಯಂತ್ರೋಪಕರಣಗಳ ಬಾಡಿಗೆ ನೀಡದ ಕಾರಣ ತುರ್ತು ಕಾರ್ಯಾಚರಣೆಗೆ ನೆರವಾದವರು ಈಗ ತಮ್ಮ ಬಿಲ್ ಮೊತ್ತಕ್ಕಾಗಿ ವರ್ಷದಿಂದ ಕಚೇರಿಯಿಂದ ಕಚೇರಿಗೆ ಅಲೆಯುವಂತಾಗಿದೆ.

**ಬಿಲ್ ಪಾವತಿ- ಬರೀ ಭರವಸೆ:** ಮಗುವಿನ ರಕ್ಷಣೆಗೆ ಯಂತ್ರೋಪಕರಣ ಪೂರೈಸಿ ಸತತ 22 ತಾಸು ಕೆಲಸ ಮಾಡಿ ಕಾರ್ಯಾಚರಣೆ ಯಶಸ್ವಿಗೊಳಿಸುವಲ್ಲಿ ನೆರವಾಗಿದ್ದೇವೆ. ಆದರೆ ನಮ್ಮ ಕೂಲಿ ಹಾಗೂ ಯಂತ್ರೋಪಕರಣಗಳ ಬಾಡಿಗೆ 3 ಲಕ್ಷದಷ್ಟು ಇನ್ನೂ ಪಾವತಿಯಾಗಿಲ್ಲ. ಬಿಲ್ ಮೊತ್ತಕ್ಕಾಗಿ ಗ್ರಾಪಂ ಪಿಡಿಒ ಅವರಿಂದ ಹಿಡಿದು, ತಹಸೀಲ್ದಾರ್, ಎಸಿ, ಡಿಸಿವರೆಗೂ ಭೇಟಿಯಾಗಿ ಕೇಳುತ್ತಲೇ ಬಂದಿದ್ದರೂ ವರ್ಷವಾದರೂ ಬಿಲ್ ಪಾವತಿಯಾಗಿಲ್ಲ. ಕಳೆದ 3 ತಿಂಗಳಿಂದ ಒಬ್ಬರ ಮೇಲೊಬ್ಬರು ಹಾಕುತ್ತಾ ಕೊನೆಗೆ ಡಿಸಿ ಬಳಿ ಬಂದಾಗ,ವಾರದಲ್ಲೇ ಎಲ್ಲ ಬಿಲ್ ಪಾವತಿಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು. ಬಿಲ್ ಪಾವತಿಯಾಗದ ಕಾರಣ ಮತ್ತೆ ಈಗ ಬಂದು ಡಿಸಿ ಅವರನ್ನು ಭೇಟಿಯಾಗಿ ಬಿಲ್ ಕೇಳಿದಾಗ ಮತ್ತೆ ಒಂದು ವಾರದಲ್ಲಿ ಪಾವತಿಸುವುದಾಗಿ ಹೇಳಿದ್ದಾರೆ. ವಾರದಲ್ಲಿ ನಮ್ಮೆಲ್ಲರ ಬಿಲ್ ಪಾವತಿಯಾಗದಿದ್ದರೆ ಪ್ರತಿಭಟನೆಗೆ ಮುಂದಾಗಬೇಕಾಗುತ್ತದೆ ಎಂದು ಭೀಮಾಶಂಕರ ಭಜಂತ್ರಿ, ರಾಜಶೇಖರಯ್ಯ ಮಠಪತಿ ಎಚ್ಚರಿಕೆ ನೀಡಿದ್ದಾರೆ.



ಸಾತ್ವಿಕ ರಕ್ಷಣಾ ಕಾರ್ಯಾಚರಣೆಗೆ ಯಂತ್ರೋಪಕರಣಗಳನ್ನು ಪೂರೈಸಿ ಸತತ 22 ಗಂಟೆಗಳ ಕಾಲ ಕೆಲಸ ಮಾಡಿ ಈಗ ಬಾಕಿ ಬಿಲ್ ಗಾಗಿ ಡಿಸಿ ಅವರಿಗೆ ಭೇಟಿಯಾಗಲು ಬಂದ ಕೆಲಸಗಾರರು.

**3.70 ಲಕ್ಷ ರು. ಬಾಡಿಗೆ ಬಾಕಿ**

**ಕೊಳವೆಬಾವಿಗೆ ಬಿದ್ದ ಮಗುವಿನ ರಕ್ಷಣಾ ಕಾರ್ಯಕ್ಕೆ 2 ಹಿಟ್ಯಾಚಿ ವಾಹನ (ರು.1,84,800 ಬಾಡಿಗೆ), 3 ಜೆಸಿಬಿ (89,100 ರು. ಬಾಡಿಗೆ), 4 ಟ್ರ್ಯಾಕ್ಟರ್ ಬ್ರೇಕರ್ಸ್ (52,800 ರು. ), 3 ಟ್ರ್ಯಾಕ್ಟರ್ (16,500 ರು.), ಒಂದು ವಾಟರ್ ಟ್ಯಾಂಕರ್ (15,950 ರು.), ಒಂದು ಹ್ಯಾಂಡ್ ಡ್ರಿಲ್ಲಿಂಗ್ ಯಂತ್ರ (6,600 ರು.) ಹಾಗೂ ಒಂದು ಕಟಿಂಗ್ ಮಷೀನ್ (4,268 ರು.) ಹೀಗೆ ಯಂತ್ರೋಪಕರಣಗಳ ಬಾಡಿಗೆ ಒಟ್ಟು 3,70,018 ರು. ಬಾಕಿ ಪಾವತಿಯಾಗದೆ ವರ್ಷದಿಂದ ಬಾಕಿ ಇದೆ.**

# ಡಿಜಿಪಿ ಪಾತ್ರದ ತನಿಖೆ

← ಮೊದಲಪುಟದಿಂದ

**ರನ್ಯಾ ರಾವ್ ನಿವಾಸದಲ್ಲಿ ಸಿಬಿಐ:** ಚಿನ್ನ ಕಳ್ಳಸಾಗಣೆ ಪ್ರಕರಣದ ತನಿಖೆಯನ್ನು ಕೇಂದ್ರ ತನಿಖಾ ದಳ (ಸಿಬಿಐ) ಅಧಿಕಾರಿಗಳು ಕೈಗೆತ್ತಿಕೊಂಡಿದ್ದು, ಬೆಂಗಳೂರಿನಲ್ಲಿರುವ ರನ್ಯಾ ರಾವ್ ಅವರ ನಿವಾಸ, ಅವರ ವಿವಾಹ ಜರುಗಿದ ಹೋಟೆಲ್, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಕಚೇರಿಗಳಲ್ಲಿ ಪರಿಶೀಲನೆ ನಡೆಸಿದ್ದಾರೆ. ರನ್ಯಾ ರಾವ್ ಜತೆಗೆ ಸಂಪರ್ಕ ಹೊಂದಿರುವವರ ಕುರಿತು ಸಾಕ್ಷ್ಯಾಧಾರಗಳನ್ನು ಕಲೆ ಹಾಕುವುದರ ಭಾಗವಾಗಿ ಅವರ ವಿವಾಹ ಸಮಾರಂಭದಲ್ಲಿ ಭಾಗಿಯಾಗಿದ್ದ ಅತಿಥಿಗಳು, ಬಂದಿರುವ ದುಬಾರಿ ಉಡುಗೊರೆಗಳ ಕುರಿತು ತಿಳಿದುಕೊಳ್ಳಲು ವಿವಾಹದ ದೃಶ್ಯಾವಳಿಗಳು ಮತ್ತು ಅತಿಥಿಗಳ ಪಟ್ಟಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುತ್ತಿದೆ. ಅಲ್ಲದೆ, ನಿಗದಿತ ಅವಧಿಯಲ್ಲಿ ಕೆಐಎಡಿಬಿಯಿಂದ ಅನುಮೋದನೆಯಾದ ಭೂ ವಿವರದ ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದು ಸಿಬಿಐ ಮೂಲಗಳಿಂದ ತಿಳಿದು ಬಂದಿದೆ.

**ಶಿಷ್ಟಾಚಾರದ ತನಿಖೆಗೆ ಐಎಎಸ್ ನೇಮಕ:** ನಟಿಗೆ ಶಿಷ್ಟಾಚಾರ ಸೌಲಭ್ಯ ನೀಡಿರುವ ಸಂಬಂಧ ತನಿಖೆ ನಡೆಸಲು ಹಿರಿಯ ಐಎಎಸ್ ಅಧಿಕಾರಿ ಗೌರವ ಗುಪ್ತಾ ಅವರನ್ನು ನೇಮಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶಿಷ್ಟಾಚಾರ ಸೌಲಭ್ಯಗಳು ದುರ್ಬಳಕೆಯಾಗಿರುವ ಬಗ್ಗೆ ತನಿಖೆ ನಡೆಸುವಂತೆ ಆದೇಶದಲ್ಲಿ ತಿಳಿಸಲಾಗಿದೆ. ಶಿಷ್ಟಾಚಾರ ಸೌಲಭ್ಯಗಳ ಬಳಕೆ ಪಡೆದುಕೊಳ್ಳಲು ಕಾರಣವಾದ ಅಂಶಗಳು ಹಾಗೂ ಸಂದರ್ಭಗಳು ಮತ್ತು ಈ ಪ್ರಕರಣದಲ್ಲಿ ಐಪಿಎಸ್ ಅಧಿಕಾರಿ ರಾಮಚಂದ್ರ ರಾವ್ ಪಾತ್ರದ ಬಗ್ಗೆ, ತನಿಖೆ ನಡೆಸುವುದು ಅಗತ್ಯ ಎಂದು ಆದೇಶದಲ್ಲಿ ಹೇಳಲಾಗಿದೆ.

### ರನ್ಯಾ ಪತಿಗೆ ಕೋರ್ಟ್ ರಿಲೀಫ್

ರನ್ಯಾ ರಾವ್ ಅವರ ಜಾಮೀನು ಅರ್ಜಿ ವಿಚಾರಣೆಯನ್ನು ಬೆಂಗಳೂರಿನ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯ ಬುಧವಾರಕ್ಕೆ ಮುಂದೂಡಿಕೆ ಮಾಡಿದೆ. ರನ್ಯಾ ರಾವ್ ಸಲ್ಲಿಸಿದ್ದ ಜಾಮೀನು ಅರ್ಜಿಗೆ ಪ್ರತಿಯಾಗಿ ಆಕ್ಷೇಪಣೆ ಸಲ್ಲಿಸುವಂತೆ ಡಿಆರ್‌ಐ ಅಧಿಕಾರಿಗಳಿಗೆ ನ್ಯಾಯಾಲಯ ಸೂಚಿಸಿತ್ತು. ಅದರಂತೆ ರನ್ಯಾ ರಾವ್‌ಗೆ ಜಾಮೀನು ನೀಡದಂತೆ ಡಿಆರ್‌ಐ ತನಿಖಾಧಿಕಾರಿ ನಾಗೇಶ್ವರ ರಾವ್ ಆಕ್ಷೇಪಣೆ ಸಲ್ಲಿಸಿದ್ದಾರೆ. ಮತ್ತೊಂದೆಡೆ ಬಂಧನದ ಭೀತಿಯಿಂದ ರನ್ಯಾ ಪತಿ ಜತಿನ್ ಹುಕ್ಕೇರಿ ಹೈಕೋರ್ಟ್ ಮೆಟ್ಟಿಲೇರಿದ್ದು, ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಕಾನೂನಿನ ಪ್ರಕ್ರಿಯೆ ಪಾಲಿಸದೇ ಬಂಧಿಸದಂತೆ ಮಹತ್ವದ ಆದೇಶ ನೀಡಿದೆ. ಪತ್ನಿಯ ಮೇಲಿನ ಆರೋಪಕ್ಕೂ ಜತಿನ್‌ಗೂ ಸಂಬಂಧವಿಲ್ಲ. ಡಿಆರ್‌ಐ ಅಧಿಕಾರಿಗಳು ಸಮನ್ಸ್ ನೀಡಿದಾಗ ತನಿಖೆಗೆ ಸಹಕರಿಸಿದ್ದಾರೆ. ಎರಡನೇ ಬಾರಿಯೂ ಕರೆದೊಯ್ದು ವಿಚಾರಣೆಗೊಳಪಡಿಸಿದ್ದಾರೆ. ಸುಪ್ರೀಂಕೋರ್ಟ್ ನಿರ್ದೇಶನ ಪಾಲಿಸದೇ ಬಂಧಿಸುವ ಸಾಧ್ಯತೆ ಇದೆ ಎಂದು ಜತಿನ್ ಪರ ವಕೀಲರು ವಾದ ಮಂಡಿಸಿದರು. ಈ ವಾದ ಆಲಿಸಿದ ಹೈಕೋರ್ಟ್, ಕಾನೂನಿನ ಪ್ರಕ್ರಿಯೆ ಪಾಲಿಸದೇ ಜತಿನ್ ಅವರನ್ನು ಬಂಧಿಸದಂತೆ ಆದೇಶ ಹೊರಡಿಸಿದೆ. ಇದರೊಂದಿಗೆ ರನ್ಯಾ ರಾವ್ ಪತಿಗೆ ರಿಲೀಫ್ ಸಿಕ್ಕಂತಾಗಿದೆ.

# ಗ್ಯಾರಂಟಿ ಸಮಿತಿ ಅಧಿಕಾರಕ್ಕೆ ಗರಂ

← ಮೊದಲಪುಟದಿಂದ

ಧರಣಿಯ ನಡುವೆ ಪ್ರಶ್ನೋತ್ತರ ಕಲಾಪ ಪೂರ್ಣಗೊಳಿಸಿ, ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ವಿಧೇಯಕವನ್ನು ಮಂಡಿಸಲು ಸ್ಪೀಕರ್ ಖಾದರ್ ಅವಕಾಶ ನೀಡಿದರು. ಬಳಿಕ ಕಲಾಪವನ್ನು ಮುಂದೂಡಿದರು. ಭೋಜನ ವಿರಾಮದ ಬಳಿಕವೂ ಸದನದಲ್ಲಿ ಇದೇ ವಿಷಯವನ್ನು ಮುಂದಿಟ್ಟುಕೊಂಡು ಬಿಜೆಪಿಗರು ಪ್ರತಿಭಟನೆ ನಡೆಸಿದ್ದರಿಂದ, ಎರಡು ಬಾರಿ ಸದನವನ್ನು ಮುಂದೂಡಿ ಬಳಿಕ ಸದನವನ್ನು ಬುಧವಾರಕ್ಕೆ ಮುಂದೂಡಿದ ಘಟನೆ ನಡೆಯಿತು.

**ಆರ್ಥಿಕ ಬಿಲ್‌ಗೆ ಅಡ್ಡಿಯ ಎಚ್ಚರಿಕೆ:** ಈ ವೇಳೆ ಮಾತನಾಡಿದ ಪ್ರತಿಪಕ್ಷ ನಾಯಕ ಆರ್.ಅಶೋಕ, ಗ್ಯಾರಂಟಿ ಅನುಷ್ಠಾನ ಸಮಿತಿಯಿಂದ ಶಾಸಕರ ಹಕ್ಕುಚ್ಯುತಿಯಾಗುತ್ತದೆ. ಆದ್ದರಿಂದ ಕೂಡಲೇ ಈ ಸಮಿತಿಗೆ ಕಾಂಗ್ರೆಸ್ ಕಾರ್ಯಕರ್ತರ ಬದಲಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಇದರ ವಿರುದ್ಧ ಹೋರಾಟ ನಡೆಸುತ್ತೇವೆ. ತೆರಿಗೆ ಹಣದಲ್ಲಿ ಇವರಿಗೆ ಭತ್ಯೆ ನೀಡಲಾಗುತ್ತಿದೆ. ಆದ್ದರಿಂದ ಸಮಿತಿಯನ್ನು ವಿಸರ್ಜನೆ ಮಾಡದಿದ್ದರೆ, ಆರ್ಥಿಕ ಬಿಲ್‌ಗೆ ನಾವು ಸಹಕರಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

**ಸಮಿತಿಯಲ್ಲಿರುವವರಿಗಿರುವ ಸೌಲಭ್ಯಗಳು**

| ಪದವಿ | ಮಾಸಿಕ ವೇತನ | ಸಭಾಭತ್ಯೆ |
|---|---|---|
| **ಜಿಲ್ಲಾ ಸಮಿತಿ** | | |
| ಅಧ್ಯಕ್ಷರು | 40,000 | 000 |
| ಉಪಾಧ್ಯಕ್ಷರು(5 ಮಂದಿ) | 10,000 | 000 |
| ಸದಸ್ಯರು(15 ಮಂದಿ) | 000 | 1100 (ಪ್ರತಿಸಭೆಗೆ) |
| **ತಾಲೂಕು ಸಮಿತಿ** | | |
| ಪದವಿ | ಮಾಸಿಕ ವೇತನ | ಸಭಾಭತ್ಯೆ |
| ಅಧ್ಯಕ್ಷರು (ಜಿಲ್ಲಾ ಮಟ್ಟದ ಪ್ರಾಧಿಕಾರದ ಸದಸ್ಯ) | 000 | 25,000 |
| ಸದಸ್ಯರು(14 ಮಂದಿ) | 000 | 1000(ಪ್ರತಿಸಭೆಗೆ) |

# ಮಂಗಳೂರು ವಿಮಾನ ನಿಲ್ದಾಣಕ್ಕೆ ಪ್ರಶಸ್ತಿ

**ಮಂಗಳೂರು:** ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಜಾಗತಿಕ ಮಟ್ಟದ ಅತ್ಯುತ್ತಮ ವಿಮಾನ ನಿಲ್ದಾಣ (ಆಗಮನ) ಎಂಬ ಪ್ರಶಸ್ತಿಗೆ ಭಾಜನವಾಗಿದೆ. ಗ್ರಾಹಕ ಸೇವೆಯಲ್ಲಿ ಉತ್ಕೃಷ್ಟತೆ ಮತ್ತು ಒಟ್ಟಾರೆ ಪ್ರಯಾಣಿಕರ ತೃಪ್ತಿಗಾಗಿ ಕಾರ್ಯ ನಿರ್ವಹಿಸುವ ವಿಮಾನ ನಿಲ್ದಾಣಗಳನ್ನು ಗುರುತಿಸಿ ಏರ್ ಪೋರ್ಟ್ ಕೌನ್ಸಿಲ್ ಇಂಟರ್‌ನ್ಯಾಷನಲ್ (ಎಸಿಐ) ಈ ಪ್ರಶಸ್ತಿ ನೀಡುತ್ತದೆ.

ಈ ಪ್ರಶಸ್ತಿಯು ನಮ್ಮ ಇಡೀ ತಂಡದ ಕಠಿಣ ಪರಿಶ್ರಮ ಮತ್ತು ಸಮರ್ಪಣಾ ಭಾವವನ್ನು ಪ್ರತಿಬಿಂಬಿಸುತ್ತದೆ. ನಮ್ಮ ಪ್ರಯಾಣಿಕರ ನಿರೀಕ್ಷೆಗಳನ್ನು ಪೂರೈಸಲು ನಮ್ಮ ಸೇವೆಗಳನ್ನು ನಿತ್ಯವೂ ಸುಧಾರಿಸುತ್ತಲೇ ಇರುತ್ತೇವೆ. ಇನ್ನು ಮುಂದೆಯೂ ಮುಂದುವರಿಸುತ್ತೇವೆ ಎಂದು ಮಂಗಳೂರು ವಿಮಾನ ನಿಲ್ದಾಣದ ವಕ್ತಾರರು ತಿಳಿಸಿದ್ದಾರೆ. ಚೀನಾದ ಗುವಾಂಗ್‌ಝೌನಲ್ಲಿ ಸೆ. 8ರಿಂದ 11ರವರೆಗೆ ನಡೆಯಲಿರುವ ಎಸಿಐ ವಿಶ್ವ ವಿಮಾನ ನಿಲ್ದಾಣ ಅನುಭವ ಶೃಂಗಸಭೆಯಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು.

**ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ**
"ಜ್ಞಾನ ಸಂಗಮ", ಬೆಳಗಾವಿ-590018, ಕರ್ನಾಟಕ, ಭಾರತ
Ref. VTU/BGM/SAP/CW1/55/T-695/2024-25/6254 Dated: 11-03-2025
**ಟೆಂಡರ ಪ್ರಕಟಣೆ**
ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಗಳಿಗೆ (ದ್ವಿ ಲಕೋಟೆ ಪದ್ಧತಿಯಲ್ಲಿ) ಇ-ಟೆಂಡರ್ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಆಹ್ವಾನಿಸಲಾಗಿದೆ. **ಕೆಲಸದ ಹೆಸರು:** T-695: Tender for Establishment of Centre of Excellence for Electric Vehicle at VTU, Belagavi. **ಟೆಂಡರ್ ಗಿಟ್ಟ ಮೊತ್ತ:** ರೂ. 61,48,960/- **ಮುಂಗಡ ಠೇವಣಿ:** 1,23,000/- **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:** 25.03.2025 ರ 2.30 ರ ವರೆಗೆ. **ಟೆಂಡರ್ ತೆರೆಯುವ ದಿನಾಂಕ:** 26.03.2025 ರ 4.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ **www.kppp.karnataka.gov.in** ಮತ್ತು **www.vtu.ac.in** ನೋಡಬಹುದು
ಸಹಿ/- ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ
ಡಿಐಪಿಆರ್/ಬೆಳಗಾವಿ/1883/ಅಡ್ವರ್ಟೋರ್/2024-25

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
**ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು**
**ಟೆಂಡರ್ ಅಧಿಸೂಚನೆ ಸಂಖ್ಯೆ: 17/2024-25, ದಿನಾಂಕ: 07.03.2025**
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು-570010 ರವರು ಕೆ.ಡಬ್ಲ್ಯು-3 ಮತ್ತು 4ರ ರೀತ್ಯ ಟೆಂಡರ್ ಆಹ್ವಾನಿಸಲಾಗಿದ್ದು, ಇದರಲ್ಲಿ ಒಟ್ಟು 10 ಕಾಮಗಾರಿಗಳು ಇದ್ದು, ಇವುಗಳ ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ) ರೂ.82.00 ಲಕ್ಷಗಳು, ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ.318.00 ಲಕ್ಷಗಳಾಗಿದ್ದು, ಕನಿಷ್ಠ ಇ.ಎಂ.ಡಿ ಮೊತ್ತ ರೂ.2.00 ಲಕ್ಷಗಳು, ಗರಿಷ್ಠ 4.77 ಲಕ್ಷಗಳಾಗಿರುತ್ತದೆ. ಈ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, "ಕೆ.ಪಿ.ಪಿ.ಪಿ" ಪೋರ್ಟಲ್ ಮೂಲಕ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂದಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ. ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ಈ ದಿನಾಂಕದೊಳಗೆ ಪಡೆಯಬಹುದಾಗಿರುತ್ತದೆ.: ದಿ:07.03.2025 5-30 ಪಿ.ಎಂ. ಭರ್ತಿಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್ಡನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿ: 07.03.2025 10-00 ಎ.ಎಂ ರಿಂದ 14.03.2025 5-30 ಪಿ.ಎಂ ಗಂಟೆವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿ: 17.03.2025 11-00 ಎ.ಎಂ ಗಂಟೆ ನಂತರ. ಆರ್ಥಿಕ ಬಿಡ್ ತೆರೆಯುವ ದಿ: 19.03.2025ರ 11-00 ಎ.ಎಂ ಗಂಟೆ ನಂತರ. ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ "https://kppp.karnataka.gov.in" ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
**ವಿ.ಸೂ :** ಸದರಿ ಕಾಮಗಾರಿಯ ಟೆಂಡರ್‌ಅನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್ಡನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಸನೀ ಮತ್ತು ಅಂ.ಅ. ವಿಭಾಗ, ಮೈಸೂರು.
DIPR-DD-MYS/1420/KSMCA-1049/2024-25

ಕರ್ನಾಟಕ ಸರ್ಕಾರ
**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,**
**ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ**
ಟೆಂಡರ್ ಪ್ರಕಟಣೆ ಸಂಖ್ಯೆ: 41/2024-25/3789-93 ದಿನಾಂಕ:06-03-2025
**ಅಲ್ಪಾವಧಿ ಟೆಂಡರ್ ಪ್ರಕಟಣೆ**
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-3, 4ರನ್ವಯ ದ್ವಿ-ಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೊಡಗು ವಿಭಾಗದ ವ್ಯಾಪ್ತಿಯಲ್ಲಿನ ಕಾಮಗಾರಿಗಳನ್ನು ಲೆಕ್ಕಶೀರ್ಷಿಕೆ: 5054- ರಾಜ್ಯ ಹೆದ್ದಾರಿ ಸುಧಾರಣೆ (ಇಂಡೆಂಟ್ ಸಂಖ್ಯೆ:19981, 19521, 19582, 19486), 5054-ಜಿಲ್ಲಾ ಮತ್ತು ಇತರ ರಸ್ತೆಗಳ ಸುಧಾರಣೆ (ಇಂಡೆಂಟ್ ಸಂಖ್ಯೆ:20031) ಮತ್ತು 5054-ಜಿಲ್ಲಾ ಮತ್ತು ಇತರ ರಸ್ತೆಗಳ ನವೀಕರಣ (ಇಂಡೆಂಟ್ ಸಂಖ್ಯೆ:18167 (3ನೇ ಕರೆ)) (ಅಪೆಂಡಿಕ್ಸ್-ಇ) ಯಡಿಯ ಒಟ್ಟು 6-ಕಾಮಗಾರಿಗಳಿಗೆ ಇ-ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ ಕನಿಷ್ಠ ರೂ.61.20 ಲಕ್ಷ ಮತ್ತು ಗರಿಷ್ಟ ರೂ. 102.87 ಲಕ್ಷಗಳಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ರಾಜ್ಯ ಸರ್ಕಾರದ ಇ-ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 17-03-2025 ಸಂಜೆ 5.00 ಗಂಟೆಯಾಗಿರುತ್ತದೆ.
ಟೆಂಡರ್ ಸಂಪೂರ್ಣ ವಿವರಗಳನ್ನು ಇ-ಸಂಗ್ರಹಣಾ ವೇದಿಕೆ https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ- ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.
ಸಹಿ/-
ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ಕೊಡಗು ವಿಭಾಗ, ಮಡಿಕೇರಿ.

ಕರ್ನಾಟಕ ಸರ್ಕಾರ - ಜಿಲ್ಲಾ ಪಂಚಾಯಿತಿ
**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ**
**ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು**
Ph:08262-220936 E-Mail:zpedckm@rediffmail.com
ಟೆಂಡರ್ ಪ್ರಕಟಣೆ ಸಂಖ್ಯೆ:06/2024-25/6ನೇ ಕರೆ ದಿನಾಂಕ: 07.03.2025
**ಟೆಂಡರ್ ಪ್ರಕಟಣೆ 6ನೇ ಕರೆ**
ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರುರವರು ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲ್ಲೂಕಿನ ಬೂದು ನೀರು ನಿರ್ವಹಣೆ (ಎಂ.ಜಿ.ಎನ್.ಆರ್.ಇ.ಜಿ.ಎ) ಯೋಜನೆಯಡಿ ಸಾಮಾಗ್ರಿ ಸರಬರಾಜು ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ. ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಗರಿಷ್ಠ ಅಂದಾಜು ಮೊತ್ತ ರೂ.44,21,773.50 ಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document KG-2 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ. ಮೂಲಕ ಡೌನ್‌ಲೋಡ್ ಮಾಡಿದ ಡಾಕ್ಯೂಮೆಂಟ್‌ಗಳನ್ನು ದಿನಾಂಕ:07.03.2025 ರಿಂದ ದಿನಾಂಕ:15.03.2025 ರವರೆಗೆ ಸಂಜೆ 5.30 ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ:17.03.2025 ರಂದು ಸಂಜೆ 5.05 ಗಂಟೆಗೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು kppp.karnataka.gov.in website ನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.
ಸಹಿ/-ಕಾರ್ಯಪಾಲಕ ಇಂಜಿನಿಯರ್,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/24-25/184/1848

**ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ**
ವಿಶ್ವೇಶ್ವರಯ್ಯ ಮುಖ್ಯ ಗೋಪುರ, 6ನೇ ಮಹಡಿ,
ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ಸಂ: ಕೆಎಸ್‌ಟಿಬಿ/ಇಎಸ್‌ಟಿ-1/ವಾ.ಚಾ.ಟಿ./2024-25 ದಿನಾಂಕ: 11-03-2025
**ಅಲ್ಪಾವಧಿ ಟೆಂಡರ್ ಪ್ರಕಟಣೆ**
2025-26ನೇ ಸಾಲಿನ ಏಪ್ರಿಲ್ 01, 2025 ರಿಂದ ಮಾರ್ಚ್ 31, 2026ರವರೆಗೆ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಗೆ ಅಗತ್ಯವಿರುವ ಒಂದು ವಾಹನ ಚಾಲಕರ ಹುದ್ದೆಯನ್ನು ಹೊರ ಸಂಪನ್ಮೂಲ ಏಜೆನ್ಸಿಗಳಿಂದ ಮಾನವ ಸಂಪನ್ಮೂಲ ಸೇವೆ ಒದಗಿಸುವ ಅರ್ಹತೆಯುಳ್ಳ ಏಜೆನ್ಸಿಗಳಿಂದ ಮತ್ತು ಕಾರ್ಮಿಕ ಕಾಯ್ದೆ, ಕಾರ್ಮಿಕ ಭವಿಷ್ಯ ನಿಧಿ (ಇಪಿಎಫ್) ಕಾಯ್ದೆ, ರಾಜ್ಯ ಕಾರ್ಮಿಕ ವಿಮಾ (ಇಎಸ್‌ಐ) ಕಾಯ್ದೆ, ಆದಾಯ ತೆರಿಗೆ ಕಾಯ್ದೆ, ಸೇವಾ ತೆರಿಗೆ ಕಾಯ್ದೆ ಹಾಗೂ ಅನ್ವಯಿಸುವ ಕಾಯ್ದೆಗಳ ಕಾನೂನಿನ ಅಡಿಯಲ್ಲಿ ನೋಂದಣಿ ಮಾಡಿಕೊಂಡ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ.
ಟೆಂಡರ್ ಅರ್ಜಿ ನಮೂನೆಯನ್ನು ದಿನಾಂಕ 12-03-2025ರ ಬೆಳಿಗ್ಗೆ 10.00 ಗಂಟೆಯಿಂದ 19-03-2025ರ ಸಂಜೆ 5.30 ಗಂಟೆಯವರೆಗೆ (ರಜೆ ದಿನಗಳ ಹೊರತುಪಡಿಸಿ) ಏಳು ಕೆಲಸ ದಿನಗಳೊಳಗೆ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಬೆಂಗಳೂರು ಇವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ರೂ.100/- ಗಳ ಡಿ.ಡಿ. ಸಲ್ಲಿಸಿ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, 6ನೇ ಮಹಡಿ, ವಿಶ್ವೇಶ್ವರಯ್ಯ ದೊಡ್ಡ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.
ಭರ್ತಿ ಮಾಡಿದ ಟೆಂಡರ್ ಅರ್ಜಿ ನಮೂನೆಯನ್ನು ಸಲ್ಲಿಸಲು ದಿನಾಂಕ 20-03-2025ರ ಮಧ್ಯಾಹ್ನ 1.00 ಗಂಟೆಯವರೆಗೆ ಕಾಲಾವಕಾಶ ನೀಡಲಾಗಿದೆ. ಟೆಂಡರ್ ಅರ್ಜಿ ನಮೂನೆಯ ಲಕೋಟೆಯನ್ನು ದಿನಾಂಕ 20-03-2025ರ ಸಂಜೆ 4.00 ಗಂಟೆಗೆ ತೆರೆಯಲಾಗುವುದು. ಟೆಂಡರ್‌ನ ಷರತ್ತು ಮತ್ತು ನಿಬಂಧನೆಗಳು ಹಾಗೂ ಹೆಚ್ಚಿನ ವಿವರಗಳನ್ನು ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಬೆಂಗಳೂರು ಇವರಿಂದ ಪಡೆಯಬಹುದಾಗಿದೆ.
ಸಹಿ/- ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ
ವಾ.ಸಾ.ಸಂ.ಇ/ವಾಪ್ರ/5595/ಆಕಾರ್/2024-25

**ನಗರಸಭೆ ಕಾರ್ಯಾಲಯ ನೆಲಮಂಗಲ**
ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ-562123, ದೂ.: 080-27722735, ಸಹಾಯವಾಣಿ: 080-27722135, Web : www.nelamangala.mrc.gov.in, Email : itstaff_nelamangala@yahoo.com
ಸಂಖ್ಯೆ:ನಸನೆ/ತಾಂತ್ರಿಕ(ವಿ)/ಟೆಂಡರ್/11/2024-25 ದಿನಾಂಕ : 01.03.2025
**ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ) (ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ KW1 & 2 ರ & KG ನಿಬಂಧನೆಗಳಂತೆ ಅರ್ಜಿ & ಆಹ್ವಾನಿಸಲಾಗಿದೆ)**
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2024-25ನೇ ಸಾಲಿನ ನಗರಸಭೆ ನಿಧಿಯಡಿ ಕೊಳವೆ ಬಾವಿ ಕೊರೆಯುವುದು ಹಾಗೂ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಸುವ ಕಾಮಗಾರಿಗಳಿಗೆ ಟೆಂಡರ್ ಕೈಗೊಳ್ಳಲು ಒಟ್ಟು ಮೊತ್ತ **ರೂ: 139.70 ಲಕ್ಷಗಳ** ಕೈಗೊಳ್ಳುವ ಕಾಮಗಾರಿಗಳ ಐಟಾಂವಾರು ಮತ್ತು ಕೆಪಿಪಿಪಿ ಪೋರ್ಟಲ್‌ನ ಏಕ ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://kppp.karnataka.gov.in/** ಮೂಲಕ ಟೆಂಡರ್ ಸಲ್ಲಿಸುವುದು.
ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (As per KPPP Portal ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ: (As per KPPP Portal) ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.
ಸಹಿ/-
ಪೌರಾಯುಕ್ತರು,
ನಗರಸಭೆ, ನೆಲಮಂಗಲ
ವಾ.ಸಾ.ಸಂ.ಇ/ವಾಪ್ರ/5591/ಎಸ್‌ಎಸ್‌ಸಿ/2024-25

ಕರ್ನಾಟಕ ಅರಣ್ಯ ಇಲಾಖೆ
**ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,**
**ಬಂಡೀಪುರ ಉಪ ವಿಭಾಗ, ಬಂಡೀಪುರ, ಗುಂಡ್ಲುಪೇಟೆ - 571126**
Phone: 08229-236043 E-mail : acfbandipur3@gmail.com
ಸಂಖ್ಯೆ: ಸ.ಅ.ಸಂ/ಬ.ಉ.ವಿ/ಟೆಂಡರ್‌ಪ್ರಕಟಣೆ/ ರೈಲ್ವೆ ಬ್ಯಾರಿಕೇಡ್/ ಜಿ.ಎಸ್.ಬೆಟ್ಟ/ ಸಿ.ಆರ್-13/2024-25 ದಿನಾಂಕ: 07/03/2025
**ಅಲ್ಪಾವಧಿ ಟೆಂಡರ್ ಪ್ರಕಟಣೆ ಇ-ಪ್ರೊಕ್ಯೂರ್‌ಮೆಂಟ್**
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2024-25ನೇ ಸಾಲಿನಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಬಂಡೀಪುರ ಉಪ ವಿಭಾಗದ ಜಿ.ಎಸ್. ಬೆಟ್ಟ ವಲಯದಲ್ಲಿ ರೈಲ್ವೇ ಬ್ಯಾರಿಕೇಡ್ ಕಾಮಗಾರಿಯನ್ನು ಕೈಗೊಳ್ಳಲು 2024-25ನೇ ಸಾಲಿಗೆ ಅರಣ್ಯ ಗುತ್ತಿಗೆದಾರರಾಗಿ ಹೆಸರನ್ನು ನೊಂದಾಯಿಸಿಕೊಂಡಿರುವಂತಹ ಅರ್ಹ ಅರಣ್ಯ ಗುತ್ತಿಗೆದಾರರು ಕೈಗೊಳ್ಳುವುದಕ್ಕಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಅರಣ್ಯ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ.
**ಅನುಸೂಚಿ**

| Sl. No. | S.O. No. & Date | Particulars of Work | Amount Sanctioned | Budget Head of Account |
|---|---|---|---|---|
| 1 | 48/2024-25 04-03-2025 | Estimate for Costruction of Elephant Proof Barricading using Used Rails along the boundary of G.S. Betta range during 2024-25 **Location :** G.S. BETTA GATE TO NIJAGUNDI HALLA - 1.00 Kms | 18340000.00 | 4406~01~10 1~0~02~Flexi Fund 139 |
| 2 | 49/2024-25 04-03-2025 | Estimate for Costruction of Elephant Proof Barricading using Used Rails along the boundary of G.S. Betta range during 2024-25 **Location :** NIJAGUNDI TO HULI BOARD HIMAGIRI FARM - 1.00 Kms | 17510000.00 | 4406~01~10 1~0~02~Flexi Fund 139 |
| 3 | 50/2024-25 04-03-2025 | Estimate for Costruction of Elephant Proof Barricading using Used Rails along the boundary of G.S. Betta range during 2024-25 **Location :** HIMAGIRI FARM TO KALLAHALLA - 1.00 Kms | 17400000.00 | 4406~01~10 1~0~02~Flexi Fund 139 |
| 4 | 51/2024-25 04-03-2025 | Estimate for Costruction of Elephant Proof Barricading using Used Rails along the boundary of G.S. Betta range during 2024-25 **Location :** KALLAHALLA TO LAKKIGUDDA - 1.00 Kms | 17860000.00 | 4406~01~10 1~0~02~Flexi Fund 139 |
| 5 | 52/2024-25 04-03-2025 | Estimate for Costruction of Elephant Proof Barricading using Used Rails along the boundary of G.S. Betta range during 2024-25 **Location :** LAKKIGUDDA TO KANIVEDHAARI - 1.00 Kms | 17380000.00 | 4406~01~10 1~0~02~Flexi Fund 139 |
| 6 | 373/2024-25 17-02-2025 | Estimate for Costruction of Elephant Proof Barricading using Used Rails along the boundary of G.S. Betta range during 2024-25 **Location : KANIVEDHAARI TO BANDIHALLA - 330 mtr** | 5700000.00 | 4406~01~10 1~0~02~Flexi Fund 139 |

**ಷರತ್ತುಗಳು:**
1. ಪೂರ್ವ ಬಿಡ್ ಮೀಟಿಂಗ್ (Pre-Bid Meeting) ದಿನಾಂಕ 10-03-2025 ಬೆಳಿಗ್ಗೆ 11.00 ಗಂಟೆ.
2. ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ 14-03-2025 ಸಂಜೆ 04.00 ಗಂಟೆ.
3. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 15-03-2025 ಸಂಜೆ 04.05 ಗಂಟೆಗೆ.
4. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 17-03-2025 ಬೆಳಿಗ್ಗೆ 11.00 ಗಂಟೆ.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳ ಸಹಿದಾರರ ಕಛೇರಿಯ ಕೆಲಸದ ವೇಳೆಯಲ್ಲಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/-
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಬಂಡೀಪುರ ಉಪ ವಿಭಾಗ, ಬಂಡೀಪುರ
ಸಂ: ವಾಸಾಸಂಇ/ಚಾನಗರ/677/2024-25

ಅಕ್ರಮ ವಲಸಿಗರಿಂದ ದೊಡ್ಡ ಸಮಸ್ಯೆಯಾಗಿದೆ. ಬೆಂಗಳೂರಿನಲ್ಲೂ ಸಾಕಷ್ಟು ತೊಂದರೆಯಾಗಿದೆ. ಆಫ್ರಿಕಾ ಮೂಲದವರು ಪೊಲೀಸರ ಮೇಲೆ ಹಲ್ಲೆ ಮಾಡುತ್ತಾರೆ. ಬಾಂಗ್ಲಾದವರ ದೊಡ್ಡ ಜಾಲವೇ ಇದೆ. ಇದು ಗಂಭೀರವಾದ ವಿಚಾರವಾಗಿದೆ. ಈ ಬಗ್ಗೆ ಸಮಗ್ರ ಚರ್ಚೆ ಹಾಗೂ ತನಿಖೆಯ ಅಗತ್ಯವಿದೆ.

- ಆರ್. ಅಶೋಕ್, ಪ್ರತಿಪಕ್ಷ ನಾಯಕ

ವಿದೇಶಿ ಪ್ರಜೆಗಳು ವಾಸಿಸುವ ಸ್ಥಳಗಳ ಬಳಿ ಸತತ ನಿಗಾವಹಿಸಲು ಮೀಸಲು ಪಡೆ ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಿ ಕ್ರಮ ಜರುಗಿಸಲು ಎಲ್ಲಾ ವಿಭಾಗೀಯ ಉಪ ಆಯುಕ್ತರಿಗೆ ಸೂಚಿಸಲಾಗಿದೆ. ವಿದೇಶಿ ಪ್ರಜೆಗಳು ಅಕ್ರಮವಾಗಿ ನೆಲೆಸಿರುವುದು ಪತ್ತೆಯಾದಲ್ಲಿ ಆರೋಪಿಗಳನ್ನು ಅವರ ದೇಶದ ವಿದೇಶಿ ಮಂತ್ರಾಲಯದ ಮೂಲಕ ಆಯಾ ದೇಶಗಳ ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ಮಾಹಿತಿ ನೀಡಲಾಗುತ್ತದೆ.

ಡಾ.ಜಿ. ಪರಮೇಶ್ವರ, ಗೃಹ ಸಚಿವ

### ಸದನದಲ್ಲಿ ತೀವ್ರ ವಿವಾದಕ್ಕೆ ಗ್ರಾಸವಾದ ಗ್ಯಾರಂಟಿ ಅನುಷ್ಠಾನ ಸಮಿತಿ | ಆಡಳಿತ-ಪ್ರತಿಪಕ್ಷದ ನಡುವೆ ತೀವ್ರ ವಾಕ್ಸಮರ

# ಕೈ ಕಾರ್ಯಕರ್ತರಿಗೆ ತೆರಿಗೆ ಹಣವೇಕೆ?

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಗ್ಯಾರಂಟಿ ಅನುಷ್ಠಾನ ಸಮಿತಿಗೆ ಕಾಂಗ್ರೆಸ್ ಕಾರ್ಯಕರ್ತರ ನೇಮಕವನ್ನು ಖಂಡಿಸಿ ಬಿಜೆಪಿ-ಜೆಡಿಎಸ್ ಶಾಸಕರು ಬಾವಿಗಿಳಿದು ಧರಣಿ ನಡೆಸಿದ್ದರಿಂದ ಕಾವೇರಿದ ದನಿಯಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ಶಾಸಕರ ನಡುವೆ ಆರೋಪ, ಪ್ರತ್ಯಾರೋಪ ನಡೆದು ವಿಧಾನಸಭೆಯಲ್ಲಿ ಕೋಲಾಹಲ ಸೃಷ್ಟಿಯಾಯಿತು.

ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್ ಶಾಸಕ ಎಂ.ಟಿ.ಕೃಷ್ಣಪ್ಪ ಪ್ರಶ್ನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಉತ್ತರ ನೀಡಿದರು. ಆದರೆ ಈ ಉತ್ತರಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಜೆಡಿಎಸ್ ಮತ್ತು ಬಿಜೆಪಿ ಶಾಸಕರು ಸರಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಈ ವೇಳೆ ಸದನದಲ್ಲಿ ಮಾತಿನ ಚಕಮಕಿ ಏರಿದ ದನಿಯಲ್ಲಿ ನಡೆದು ಸದನ ಗದ್ದಲದ ಗೂಡಾಯಿತು. ಸರಕಾರದ ಸಮಜಾಯಿಷಿಯಿಂದ ತೃಪ್ತಿಗೊಳ್ಳದ ಬಿಜೆಪಿ, ಜೆಡಿಎಸ್ ಸದಸ್ಯರು ಧರಣಿ ನಡೆಸಲು ಮುಂದಾದರು. ಗಲಾಟೆ ನಿಯಂತ್ರಣ ಬಾರದಿದ್ದರಿಂದ ಸಭಾಧ್ಯಕ್ಷ ಯು.ಟಿ. ಖಾದರ್ ಸದನದ ಕಲಾಪವನ್ನು 10 ನಿಮಿಷ ಮುಂದೂಡಿದರು.

ಇದಕ್ಕೂ ಮೊದಲು ಉತ್ತರಿಸಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ , ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಹಾಗೂ ತಾಲೂಕುಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಯೋಜನೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರಿಗೆ ಗೌರವಧನ ಮತ್ತು ಸಭಾಭತ್ಯೆ ನಿಗದಿಪಡಿಸಿ ಆದೇಶಿಸಲಾಗಿದೆ. ಜಿಲ್ಲಾಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಿಗೆ 40 ಸಾವಿರ, ಉಪಾಧ್ಯಕ್ಷರಿಗೆ 10 ಸಾವಿರ ಗೌರವಧನ ಹಾಗೂ ಸದಸ್ಯರಿಗೆ 1,100 ಸಭಾಭತ್ಯೆ ನೀಡಲಾಗುತ್ತಿದೆ. ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಿಗೆ 25 ಸಾವಿರ ಗೌರವಧನ, ಸದಸ್ಯರಿಗೆ ಪ್ರತಿ ಸಭೆಗೆ 1000 ಸಭಾಭತ್ಯೆ ನೀಡಲಾಗುತ್ತಿದೆ ಎಂದರು

**ಕಾನೂನುಬಾಹಿರವಾಗಿ ವೇತನ:** ಇದಕ್ಕೂ ಮೊದಲು ಮಾತನಾಡಿದ ಶಾಸಕ ಎಂ.ಟಿ.ಕೃಷ್ಣಪ್ಪ, ರಾಜ್ಯಸರಕಾರದ ಹಣವನ್ನು ಕಾಂಗ್ರೆಸ್ ಕಾರ್ಯಕರ್ತರಿಗೆ ಹಂಚಿಕೆ ಮಾಡಲು ಅವಕಾಶವಿದೆಯೇ? ಅವರಿಗೆ ಕಾನೂನು ಬಾಹಿರವಾಗಿ ಸಂಬಳ ನೀಡಲಾಗುತ್ತಿದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಪರಿಶೀಲನೆಗೆ ಅಧಿಕಾರಿಗಳು, ಶಾಸಕರು ಇಲ್ಲವೇ? 2.50 ಲಕ್ಷ ವಿವಿಧ ಇಲಾಖೆಗಳ ಹುದ್ದೆಗಳು ರಾಜ್ಯದಲ್ಲಿ ಖಾಲಿ ಇವೆ. ಅವುಗಳನ್ನೂ ಕಾಂಗ್ರೆಸ್ ಕಾರ್ಯಕರ್ತರಿಗೆ ಕೊಟ್ಟುಬಿಡಿ, ನೇಮಕಾತಿ ನಿಯಮಾವಳಿ ಏಕೆ ಬೇಕು?, ಕೆಪಿಎಸ್‌ಸಿ ಮುಚ್ಚಿಬಿಡಿ ಎಂದು ವಾಗ್ದಾಳಿ ನಡೆಸಿದರು.

ಇದಕ್ಕೆ ದನಿಗೂಡಿಸಿದ ಬಿಜೆಪಿ ಶಾಸಕ ವಿ.ಸುನೀಲ್ ಕುಮಾರ್, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರಿಗೆ ಒಂದು ರುಪಾಯಿ ಹೆಚ್ಚಳ ಮಾಡಿ ಎಂದರೆ ಹಿಂದೆ-ಮುಂದೆ ನೋಡುತ್ತೀರಿ. ಆದರೆ ಕಾಂಗ್ರೆಸ್ ಕಾರ್ಯಕರ್ತರಿಗೆ ಧಾರಾಳವಾಗಿ ನೀಡುತ್ತಿದ್ದೀರಿ. ಆಶ್ರಯ ಸಮಿತಿ ಸೇರಿದಂತೆ ಬೇರೆ ಯಾವುದೇ ಸಮಿತಿಗೆ ಸಂಬಳ ನೀಡುತ್ತಿಲ್ಲ. ಅನುಷ್ಠಾನ ಸಮಿತಿಗೆ ಏಕೆ ಸಂಬಳ..? ಎಲ್ಲ ಗ್ಯಾರಂಟಿ ಯೋಜನೆಗಳು ಆನ್‌ಲೈನ್ ಮೂಲಕ ಮೂಲಕ ಫಲಾನುಭವಿಗಳಿಗೆ ತಲುಪುತ್ತಿರುವಾಗ ಕಾಂಗ್ರೆಸ್ ಕಾರ್ಯಕರ್ತರಿಗೆ ಏಕೆ ಹಣ ನೀಡಬೇಕು ಎಂದು ಪ್ರಶ್ನಿಸಿದರು.

**ದುಡ್ಡಿಲ್ಲದಿದ್ದರೆ ಭಿಕ್ಷೆ ಬೇಡಿ:** ಪ್ರತಿಪಕ್ಷ ನಾಯಕ ಆರ್. ಅಶೋಕ ಮಾತನಾಡಿ, ಕಾಂಗ್ರೆಸ್‌ನಲ್ಲಿ ದುಡ್ಡಿಲ್ಲ ಎಂದರೆ ರಸ್ತೆರಸ್ತೆಯಲ್ಲಿ ಭಿಕ್ಷೆ ಬೇಡಿ ಕೊಡಲಿ. ಸಮಿತಿಗೆ ನೇಮಕ ಮಾಡಲು ವಿದ್ಯಾರ್ಹತೆ ಏನು? ಕಾಂಗ್ರೆಸ್ ಪಕ್ಷದಿಂದ ಕೊಡಲಿ, ಎಲ್ಲವೂ ಆನ್‌ಲೈನ್ ಮೂಲಕ ಸಂದಾಯ ವಾಗುತ್ತಿರುವಾಗ ತೆರಿಗೆ ಹಣವನ್ನು ಏಕೆ ಕೊಡಬೇಕು ಎಂದು ಪ್ರಶ್ನಿಸಿದರು.

ಉಪಮುಖ್ಯಮಂತ್ರಿಗಳು ಗ್ಯಾರಂಟಿ ಗುಂಗಿನಿಂದ ಹೊರಬಂದಿಲ್ಲ. ದೆಹಲಿಯಲ್ಲಿ 25 ಗ್ಯಾರಂಟಿ ಕೊಟ್ಟ ಮನುಷ್ಯ ಈಗ ಜೀರೋ ಆಗಿದ್ದಾರೆ. ಐದಲ್ಲ, ಐವತ್ತು ಗ್ಯಾರಂಟಿ ಕೊಡಿ. ಆದರೆ ತೆಲಂಗಾಣದ ಮುಖ್ಯಮಂತ್ರಿ ರೇವಂತರೆಡ್ಡಿ ಗ್ಯಾರಂಟಿ ಯೋಜನೆಗೆ ಹಣ ಹೊಂದಾಣಿಕೆ ಕಷ್ಟ ಎಂದು ಹೇಳಿದ್ದಾರೆ ಎಂದಾಗ ಕಾಂಗ್ರೆಸ್ ಶಾಸಕರು ತೀವ್ರ ವಿರೋಧ ವ್ಯಕ್ತಪಡಿಸಿದರು. ಆಗ ಪ್ರತಿಯಾಗಿ ಬಿಜೆಪಿ ಶಾಸಕರು ಮಾತನಾಡಲು ಮುಂದಾದಾಗ ಸದನ ಗದ್ದಲ, ಗೊಂದಲದ ಗೂಡಾಯಿತು.ದೇಶದಲ್ಲಿ ಕ್ಷೇತ್ರ ಪುನರ್ವಿಂಗಡಣೆಗಿಂತ ಗ್ಯಾರಂಟಿಗೆ ಚರ್ಚೆಯಾಗಬೇಕು ಎಂದು ರೇವಂತರೆಡ್ಡಿ ಹೇಳಿದ್ದಾರೆ ಎಂದು ಅಶೋಕ ಹೇಳುತ್ತಿದ್ದಂತೆ, ಸಚಿವ ಪ್ರಿಯಾಂಕ್ ಖರ್ಗೆಯವರು ರಾಷ್ಟ್ರಿಯ ಉದ್ಯೋಗ ಖಾತ್ರಿ, ಯೋಜನೆಯ ಹಣವೂ ಬಂದಿಲ್ಲ. ಅದರ ಬಗ್ಗೆಯೂ ಹೇಳಿ ಎಂದು ಛೇಡಿಸಿದರು.

ಈ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ನೀವು ಬಜೆಟ್ ಮೇಲೆ ಚರ್ಚೆಮಾಡಿ, ಉತ್ತರ ಕೊಡುತ್ತೇವೆ. ಪಕ್ಷವನ್ನು ಅಧಿಕಾರಕ್ಕೆ ತಂದ ಕಾರ್ಯಕರ್ತರಿಗೆ ಹಕ್ಕಿದೆ. ಸರಕಾರ ಉತ್ತರ ಕೊಡುತ್ತಿದೆ ಎಂದು ಗ್ಯಾರಂಟಿ ಅನುಷ್ಠಾನ ಸಮಿತಿಗಳಿಗೆ ನೀಡುತ್ತಿರುವ ಗೌರವಧನ ಹಾಗೂ ಸಭಾಭತ್ಯೆಯನ್ನು ನೀಡುತ್ತಿರುವುದನ್ನು ಸಮರ್ಥಿಸಿಕೊಳ್ಳಲು ಮುಂದಾದರು. ಆಗ ಮತ್ತಷ್ಟು ಆಕ್ರೋಶಗೊಂಡ ಜೆಡಿಎಸ್-ಬಿಜೆಪಿ ಶಾಸಕರು ಸಭಾಧ್ಯಕ್ಷರ ಮುಂದಿನ ಬಾವಿಗೆ ಇಳಿದು ಧರಣಿ ನಡೆಸಲು ಮುಂದಾದರು. ಆಗ ಪರಿಸ್ಥಿತಿ ಕೈಮೀರುವುದನ್ನು ಅರಿತ ಸಭಾಧ್ಯಕ್ಷರು ಸದನದ ಕಲಾಪವನ್ನು 10 ನಿಮಿಷ ಮುಂದೂಡಿದರು.

ಕಾನೂನುಬಾಹಿರವಾಗಿ ಸರಕಾರದ ಹಣವನ್ನು ಕಾಂಗ್ರೆಸ್ ಕಾರ್ಯಕರ್ತರಿಗೆ ಕೊಡಲು ಬರುವುದಿಲ್ಲ. ಶಾಸಕರನ್ನು ಕಡೆಗಣಿಸಿ ಕಾರ್ಯಕರ್ತರನ್ನು ಸಮಿತಿ ಅಧ್ಯಕ್ಷರನ್ನಾಗಿ ಮಾಡಿರುವುದು ಸರಿಯಲ್ಲ. ಡಿಬಿಟಿ ಮೂಲಕ ಗ್ಯಾರಂಟಿ ಯೋಜನೆಗಳು ಅನುಷ್ಠಾನವಾಗುವಾಗ ಕಾರ್ಯಕರ್ತರಿಗೆ ಏನು ಕೆಲಸ? ಪಕ್ಷದಿಂದ ಕೊಟ್ಟರೆ ನಮ್ಮ ತಕರಾರಿಲ್ಲ

- ಎಂ.ಟಿ. ಕೃಷ್ಣಪ್ಪ, ಶಾಸಕ

ರಾಜಕೀಯ ರಹಿತವಾಗಿ ಯೋಚನೆ ಮಾಡಬೇಕು. ಶಾಸಕರ ಎದುರುಗಡೆ ಕಾರ್ಯಕರ್ತರು ಸಭೆ ಮಾಡುತ್ತಾರೆ ಎಂದರೆ ಹೇಗೆ? ನಾವು ಜನರಿಂದ ಆಯ್ಕೆಯಾಗಿದ್ದೇವೆ. ಶಾಸಕರಿಂದ ಇನ್ನೊಂದು ಸಮಿತಿ ರಚನೆ ಮಾಡಿರುವುದು ಸರಿಯಲ್ಲ.

-ಆರಗ ಜ್ಞಾನೇಂದ್ರ, ಶಾಸಕ

ಸರಕಾರ ರಚಿಸಿರುವ ಗ್ಯಾರಂಟಿ ಅನುಷ್ಠಾ ಸಮಿತಿಯಲ್ಲಿ ಇರುವ ಬಹುತೇಕರು ಮಾಜಿ ಶಾಸಕ ಮಕ್ಕಳು ಅಥವಾ ಚುನಾವಣೆಯಲ್ಲಿ ಸೋತಿರುವವರು ಅಥವಾ ಅವರ ಮಕ್ಕಳನ್ನು ಸೇರಿಸಿದ್ದಾರೆ. ಈ ಮೂಲಕ ತೆರಿಗೆ ದುಡ್ಡಲ್ಲಿ ಕಾಂಗ್ರೆಸ್ ನಾಯಕ ಮಕ್ಕಳಿಗೆ ಅವಕಾಶ ನೀಡಲಾಗಿದೆ.

-ಸಿ.ಸಿ. ಪಾಟೀಲ್, ಶಾಸಕ

ಗ್ಯಾರಂಟಿ ಯೋಜನೆಗೆ ನಮ್ಮ ವಿರೋಧವಿಲ್ಲ. ಆದರೆ ಗ್ಯಾರಂಟಿ ಅನುಷ್ಠಾನ ಸಮಿತಿಗೆ ನಮ್ಮ ವಿರೋಧವಿದೆ. ಶಾಸಕರನ್ನೇ ಅಧ್ಯಕ್ಷರನ್ನಾಗಿ ಮಾಡಿ, ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಿ

-ಅರವಿಂದ ಬೆಲ್ಲದ್, ವಿಧಾನಸಭಾ ಉಪನಾಯಕ

## ಗ್ಯಾರಂಟಿ ನಿಲ್ಲದು: ಡಿ.ಕೆ. ಶಿವಕುಮಾರ್

ಬಿಜೆಪಿಗರ ತೀವ್ರ ವಿರೋಧದ ನಡುವೆಯೂ ಮಧ್ಯಪ್ರವೇಶಿಸಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಗೃಹಿಣಿಯರಿಗೆ 2 ಸಾವಿರ ರು. ಗೃಹಲಕ್ಷ್ಮಿ, ಯುವಕರಿಗೆ ಯುವನಿಧಿ ಸೇರಿದಂತೆ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. 52 ಸಾವಿರ ಕೋಟಿ ವಾರ್ಷಿಕ ವೆಚ್ಚವಾಗುತ್ತಿದೆ. ಅದು ಫಲಾನುಭವಿಗಳಿಗೆ ತಲುಪುತ್ತಿದೆಯೇ, ಇಲ್ಲವೇ ಎಂದು ಪರಿಶೀಲಿಸಲು ಕಾರ್ಯಕರ್ತರನ್ನು ಕಳುಹಿಸಿದರೆ ತಪ್ಪೇನು? ನಮಗೆ ನಾಡಿನ ಜನರು 138 + 2 ಶಾಸಕರ ಸ್ಥಾನವನ್ನು ಕೊಟ್ಟು ಅಧಿಕಾರ ನೀಡಿದ್ದಾರೆ. ಶಾಸಕರ ಅಧ್ಯಕ್ಷತೆಯಲ್ಲಿ ಸಮಿತಿಯಾಗಬೇಕು ಎಂಬ ಬೇಡಿಕೆಯ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚಿಸಿ ನಿರ್ಧಾರ ಮಾಡುತ್ತೇವೆ. ಅಲ್ಲಿಯವರೆಗೂ ಕಾರ್ಯಕರ್ತರು ಸಮಿತಿಯಲ್ಲಿ ಮುಂದುವರಿಯುತ್ತಾರೆ ಎಂದು ಸ್ಪಷ್ಟಪಡಿಸಿದರು.

ಗ್ಯಾರಂಟಿ ಅನುಷ್ಠಾನದ ಬಗ್ಗೆ ದೇಶದಲ್ಲಿ ಚರ್ಚೆಯಾಗುತ್ತಿದೆ. ಪ್ರಧಾನಿಯವರು ಗ್ಯಾರಂಟಿ ಅನುಷ್ಠಾನ ಸಾಧ್ಯವಿಲ್ಲ ಎಂದು ಹೇಳಿದರು. 5 ಗ್ಯಾರಂಟಿ ಅನುಷ್ಠಾನ ಮಾಡಿದರೆ ದಿವಾಳಿಯಾಗುತ್ತದೆ ಎಂದು ಹೇಳಿದ್ದರು. ದೇಶದಲ್ಲಿ ಬೆಲೆ ಏರಿಕೆಯಿಂದ ಜನರು ತತ್ತರಿಸುವುದನ್ನು ಮನಗಂಡು ನಾವು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದೆವು. ಇದನ್ನು ಬಿಜೆಪಿ ಅಧಿಕಾರದಲ್ಲಿರುವ ಮಹಾರಾಷ್ಟ್ರ, ದೆಹಲಿಯಲ್ಲೂ ಪ್ರಾರಂಭಿಸಿದ್ದಾರೆ ಎಂದು ಹೇಳಿ ಗ್ಯಾರಂಟಿ ಯೋಜನೆಗಳ ಅನುಷ್ಠಾನವನ್ನು ಡಿಸಿಎಂ ಸಮರ್ಥಿಸಿಕೊಂಡರು.

## ವಾದ-ಪ್ರತಿವಾದ

### ಸುನೀಲ್ ಕುಮಾರ್

- ಕಾಂಗ್ರೆಸ್ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳ ವಿರೋಧಿಗಳು ನಾವಲ್ಲ
- ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವಂತೆ ನಾವು ಹೇಳುತ್ತಿಲ್ಲ
- ಒಂದು ವೇಳೆ ಈ ಯೋಜನೆ ನಿಲ್ಲಿಸಿದರೆ ನಾವು ಹೋರಾಟ ಮಾಡುತ್ತೇವೆ

### ಡಿ.ಕೆ.ಶಿವಕುಮಾರ್

- ಗ್ಯಾರಂಟಿ ಯೋಜನೆಗೆ ಮೊದಲಿನಿಂದಲೂ ಬಿಜೆಪಿಗರು ವಿರೋಧಿಸುತ್ತಿದ್ದಾರೆ
- ಎಲ್ಲ ಸವಾಲುಗಳನ್ನು ದಾಟ ಯೋಜನೆಗಳು ಯಶಸ್ವಿಯಾಗಿ ಅನುಷ್ಠಾನಗೊಂಡಿದೆ.
- ನೀವು ಗ್ಯಾರಂಟಿ ನಿಲ್ಲಿಸುವುಂತೆ ಹೇಳಿದರೂ ನಾವು ನಿಲ್ಲಿಸುವುದಿಲ್ಲ

## ಮಹಾರಾಷ್ಟ್ರದಲ್ಲಿ ಏನಾಗಿದೆ ? : ಖರ್ಗೆ

ಇನ್ನು ಬಿಜೆಪಿ ಶಾಸಕರು ಗ್ಯಾರಂಟಿ ಅನುಷ್ಠಾನ ಸಮಿತಿಗೆ ಸಂಬಂಧಿಸಿದಂತೆ ಆರೋಪಿಸುತ್ತಿರುವಾಗ ಸಚಿವ ಪ್ರಿಯಾಂಕ್ ಖರ್ಗೆ ಅವರು, ಕರ್ನಾಟಕದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿಗೆ ವಿರೋಧಿಸುವ ಬಿಜೆಪಿಗರು ಮಹಾರಾಷ್ಟ್ರದಲ್ಲಿ ಏಕೆ ಸುಮ್ಮನಿದ್ದಾರೆ? ಮಹಾರಾಷ್ಟ್ರದಲ್ಲಿ ಸಚಿವರ ಆಪ್ತ ಸಹಾಯಕರು, ಆಪ್ತ ಕಾರ್ಯದರ್ಶಿಗಳನ್ನಾಗಿ ಸಂಘ ಪರಿವಾರದವರನ್ನೇ ನೇಮಿಸಿಕೊಳ್ಳಬೇಕು ಎನ್ನುವ ಫರ್ಮಾನು ಹೊರಡಿಸಿದ್ದಾರೆ. ಇಲ್ಲಿ ಅನುಷ್ಠಾನ ಸಮಿತಿ ಮಾಡುವುದರಿಂದ ಶಾಸಕರಿಗೆ, ಅಧಿಕಾರಿಗಳಿಗೆ ಅಪಮಾನವಾಗುತ್ತಿದೆ ಎನ್ನುವುದಾದರೆ, ಮಹಾರಾಷ್ಟ್ರದಲ್ಲಿ ಆಗುತ್ತಿರುವುದೇನು ಎಂದು ಪ್ರಶ್ನಿಸಿದರು. ಇದಕ್ಕೂ ಮೊದಲು ಪ್ರತಿಪಕ್ಷ ನಾಯಕ ಅಶೋಕ್ ಅವರು, ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಸಾಧ್ಯವಿಲ್ಲ ಎನ್ನುವ ಆರೋಪಕ್ಕೆ ಪ್ರತಿಯಾಗಿ ಪ್ರಿಯಾಂಕ್ ಖರ್ಗೆ, ನಮ್ಮ ಸರಕಾರದ ಗ್ಯಾರಂಟಿ ಬಗ್ಗೆ ಮಾತನಾಡುವ ಮೊದಲು ಬಿಜೆಪಿಯವರು ಇತರೆ ರಾಜ್ಯಗಳಲ್ಲಿ ಮಾಡಿರುವುದೇನು? ಮೋದಿಯೇ ಗ್ಯಾರಂಟಿ ಎಂದು ವರ್ಷಕ್ಕೆ ಐದು ಲಕ್ಷ ಕೋಟಿ ರು. ಯೋಜನೆಗಳನ್ನು ನೀಡುತ್ತಿರುವ ಬಗ್ಗೆ ಬಿಜೆಪಿ ನಿಲುವು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು.

### ಕೇಂದ್ರ ಸರಕಾರದ ವಿರುದ್ಧ ಸಹಕಾರ ಸಚಿವ ರಾಜಣ್ಣ ಅಸಮಾಧಾನ

# ನಬಾರ್ಡ್‌ನಿಂದ ರಾಜ್ಯಕ್ಕೆ ಕಡಿಮೆ ಅನುದಾನ

**ವಿಧಾನ ಪರಿಷತ್:** ನಬಾರ್ಡ್‌ನಿಂದ ಈ ಬಾರಿ ರಾಜ್ಯಕ್ಕೆ ಕಡಿಮೆ ಹಣಕಾಸು ನೆರವು ಸಿಕ್ಕಿದೆ ಅಂತ ಸಹಕಾರ ಸಚಿವ ರಾಜಣ್ಣ ಕೇಂದ್ರ ಸರಕಾರದ ವಿರುದ್ಧ ಅಸಮಾಧಾನ ಹೊರ ಹಾಕಿದ್ದಾರೆ.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಪ್ರಶ್ನೆಗೆ ಸಚಿವರು ಉತ್ತರ ನೀಡಿ, ನಬಾರ್ಡ್ ಸಂಸ್ಥೆ ಈ ವರ್ಷ ರಾಜ್ಯಕ್ಕೆ ಕಡಿಮೆ ಹಣಕಾಸು ನೆರವು ನೀಡಿದೆ. 2023-24 ರಲ್ಲಿ 5,600 ಕೋಟಿ ಹಣಕಾಸು ನೆರವು ಕೊಟ್ಟಿತ್ತು. 2024-25 ರಲ್ಲಿ 2,340 ಕೋಟಿ ಮಾತ್ರ ನಬಾರ್ಡ್ ಹಣಕಾಸು ನೆರವು ಕೊಟ್ಟಿದೆ. 2023-24 ನೇ ಸಾಲಿಗೆ ಹೋಲಿಕೆ ಮಾಡಿದರೆ ಶೇ.58 ಕಡಿಮೆ ಹಣಕಾಸು ನೆರವು ನಬಾರ್ಡ್ ಕೊಟ್ಟಿದೆ ಎಂದರು.

ಕಡಿಮೆ ಹಣ ಕೊಟ್ಟ ಹಿನ್ನೆಲೆಯಲ್ಲಿ ಸಿಎಂ ಅವರು ಕೇಂದ್ರ ಸರಕಾರಕ್ಕೆ ಪತ್ರ ಬರೆದಿದ್ದರು. ನಾನು ಕೂಡಾ ಬಿಜೆಪಿ ಎಂಪಿಗಳಿಗೆ ಪತ್ರ ಬರೆದು ಕೇಂದ್ರ ಸರಕಾರದ ಮೇಲೆ ಒತ್ತಡ ಹಾಕಲಾಗಿತ್ತು. ಬಳಿಕ ನಬಾರ್ಡ್ 896 ಕೋಟಿ ಬಿಡುಗಡೆ ಮಾಡಿದೆ. ಇದೂ ಕೂಡಾ ಸಾಕಾಗಿಲ್ಲ.ಹೀಗಾಗಿ ಮತ್ತೆ ಬೇಡಿಕೆ ಸಲ್ಲಿಸಲಾಗಿದೆ. ನಮ್ಮ ಬೇಡಿಕೆ 9119 ಕೋಟಿ ಇದೆ. ಆದರೆ ನಬಾರ್ಡ್ ಈ ಬಾರಿ 2,340 ಕೋಟಿ ಮಾತ್ರ ಬಿಡುಗಡೆ ಮಾಡಿದ್ದಾರೆ. ಇದರಿಂದ ರೈತರಿಗೆ ಸಾಲ ಕೊಡಲು ಆಗುತ್ತಿಲ್ಲ. ಕೇಂದ್ರ ಅನುದಾನದ ಲಭ್ಯತೆ ನೋಡಿಕೊಂಡು ಸಾಲ ನೀಡುವ ಕೆಲಸ ಮಾಡುತ್ತೇವೆ ಎಂದು ತಿಳಿಸಿದರು.

**ಗುರಿ ತಲುಪಲು ಅಸಾಧ್ಯ..?:** ಸಹಕಾರ ಸಂಘಗಳ ಸಾಲ ಎಂದರೆ, ಸರಕಾರದ ಸಾಲ ಎಂದು ಹಳ್ಳಿ ರೈತರು ತಿಳಿದುಕೊಂಡಿರುತ್ತಾರೆ. ಆದರೆ, ಸರಕಾರದ ಬಂಡವಾಳ ಇಲ್ಲ. ರೈತರು ಕೊಡಬೇಕಾದ ಬಡ್ಡಿಯನ್ನು ರಾಜ್ಯ ಸರಕಾರ ತುಂಬಿಕೊಡುತ್ತದೆ. ಸಾಲದ ಹಣ ಸಂಪೂರ್ಣವಾಗಿ ಅಪೆಕ್ಸ್ ಬ್ಯಾಂಕ್ ನಬಾರ್ಡ್‌ನಿಂದ ಸಾಲ ಪಡೆಯುತ್ತಾರೆ. ನಬಾರ್ಡ್‌ನಿಂದ ಶೇ.30 ರಿಂದ ಗರಿಷ್ಠ ಶೇ.40 ರಷ್ಟು ನೆರವು ಬರುತ್ತದೆ. ಉಳಿದ ಹಣವನ್ನು ಅಪೆಕ್ಸ್ ಬ್ಯಾಂಕ್‌ಗಳು ಹಾಗೂ ಡಿಸಿಸಿ ಬ್ಯಾಂಕ್‌ಗಳು ಅವರಲ್ಲಿರುವ ಠೇವಣಿ ಮುಂತಾದ ಸ್ವಂತ ಬಂಡವಾಳದಿಂದ ನೀಡುತ್ತವೆ. ಕಳೆದ ಸಾಲಿನಲ್ಲಿ 21 ಲಕ್ಷ ರೈತರಿಗೆ 15,960 ಕೋಟಿ ಸಾಲ ನೀಡಲಾಗಿತ್ತು. ಈ ವರ್ಷ 37 ಲಕ್ಷ ರೈತರಿಗೆ 27 ಸಾವಿರ ಕೋಟಿ ಸಾಲ ಕೊಡುವ ಗುರಿ ಹೊಂದಿರುವುದಾಗಿ ಮುಖ್ಯಮಂತ್ರಿ ಅವರು ಬಜೆಟ್‌ನಲ್ಲಿ ಘೋಷಿಸಿದ್ದಾರೆ. ನಬಾರ್ಡ್ ನೆರವು ಕಡಿಮೆ ಮಾಡಿದರೆ, ಸಾಲದ ಗುರಿ ತಲುಪಲು ಸಾಧ್ಯವಿಲ್ಲವೇ ಎಂದು ದಿನೇಶ ಗೂಳಿಗೌಡ ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಸಚಿವರು, ಮುಖ್ಯಮಂತ್ರಿಯವರು ನೀಡಿದ ಗುರಿಯನ್ನು ತಲುಪುವುದಾಗಿ ತಿಳಿಸಿದರು.

# ಅನಧಿಕೃತ ಮರಳು ಸಾಗಣೆ: 7,629 ಎಫ್‌ಐಆರ್

**ವಿಧಾನ ಪರಿಷತ್:** ಅನಧಿಕೃತವಾಗಿ ಮರಳು ಸಾಗಾಣಿಕೆ ತಡೆಯಲು ಕಾರ್ಯ ಪ್ರವೃತ್ತರಾಗಿದ್ದು, ಜಿಲ್ಲಾ ಮಟ್ಟದಲ್ಲಿ ರಚಿಸಲಾಗಿರುವ ಟಾಸ್ಕ್ ಪೋರ್ಸ್ ಮರಳು ಸಮಿತಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ 47 ಕೋಟಿ ದಂಡ ವಸೂಲಿ ಮಾಡಿರುವುದಾಗಿ ಗಣಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಮಾಹಿತಿ ನೀಡಿದರು.

ಅಕ್ರಮ ಮರಳು ಸಾಗಾಟ ಮಾಡಿದವರ ವಿರುದ್ಧ 23,572 ಪ್ರಕರಣಗಳನ್ನು ಪತ್ತೆ ಹಚ್ಚಿ 7629 ಎಫ್‌ಐಆರ್ ದಾಖಲಿಸಲಾಗಿದೆ. ಕಾನೂನುಬಾಹಿರವಾಗಿ ಮರಳು ಗಣಿಗಾರಿಕೆಯಲ್ಲಿ ತೊಡಗಿದ್ದವರಿಂದ 47 ಕೋಟಿ ಸಂಗ್ರಹಿಸಲಾಗಿದೆ ಎಂದು ಬಿಜೆಪಿ ಸದಸ್ಯ ಡಾ.ಧನಂಜಯ ಸರ್ಜಿ ಅವರ ಪ್ರಶ್ನೆಗೆ ಸಚಿವರು ಮಾಹಿತಿ ನೀಡಿದರು.

## ಸದನ ಸ್ವಾರಸ್ಯ

### ಡಿವಿಜಿ ಕಗ್ಗಕ್ಕೆ ಬಿಜೆಪಿಗರಿಂದ ಶಹಬಾಸ್‌ಗಿರಿ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಆಗ್ಗಾಗೆ ಕವಿಗಳಾಗಿ ಬದಲಾಗುತ್ತಾರೆ. ಅವರ ಸಾಹಿತ್ಯದ ಮೂಲಕವೇ ಪ್ರತಿಪಕ್ಷದವರನ್ನು ಕಟ್ಟಿಹಾಕುವ ಪ್ರಯತ್ನ ಮಾಡುತ್ತಾರೆ. ಸೋಮವಾರವೂ ಇದೇ ರೀತಿಯ ಪ್ರಯತ್ನಕ್ಕೆ ಮುಂದಾದ ಡಿಕೆಶಿ ಗ್ಯಾರಂಟಿ ಸಮಿತಿಗೆ ಬಿಜೆಪಿಯ ವಿರೋಧವನ್ನು ವಿರೋಧಿಸಲು ಬಳಸಿಕೊಂಡಿದ್ದು, ಡಿ.ವಿ. ಗುಂಡಪ್ಪ ಅವರ ಕಗ್ಗವನ್ನು. ' ಎದ್ದೆದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ; ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ; ಉದ್ಧರಿಸುವೆನು ಜಗವನೆನ್ನುತಿಹ ಸಖನೆ; ನಿನ್ನುದ್ಧಾರವೆಷ್ಟಾಯ್ತೊ? - ಮಂಕುತಿಮ್ಮ' ಎನ್ನುವ ಕಗ್ಗದ ಮೂಲಕ ಬಿಜೆಪಿಗರ ಬಾಯಿ ಮುಚ್ಚಿಸಲು ಪ್ರಯತ್ನಿಸಿದರು. ಈ ವೇಳೆ ಬಿಜೆಪಿ ಹಲವು ಶಾಸಕರು 'ವಾ..ವಾ..' ಎಂದು ಉದ್ಘರಿಸುವ ಮೂಲಕ ಡಿಕೆಶಿಗೆ ಟಾಂಗ್ ಕೊಟ್ಟರು.

### ಸುಪ್ರೀಂ ಅಂದ್ಮೇಲೆ ನನ್ನ ಮಾತು ಕೇಳಿ

ಗ್ಯಾರಂಟಿ ಸಮಿತಿಗಳನ್ನು ರಚಿಸಿರುವುದನ್ನು ವಿರೋಧಿಸುವ ಭರದಲ್ಲಿ ಸಾಮ್ರಾಟ ಅಶೋಕ್ ಅವರು, ಕ್ಷೇತ್ರಗಳಿಗೆ ನಾವೇ(ಶಾಸಕರೇ) ಸುಪ್ರೀಂ. ನಮಗೆ ಇಷ್ಟದಿದ್ದರೂ ಮುಖ್ಯಮಂತ್ರಿಗಳೇ ರಾಜ್ಯ ಸುಪ್ರೀಂ ಎಂದು ಅಧಿಕಾರದ ಕಾರ್ಯವ್ಯಾಪ್ತಿಯನ್ನು ವ್ಯಾಖ್ಯಾನಿಸುತ್ತಿದ್ದರು. ಈ ವೇಳೆ ಬಿಜೆಪಿಯ ಕೆಲವರು ಸದನಕ್ಕೆ ಅವರೇ(ವಿಧಾನಸಭಾಧ್ಯಕ್ಷ) ಸುಪ್ರೀಂ ಎಂದು ಹೇಳಿಕೊಟ್ಟರು. ಇದೇ ಮಾತನ್ನು ಅಶೋಕ್ ಪುನರುಚ್ಚರಿಸಿದರು. ಆದಕ್ಕೆ ಖಾದರ್ ಅವರು, ಸದನಕ್ಕೆ ನಾನೇ ಸುಪ್ರೀಂ ಎನ್ನುತ್ತೀರಾ. ಆದರೆ ನನ್ನ ಮಾತು ಕೇಳುತ್ತಿಲ್ಲ. ಇನ್ಮುಂದೆಯಾದರೂ, ನೀವೆಲ್ಲ ನನ್ನ ಮಾತನ್ನು ಕೇಳಿ ಎಂದರು. ಆದರೆ ಅವರ ಮಾತನ್ನು ಕಿವಿಮೇಲೆ ಹಾಕಿಕೊಳ್ಳದೇ ಗಲಾಟೆಯನ್ನು ಬಿಜೆಪಿಗರು ಮುಂದುವರೆಸಿದ್ದರು.

### ಮೊದಲು ಇಯರ್ ಫೋನ್ ಹಾಕ್ಕೊಳ್ಳಿ, ಕುತ್ಕೊಳ್ಳಿ

ಈ ವರ್ಷದ ಅಧಿವೇಶನ ಆರಂಭವಾದಾಗಿನಿಂದ ಆಡಳಿತ-ಪ್ರತಿಪಕ್ಷ ನಡುವೆ ಸಣ್ಣ ಪುಟ್ಟ ಕಿರಿಕ್ ಹೊರತುಪಡಿಸಿದರೆ ಎಲ್ಲವೂ 'ಸುಗಮ'ವಾಗಿಯೇ ನಡೆದಿತ್ತು. ಆದರೆ ಗ್ಯಾರಂಟಿ ಸಮಿತಿಯ ವಿಷಯದಲ್ಲಿ ಗಲಾಟೆ ಜೋರಾಗಿ, ಬಿಜೆಪಿಗರು ಬಾವಿಗಿಳಿದು ಪ್ರತಿಭಟನೆ ನಡೆಸಿದರು. ಈ ವೇಳೆ ಸ್ಪೀಕರ್ ಖಾದರ್ ಸಾಹೇಬರು, ಗಲಾಟೆ ನಡುವೆಯೂ ಪ್ರಶ್ನೋತ್ತರ ಕಲಾಪವನ್ನು ನಡೆಸಲು ತೀರ್ಮಾನಿಸಿದರು. ಆದ್ದರಿಂದ ಎಲ್ಲ ಕಾಂಗ್ರೆಸಿಗರಿಗೆ ಹೆಡ್‌ಫೋನ್ ಹಾಕಿಕೊಂಡು ಸದನವನ್ನು ಆಲಿಸಿ ಎನ್ನುವ ಸೂಚನೆ ನೀಡಿದರು. ಆದರೆ ಈ ಸೂಚನೆಯ ಹೊರತಾಗಿಯೂ, ಕಾಂಗ್ರೆಸಿಗರು ಮಾತಾಡಲು ಮುಂದಾಗಿದ್ದಕ್ಕೆ ಗರಂ ಆದ ಯು.ಟಿ. ಖಾದರ್, ಮೊದಲು ನೀವು ಕೂತ್ಕೊಳ್ಳಿ... ಇಯರ್ ಫೋನ್ ಹಾಕ್ಕೊಳ್ಳಿ. ಅವರೊಂದಿಗೆ ನೀವ್ಯಾಕೆ ಮಾತಾಡ್ತೀರಾ? ಎಂದು ಗದರಿದರು. ಆಗ ಎಲ್ಲ ಶಾಸಕರ ಕಿವಿಯ ಮೇಲೆ ಹೆಡ್‌ಫೋನ್‌ಗಳು ಬಂದವು!

### ತುಂಗಭದ್ರಾದಲ್ಲಿ ಹೂಳು ತುಂಬಿ ವ್ಯರ್ಥವಾಗುತ್ತಿರುವ ನೀರು ಸದ್ಬಳಕೆ

# ನವಲಿ ಜಲಾಶಯ ಸಂಬಂಧ ಆಂಧ್ರ, ತೆಲಂಗಾಣದ ಜತೆ ಚರ್ಚೆ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬಿ ವ್ಯರ್ಥವಾಗುತ್ತಿರುವ 27 ಟಿಎಂಸಿ ನೀರು ಸದ್ಬಳಕೆ ಮಾಡಿಕೊಳ್ಳಲು ನವಲಿ ಸಮಾನಾಂತರ ಜಲಾಶಯ ಹಾಗೂ ಮತ್ತೊಂದು ಪರ್ಯಾಯ ಯೋಜನೆ ವಿಚಾರವಾಗಿ ಆಂಧ್ರ, ತೆಲಂಗಾಣ ರಾಜ್ಯಗಳ ಜತೆ ಚರ್ಚೆ ಮಾಡಿ ಕ್ರಮ ಕೈಗೊಳ್ಳಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಶಾಸಕ ಬಸನಗೌಡ ದದ್ದಲ್ ಅವರು, ತುಂಗಭದ್ರ ಎಡದಂಡೆ ನಾಲೆಯಿಂದ ಕೊನೆ ಭಾಗಕ್ಕೆ ಸಮರ್ಪಕವಾಗಿ ನೀರು ತಲುಪುತ್ತಿಲ್ಲ, ಮಾನ್ವಿ ಹಾಗೂ ರಾಯಚೂರು ತಾಲೂಕಿಗೆ ಎರಡು ಏತ ನೀರಾವರಿ ಯೋಜನೆಗಳ ಮೂಲಕ ಕೃಷ್ಣ ನದಿ ಮೂಲಕ ನೀರು ಒದಗಿಸಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಡಿಕೆಶಿ, ತುಂಗಭದ್ರಾ ಅಣೆಕಟ್ಟಿನಲ್ಲಿ ಹೂಳು ತುಂಬಿರುವ ಕಾರಣದಿಂದ 27 ಟಿಎಂಸಿ ನೀರು ವ್ಯರ್ಥವಾಗುತ್ತಿದೆ. ನವಲಿ ಜಲಾಶಯ ಮಾಡಲು ಯೋಜನೆ ರೂಪಿಸಲಾಗಿದೆ. ಆದರೆ ಇದಕ್ಕೆ ತುಂಗಭದ್ರಾ ಮಂಡಳಿಯ ಮುಂದೆ ಪರ್ಯಾಯವಾಗಿ ಪ್ರಸ್ತಾವನೆಯೊಂದು ಬಂದಿದೆ. ಈ ವಿಚಾರವಾಗಿ ಆಂಧ್ರ ಮತ್ತು ತೆಲಂಗಾಣ ರಾಜ್ಯಗಳು ಪರಿಶೀಲನೆ ಮಾಡುತ್ತಿವೆ. ನಾನು ಈಗಾಗಲೇ ತೆಲಂಗಾಣ ನೀರಾವರಿ ಸಚಿವರ ಜತೆ ಈ ಬಗ್ಗೆ ಚರ್ಚೆ ಮಾಡಿದ್ದೇನೆ. ಈ ಬಗ್ಗೆ ಚರ್ಚೆ ಮಾಡಲು ಸಮಯ ನೀಡುವುದಾಗಿ ಉಭಯ ರಾಜ್ಯಗಳು ಹೇಳಿದ್ದು, ಸಮಯ ನಿಗದಿಯಾದ ಬಳಿಕ ಆಂಧ್ರ ಪ್ರದೇಶ ಸಿಎಂ ಜತೆ ಚರ್ಚೆ ಮಾಡಿ ಇದನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

### ಅಧಿಕಾರಿಗಳ ಜತೆ ಚರ್ಚಿಸಿ ಸೂಕ್ತ ಕ್ರಮ

ಶಾಸಕ ಅಲ್ಲಮಪ್ರಭು ಪಾಟೀಲ್ ಅವರು ಅಧಿಕಾರಿಗಳು ಭೀಮಾ ನದಿಯ ಯೋಜನೆಗಳ ಮೂಲಕ 58663 ಹೆಕ್ಟೇರ್ ಪ್ರದೇಶಗಳಲ್ಲಿ ನೀರಾವರಿ ಒದಗಿಸಲಾಗಿದೆ ಎಂದು ಉತ್ತರದಲ್ಲಿ ತಿಳಿಸಿದ್ದು, ಉಪಮುಖ್ಯಮಂತ್ರಿಗಳು ಈ ವಿಚಾರವಾಗಿ ಸಮೀಕ್ಷೆ ಮಾಡಿಸಬೇಕು ಎಂದು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಶಿವಕುಮಾರ್ ಅವರು ಬೆಣ್ಣೆತೊರೆ ಹಾಗೂ ಇತರೆ ನೀರಾವರಿ ಯೋಜನೆ ಮೂಲಕ ಈ ಭಾಗದಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲಾಗಿದ್ದು, ಸದಸ್ಯರು ನಿಯೋಗವನ್ನು ಕರೆದುಕೊಂಡು ಈ ಭಾಗದಲ್ಲಿ ಚರ್ಚೆ ಮಾಡಬೇಕು ಎಂದು ಕೇಳಿದ್ದಾರೆ. ಈ ವಿಚಾರವಾಗಿ ಅಧಿಕಾರಿಗಳ ಜತೆ ಚರ್ಚಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

### ವಿದೇಶಿ ಪ್ರಜೆಗಳ ಗಡಿಪಾರಿಗೆ ಕ್ರಮ: ಗೃಹ ಸಚಿವ ಪರಮೇಶ್ವರ

# ರಾಜ್ಯದಲ್ಲಿ ಅಕ್ರಮ ವಿದೇಶಿ ವಲಸಿಗರ ಮಟ್ಟಹಾಕಿ

**ವಿಧಾನಸಭೆ:** ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳ ವಿಚಾರ ವಿಧಾನಸಭೆಯಲ್ಲಿ ಪ್ರತಿಧ್ವನಿಸಿದ್ದು, ರಾಜ್ಯದಲ್ಲಿರುವ ಅಕ್ರಮ ವಲಸಿಗರನ್ನು ಗಡಿಪಾರು ಮಾಡಬೇಕು ಎಂದು ಹಲವು ಶಾಸಕರು ಆಗ್ರಹಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಶಾಸಕ ಮಾನಪ್ಪ ಡಿ.ವಜ್ಜಲ್ ಅವರ ಪ್ರಶ್ನೆಗೆ ಗೃಹಸಚಿವ ಡಾ.ಜಿ.ಪರಮೇಶ್ವರ ಉತ್ತರಿಸಿ, ರಾಜ್ಯದಲ್ಲಿ ಕಳೆದ 20 ವರ್ಷಗಳಲ್ಲಿ 556 ವಿದೇಶಿ ಪ್ರಜೆಗಳು ಅಕ್ರಮವಾಗಿ ನೆಲೆಸಿದ್ದಾರೆ ಎಂದು ಗುರುತಿಸಲಾಗಿದೆ. ಅಕ್ರಮವಾಗಿ ಕೆಲಸ ಮಾಡಿಕೊಂಡಿರುವ ವಿದೇಶಿ ಪ್ರಜೆಗಳನ್ನು ಗಡಿಪಾರು ಮಾಡಲು ಕ್ರಮ ಕೈಗೊಂಡಿದೆ ಎಂದರು. ಬೆಂಗಳೂರು ನಗರದಲ್ಲಿ 223, ಕೆಜಿಎಫ್‌ನಲ್ಲಿ 7, ಮಂಗಳೂರು ನಗರದಲ್ಲಿ 41, ರಾಮನಗರದಲ್ಲಿ 11, ಧಾರವಾಡದಲ್ಲಿ 2, ವಿಜಯಪುರದಲ್ಲಿ 33, ದಕ್ಷಿಣ ಕನ್ನಡ-15, ಮೈಸೂರಿನಲ್ಲಿ 27, ಉತ್ತರಕನ್ನಡ, ರಾಯಚೂರು-ತಲಾ ಒಬ್ಬರು, ಉಡುಪಿ-10, ಶಿವಮೊಗ್ಗ-12, ಹಾಸನ-3, ಚಿತ್ರದುರ್ಗ-10, ಬೆಂಗಳೂರು ಜಿಲ್ಲೆ-60 ಅಕ್ರಮವಾಗಿ ವಿದೇಶೀಯರು ನೆಲೆಸಿರುವುದನ್ನು ಗುರುತಿಸಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

ಅಕ್ರಮವಾಗಿ ನೆಲೆಸಿರುವ ವಿದೇಶಿಯರನ್ನು ಪತ್ತೆ ಹಚ್ಚಲು ಪೊಲೀಸ್ ಠಾಣಾ ಮಟ್ಟದಲ್ಲಿ ಗುಪ್ತಚರ ಸಿಬ್ಬಂದಿ ಹಾಗೂ ಕ್ರೈ ಸಿಬ್ಬಂದಿಗಳು ವಿದೇಶಿಯರ ಚಲನವಲನಗಳ ಮೇಲೆ ನಿಗಾ ವಹಿಸುವಂತೆ ಸೂಕ್ತ ತಿಳಿವಳಿಕೆ ನೀಡಲಾಗಿದೆ. ಚಿಂದಿ ಆಯುವ ಕೆಲಸ ಮಾಡುವ ವ್ಯಕ್ತಿಗಳ ಮೇಲೆ ಹಾಗೂ ಅಂಥವರು ನೆಲೆಸಿರುವ ಸ್ಥಳಗಳ ಬಳಿ ಹೆಚ್ಚಿನ ನಿಗಾ ವಹಿಸುವಂತೆ ಎಲ್ಲಾ ವಿಭಾಗೀಯ ಉಪ ಆಯುಕ್ತರಿಗೆ ಸೂಕ್ತ ತಿಳಿವಳಿಕೆ ನೀಡಲಾಗಿದೆ. ವಿದೇಶಿ ಪ್ರಜೆಯ ಗಡಿಪಾರು ನಿಯಮವನ್ನು ಜರುಗಿಸಿ ಅವರ ದೇಶಗಳಿಗೆ ವಾಪಸ್ ಕಳುಹಿಸಲಾಗುತ್ತಿದೆ. ಈವರೆಗೆ 193 ಅಕ್ರಮ ವಿದೇಶಿ ವಲಸಿಗರನ್ನು ಗಡಿಪಾರು ಮಾಡಲಾಗಿದೆ. 212 ವಿದೇಶಿಯರ ಗಡಿಪಾರು ಪ್ರಕ್ರಿಯೆ ಚಾಲ್ತಿಯಲ್ಲಿದೆ. 121 ವಿದೇಶಿಯರು ನ್ಯಾಯಾಂಗ ಬಂಧನದಲ್ಲಿದ್ದಾರೆ. ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಶಾಸಕ ಮಾನಪ್ಪ ವಜ್ಜಲ್, ವಿಜಯಪುರ ಜಿಲ್ಲೆಯಲ್ಲಿ 15 ಸಾವಿರ ವಿದೇಶಿಯರು ನೆಲೆಸಿದ್ದಾರೆ ಎಂದು ವರದಿಯಾಗಿದೆ. ವಿಜಯಪುರವೊಂದರಲ್ಲಿಯೇ ಈ ಪ್ರಮಾಣದಲ್ಲಿ ಅಕ್ರಮ ವಲಸಿಗರಿದ್ದರೆ ರಾಜ್ಯಾದ್ಯಂತ ಲಕ್ಷಾಂತರ ಜನ ನೆಲೆಸಿರಬಹುದು. ಮಾದಕದ್ರವ್ಯಗಳನ್ನು ನೀಡಿ ಯುವಕರನ್ನು ಹಾದಿ ತಪ್ಪಿಸುತ್ತಿದ್ದಾರೆ. ಅಂತವರನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಅಕ್ರಮ ವಲಸಿಗರಿಂದ ರಾಷ್ಟ್ರಿಯ ಭದ್ರತೆಗೆ ಅಪಾಯವಿದೆ. ಬಾಂಗ್ಲಾದವರು ಸಾಕಷ್ಟು ಅಕ್ರಮವಾಗಿ ನೆಲೆಸಿದ್ದಾರೆ. ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ. ಕಾಫಿ ಎಸ್ಟೇಟ್‌ಗಳು, ಹೋಟೆಲ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಲಕ್ಷಾಂತರ ಮಂದಿ ರಾಜ್ಯದಲ್ಲಿ ನೆಲೆಸಿರುವ ಸಾಧ್ಯತೆಯಿದೆ. ಇದು ಗಂಭೀರವಾದ ವಿಚಾರ.

-ಸುನೀಲ್‌ಕುಮಾರ್, ಶಾಸಕ

### ಪರಿಷತ್ ಕಲಾಪದಲ್ಲಿ ಸರಕಾರಕ್ಕೆ ಬಿಜೆಪಿ ಸದಸ್ಯರ ಆಗ್ರಹ

# ಬಾಗಲಕೋಟೆ ವಿವಿ ಕಾಲೇಜು ವಿಭಾಗ ಬೇಡ

**ವಿಧಾನ ಪರಿಷತ್:** ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯ ಕಾಲೇಜುಗಳನ್ನು ಮಂಡ್ಯ ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಹಂಚಿಕೆ ಮಾಡಬಾರದು ಎಂದು ಬಿಜೆಪಿ ಸದಸ್ಯರು ಸರಕಾರಕ್ಕೆ ಆಗ್ರಹಿಸಿದರು.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಸದಸ್ಯರಾದ ತಳವಾರ ಸಾಬಣ್ಣ, ಪಿ.ಎಚ್.ಪೂಜಾರ್ ಈ ಬಗ್ಗೆ ಪ್ರಶ್ನೆ ಮಾಡಿದರು. ಬಾಗಲಕೋಟೆ ತೋಟಗಾರಿಕೆ ವಿವಿಯನ್ನು ಮುಚ್ಚುವ ಹುನ್ನಾರವನ್ನು ಸರಕಾರ ಮಾಡು ತ್ತಿದೆ. ಯಾವುದೇ ಕಾರಣಕ್ಕೂ ಬಾಗಲಕೋಟೆ ತೋಟಗಾರಿಕೆ ವಿವಿ ಮುಚ್ಚಬಾರದು. ರಾಜ್ಯದ ಅತಿ ದೊಡ್ಡ ತೋಟಗಾರಿಕೆ ವಿವಿ ಇದು. 18 ವರ್ಷಗಳಿಂದ ವಿವಿ ಉತ್ತಮ ಕೆಲಸ ಮಾಡುತ್ತಿದೆ. ಈ ವಿಶ್ವವಿದ್ಯಾಲಯ ಮುಚ್ಚಬಾರದು ಎಂದರು.

ಬಾಗಲಕೋಟೆ ವಿವಿಯಲ್ಲಿ ಈಗ ಇರುವ ತೋಟಗಾರಿಕೆ ಕಾಲೇಜುಗಳನ್ನು ಮಂಡ್ಯ ವಿವಿಗೆ ಸೇರ್ಪಡೆ ಮಾಡಲಾಗುತ್ತಿದೆ. ಸರಕಾರದ ಈ ವ್ಯವಸ್ಥೆ ಸರಿಯಲ್ಲ. ಬಾಗಲಕೋಟೆ ತೋಟಗಾರಿಕೆ ವಿವಿ ಕಾಲೇಜುಗಳನ್ನು ಬೇರೆ ವಿವಿಗೆ(ಮಂಡ್ಯ ವಿವಿ) ಹಂಚಿಕೆ ಮಾಡಬಾರದು. ತೋಟಗಾರಿಕೆ ವಿವಿಯನ್ನು ವಿಭಾಗ ಮಾಡುವುದು ರೈತರಿಗೆ ಬರೆಯುವ ಮರಣ ಶಾಸನ ಆಗಿದೆ. ತೋಟಗಾರಿಕೆ ವಿವಿ ಕಾಲೇಜನ್ನು ಮಂಡ್ಯ ವಿವಿಗೆ ಸೇರ್ಪಡೆ ಮಾಡುವುದಕ್ಕೆ ನಮ್ಮ ವಿರೋಧ ಇದೆ ಎಂದು ತಿಳಿಸಿದರು.

### ಸಚಿವರ ಉತ್ತರಕ್ಕೆ ಬಿಜೆಪಿ ಸದಸ್ಯರ ಕಿಡಿ

ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಮಾತನಾಡಿ, ಮಂಡ್ಯದಲ್ಲಿ ತೋಟಗಾರಿಕೆ ವಿವಿ ಮಾಡಲು ಜನಪ್ರತಿನಿಧಿಗಳ ಒತ್ತಡಕ್ಕೆ ಮಣಿದು ಪ್ರಾರಂಭ ಮಾಡಲಾಗುತ್ತಿದೆ. ಜನಪ್ರತಿನಿಧಿಗಳ ಬೇಡಿಕೆ ಜಾಸ್ತಿಯಿತ್ತು. ಬಾಗಲಕೋಟೆ ದೂರ ಆಗುತ್ತದೆ. ಮಂಡ್ಯದಲ್ಲಿ ವಿವಿ ಮಾಡಿ ಎಂದು ಸಿಎಂಗೆ ಮನವಿ ಮಾಡಿದ್ದರು. ಅದರಂತೆ ಬಾಗಲಕೋಟೆ ವಿವಿಯ ಕೆಲವು ಕಾಲೇಜುಗಳನ್ನು ಮಂಡ್ಯ ವಿವಿಗೆ ಸೇರ್ಪಡೆ ಮಾಡುವ ತೀರ್ಮಾನ ಮಾಡಿ ಕ್ಯಾಬಿನೆಟ್‌ನಲ್ಲಿ ಒಪ್ಪಿಗೆ ಕೊಡಲಾಗಿದೆ ಎಂದು ಹೇಳಿದರು. ಸಚಿವ ಉತ್ತರಕ್ಕೆ ಬಿಜೆಪಿ ಸದಸ್ಯರು ವ್ಯಾಪಕವಾಗಿ ವಿರೋಧ ವ್ಯಕ್ತಪಡಿಸಿದರು.

# ಸರಕಾರಿ ನೌಕರನಲ್ಲ ವಾಟರ್‌ಮ್ಯಾನ್

**ವಿಧಾನ ಪರಿಷತ್:** ರಾಜ್ಯದ ಎಲ್ಲಾ ಮಹಾನಗರ ವ್ಯಾಪ್ತಿಯ ಜಲಮಂಡಳಿಗಳಲ್ಲಿ 13 ಸಾವಿರ ಮಂದಿ ವಾಟರ್‌ಮ್ಯಾನ್‌ಗಳಿದ್ದು, ಇವರನ್ನು ಸರಕಾರಿ ನೌಕರರನ್ನಾಗಿ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ ಎಂದು ನಗರಾಭಿವೃದ್ಧಿ ಇಲಾಖೆ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ.

ಹೊರಗುತ್ತಿಗೆ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ನೀರು ಸರಬರಾಜು ನೌಕರರನ್ನು ಕಾಯಂಗೊಳಿಸಲು ಕಾನೂನಿನಲ್ಲಿ ಅವಕಾಶವಿಲ್ಲ. ಕಾರ್ಮಿಕ ಇಲಾಖೆ ನಿಗದಿಪಡಿಸಿದ ಕನಿಷ್ಟ ವೇತನ ನೀಡಲಾಗುತ್ತಿದೆ. ಅದೇ ರೀತಿ ಬಿಬಿಎಂಪಿ ಸೇರಿದಂತೆ ರಾಜ್ಯದಲ್ಲಿ 35 ಸಾವಿರ ಪೌರಕಾರ್ಮಿಕರಿದ್ದಾರೆ. ಸರಕಾರಿ ನೌಕರರಂತೆಯೇ ಪರಿಗಣಿಸಲಾಗುತ್ತಿದೆ ಸರಕಾರದಿಂದ ವಿಶೇಷ ಅನುದಾನ ನೀಡಲಾಗಿದೆ ಎಂದು 'ಪರಿಷತ್ ಕಲಾಪದಲ್ಲಿ ಬಿಜೆಪಿ ಸದಸ್ಯ ಡಿ.ಎಸ್.ಅರುಣ್ ಪ್ರಶ್ನೆಗೆ ಉತ್ತರಿಸಿದರು. ಬಿಬಿಎಂಪಿ ಹೊರತುಪಡಿಸಿ ಜಲಮಂಡಳಿ ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ 1504 ವಾಟರ್‌ಮ್ಯಾನ್‌ಗಳಿದ್ದು ಇವರ ಕೆಲಸ ಕಾಯಂ ಕೋರಿ ಪೌರಾಡಳಿತ ನಿರ್ದೇಶನಾಲಯ ಪ್ರಸ್ತಾವನೆ ಸಲ್ಲಿಸಿತ್ತು.

**ವಿಶ್ವವಾಣಿ**

## ಸಂಪಾದಕೀಯ

# ತನಿಖೆ ನಿಷ್ಪಕ್ಷಪಾತವಾಗಿ ನಡೆಯಲಿ

ಬಂಗಾರದ ಬೇಟೆ' ಭಾರಿ ಸದ್ದು ಮಾಡುತ್ತಿದೆ. ದುಬೈನಿಂದ ಭಾರತಕ್ಕೆ ಬರೋಬ್ಬರಿ 14.8 ಕೆ.ಜಿ.ಯಷ್ಟು ಚಿನ್ನವನ್ನು ಕಳ್ಳಸಾಗಣೆ ಮಾಡಿದ ಪ್ರಕರಣದಲ್ಲಿ ಚಿತ್ರನಟಿ ರನ್ಯಾ ರಾವ್ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಳಗಾಗಿದ್ದಾರೆ. ತನಿಖಾಧಿಕಾರಿಗಳು ತೀವ್ರ ವಿಚಾರಣೆಗೆ ಒಳಪಡಿಸಿದ ನಂತರ, ಈಕೆ ಭೂಗತ ಲೋಕದ ಚಿನ್ನದ ಕಳ್ಳಸಾಗಣೆ ಜಾಲದಲ್ಲಿ ಸಕ್ರಿಯರಾಗಿದ್ದ ಮಾಹಿತಿ ಬಯಲಾಗಿದೆ. ಮಾತ್ರವಲ್ಲದೆ, ಮೂರೂ ರಾಜಕೀಯ ಪಕ್ಷಗಳ ಒಂದಷ್ಟು ಪ್ರಭಾವಿ ನಾಯಕರ ಹಾಗೂ ಕೆಲ ಅಧಿಕಾರಿಗಳ ಹೆಸರುಗಳೂ ಆರೋಪಿಯೊಂದಿಗೆ ತಳುಕುಹಾಕಿಕೊಂಡಿರುವುದು ಬಹಿರಂಗವಾಗಿದೆ. ಅಲ್ಲಿಗೆ, ಈ 'ಬಂಗಾರದ ಬೇಟೆ'ಗೆ ಒತ್ತಾಸೆಯಾಗಿ ನಿಂತವರಲ್ಲಿ ಘಟಾನುಘಟಿಗಳೂ ಸೇರಿಕೊಂಡಿದ್ದಾರೆ ಎಂದಾಯಿತು. ಇಂಥ ಮಾಹಿತಿಗಳು ತಮ್ಮ ಅವಗಾಹನೆಗೆ ಬಂದಾಗಲೆಲ್ಲ, ಸಂಬಂಧಿತ ತನಿಖಾಕಾರ್ಯವು ನಿಷ್ಪಕ್ಷಪಾತವಾಗಿ ನಡೆಯುವುದರ ಕುರಿತು ಸಾರ್ವಜನಿಕರು ಅನುಮಾನವನ್ನು ವ್ಯಕ್ತಪಡಿಸುವುದಿದೆ; ಕಾರಣ ಇಂಥ ಘಟಾನುಘಟಿಗಳು ತಮ್ಮ ಕಬಂಧಬಾಹುವನ್ನು ಚಾಚಿ ವಾಮಮಾರ್ಗದಲ್ಲಿ ಪ್ರಭಾವ ಬೀರುವ ಮೂಲಕ ತನಿಖೆಯ ದಿಕ್ಕು ತಪ್ಪಿಸಬಹುದು ಎಂಬ ಗ್ರಹಿಕೆ. ಇದುವರೆಗೆ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಆಗಿಹೋಗಿರುವ ಸಾಕಷ್ಟು ಹಗರಣ/ ಪ್ರಕರಣಗಳಲ್ಲಿ ಇಂಥ ಹಸ್ತಕ್ಷೇಪ ನಡೆದು ತನಿಖಾ ಕಾರ್ಯವು ಬಕಾಬೋರಲು ಬಿದ್ದಿದ್ದನ್ನು ನೋಡಿರುವ ಶ್ರೀಸಾಮಾನ್ಯರು ಇಂಥದೊಂದು ಅನುಮಾನವನ್ನು ವ್ಯಕ್ತಪಡಿಸುವುದು ಸಹಜವೇ. ಹೀಗಾಗಿ, ಈ ಪ್ರಕರಣದ ತನಿಖೆಯಲ್ಲಿ ತೊಡಗಿಸಿಕೊಂಡಿರುವ ಅಧಿಕಾರಿಗಳು ಇಂಥ ಯಾವ ಅಪಸವ್ಯಗಳಿಗೂ ಆಸ್ಪದ ಸಿಗದಂತೆ ನೋಡಿಕೊಳ್ಳಬೇಕಿದೆ, ತನ್ಮೂಲಕ ತಮ್ಮ ಋಜುತ್ವವನ್ನು ಸಾಬೀತುಪಡಿಸಬೇಕಿದೆ. ಚಿನ್ನದ ಕಳ್ಳಸಾಗಣೆಯ ಈ ಪ್ರಕರಣದಲ್ಲಿ ಕೈಜೋಡಿಸಿರುವವರು ಅದೆಷ್ಟೇ ಶಕ್ತಿಶಾಲಿಗಳಾಗಿರಲಿ, ಪ್ರಭಾವಿಗಳಾಗಿರಲಿ, ಅವರ ತಪ್ಪು ಸಾಬೀತಾಗಿ ಸೂಕ್ತ ಕಾನೂನು ಕ್ರಮಕ್ಕೆ ಒಳಗಾಗುವಂತೆ ಆಗಬೇಕು. ಆಗ ಮಾತ್ರವೇ ಇಂಥ ತನಿಖೆಗೂ ಸಾರ್ಥಕ್ಯ ದಕ್ಕುತ್ತದೆ. ಒಂದು ವೇಳೆ, ಇಂಥ ಅಕ್ರಮಕ್ಕೆ ಕೈಜೋಡಿಸಿದವರು ಪ್ರಭಾವ ಬೀರಿ ಬಚಾವಾಗಿಬಿಟ್ಟಲ್ಲಿ, ಸಾರ್ವಜನಿಕರು ಒಂದಿಡೀ ವ್ಯವಸ್ಥೆಯ ಕುರಿತೇ ಹೇವರಿಕೆ ಪಟ್ಟುಕೊಳ್ಳುವಂಥ ಸ್ಥಿತಿ ನಿರ್ಮಾಣವಾಗುತ್ತದೆ. ಹಾಗಾಗದಿರಲಿ...

## ಸೊಂಪಾದಕೀಯ

# 'ಬೆಲೆ'ಗೆ ಬಿದ್ದ ಮೀನು

ಹಕ್ಕಿ ಜ್ವರದ ಪರಿಣಾಮವನ್ನು ಮೊನ್ನೆ ತಾನೇ ನೀವು ಕೇಳಿದ್ದೀರಿ. ಹಕ್ಕಿಗೆ ಜ್ವರ ಬಂದ್ರೆ, ಕೋಳಿಗೆ ಬರೆ ಹಾಕಿದಂತೆ ಆಗಿ ಕೋಳಿ ತಿನ್ನುವವರಿಗೆ ಗತಿ ಇಲ್ಲದಂತೆ ಆಗಿದೆ ಅನ್ನೋದು ಗೊತ್ತೇ ಇದೆ. ಆದರೆ ಇದು ಇನ್‌ಡೈರೆಕ್ಟ್ ಆಗಿ ಮೀನಿನ ಬೆಲೆ ಜಾಸ್ತಿ ಆಗಲು ಕಾರಣ ಆಗಿದೆ. ಹಕ್ಕಿ ಜ್ವರ ಬಂದಾಕ್ಷಣ ಕೋಳಿ ತಿನ್ನೋದನ್ನು ನಿಲ್ಲಿಸುವವರ ಗಮನ ತಕ್ಷಣಕ್ಕೆ ಹೋಗೋದು ಕುರಿ ಮಾಂಸದ ಕಡೆಗೆ. ಆದರೆ ಕುರಿ ಮಾಂಸ ಕೆ.ಜಿ.ಗೆ 800 ರುಪಾಯಿಗಳವರೆಗೆ ಇರೋದ್ರಿಂದ ಸಹಜವಾಗಿ ಜನ ಮಟನ್ ಖರೀದಿಸಲು ಹಿಂದೇಟು ಹಾಕುತ್ತಾರೆ. ಹಾಗಾಗಿ ಈಗ ಮಟನ್ ಖರೀದಿಗೂ ಏಟು ಬಿದ್ದಿದ್ದು ಜನ ಈಗ ಮೀನಿನ ಮೊರೆ ಹೋಗಿದ್ದಾರಂತೆ. ಪರಿಣಾಮ? ಇನ್ನೇನಾಗುತ್ತೆ? ಮೀನಿನ ಬೆಲೆಯೂ ಜಾಸ್ತಿ ಆಗುತ್ತಿದೆ. ಮೀನು ತಿಂದರೆ ಬುದ್ಧಿ ಬೆಳೆಯುತ್ತದೆ, ಮಿದುಳು ಚುರುಕಾಗುತ್ತದೆ ಅನ್ನುತ್ತಾರೆ. ಆದರೆ ನಮ್ಮ ಜನ ಈಗ ಮೀನು ತಿನ್ನುವ ಮೊದಲೇ ಬುದ್ಧಿವಂತರಾಗಿ, ಮಿದುಳು ಓಡಿಸಿ ಕೋಳಿ, ಕುರಿ ಬಿಟ್ಟು ಮೀನಿನತ್ತ ಮುಖ ಮಾಡಿದ್ದಾರೆ. ಹಾಗಾಗಿ ಹಕ್ಕಿ ಜ್ವರ ಮತ್ತು ದುಬಾರಿ ಮಟನ್ ಕಾಲದಲ್ಲಿ ಮೀನು ಬಲೆಗೆ ಬಿತ್ತು ಎನ್ನಬಹುದು. ಅದರ ಜತೆಗೆ ಮಟನ್‌ನ ಬೆಲೆಯಿಂದಾಗಿ ಕೂಡಾ ಮೀನಿಗೆ ಬೇಡಿಕೆ ಬಂದಿರೋದ್ರಿಂದ ಮಟನ್‌ನ 'ಬೆಲೆ'ಗೆ ಬಿದ್ದ ಮೀನು ಎನ್ನಲೂಬಹುದು. ಹೇಳಿ ಕೇಳಿ ಮೀನಿನಲ್ಲಿ ಹೆಚ್ಚು ಆರೋಗ್ಯಕರ ವಿಟಮಿನ್‌ಗಳು ಇರುತ್ತವೆ ಅನ್ನೋದು ಪ್ರತೀತಿ. ಆದರೆ ಈಗ ಮಟನ್ ಖರೀದಿ ಮಾಡಲು ವಿಟಮಿನ್ 'ಎಂ'ನ ಕೊರತೆ ಇರೋದ್ರಿಂದ ಜನ ಮೀನಿನ ಮೊರೆ ಹೋಗಿದ್ದಾರೆ. ಈ ಕಾರಣದಿಂದಾಗಿ ಈಗ ದಾವಣಗೆರೆಯಂಥ ಬಯಲುಸೀಮೆಯಲ್ಲಿ ಪ್ರತಿನಿತ್ಯ 10 ಟನ್ ಮೀನು ಖಾಲಿ ಆಗುತ್ತಿದೆಯಂತೆ. ಜತೆಗೆ ಎಲ್ಲ ತಳಿಯ ಮೀನುಗಳ ಬೆಲೆಯೂ ಜಾಸ್ತಿ ಆಗಿದೆ. ಒಟ್ಟಿನಲ್ಲಿ ಕೋಳಿ ಮತ್ತು ಕುರಿ ಮಾಂಸದಿಂದ ಟೆಂಪರರಿ ಬ್ರೇಕ್ ತೆಗೆದುಕೊಂಡಿರುವ ಜನ ಈಗ ಫಿಶ್ ತಿನ್ನುತ್ತಾ, ಅತಿ ಬುದ್ಧಿವಂತರಂತೆ ಹಕ್ಕಿ ಜ್ವರಕ್ಕೆ ನಮ್ಮ ವಿಜ್ಞಾನಿಗಳು ವ್ಯಾಕ್ಸಿನ್ ಕಂಡುಹಿಡಿಯುತ್ತಾರಾ ಅಂತ ಕಾಯ್ತಾ ಕೂತಿದ್ದಾರೆ.

## ಸಂಪಾದಕರ ಸದ್ಯಶೋಧನೆ

# ಚಪ್ಪಲಿ ಬಿಟ್ಟು ಒಳಬನ್ನಿ

ಎಲ್ಲ ದೇಶಗಳಲ್ಲೂ ಕೆಲವು ರೀತಿ-ರಿವಾಜುಗಳಿರುತ್ತವೆ. ಅಲ್ಲಿ ಅವುಗಳನ್ನು ಪಾಲಿಸುವುದು ಕಡ್ಡಾಯ. ಆ ದೇಶಗಳಿಗೆ ಹೋಗುವ ಮುನ್ನ ಅಂಥ ರೀತಿ-ರಿವಾಜುಗಳನ್ನು ತಿಳಿದುಕೊಳ್ಳುವುದು ಕೂಡ ಅಷ್ಟೇ ಮುಖ್ಯ. ನಾನು ಜಪಾನಿಗೆ ಹೋಗುವ ಮುನ್ನ ಅಂಥ ರೀತಿ-ರಿವಾಜುಗಳು, ಕಟ್ಟುಪಾಡುಗಳು ಇವೆಯಾ ಎಂದು ತಡಕಾಡುತ್ತಿದ್ದೆ. ಜಪಾನಿನಲ್ಲಿ ಬಹಳ ವರ್ಷಗಳ ಕಾಲ ವಾಸಿಸಿದವರ ಜತೆ ಮಾತಾಡಿದಾಗ ಗೊತ್ತಾಗಿದ್ದೇನೆಂದರೆ, ಜಪಾನಿಯರು ಇಂಥ ವಿಷಯಗಳಲ್ಲಿ ಬಹಳ ಸೂಕ್ಷ್ಮ ಮನಸ್ಸಿನವರು. ಅವರು ಯಾರನ್ನಾದರೂ ಮನೆಗೆ ಆಹ್ವಾನಿಸಿದರೆ, ಅದು ದೊಡ್ಡ ಗೌರವ ಎಂದರ್ಥ. ಯಾರದ್ದಾದರೂ ಮನೆಗೆ ಹೋದಾಗ, ಬಾಗಿಲ ಹೊರಗೆ ಚಪ್ಪಲಿ ಅಥವಾ ಶೂಗಳನ್ನು ಕಳಚಿ ಇಡಬೇಕು. ಯಾವ ಕಾರಣಕ್ಕೂ ಚಪ್ಪಲಿಗಳನ್ನು ಧರಿಸಿ ಮನೆಯೊಳಗೆ ಹೋಗಲೇಬಾರದು. ಹಾಗೆ ಹೋದರೆ ಮನೆಯವರಿಗೆ ಅಗೌರವ ಸೂಚಿಸಿದಂತೆ. ಸಾಮಾನ್ಯವಾಗಿ ಎಲ್ಲರ ಮನೆಯ ಬಾಗಿಲ ಹೊರಗಡೆ ಅತಿಥಿಗಳಿಗಾಗಿಯೇ ಪ್ರತ್ಯೇಕ ಚಪ್ಪಲಿಗಳನ್ನು ಇಟ್ಟಿರುತ್ತಾರೆ. ಹೊರಗಿನಿಂದ ಬಂದವರು ತಮ್ಮ ಶೂಗಳನ್ನು ಅಲ್ಲಿಯೇ ಬಿಡಬೇಕು ಎಂಬುದರ ಇಂಗಿತವದು. ಜಪಾನಿಯರು ಈ ವಿಷಯದಲ್ಲಿ ಸ್ವಲ್ಪವೂ ರಾಜಿ ಮಾಡಿಕೊಳ್ಳುವುದಿಲ್ಲ. ಜಪಾನಿನಲ್ಲಿ ರಸ್ತೆ ಹಾಗೂ ಸಾರ್ವಜನಿಕ ಸ್ಥಳಗಳು ಅತ್ಯಂತ ಸ್ವಚ್ಛವಾಗಿದ್ದರೂ ಹೊರಗಿನಿಂದ ಬರುವವರು ಚಪ್ಪಲಿಗಳನ್ನು ಮನೆಯ ಹೊರಗೇ ಬಿಟ್ಟು ಬರಬೇಕು ಎಂದು ಅಪೇಕ್ಷಿಸುತ್ತಾರೆ. ಹೊರಗಿನಿಂದ ಬಂದವರ ಶೂ ಎಷ್ಟೇ ಸ್ವಚ್ಛವಾಗಿರಲಿ, ಅದನ್ನು ಮನೆಯೊಳಗೆ ಧರಿಸಿ ಬರುವಂತಿಲ್ಲ. ಸಾಮಾನ್ಯವಾಗಿ, ಜಗತ್ತಿನ ಬೇರೆ ದೇಶಗಳಲ್ಲಿ, ನಾವು ಯಾರನ್ನಾದರೂ ಭೇಟಿಯಾದಾಗ ಅಥವಾ ನಿರ್ಗಮಿಸುವಾಗ ಕೈಕುಲುಕುವುದು ಸಹಜ. ಆದರೆ ಜಪಾನಿಯರು ಈ ವಿಷಯದಲ್ಲಿ ಭಲೇ ಸೂಕ್ಷ್ಮ. ಅವರು ಎಲ್ಲರಿಗೂ ಕೈ ಚಾಚುವುದಿಲ್ಲ. ಎದುರಿಗಿರುವ ವ್ಯಕ್ತಿಯ ಹಾವಭಾವ, ವ್ಯಕ್ತಿತ್ವ, ಸ್ವಚ್ಛತೆಯನ್ನು ಸೂಕ್ಷ್ಮವಾಗಿ ಗಮನಿಸಿ ಕೈ ಕುಲುಕುತ್ತಾರೆ. ಹೀಗಾಗಿ ಜಪಾನಿಯರೊಂದಿಗೆ ಏಕಾಏಕಿ ಹಸ್ತಲಾಘವಕ್ಕೆ ಮುಂದಾಗಬಾರದು. ಹೀಗಿರುವಾಗ ತಬ್ಬಿಕೊಳ್ಳುವಾಗ ಇನ್ನೂ ಯೋಚಿಸಬೇಕು. ಅದರ ಬದಲು ನಡುಬಗ್ಗಿಸಿ, ದೇಹವನ್ನು ಬಾಗಿಸಿ, ನಮಸ್ಕಾರ ಮಾಡುವುದು ಒಳ್ಳೆಯದು. ಅದನ್ನು ಅವರೂ ಇಷ್ಟಪಡುತ್ತಾರೆ. ಜಪಾನಿನಲ್ಲಿ ನಾನು ಗಮನಿಸಿದ ಇನ್ನೊಂದು ಸಂಗತಿ ಎಂದರೆ, ಅವರು ಯಾವುದೇ ಕಾರಣಕ್ಕೂ ಕಸವನ್ನು ಎಲ್ಲಿಯೂ (ಬೇಕಾಬಿಟ್ಟಿ) ಬಿಸಾಡುವುದಿಲ್ಲ. ಒಂದು ವೇಳೆ ಸುತ್ತಮುತ್ತ ಕಸದ ಬುಟ್ಟಿಗಳು ಇಲ್ಲದಿದ್ದರೂ, ಅದನ್ನು ಎಸೆಯುವುದಿಲ್ಲ. ಬೇರೆಯವರಿಂದಲೂ ಅದನ್ನೇ ಬಯಸುತ್ತಾರೆ. ಅಂಥ ಪ್ರಸಂಗ ಬಂದಾಗ ಕಸವನ್ನು ನಮ್ಮ ಬ್ಯಾಗಿನಲ್ಲೋ, ಕಿಸೆಯಲ್ಲೋ ಇಟ್ಟುಕೊಳ್ಳಬೇಕು ಎಂದು ಬಯಸುತ್ತಾರೆ. ಮನೆಗೆ ಬಂದು ಅದನ್ನು ಕಸದ ಬುಟ್ಟಿಗೆ ಹಾಕಬೇಕೆಂದು ಅಪೇಕ್ಷಿಸುತ್ತಾರೆ. ನೀವೇನಾದರೂ ಅಪ್ಪಿ-ತಪ್ಪಿ ಕಸವನ್ನು ಎಸೆದಿದ್ದನ್ನು ಕಂಡರೆ ಮುಲಾಜಿಲ್ಲದೇ ನಿಮ್ಮ ಮುಖಕ್ಕೆ ಹೇಳುತ್ತಾರೆ. ಚಿಪ್ಸ್, ಚಾಕಲೇಟ್, ಬಿಸ್ಕತ್ ತಿಂದು ಅದರ ಪ್ಯಾಕೆಟನ್ನು ಕಿಸೆಯೊಳಗಿಟ್ಟುಕೊಳ್ಳುವುದು ವಾಸಿ. ನೀವು ಜಪಾನಿನಲ್ಲಿ ಆಫೀಸಿನಲ್ಲೋ, ಪಾರ್ಟಿಯಲ್ಲೋ, ಸ್ನೇಹಿತರ ಜತೆಗೆ ಮಾತಾಡುವಾಗ ಸಾಧ್ಯವಾದಷ್ಟರ ಮಟ್ಟಿಗೆ ಬಿರುಸಿನ ಚರ್ಚೆ, ವಾದ-ವಿವಾದದಲ್ಲಿ ತೊಡಗುವುದರಿಂದ ದೂರವಿರುವುದು ವಾಸಿ. ಯಾವುದೇ ವಿಷಯದ ಬಗ್ಗೆ ಅತ್ಯಂತ ಕಠಿಣವಾದ ನಿಲುವು, ತೀಕ್ಷ್ಣ ಅಭಿಪ್ರಾಯ ಹೊಂದುವುದನ್ನು ಜಪಾನಿಯರು ಇಷ್ಟಪಡುವುದಿಲ್ಲ. ನನ್ನ ವಾದವೇ ಸರಿ, ನಾನು ಹೇಳಿದ್ದೇ ಸೈ ಎನ್ನುವ ಮನೋಭಾವ ನಿಮ್ಮದಾಗಿದ್ದರೆ, ನಿಶ್ಚಿತವಾಗಿಯೂ ನಿಮ್ಮನ್ನು ಮುಜುಗರಕ್ಕೀಡುಮಾಡಿಕೊಳ್ಳುತ್ತೀರಿ. ಜಪಾನಿಯರು ತಮ್ಮ ರಸ್ತೆ, ಕಾಲುದಾರಿ ಹಾಗೂ ಪಾದಚಾರಿ ಮಾರ್ಗವನ್ನು ಅತ್ಯಂತ ಸ್ವಚ್ಛವಾಗಿ ಇಟ್ಟುಕೊಂಡಿರುತ್ತಾರೆ. ನಡೆಯುತ್ತಾ ಆಹಾರ ಸೇವಿಸುವುದನ್ನು, ಕಾಫಿ ಅಥವಾ ಸಾಫ್ಟ್ ಡ್ರಿಂಕ್ ಕುಡಿಯುವುದನ್ನು ಅವರು ಇಷ್ಟಪಡುವುದಿಲ್ಲ. ನಡೆದಾಡುತ್ತಾ ಆಹಾರ ಸೇವಿಸುವಾಗ, ಕಾಫಿ ಕುಡಿಯುವಾಗ ಸ್ವಾಭಾವಿಕವಾಗಿ ಅದು ರಸ್ತೆಯ ಮೇಲೆ ಚೆಲ್ಲುವ ಸಾಧ್ಯತೆ ಇರುತ್ತದೆ. ಇದರಿಂದ ರಸ್ತೆ ಗಲೀಜಾಗುವುದನ್ನು ಅವರು ಇಷ್ಟಪಡುವುದಿಲ್ಲ. ಹಾಗೆಯೇ ಸಾರ್ವಜನಿಕ ಸ್ಥಳಗಳಲ್ಲಿ ಸೀನುವುದು, ಉಗುಳುವುದು, ಜೋರಾಗಿ ಮಾತಾಡುವುದು, ಹಾಡುವುದು, ಶಿಳ್ಳೆ ಹೊಡೆಯುವುದನ್ನು ಅವರು ಇಷ್ಟಪಡುವುದಿಲ್ಲ. ಜಪಾನಿನಲ್ಲಿದ್ದಾಗ ಈ ಸಂಗತಿಗಳನ್ನು ಆಚರಿಸುವುದು ಕಡ್ಡಾಯ.

# ಮಗುವಿನ ಜೀವನಚರಿತ್ರೆಯನ್ನು ಬರೆದ ಪ್ರಾತಃಸ್ಮರಣೀಯರು

**ಚಾರ್ಲ್ಸ್ ಡಾರ್ವಿನ್ ಮಾಡಿದ ಮೊದಲ ಅಧ್ಯಯನದ ಬಹು ದೊಡ್ಡ ಲಾಭವೆಂದರೆ, ಮುಂದೆ ಅನೇಕ ವಿಜ್ಞಾನಿಗಳು ಮಕ್ಕಳ ಬೆಳವಣಿಗೆಯ ಮೇಲೆ ಆಸಕ್ತಿಯನ್ನು ತಳೆದರು. ವೈಜ್ಞಾನಿಕ ಅಧ್ಯಯನಗಳನ್ನು ನಡೆಸಿದರು ಹಾಗೂ ಮಕ್ಕಳ ರಮ್ಯ ಜಗತ್ತಿನ ಅನಾವರಣವನ್ನು ಮಾಡಿದರು. ಜರ್ಮನಿಯ ಫಿಸಿಯಾಲಜಿಸ್ಟ್ ವಿಲ್ಹೆಲ್ಮ್ ಪ್ರೇಯರ್ ಡಾರ್ವಿನ್ ಅಧ್ಯಯನದಿಂದ ಪ್ರೇರಿತನಾಗಿದ್ದು ಇದಕ್ಕೆ ಸಾಕ್ಷಿ.**



ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ

vveditoped@gmail.com

ಸಮುದ್ರದಲ್ಲಿ ಅಮ್ಮ ಡಾಲ್ಫಿನ್ ಮಗುವಿಗೆ ಜನ್ಮವನ್ನು ನೀಡಿದ ಕೂಡಲೇ ಮರಿ ಡಾಲ್ಫಿನ್ ಈಜಬೇಕು. ಈಜಲಿಲ್ಲವೆಂದರೆ ಅದು ಆ ಕ್ಷಣದಲ್ಲಿಯೇ ಮುಳುಗಿ ಸಾಯುತ್ತದೆ. ಒಂಟೆಯು ಮರಿಯನ್ನು ಹಾಕಿದಾಗ, ಆ ಮರಿಯು 30 ನಿಮಿಷಗಳ ಒಳಗೆ ಎದ್ದು ನಡೆಯಬೇಕು. ಕುದುರೆಯ ಹಾಗೂ ಜೀಬ್ರಾದ ಮರಿಗಳು ಹುಟ್ಟಿದ ಸುಮಾರು 45 ನಿಮಿಷಗಳಲ್ಲಿ ಎದ್ದು ನಿಂತು ಅಡ್ಡಾದಿಡ್ಡಿ ಹೆಜ್ಜೆಯನ್ನಿಡುತ್ತಾ ನಡೆಯುವುದನ್ನು ಕಲಿಯಬೇಕು. ಜಿರಾಫೆಯು ಮರಿಯನ್ನು ಹಾಕಿದ 60 ನಿಮಿಷಗಳಲ್ಲಿ ಅದು ಎದ್ದು ನಡೆಯಲಿಲ್ಲವೆಂದರೆ, ಅಮ್ಮ ಜಿರಾಫೆಯು ಅದನ್ನು ಒದ್ದು ಏಳಿಸುತ್ತದೆ. ಎದ್ದು ನಿಂತು ನಡೆಯುವಂತೆ ಪ್ರೋತ್ಸಾಹಿಸುತ್ತದೆ. ಏಕೆಂದರೆ ಎಳೆಯ ಜಿರಾಫೆ ಮರಿಯನ್ನು ತಿನ್ನಲು ಸಿಂಹವೇ ಮುಂತಾದ ಮಾಂಸಾಹಾರಿ ಪ್ರಾಣಿಗಳು ಹೊಂಚು ಹಾಕಿಕೊಂಡಿರುತ್ತವೆ. ಆದರೆ ಮನುಷ್ಯನ ಮಗುವು ಮಾತ್ರ ಎದ್ದು ನಿಲ್ಲಲು ಸರಿ ಸುಮಾರು ಒಂದು ವರ್ಷವನ್ನು ತೆಗೆದುಕೊಳ್ಳುತ್ತದಲ್ಲ ಏಕೆ? ಡಾಲ್ಫಿನ್ ಮರಿ ಹುಟ್ಟಿದ ಕೂಡಲೇ ಈಜಬೇಕು ಎನ್ನುವುದನ್ನು ಯಾರು ಹೇಳಿಕೊಟ್ಟರು? ಈಜುವಿಕೆಯು ಆನುವಂಶಿಕವಾಗಿ ಅಮ್ಮ ಮತ್ತು ಅಪ್ಪ ಡಾಲ್ಫಿನ್‌ಗಳಿಂದ ಮರಿಗಳಿಗೆ ಹರಿದು ಬಂದಿದೆ ಎನ್ನುವುದಾದರೆ, ನಮ್ಮ ಕಲಿಕೆಯಲ್ಲಿ ಆನುವಂಶಿಕತೆಯ ಪಾಲೆಷ್ಟು ಹಾಗೂ ಪರಿಸರದ ಪಾಲೆಷ್ಟು? ಇದು ತುಂಬಾ ಕುತೂಹಲಕರವಾದ ಪ್ರಶ್ನೆಯಾಗಿದೆ.

ಚಾರ್ಲ್ಸ್ ಡಾರ್ವಿನ್ (1809–1882) ಈ ವಿಷಯದಲ್ಲಿ ಆಸಕ್ತಿಯನ್ನು ವಹಿಸಿದ. ಒಂದು ಮಗುವು ಹುಟ್ಟಿದ ಕ್ಷಣದಿಂದ ಹಿಡಿದು ಸ್ವತಂತ್ರವಾಗಿ ಬದುಕನ್ನು ನಡೆಸುವವರೆಗೆ ಅದನ್ನು ಅತ್ಯಂತ ನಿಕಟವಾಗಿ ಅಧ್ಯಯನ ಮಾಡಿ, ಅದನ್ನೆಲ್ಲ ಬರಹದಲ್ಲಿ ದಾಖಲಿಸಿ, ಅದಕ್ಕೆ 'ಬೇಬಿ ಬಯಾಗ್ರಫೀಸ್' ಎಂಬ ಹೆಸರನ್ನು ನೀಡಿ ಪ್ರಕಟಿಸಿದ. ಇವನ ನಂತರ ವಿಲ್ಹೆಲ್ಮ್ ಪ್ರೇಯರ್, ವಿಲಿಯಂ ಸ್ಟರ್ನ್, ಜೀನ್ ಪಿಯಾಜೆ, ಜೇಮ್ಸ್ ಮಾರ್ಕ್ ಬಾಲ್ಡ್‌ವಿನ್, ಸ್ಟಾನ್ಲೆ ಹಾಲ್ ಮುಂತಾದವರು ತಮ್ಮದೇ ಆದ ಅಧ್ಯಯನಗಳನ್ನು ನಡೆಸಿ, ಮಗುವಿನ ಜೀವನ ಚರಿತ್ರೆಯ ವಿವಿಧ ಆಯಾಮಗಳ ಪರಿಚಯವನ್ನು ನಮಗೆ ಮಾಡಿಕೊಟ್ಟರು. ಇವರ ಅಧ್ಯಯನಗಳನ್ನು 'ವೈಜ್ಞಾನಿಕವಲ್ಲ' ಎಂದು ಕೆಲವರು ದೂರಿದ್ದೂ ಉಂಟು. ಈ ವಿಜ್ಞಾನಿಗಳು ಮಗುವಿನ ಬೆಳವಣಿಗೆಯ ಅವಲೋಕನದ ನೆರವಿನಿಂದ ತಮ್ಮ ಅನಿಸಿಕೆಗಳನ್ನು ದಾಖಲಿಸಿದ್ದಾರಷ್ಟೆ. ಹಾಗಿರುವಾಗ ಇದು ಮಗುವಿನ 'ಜೀವನಚರಿತ್ರೆ'ಯಾಗಲು ಸಾಧ್ಯವಿಲ್ಲ ಎಂದು ತಕರಾರನ್ನು ತೆಗೆದರು. ಅವರ ಆಕ್ಷೇಪಣೆಯಲ್ಲಿ ಹುರುಳಿರಬಹುದೇನೋ... ಆದರೆ ಈ ಒಂದು ಕ್ಷೇತ್ರದಲ್ಲಿ ಒಂದು ಹೊಚ್ಚ ಹೊಸ ಅಧ್ಯಯನವನ್ನು ಮಾಡಿದ ಈ ವಿಜ್ಞಾನಿಗಳ ಶ್ರಮವನ್ನು ಸಾರಾಸಗಟಾಗಿ ತಿರಸ್ಕರಿಸಲು ಸಾಧ್ಯವಿಲ್ಲ. ಇದರಿಂದ ಮಗುವಿನ ಕಲಿಕೆ, ವರ್ತನೆ, ಬೆಳವಣಿಗೆ ಇತ್ಯಾದಿ ಅನೇಕ ವಿಷಯಗಳ ಕುರಿತು ನಮ್ಮ ತಿಳಿವಳಿಕೆ ಹೆಚ್ಚಿದೆ ಎನ್ನುವುದರಲ್ಲಿ ಯಾವುದೇ ಅನುಮಾನವು ಉಳಿದಿಲ್ಲ. ಹಾಗಾಗಿ ಇವರ ಅಧ್ಯಯನವನ್ನು ಕುರಿತು ಒಂದು ಪಕ್ಷಿನೋಟವನ್ನು ಹರಿಸುವುದು ಸೂಕ್ತ.

ನಮಗೆಲ್ಲ ಗೊತ್ತಿರುವ ಹಾಗೆ ಚಾರ್ಲ್ಸ್ ಡಾರ್ವಿನ್ ಜೀವಿಗಳ ವಿಕಾಸವಾದದ ಬಗ್ಗೆ ಸುದೀರ್ಘವಾದ ಅಧ್ಯಯನವನ್ನು ಮಾಡಿ 'ಆರಿಜಿನ್ ಆಫ್ ಸ್ಪೀಸೀಸ್' (ಪ್ರಭೇದಗಳ ಉಗಮ) ಎಂಬ ಗ್ರಂಥವನ್ನು ರಚಿಸಿದ. ಇದು ಮನುಕುಲದ ತಿಳಿವಿಗೆ ಒಂದು ಮಹಾತಿರುವನ್ನೇ ನೀಡಿತು. ಅಂಥ ಡಾರ್ವಿನ್ 'ಡೆವಲಪ್‌ಮೆಂಟಲ್ ಸೈಕಾಲಜಿ' (ಅಭಿವರ್ಧನಾ ಮನೋವಿಜ್ಞಾನ) ಎನ್ನುವ ವಿಷಯದಲ್ಲೂ ಸಾಕಷ್ಟು ಕೆಲಸವನ್ನು ಮಾಡಿದ್ದಾನೆ ಎನ್ನುವ ವಿಚಾರವು ಹೆಚ್ಚಿನ ಜನರಿಗೆ ತಿಳಿದಿರಲಾರದು. ಡಾರ್ವಿನ್ ಅವರಿಗೆ ಮೊದಲ ಮಗ ಹುಟ್ಟಿದ– ವಿಲಿಯಂ ಎರಾಸ್ಮಸ್ ಡಾರ್ವಿನ್. ಈತ ತನ್ನ ಮಗುವನ್ನೇ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ. ತನ್ನ ಮಗುವಿನ ಬೆಳವಣಿಗೆಯ ಪ್ರತಿಯೊಂದು ಅಂಶವನ್ನು ಸೂಕ್ಷ್ಮವಾಗಿ ಗಮನಿಸಿ ಅದನ್ನೆಲ್ಲ ದಾಖಲಿಸಿದ. 1839ರಿಂದ 1841ರವರೆಗೆ ತಾನು ಅವಲೋಕಿಸಿದ ಎಲ್ಲ ವಿಚಾರಗಳಿಗೆ ಒಂದು ಸ್ಥಿರ ರೂಪವನ್ನು ನೀಡಿ 'ಎ ಬಯಾಗ್ರಫಿಕಲ್ ಸ್ಕೆಚ್ ಆಫ್ ಆ್ಯನ್ ಇನ್‌ಫೆಂಟ್' (ಹಸುಗೂಸಿನ ಜೀವನ ಚರಿತ್ರೆಯ ಸಂಕ್ಷಿಪ್ತ ರೂಪರೇಖೆ) ಎಂಬ ಪುಸ್ತಕವನ್ನು 1877ರಲ್ಲಿ ಪ್ರಕಟಿಸಿದ.

ಡಾರ್ವಿನ್ ತನ್ನ ಪುಸ್ತಕದಲ್ಲಿ ಹಸುಗೂಸಿನ ಆರಂಭಿಕ ಮರುವರ್ತಿಕಗಳು (ಬೇಬಿ ರಿಫ್ಲೆಕ್ಸಸ್), ಸಂವೇದನೆಗಳ ಬೆಳವಣಿಗೆ (ಸೆನ್ಸರಿ ಡೆವಲಪ್‌ಮೆಂಟ್), ಭಾವನೆಗಳು (ಇಮೋಶನ್ಸ್) ಮತ್ತು ಭಾಷಾ ಕಲಿಕೆಗಳ ಬಗ್ಗೆ ಆದ್ಯತೆಯನ್ನು ನೀಡಿದ್ದ. 'ಮಂಗನಿಂದ ಮಾನವ' ಎಂಬ ಹೇಳಿಕೆಯಲ್ಲಿ ವಿಶ್ವಾಸವನ್ನಿಟ್ಟಿದ್ದ ಡಾರ್ವಿನ್, ತನ್ನ ಮಗುವಿನ ಎಲ್ಲ ವರ್ತನೆ, ಕಲಿಕೆಗಳನ್ನು ಪ್ರಾಣಿಗಳ ಜತೆಯಲ್ಲಿ ಹೋಲಿಸಿ ತನ್ನ ಅನಿಸಿಕೆಗಳನ್ನು ಬರೆಯುತ್ತಿದ್ದ. ಹಾಗೆ ದಾಖಲಿಸುವಾಗ ಯಾವ್ಯಾವುದು ಆನುವಂಶಿಕವಾಗಿ ಬಂದಿರಬಹುದು, ಯಾವುದನ್ನು ಕಂದಮ್ಮ

ಸ್ವತಃ ಕಲಿತಿರಬಹುದು ಎನ್ನುವ ಅಂಶವನ್ನು ಪರಿಗಣಿಸಿದ್ದ. ಜೀವವಿಕಾಸದ ಹಿನ್ನೆಲೆಯಲ್ಲಿ ಇದು ಗಮನೀಯವಾಗಿತ್ತು. ಹಸುಗೂಸಿನ ನಗು, ಅಳು, ಭಯ ಹಾಗೂ ಕೆಲವು ಮುಖಭಾವಗಳು ಜನ್ಮದತ್ತವಾಗಿಯೇ ಬಂದಿರುತ್ತವೆ ಎಂಬ ತೀರ್ಮಾನಕ್ಕೆ ಬಂದಿದ್ದ. ಡಾರ್ವಿನ್ ನಡೆಸಿದ ಅಧ್ಯಯನವು ಅನೇಕ ಹೊಸ ಹೊಸ ವಿಚಾರಗಳ ಬಗ್ಗೆ ಬೆಳಕನ್ನು ಚೆಲ್ಲಿತು. ಅವೆಂದರೆ:

- ಮಕ್ಕಳ ಬೆಳವಣಿಗೆಯ ಬಗ್ಗೆ ಕ್ರಮಬದ್ಧವಾದ ಅಧ್ಯಯನದ ಅಗತ್ಯವನ್ನು ಎತ್ತಿ ತೋರಿತು.
- ಸುದೀರ್ಘ ಕಾಲ ಮಕ್ಕಳ ಅಧ್ಯಯನವನ್ನು ಮಾಡಬೇಕೆಂದಿತು. ಹುಟ್ಟಿನಿಂದ ಹಿಡಿದು ಆ ಮಗುವು ಭಾಷೆಯನ್ನು ಒಳಗೊಂಡಂತೆ, ಎಲ್ಲ ರೀತಿಯ ದೈಹಿಕ ಚಟುವಟಿಕೆಗಳನ್ನು ಕಲಿತು, ಸ್ವತಂತ್ರ ಬದುಕನ್ನು ನಡೆಸುವ ಕ್ಷಮತೆಯನ್ನು ಗಳಿಸುವವರೆಗೂ ಅಧ್ಯಯನವನ್ನು ನಡೆಸಬೇಕಾದ ಅಗತ್ಯವನ್ನು ವಿವರಿಸಿತು.
- ಪ್ರಾಣಿಗಳಲ್ಲಿ ಕಂಡುಬರುವ ಮೂಲಭೂತ ವರ್ತನೆಗಳೇ ಮನುಷ್ಯರಲ್ಲೂ ಮುಂದುವರಿಯುತ್ತವೆ ಎಂಬ ಅಂಶವನ್ನು ಪ್ರಸ್ತಾಪಿಸಿ, ಹೆಚ್ಚಿನ ಅಧ್ಯಯನಕ್ಕೆ ಪ್ರಚೋದನೆಯನ್ನು ನೀಡಿತು.
- ಡಾರ್ವಿನ್ ಪ್ರಸ್ತಾಪಿಸಿದ ನೈಸರ್ಗಿಕ ಆಯ್ಕೆ (ನ್ಯಾಚುರಲ್ ಸೆಲೆಕ್ಷನ್) ಮತ್ತು ವಿಕಾಸವು (ಎವಲ್ಯೂಶನ್) ಮಗುವಿನ ಬಾಲ್ಯದಲ್ಲಿ ಕಂಡುಬರುತ್ತದೆ ಎನ್ನುವುದಕ್ಕೆ ಪುರಾವೆಯನ್ನು ನೀಡಿತು.

ಚಾರ್ಲ್ಸ್ ಡಾರ್ವಿನ್ ಮಾಡಿದ ಮೊದಲ ಅಧ್ಯಯನದ ಬಹು ದೊಡ್ಡ ಲಾಭವೆಂದರೆ, ಮುಂದೆ ಅನೇಕ ವಿಜ್ಞಾನಿಗಳು ಮಕ್ಕಳ ಬೆಳವಣಿಗೆಯ ಮೇಲೆ ಆಸಕ್ತಿಯನ್ನು ತಳೆದರು. ವೈಜ್ಞಾನಿಕ ಅಧ್ಯಯನಗಳನ್ನು ನಡೆಸಿದರು ಹಾಗೂ ಮಕ್ಕಳ ರಮ್ಯ ಜಗತ್ತಿನ ಅನಾವರಣವನ್ನು ಮಾಡಿದರು.

ವಿಲ್ಹೆಲ್ಮ್ ಪ್ರೇಯರ್ (1841–1897) ಜರ್ಮನ್ ದೇಶದ ಅಂಗಕ್ರಿಯಾ ವಿಜ್ಞಾನಿ (ಫಿಸಿಯಾಲಜಿಸ್ಟ್). ಇವನು ಡಾರ್ವಿನ್ ಅಧ್ಯಯನದಿಂದ ಪ್ರೇರಿತನಾದ. ಡಾರ್ವಿನ್ ಕೇವಲ ತನ್ನ ನಿಖರ ಅಧ್ಯಯನಕ್ಕೆ ಮಾತ್ರ ಆದ್ಯತೆಯನ್ನು ನೀಡಿದ್ದ. ಆದರೆ ಪ್ರೇಯರ್ ತನ್ನ ಅಧ್ಯಯನದಲ್ಲಿ 'ರಿಗರಸ್ ಎಕ್ಸ್‌ಪರಿಮೆಂಟಲ್ ಅಪ್ರೋಚ್' (ನಿಯಮಾನುಷ್ಠಿತ ಪ್ರಯೋಗ ವಿಧಾನ) ಅನ್ನು ಅಳವಡಿಸಿಕೊಂಡ. ಮಗುವಿನ ದೈಹಿಕ, ಮಾನಸಿಕ, ಭಾವನಾತ್ಮಕ ಬೆಳವಣಿಗೆಗಳ ಅಧ್ಯಯನ ಮಾಡಿದ. 'ದಿ ಮೈಂಡ್ ಆಫ್ ದಿ ಚೈಲ್ಡ್' ಎನ್ನುವ ಮಗುವಿನ ಜೀವನಚರಿತ್ರೆಯನ್ನು 1882ರಲ್ಲಿ ಪ್ರಕಟಿಸಿದ. ಇದು ಮಕ್ಕಳ ಅಭಿವರ್ಧನಾ ಮನೋವಿಜ್ಞಾನ ಕ್ಷೇತ್ರದಲ್ಲಿ ಒಂದು ಮೈಲಿಗಲ್ಲಾಯಿತು. ಪ್ರೇಯರ್ ನಡೆಸಿದ ಅಧ್ಯಯನಗಳ ಮುಖ್ಯಾಂಶಗಳನ್ನು ಮುಂದೆ ಉಲ್ಲೇಖಿಸಿರುವಂತೆ ಸಂಗ್ರಹಿಸಬಹುದು:

- ಅವಲೋಕನಗಳ ಪ್ರಮಾಣಬದ್ಧತೆ (ಸ್ಟಾಂಡರ್ಡೈಜೇಶನ್ ಆಫ್ ಅಬ್ಸರ್ವೇಶನ್ಸ್)– ಡಾರ್ವಿನ್ ತನ್ನ ಅನಿಸಿಕೆಗಳನ್ನು ಮಾತ್ರ ದಾಖಲಿಸಿದ್ದ. ಆದರೆ ಪ್ರೇಯರ್ ವೈಜ್ಞಾನಿಕ ತಳಹದಿಯ ಮೇಲೆ, ಒಂದು ಪ್ರಮಾಣಬದ್ಧ ವಿಧಾನವನ್ನು ಅನುಸರಿಸಿ ತನ್ನ ಅಧ್ಯಯನಗಳನ್ನು ದಾಖಲಿಸಿದ್ದ.
- ಪ್ರೇಯರ್ ಮಗುವಿನ ಮಾನಸಿಕ ಬೆಳವಣಿಗೆಯ ಘಟ್ಟಗಳ ಅಧ್ಯಯನಕ್ಕೆ ಆದ್ಯತೆ ನೀಡಿದ್ದ. ಮಗುವಿನ ಗ್ರಹಿಕೆ (ಪರ್ಸೆಪ್ಷನ್), ಗಮನ (ಅಟೆನ್ಷನ್), ನೆನಪು (ಮೆಮೊರಿ), ಭಾವನೆಗಳು (ಎಮೋಶನ್ಸ್) ಮತ್ತು ಇಚ್ಛಾ ಚಲನವಲನಗಳಿಗೆ (ವಾಲಂಟರಿ ಮೂವ್‌ಮೆಂಟ್ಸ್) ಆದ್ಯತೆ ನೀಡಿದ.
- ಪ್ರಭೇದಗಳ ತುಲನಾತ್ಮಕ ಅಧ್ಯಯನ (ಕ್ರಾಸ್ ಸ್ಪೀಸೀಸ್ ಕಂಪ್ಯಾರಿಸನ್)– ಜೀವಜಗತ್ತಿನ ವರ್ತನೆಗಳ ಸುಧಾರಿತ ರೂಪವು ಮನುಷ್ಯರಲ್ಲಿ ಕಂಡುಬರುತ್ತವೆ ಎಂಬ ಡಾರ್ವಿನ್ನನ ವಾದಕ್ಕೆ ತನ್ನ ಅಧ್ಯಯನದಲ್ಲಿ ಮಾನ್ಯತೆಯನ್ನು ನೀಡಿದ. ಆದರೆ ಇಲ್ಲಿಯೂ ತನ್ನ ನಿಯಂತ್ರಿತ ಅವಲೋಕನವನ್ನು (ಕಂಟ್ರೋಲ್ಡ್ ಅಬ್ಸರ್ವೇಶನ್ಸ್) ಮುಂದುವರಿಸಿದ.

ಪ್ರೇಯರ್ ಸಹ, ತನ್ನ ಅಧ್ಯಯನಕ್ಕಾಗಿ ತನ್ನದೇ ಮಗುವನ್ನು ಆಯ್ಕೆ ಮಾಡಿಕೊಂಡ. ತನ್ನ ಅಧ್ಯಯನದಲ್ಲಿ ಮಗುವಿನ ಅಂಗಚಲನೆಯ ಬೆಳವಣಿಗೆ (ಮೋಟಾರ್ ಡೆವಲಪ್‌ಮೆಂಟ್), ಸಂವೇದನಾ ಅನುಭವಗಳ ಕಲಿಕೆಯನ್ನು (ಸೆನ್ಸರಿ ಎಕ್ಸ್‌ಪೀರಿಯನ್ಸ್) ಹಾಗೂ ಅರಿವಿನ ಬದಲಾವಣೆಗಳನ್ನು (ಕಾಗ್ನಿಟಿವ್ ಚೇಂಜಸ್) ನಿಖರವಾಗಿ ದಾಖಲಿಸಿದ. ಅಲ್ಲಿಯವರೆಗೆ ಯುರೋಪಿಯನ್ ಸಮಾಜದಲ್ಲಿ ಮಗುವು 'ಹುಟ್ಟಿನಿಂದ ಜಡಜೀವಿಗಳು' ಆಗಿರುತ್ತವೆ ಎಂಬ ಭಾವನೆಯಿತ್ತು. ಅದನ್ನು ಸುಳ್ಳು ಎಂದು ಸಾಧಿಸಿದ. ಮಗುವು ತನ್ನ 'ಸುತ್ತಮುತ್ತಲಿನ ಪರಿಸರವು ನೀಡುವ ಪ್ರಚೋದನೆಗಳಿಗೆ ಅನುಗುಣವಾಗಿ ಹೊಸ ಹೊಸ ವಿಷಯಗಳನ್ನು ಕಲಿಯುತ್ತದೆ' ಎಂದ. ಪ್ರೇಯರ್ ನಡೆಸಿದ ಈ ಅನುಭವಸಿದ್ಧ (ಎಂಪೆರಿಕಲ್) ಅಧ್ಯಯನಗಳು ಮುಂದೆ ಗಂಭೀರ ಸ್ವರೂಪದ ಅಧ್ಯಯನಗಳಿಗೆ ಭದ್ರವಾದ ತಳಪಾಯವನ್ನು ಹಾಕಿದವು. ಅಭಿವರ್ಧನಾ ಮನೋವಿಜ್ಞಾನವು ಸಶಕ್ತವಾಗಿ ಬೆಳೆಯಲು ಪ್ರೇಯರ್ ನೀಡಿದ ಕಾಣಿಕೆಯು ಗಣನೀಯವಾದದ್ದು.

ಲೂಯಿಸ್ ವಿಲಿಯಂ ಸ್ಟರ್ನ್ (1871–1938) ಜರ್ಮನ್ ದೇಶದ ಮನೋವಿಜ್ಞಾನಿಯಾಗಿದ್ದ. ಮಕ್ಕಳ ಮನೋವಿಜ್ಞಾನದ ಬೆಳವಣಿಗೆಗೆ ಕಾರಣರಾದ ಆದ್ಯರಲ್ಲಿ ಇವನೂ ಒಬ್ಬನಾಗಿದ್ದ. ಮಕ್ಕಳ ಬುದ್ಧಿವಂತಿಕೆಯ ಮೌಲ್ಯಮಾಪನವನ್ನು ಮಾಡುವ ಕ್ಷೇತ್ರದಲ್ಲಿ ಇವನ ಕಾಣಿಕೆಯು ಗಣನೀಯವಾದದ್ದು. ಇವನು ಯಾವುದೇ ಮಗುವಿನ ಜೀವನಚರಿತ್ರೆಯನ್ನು ಬರೆಯದಿದ್ದರೂ, ಡಾರ್ವಿನ್ ಹಾಗೂ ಪ್ರೇಯರ್ ನಡೆಸಿದ ಸಂಶೋಧನೆಯ ತಳಹದಿಯ ಮೇಲೆ ಮಕ್ಕಳ ಬುದ್ಧಿವಂತಿಕೆಯನ್ನು ಪರೀಕ್ಷಿಸುವ (ಇಂಟೆಲಿಜೆನ್ಸ್ ಟೆಸ್ಟಿಂಗ್) ವಿಧಾನವನ್ನು ರೂಪಿಸಿದ. ಬುದ್ಧಿಮತ್ತೆಯ ಸೂಚ್ಯಂಕ (ಇಂಟೆಲಿಜೆನ್ಸ್ ಕೋಶಂಟ್= ಐಕ್ಯು) ಎಂಬ ಪದಪುಂಜವನ್ನು ಈತನೇ ಮೊದಲ ಬಾರಿಗೆ ಬಳಸಿದ. ಇವನು ತನ್ನ ಅಧ್ಯಯನಕ್ಕೆ ಪರಿಗಣಿಸಿದ ಮುಖ್ಯಾಂಶಗಳನ್ನು ಹೀಗೆ ಸಂಗ್ರಹಿಸಬಹುದು:

- ಮಕ್ಕಳ ಅರಿವಿನ ಬೆಳವಣಿಗೆಯಲ್ಲಿ (ಕಾಗ್ನಿಟಿವ್ ಡೆವಲಪ್‌ಮೆಂಟ್) ಕಂಡುಬರುವ ವೈಯುಕ್ತಿಕ ವ್ಯತ್ಯಾಸಗಳು.
- ಮಕ್ಕಳ ಬುದ್ಧಿವಂತಿಕೆಯ ಬೆಳವಣಿಗೆಯ ಪಥವನ್ನು ನಿರ್ಧರಿಸಲು ಸುದೀರ್ಘ ಅಧ್ಯಯನಗಳ ಅಗತ್ಯ.
- ಮಗುವಿನ ಶೈಶವ ಹಾಗೂ ಬಾಲ್ಯದ ಅನುಭವಗಳು, ಮಗುವಿನ ನಂತರದ ಬುದ್ಧಿವಂತಿಕೆಯ ಮೇಲೆ ಬೀರುವ ಪ್ರಭಾವಗಳು ಹಾಗೂ ಸಂಬಂಧಗಳು.

ಸ್ಟರ್ನ್ ಮತ್ತು ಆತನ ಮಡದಿ ಕ್ಲಾರಾ ಸ್ಟರ್ನ್, ತಮ್ಮ ಅಧ್ಯಯನಕ್ಕಾಗಿ ತಮ್ಮದೇ ಮೂವರು ಮಕ್ಕಳನ್ನು ಆಯ್ಕೆ ಮಾಡಿಕೊಂಡರು. ಅವರ ಭಾಷಾ ಕಲಿಕೆ ಹಾಗೂ ಅರಿವಿನ ಬೆಳವಣಿಗೆಯನ್ನು ತಮ್ಮ ಡೈರಿಯಲ್ಲಿ ದಾಖಲಿಸಿದರು. ಇವರು ನಡೆಸಿದ ಅಧ್ಯಯನವು 'ಆಧುನಿಕ ಭಾಷಾ ಮತ್ತು ಅರಿವಿನ ವಿಜ್ಞಾನ'ಕ್ಕೆ ಅಂದರೆ 'ಮಾಡರ್ನ್ ಲಿಂಗ್ವಿಸ್ಟಿಕ್ ಆ್ಯಂಡ್ ಕಾಗ್ನಿಟಿವ್ ಸೈಕಾಲಜಿ'ಗೆ ಜನ್ಮವನ್ನು ನೀಡಿತು.

ಜೀನ್ ಪಿಯಾಜೆ (1896–1980) ಯಾವುದೇ ಮಗುವಿನ ಜೀವನಚರಿತ್ರೆಯನ್ನು ಬರೆಯಲಿಲ್ಲ. ಆದರೆ ಡಾರ್ವಿನ್ ಮತ್ತು ಪ್ರೇಯರ್‌ರ ವಿಧಾನಗಳನ್ನು ತನ್ನ ಮಕ್ಕಳ ಮೇಲೆ ಪ್ರಯೋಗಿಸಿದ. 'ಥಿಯರಿ ಆಫ್ ಕಾಗ್ನೆಟಿವ್ ಡೆವಲಪ್‌ಮೆಂಟ್' (ಅರಿವಿನ ಬೆಳವಣಿಗೆಯ ಸಿದ್ಧಾಂತ) ಅನ್ನು ಮಂಡಿಸಿದ. ಮಕ್ಕಳ ಅರಿವಿನ ಬೆಳವಣಿಗೆಯಲ್ಲಿ ನಿರ್ದಿಷ್ಟ ಹಂತಗಳು (ಡೆವಲಪ್‌ಮೆಂಟಲ್ ಸ್ಟೇಜಸ್) ಇರುತ್ತವೆ ಎನ್ನುವುದನ್ನು ತೋರಿಸಿದ. ಜೇಮ್ಸ್ ಮಾರ್ಕ್ ಬಾಲ್ಡ್‌ವಿನ್ (1861–1934) ಮಗುವಿನ ಬೆಳವಣಿಗೆಯಲ್ಲಿ ಸಾಮಾಜಿಕ ಪಾರಸ್ಪರಿಕ ಕ್ರಿಯೆಗಳ ಪಾತ್ರದ (ರೋಲ್ ಆಫ್ ಸೋಶಿಯಲ್ ಇಂಟರಾಕ್ಷನ್) ಮಹತ್ವವನ್ನು ವಿವರಿಸಿದ. ಗ್ರಾನ್ವಿಲ್ಲೆ ಸ್ಟಾನ್ಲೆ ಹಾಲ್ (1846–1924) ಅಮೆರಿಕದ ಮನೋವಿಜ್ಞಾನಿ ಹಾಗೂ ಶಿಕ್ಷಣ ತಜ್ಞನಾಗಿದ್ದ. ಇವನನ್ನು 'ಅಭಿವರ್ಧನಾ ಮನೋವಿಜ್ಞಾನದ ಪಿತಾಮಹ' ಎಂದು ಕರೆಯುವುದುಂಟು. ಏಕೆಂದರೆ ಇದುವರೆಗೆ ಈ ಕ್ಷೇತ್ರದಲ್ಲಿ ಕೆಲಸ ಮಾಡಿದವರು ತಮ್ಮ ಸ್ವಂತ ಮಕ್ಕಳನ್ನು ಮಾತ್ರ ಅಧ್ಯಯನ ಮಾಡಿದ್ದರು. ಆದರೆ ಹಾಲ್ ಮೊದಲ ಬಾರಿಗೆ ತನ್ನ ಅಧ್ಯಯನದಲ್ಲಿ ಅಸಂಖ್ಯ ಮಕ್ಕಳನ್ನು ಸೇರಿಸಿಕೊಂಡ. ಹಾಗಾಗಿ ಈತನ ಅಧ್ಯಯನ ಸಾರಾಂಶಗಳು ನಂಬಿಕೆಗೆ ಹೆಚ್ಚು ಅರ್ಹವಾದವು.

ಬೇಬಿ ಬಯಾಗ್ರಫಿಗಳು ಅವೈಜ್ಞಾನಿಕ ಎನ್ನುವವರಿಗೆ ಉತ್ತರವನ್ನು ಕೊಡುವುದು ವ್ಯರ್ಥ. ಆದರೆ ಈ ಬೇಬಿ ಬಯಾಗ್ರಫಿಗಳು ಮನೋವಿಜ್ಞಾನದಲ್ಲಿ ವಿಕಸನೀಯ ಮನೋವಿಜ್ಞಾನ (ಎವಲ್ಯೂಶನರಿ ಸೈಕಾಲಜಿ), ಮಕ್ಕಳ ಪ್ರಾಯೋಗಿಕ ಮನೋವಿಜ್ಞಾನ (ಎಕ್ಸ್‌ಪರಿಮೆಂಟಲ್ ಚೈಲ್ಡ್ ಸೈಕಾಲಜಿ), ಅರಿವಿನ ಹಾಗೂ ಭಾಷಾ ಬೆಳವಣಿಗೆ (ಕಾಗ್ನಿಟಿವ್ ಆ್ಯಂಡ್ ಲಾಂಗ್ವೇಜ್ ಡೆವಲಪ್‌ಮೆಂಟ್), ಬೆಳವಣಿಗೆ ಹಂತಗಳ ಮನೋವಿಜ್ಞಾನ (ಸ್ಟೇಜ್ ಥಿಯರಿ ಇನ್ ಸೈಕಾಲಜಿ) ಇತ್ಯಾದಿ ಹೊಸ ಹೊಸ ವಿಜ್ಞಾನ ಶಾಖೆಗಳ ಹುಟ್ಟಿಗೆ ಕಾರಣವಾಗಿದೆ ಎಂದರೆ ಬೇಬಿ ಬಯಾಗ್ರಫಿಗಳನ್ನು ಬರೆದವರ ಬದುಕು ಸಾರ್ಥಕವಾಯಿತು ಎನ್ನಬಹುದು.

# ಎಲ್ಲಿ ಹೋದವು ಆ ದುಡಿಯುವ ಕೈಗಳು..?

**ಹಿಂದೆಲ್ಲಾ ಮನೆತುಂಬಾ ಮಕ್ಕಳಿರುತ್ತಿದ್ದರು; ಒಬ್ಬಿಬ್ಬರು ಕಲಿತು ದುಡಿಯಲು ಮನೆಬಿಟ್ಟು ಹೊರಹೋದರೂ, ಉಳಿದವರಿಂದ ಮನೆಯವರ ಬದುಕು ನಿರಾಳವಾಗಿ ಸಾಗುತ್ತಿತ್ತು. ಆದರೀಗ ಪರಿಸ್ಥಿತಿ ಬದಲಾಗಿದೆ. ಮನೆಯಲ್ಲಿ ಒಬ್ಬರೋ ಇಬ್ಬರೋ ಮಕ್ಕಳು ಇರುತ್ತಿದ್ದು, ಅವರು ಕಲಿತು ಜೀವನೋಪಾಯ ಅಥವಾ ಸುಖಜೀವನವನ್ನು ಅರಸುತ್ತಾ ಬೆಂಗಳೂರು, ಮುಂಬೈ, ದುಬೈ, ಇಂಗ್ಲೆಂಡ್, ಅಮೆರಿಕ ಅಥವಾ ಆಸ್ಟ್ರೇಲಿಯಾಕ್ಕೆ ತೆರಳುತ್ತಿರುವುದರಿಂದ ಊರಿನ ಮನೆಗಳು ಅಕ್ಷರಶಃ ವೃದ್ಧಾಶ್ರಮಗಳಾಗುತ್ತಿವೆ. ಅದರಲ್ಲೂ, ಒಮ್ಮೆ ವಿದೇಶಕ್ಕೆ ಹೋದವರು ಮನೆಗೆ ಮರಳುವುದು ವಿರಳ.**

ವಿಶ್ಲೇಷಣೆ

ರಮಾನಂದ ಶರ್ಮಾ

vveditoped@gmail.com

ಇಂದು ಯಾರ ಮನೆಗೇ ಹೋಗಿ ಬಂಧು-ಮಿತ್ರರನ್ನು ಭೇಟಿಯಾಗಲಿ, ಮಾಮೂಲು ರಾಜಕೀಯ, ಹವಾಮಾನ, ಕ್ರಿಕೆಟ್, ಬಾಲಿವುಡ್‌ಗಿಂತ ಹೆಚ್ಚಾಗಿ, ''ಮನೆಯ ಗಂಡುಮಕ್ಕಳಿಗೆ ವಧು ಸಿಗುತ್ತಿಲ್ಲ, ಮನೆ-ತೋಟ-ಜಮೀನುಗಳ ಕೆಲಸಕ್ಕೆ ಕಾರ್ಮಿಕರು ಸಿಗುತ್ತಿಲ್ಲ, ಅವರು ಬಯಸುವ ಕೂಲಿ ನೀಡಲಾಗುತ್ತಿಲ್ಲ'' ಎಂಬ ಮಾತುಗಳೇ ಮುನ್ನೆಲೆಯಲ್ಲಿರುತ್ತವೆ. ಕೆಲವರಿಗೆ ಇದು ಅತಿಶಯೋಕ್ತಿ ಎನಿಸಬಹುದು, ಆದರೆ ಇದು ಸತ್ಯ.

ದೇಶದ ಇನ್ನಿತರೆಡೆ ಹೇಗೋ? ಆದರೆ ದಕ್ಷಿಣದಲ್ಲಿ, ಮುಖ್ಯವಾಗಿ ಕರ್ನಾಟಕದಲ್ಲಿ ಈ ಸಮಸ್ಯೆ 'ಎಚ್ಚರಿಕೆಯ ಗಂಟೆ'ಯಾಗಿದೆ. 'ವೈಟ್ ಕಾಲರ್' ಉದ್ಯೋಗಸ್ಥರಲ್ಲಿ ಈ ಸಮಸ್ಯೆ ಅಷ್ಟಾಗಿ ಕಾಣದಿದ್ದರೂ, ಅಸಂಘಟಿತ ವಲಯದಲ್ಲಿ, ಮುಖ್ಯವಾಗಿ ಕೃಷಿಕರು ಮತ್ತಿತರ ಕಸುಬುಗಾರರಲ್ಲಿ ಇದು ಎದ್ದು ಕಾಣುತ್ತಿದೆ. 'ಕೃಷಿಕಾರ್ಯಕ್ಕೆ ಕಾರ್ಮಿಕರ ಕೊರತೆ' ಎಂಬುದು ಹಳ್ಳಿಗಳಲ್ಲಿಂದು ದಿನನಿತ್ಯದ ಮಾತು. ಮಲೆನಾಡಿನಲ್ಲಿ ಗೊನೆ ಕೊಯ್ಯುವ, ಅಡಕೆ ಸುಲಿಯುವ ಕೆಲಸಗಳಿಗೆ ಕೂಲಿಗಳಿಲ್ಲದೆ, ಸಾಂಪ್ರದಾಯಿಕ ಗೊನೆಕೊಯ್ಲು ಇತಿಹಾಸದ ಪುಟವನ್ನು ಸೇರುತ್ತಿದೆ. ಅಡಕೆ ಕೃಷಿಕರು ತಮ್ಮ ಜಮೀನಿನಲ್ಲಿನ ಅಡಕೆಯನ್ನು ಫಲಗುತ್ತಿಗೆಗೆ ನೀಡುತ್ತಿದ್ದಾರೆ. ಆ ಗುತ್ತಿಗೆದಾರರು ಇಂತಿಷ್ಟು ಎಂದು ಹಣ ನೀಡಿ, ಅಡಕೆಯನ್ನು ಮರದಿಂದ ಕೊಯ್ದು ಒಯ್ಯುತ್ತಾರೆ ಹಾಗೂ ಕೊಯ್ದು, ಸುಲಿದು, ಬೇಯಿಸಿ, ಒಣಗಿಸಿ, ಮಾರುಕಟ್ಟೆಗೆ ಕಳುಹಿಸಿ, ಒಳ್ಳೆಯ ಬೆಲೆಗಾಗಿ ಕಾಯಬೇಕಾಗುವಲ್ಲಿನ ಬೆಳೆಗಾರರ ಆತಂಕವನ್ನು ನಿವಾರಿಸುತ್ತಾರೆ. ಆದರೆ ''ಈ ಪರಿಪಾಠದಿಂದಾಗಿ, ಸಾಂಪ್ರದಾಯಿಕ ಗೊನೆಕೊಯ್ಲಿನಲ್ಲಿ ದಕ್ಕಬೇಕಾದ ಆದಾಯಕ್ಕಿಂತ ಸುಮಾರು ಶೇ.25-30ರಷ್ಟು ಕಡಿಮೆಯಿರುತ್ತದೆ; ಕಾರ್ಮಿಕರ ಕೊರತೆಯಿಂದಾಗಿ ತೋಟದ ಅಭಿವೃದ್ಧಿಯು ನಿಂತ ನೀರಾಗಿ, ಇಳುವರಿ ಕಡಿಮೆಯಾಗಿದೆ. ಹೀಗಾಗಿ ಬಂದಷ್ಟನ್ನು ಹರಿದು ತಿನ್ನುತ್ತೇವೆ'' ಎಂದು ನಿರ್ವಿಕಾರವಾಗಿ ಹೇಳುತ್ತಾರೆ ತಲೆತಲಾಂತರಗಳಿಂದ ಅಡಕೆ ಕೃಷಿಯನ್ನು ಮಾಡಿಕೊಂಡು ಬಂದವರು.

ಈ ಪರಿಸ್ಥಿತಿಗೆ ಕಾರಣವೇನು? ದೇಶದ ಜನಸಂಖ್ಯೆಯ ನಿಯಂತ್ರಣಕ್ಕೆಂದು 4 ದಶಕಗಳಿಂದ ಯುದ್ಧೋಪಾದಿಯಲ್ಲಿ ಜಾರಿಗೆ ತಂದ, 'ಚಿಕ್ಕ ಸಂಸಾರ, ಚೊಕ್ಕ ಸಂಸಾರ', 'ಮಿತ ಕುಟುಂಬ, ಹಿತ ಕುಟುಂಬ', 'ಆರತಿಗೊಬ್ಬ ಮಗಳು, ಕೀರ್ತಿಗೊಬ್ಬ ಮಗ' ಎಂಬ ಘೋಷವಾಕ್ಯಗಳೊಡನೆ ಆಚರಿಸಿದ 'ಜನಸಂಖ್ಯೆ ನಿಯಂತ್ರಿಸಿ, ದೇಶವನ್ನು ಉಳಿಸಿ' ಎಂಬ ಅಭಿಯಾನದ ಫಲವಿದು. ದಕ್ಷಿಣ ಭಾರತದಲ್ಲಿ ಈ ಅಭಿಯಾನವನ್ನು ಶಿಕ್ಷಿತರು-ಅಶಿಕ್ಷಿತರು, ಬಡವ-ಬಲ್ಲಿದರೆಲ್ಲರೂ ಗಂಭೀರವಾಗಿ ಅಳವಡಿಸಿಕೊಂಡಿದ್ದೇ ಈ ಪರಿಸ್ಥಿತಿಗೆ ಕಾರಣವಾಗಿದೆ ಎನ್ನಲಾಗುತ್ತಿದೆ. ಒಂದು ಕಾಲಕ್ಕೆ 'ನಾವಿಬ್ಬರು, ನಮಗೆ ಬರೇ ಮಕ್ಕಳು' ಎನ್ನುವ ಪರಿಸ್ಥಿತಿಯಿದ್ದುದು ಕ್ರಮೇಣ 'ನಾವಿಬ್ಬರು ನಮಗಿಬ್ಬರು' ಎನ್ನುವಂತಾಗಿ, ತರುವಾಯದಲ್ಲಿ 'ನಾವಿಬ್ಬರು ನಮಗೊಂದೇ ಮಗು' ಎನ್ನುವಂತಾಗಿರುವುದು ಈ ದುರಂತಕ್ಕೆ ಕಾರಣ ಎನ್ನುತ್ತಾರೆ ಬದುಕಿನ ಮುಸ್ಸಂಜೆಯಲ್ಲಿರುವವರು.

ಈ ಬದಲಾವಣೆ ಮೌನವಾಗಿ ನಡೆಯುತ್ತಿದ್ದರೂ, ಅದರ ದುಷ್ಪರಿಣಾಮವನ್ನು ಜನರಾಗಲೀ ಸರಕಾರವಾಗಲೀ ಗಮನಿಸದಿರುವುದು ದುರಂತ. ವರ್ಷಗಳ ಹಿಂದೆ, ತೆಲುಗು ದೇಶಂ ನಾಯಕ ಚಂದ್ರಬಾಬು ನಾಯ್ಡು, ''ದೇಶದಲ್ಲಿ ಯುವಜನರ ಸಂಖ್ಯೆ ಕಡಿಮೆಯಾಗುತ್ತಿದೆ, ವೃದ್ಧರ ಸಂಖ್ಯೆ ಏರುತ್ತಿದೆ. ಅಂದರೆ, ದುಡಿಯುವ ಕೈಗಳ ಸಂಖ್ಯೆ ಕಡಿಮೆಯಾಗುತ್ತಿದೆ. ದೇಶದ ಅಭಿವೃದ್ಧಿಯ ನಿಟ್ಟಿನಲ್ಲಿ ಇದು ಅಪಾಯಕಾರಿ'' ಎಂದು ಎಚ್ಚರಿಸಿದ್ದರು. ಈ ಎಚ್ಚರಿಕೆಯನ್ನು ಅಂದು ಯಾರೂ ಗಂಭೀರವಾಗಿ ತೆಗೆದುಕೊಂಡಿರಲಿಲ್ಲ; ಆದರೆ ದಿನಗಳೆದಂತೆ ನಾಯ್ಡು ಮಾತಿಗೆ ಸಹಮತ ವ್ಯಕ್ತವಾಗುತ್ತಿದೆ.

60ರ ದಶಕದಲ್ಲಿ, ದೇಶದಲ್ಲಿನ ಜನಸಂಖ್ಯಾ ಸ್ಫೋಟದ ಬಗ್ಗೆ ಪ್ರಶ್ನಿಸಿದಾಗ ಅಂದಿನ ಪ್ರಧಾನಿ ನೆಹರು, ''ದೇಶದ ಅಭಿವೃದ್ಧಿಗೆ ದುಡಿಯುವ ಕೈಗಳು ಬೇಕು'' ಎನ್ನುತ್ತಾ ಆ ಪ್ರಶ್ನೆಯನ್ನು ಅಲ್ಲಿಯೇ ಚಿವುಟಿದ್ದರು; ನೆಹರುರ ದೂರದೃಷ್ಟಿಯಲ್ಲಿ ಇಂದಿನ ಕಾರ್ಮಿಕರ ಕೊರತೆಯ ಮುಂಗಾಣ್ಕೆ ಇತ್ತೇನೋ ಎನಿಸುತ್ತದೆ. ''ವಿವಾಹವಾದ ನಂತರ ವಿಳಂಬ ಮಾಡದೆ ಮಕ್ಕಳನ್ನು ಹೆರಬೇಕು'' ಎಂದು ಕರೆಕೊಟ್ಟಿದ್ದಾರೆ ತಮಿಳುನಾಡಿನ ಮುಖ್ಯಮಂತ್ರಿ ಸ್ಟಾಲಿನ್; ಈ ಕರೆಯಲ್ಲಿ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯ ಚರ್ಚಾವಿಷಯ ಅಡಕವಾಗಿದ್ದರೂ, ಜನಸಂಖ್ಯಾ ಕುಸಿತದ ಕಳವಳವೂ ಅದರಲ್ಲಿ ಹುದುಗಿತ್ತು ಎನ್ನಲಾಗುತ್ತಿದೆ.

ಹಿಂದೆಲ್ಲಾ ಮನೆತುಂಬಾ ಮಕ್ಕಳಿರುತ್ತಿದ್ದರು; ಒಬ್ಬಿಬ್ಬರು ಕಲಿತು ದುಡಿಯಲು ಮನೆಬಿಟ್ಟು ಹೊರಹೋದರೂ, ಉಳಿದವರಿಂದ ಮನೆಯವರ ಬದುಕು ನಿರಾಳವಾಗಿ ಸಾಗುತ್ತಿತ್ತು. ಆದರೀಗ ಪರಿಸ್ಥಿತಿ ಬದಲಾಗಿದೆ. ಮನೆಯಲ್ಲಿ ಒಬ್ಬರೋ ಇಬ್ಬರೋ ಮಕ್ಕಳು ಇರುತ್ತಿದ್ದು, ಅವರು ಕಲಿತು ಜೀವನೋಪಾಯ ಅಥವಾ ಸುಖಜೀವನವನ್ನು ಅರಸುತ್ತಾ ಬೆಂಗಳೂರು, ಮುಂಬೈ, ದುಬೈ, ಇಂಗ್ಲೆಂಡ್, ಅಮೆರಿಕ ಅಥವಾ ಆಸ್ಟ್ರೇಲಿಯಾಕ್ಕೆ ತೆರಳುತ್ತಿರುವುದರಿಂದ ಊರಿನ ಮನೆಗಳು ಅಕ್ಷರಶಃ ವೃದ್ಧಾಶ್ರಮಗಳಾಗುತ್ತಿವೆ. ಅದರಲ್ಲೂ, ಒಮ್ಮೆ ವಿದೇಶಕ್ಕೆ ಹೋದವರು ಮನೆಗೆ ಮರಳುವುದು ವಿರಳ. ಮನೆಯವರ ಪಾಲಿಗೆ ಅವರು ಲೆಕ್ಕದಿಂದ ಹೊರಗೆ. ಇದು ಬಹುತೇಕರ ಕಥೆಯಾಗಿದ್ದು, ಮನೆಯಲ್ಲಿ ದುಡಿಯುವ ಕೈಗಳು ಕಡಿಮೆಯಾಗುತ್ತಿವೆ. ಇದು ಹಳ್ಳಿಗಳಿಗಷ್ಟೇ ಸೀಮಿತವಾಗದೆ ಪಟ್ಟಣ-ನಗರಗಳಿಗೂ ಹಬ್ಬಿರುವ ಪರಿಸ್ಥಿತಿ. ಇಲ್ಲಿನ ಅಪಾರ್ಟ್‌ಮೆಂಟ್‌ಗಳನ್ನು ಒಮ್ಮೆ ಸೂಕ್ಷ್ಮವಾಗಿ ಅವಲೋಕಿಸಿದರೆ, ಬದುಕಿನ ಸಂಧ್ಯಾಕಾಲದಲ್ಲಿರುವವರು ಪರವೂರಿನಲ್ಲಿ ಅಥವಾ ವಿದೇಶಗಳಲ್ಲಿ ಇರುವ ತಮ್ಮ ಮಕ್ಕಳು-ಮೊಮ್ಮಕ್ಕಳನ್ನು ನೆನೆಯುತ್ತಾ ದಿನ ಕಳೆಯುತ್ತಿರುವುದು ಕಣ್ಣಿಗೆ ರಾಚುತ್ತದೆ. ಇನ್ನು ಹಳ್ಳಿಗಳಲ್ಲಾದರೋ, ಕೂಲಿಯವರಿಂದ ಕೆಲಸ ಮಾಡಿಸಿಕೊಂಡು, ಇರುವ ತುಂಡುಭೂಮಿಯನ್ನು ನೋಡಿಕೊಂಡು, ಟಿವಿ ಧಾರಾವಾಹಿ, ಕ್ರಿಕೆಟ್ ಪಂದ್ಯಗಳನ್ನು ಆನಂದಿಸಿಕೊಂಡು, ಮಕ್ಕಳು ಬಂದುಹೋಗುವ ದಿನವನ್ನು ಕಾಯುತ್ತಿರುವ ವೃದ್ಧ ತಾಯಿ-ತಂದೆಯರು, ತಮ್ಮ ನಂತರ ಈ ತುಂಡುಭೂಮಿ ಯಾರ ಪಾಲಾಗಬಹುದೆಂದು ಕೊರಗುತ್ತಾ ಕೂರುವುದಿದೆ.

ಜನಸಂಖ್ಯಾ ಕುಸಿತದಿಂದ ದುಡಿಯುವ ಕೈಗಳು ಕಡಿಮೆಯಾಗಿವೆ ಎನ್ನುವುದು ಸತ್ಯವಾದರೂ, ಸಾಕ್ಷರತೆ ಮತ್ತು ಉನ್ನತ ಶಿಕ್ಷಣದ ವ್ಯಾಪಕತೆಯ ಪ್ರಭಾವ ಇದರಲ್ಲಿದೆ ಎನ್ನುವುದನ್ನು ಅಲ್ಲಗಳೆಯಲಾಗದು. ಉನ್ನತ ಶಿಕ್ಷಣದ ಮೂಲಕ ಮೇಲೇರುವ ಅತೀವ ಹಂಬಲ, ಅದಕ್ಕೆ ಪೂರಕವಾಗಿ

ದೊರಕಿದ ಬ್ಯಾಂಕ್ ಸಾಲ, ಇರುವ ತುಂಡುಭೂಮಿಯಲ್ಲಿ ಮನೆಯವರೆಲ್ಲ ಬದುಕಿನ ಬಂಡಿಯನ್ನು ಓಡಿಸಲಾಗದ ಸ್ಥಿತಿ, ಐಟಿ ಕ್ರಾಂತಿ ಮತ್ತು ಹಣಕಾಸು ವಲಯದಲ್ಲಿ ತೆರೆದುಕೊಂಡ ಉದ್ಯೋಗಾವಕಾಶಗಳು, ಯುವಜನರು ಅಧಿಕ ಸಂಖ್ಯೆಯಲ್ಲಿ ಹುಟ್ಟೂರನ್ನು ತೊರೆದು ನಗರ/ವಿದೇಶಗಳತ್ತ ಮುಖಮಾಡುವಂತೆ ಮಾಡಿವೆ. ಕೆಲ ವರ್ಷಗಳ ಹಿಂದೆ ಕಂಡುಬಂದ ಆರ್ಥಿಕ ಸುಧಾರಣೆ, ಜಾಗತೀಕರಣ ಮತ್ತು ಉದಾರೀಕರಣದಂಥ ಬೆಳವಣಿಗೆಗಳು ಈ ಪರಿಪಾಠಕ್ಕೆ ಮತ್ತಷ್ಟು ಇಂಬುನೀಡಿದ್ದರಿಂದ, ಸ್ಥಳೀಯವಾಗಿ ದುಡಿಯುವ ಕೈಗಳ ಕೊರತೆಯಾಗುವಂತಾಯಿತು.

ಇತ್ತೀಚೆಗೆ, ಯಾವುದೋ ಕೆಲಸಕ್ಕಾಗಿ ಮಲೆನಾಡಿನಿಂದ ಬೆಂಗಳೂರಿಗೆ ಬಂದಿದ್ದ ಮಹಿಳೆಯೊಬ್ಬರು ಊರಿಗೆ ತೆರಳುವ ಗಡಿಬಿಡಿಯಲ್ಲಿದ್ದರು. ಕಾರಣ ಕೇಳಿದಾಗ, ''ಮನೆಗೆ ಬೀಗ ಹಾಕಿ ಬಂದಿರುವೆ. ಊರಲ್ಲಿ ಕಳ್ಳರ ಕಾಟವಿದೆ. ಮನೆಯಲ್ಲಿ ಕಳ್ಳತನ ಮಾಡಲು ವಜ್ರ-ವೈಡೂರ್ಯ-ಆಭರಣಗಳು ಇಲ್ಲದಿದ್ದರೂ, ಕೈಗೇನೂ ಸಿಗಲಿಲ್ಲವೆಂಬ ಸಿಟ್ಟಿನಲ್ಲಿ ಅವರು ಮನೆಬಾಗಿಲು, ಕಪಾಟುಗಳನ್ನು ಮುರಿದು ಹೋಗುತ್ತಾರೆ. ಅವುಗಳ ದುರಸ್ತಿಗೆ ಕೆಲಸದವರು ಸಿಗದೇ ಪರದಾಡಬೇಕಾಗುತ್ತದೆ'' ಎಂದರು! ವಿಚಿತ್ರ ಎನಿಸಿದರೂ ಇದು ಸತ್ಯ. ಏಕೆಂದರೆ, ಇಂದು ಹೊಸಮನೆ ಕಟ್ಟಲಿಕ್ಕೆ ಮತ್ತಿತರ ದೊಡ್ಡ ಕೆಲಸಗಳಿಗೆ ಜನರು ಸಿಗುತ್ತಾರೆ; ಆದರೆ ಸಣ್ಣಪುಟ್ಟ ಕೆಲಸಕ್ಕೆ ಸಿಗುವುದು ದುಸ್ತರ. ಮನೆಯ ಸುಣ್ಣ-ಬಣ್ಣ, ಇಲೆಕ್ಟ್ರಿಕಲ್ ರಿಪೇರಿ, ವಾಟರ್‌ಪ್ರೂಫಿಂಗ್, ನೀರಿನ ನಲ್ಲಿಯ ದುರಸ್ತಿ ಮುಂತಾದ ಕೆಲಸಗಳಿಗೆ ಸ್ಥಳೀಯವಾಗಿ ಕೆಲಸಗಾರರು ಸಿಗುವುದಿಲ್ಲ, ಸಿಕ್ಕರೂ ಅವರು ಕೈಗೆಟುಕಲಾಗದಷ್ಟು ದುಬಾರಿ. ಹೀಗಾಗಿ, ಇತ್ತೀಚಿನ ದಿನಗಳಲ್ಲಿ ಈ ಕೆಲಸಗಳಲ್ಲಿ ಬಿಹಾರಿಗಳು ಮತ್ತಿತರ ಉತ್ತರ ಭಾರತೀಯರ ಪಾರಮ್ಯವೇ ಕಾಣುತ್ತಿದೆ. ಮನೆಗೆಲಸಕ್ಕೂ, ಮುಂಜಾನೆಯ ಕಾರು ತೊಳೆಯುವುದಕ್ಕೂ ವಲಸಿಗರೇ ಬೇಕು. ಬಡಾವಣೆಯೊಂದರ ಅಪಾರ್ಟ್ ಮೆಂಟ್‌ನಲ್ಲಿ ವಾಚ್‌ಮನ್ ಕೆಲಸ ಮಾಡುವ ನೇಪಾಳಿಯೊಬ್ಬ ದಿನಾಲು ಸುಮಾರು 30 ಕಾರುಗಳನ್ನು ತೊಳೆದರೆ, ಅವನ ಪತ್ನಿ ನಾಲ್ಕಾರು ಮನೆಗಳಲ್ಲಿ ಮನೆಗೆಲಸ ಮಾಡುತ್ತಾಳೆ. ಆತ ಬೆಂಗಳೂರಿಗೆ ಬಂದ 4 ವರ್ಷದಲ್ಲಿ ಇಲ್ಲಿ ದುಡಿದು ನೇಪಾಳದಲ್ಲಿ ಮನೆ ಕಟ್ಟಿಸಿದನಂತೆ! ಇಂಥವರು ಅದೆಷ್ಟು ಜನರಿದ್ದಾರೋ?

ಹೀಗಾಗಿ, ಇಲ್ಲಿ ಹುಟ್ಟುವ ಒಂದಿಷ್ಟು ಪ್ರಶ್ನೆಗಳೆಂದರೆ– ಇಂಥ ಕೆಲಸಗಳನ್ನು ಮಾಡಲು ಸ್ಥಳೀಯವಾಗಿ ಜನರಿಲ್ಲವೇ? ಇದ್ದರೂ ಅವರು ಇಂಥ ಕೆಲಸಗಳನ್ನು ಮಾಡುವುದಿಲ್ಲವೇ? ಅವರನ್ನು ಕೀಳರಿಮೆ ಬಾಧಿಸುತ್ತಿದೆಯೇ? ಇಂಥ ಕೆಲಸಗಳನ್ನು ಮಾಡಲು ಬೆಂಗಳೂರಿನಲ್ಲಿ ಉತ್ತರ ಭಾರತೀಯರ ಮಾಲೀಕತ್ವದ ಕೆಲವು ಏಜೆನ್ಸಿಗಳಿದ್ದು, ಅಲ್ಲಿನವರಿಗೆ ಒಂದು ಫೋನಾಯಿಸಿದರೆ ಸಮಯಕ್ಕೆ ಸರಿಯಾಗಿ ಕೆಲಸವನ್ನು ಪೂರೈಸಿ ಹೋಗುತ್ತಾರೆ. ಇದು ನಮ್ಮವರಿಂದೇಕೆ ಸಾಧ್ಯವಿಲ್ಲ? ಒಂದು ಕಾಲಕ್ಕೆ ಉಡುಪಿ ಹೋಟೆಲ್‌ಗಳಲ್ಲಿ ಕರಾವಳಿ, ಮಲೆನಾಡು ಮತ್ತು ಉತ್ತರ ಕರ್ನಾಟಕದ ಹುಡುಗರು ಕೆಲಸ ಮಾಡುವುದನ್ನು ಕಾಣಬಹುದಾಗಿತ್ತು. ಆದರೆ ಇಂದು ಅವರ ಜಾಗವನ್ನು ಹಿಂದಿವಾಲಾಗಳು, ನೇಪಾಳಿಗಳು ಮತ್ತು ಈಶಾನ್ಯ ಭಾರತೀಯರು ಆಕ್ರಮಿಸಿಕೊಂಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ಉತ್ತರ ಭಾರತೀಯರು ಮಾಡುವ 'ಬೆಂಗಳೂರು ನಮ್ಮಿಂದಲೇ ಅಭಿವೃದ್ಧಿಯಾಗಿದೆ, ಆಗುತ್ತಿದೆ' ಎಂಬ ಕಾಮೆಂಟುಗಳನ್ನು ಸಂಪೂರ್ಣ ತಳ್ಳಿಹಾಕುವಂತಿಲ್ಲ. ಕೋವಿಡ್ ಸಮಯದಲ್ಲಿ ವಲಸಿಗರು ಟ್ರೇನ್ ತುಂಬಿ ತಮ್ಮೂರುಗಳಿಗೆ ಮರಳಿದಾಗ, ಬೆಂಗಳೂರಿಗರಿಗೂ ಕಾರ್ಮಿಕರ ಕೊರತೆಯ ಅನುಭವವಾಗಿತ್ತು, ಕಟ್ಟಡ ನಿರ್ಮಾಣ ಚಟುವಟಿಕೆಯು ಬಹುತೇಕ ನಿಂತಿತ್ತು..!

**(ಲೇಖಕರು ಅರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)**

## ಭಟ್ಟರ್ ಸ್ಕಾಚ್

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಒಂದು ವಾರದಲ್ಲಿ ಎಷ್ಟು ದಿನಗಳು?
– **ಹೆಬ್ಬಾಳ್ಕರ್ ಮೇಡಂಗೆ ಕೇಳಿದರೆ, ಐದು ಅಥವಾ ಆರು ಎಂದು ಹೇಳಬಹುದು!**

- **ಎಲ್.ವಿ.ಸತೀಶ್, ಮೈಸೂರು**
ಭಟ್ರೇ, ಒಂದು ವೇಳೆ ಪೊಲೀಸರೇ ಇಲ್ಲದೇ ಹೋಗಿದ್ದರೆ ಆಗ ಕಳ್ಳರನ್ನು ಯಾರು ಹಿಡಿಯುತ್ತಿದ್ದರು?
– **ಸಮೀರ, ಮಟ್ಟಣ್ಣ, ತಿಮ್ಮರೋಡಿ ಥರದವರು!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಹೆಚ್ಚು ಹೆಚ್ಚು ವಿದೇಶ ಪ್ರವಾಸ ಮಾಡುವವರಿಗೆ ಗೋಲ್ಡ್ ಮೇಲೆ ಆಸೆಯಾದರೆ, ನಿಮಗೆ?
– **ಲಿಕ್ವಿಡ್ ಗೋಲ್ಡ್!**

- **ಆಕಾಶಕೀರ್ತಿ ಬಿ., ಶಿವಮೊಗ್ಗ**
ಭಟ್ರೇ, ಕರ್ನಾಟಕ ರಾಜಕಾರಣದ ಗಂಟಲ್‌ಮ್ಯಾನ್ ಯಾರು?
– **ಉಗ್ರಪ್ಪ!**

- **ಎಸ್.ಕೆ.ಪಾಟೀಲ, ಬೆಂಗಳೂರು**
ಭಟ್ರೇ, ತನಗೆ ಅರ್ಹತೆ ಇದ್ದರೂ ಯಾವ ಹುದ್ದೆಯನ್ನೂ ಕೊಟ್ಟಿಲ್ಲ ಎಂದು ಆರ್.ಜಿ.ಹಳ್ಳಿ ನಾಗರಾಜ ಹೇಳಿದ್ದಾರಲ್ಲ?
– **ಅವರಿಗೆ 'ಕೂದಲ' ಸಂಗಮ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹುದ್ದೆ ಕೊಡಬಹುದಿತ್ತು!**

- **ಜಿ.ಪ್ರತಾಪ ಕೊಡಂಚ, (ಇಮೇಲ್ ಮೂಲಕ)**
ಭಟ್ರೇ, ಡಿಕೆಶಿ ಗೊಮ್ಮಟನ ಹಾಗೆ ಬೆಳೆದು ನಿಲ್ಲಲಿ ಅಂತ ಮೊಯಿಲಿ ಹೇಳಿದ್ದಾರಲ್ಲ?
– **ಹೇಳಿದರೆ ಪರವಾಗಿಲ್ಲ, ಅವರ ಮೇಲೆ ಮಹಾಕಾವ್ಯ ಬರೆಯುತ್ತೇನೆ ಅಂತ ಹೆದರಿಸದಿದ್ದರೆ ಸಾಕು!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಹುಡುಗಿ ಚಿನ್ನದಂತಿರಬೇಕು ಎಂದು ಹೇಳೋದು ಸರೀನಾ?
– **ಹಾಗೆ ಹೇಳಿದ್ದನ್ನೇ ರನ್ಯಾ ರಾವ್ ತಪ್ಪಾಗಿ ಭಾವಿಸಿ, ಚಿನ್ನ ತರಲು ಆರಂಭಿಸಿದಳಂತೆ!**

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, 'ಕುಡಿಯೋಣು ಬಾರಾ' ಪುಸ್ತಕ ಓದಿ ಜನ ಕುಡಿಯಲು ಆರಂಭಿಸಿದರೆ?
– **ಆಗಲೂ ಅವರು ಒಳ್ಳೆಯ ಓದುಗರಾಗುತ್ತಾರೆ!**

# ಮತ್ತದೇ ಬೊಫೋರ್ಸ್ ಫಿರಂಗಿ ಸದ್ದು !

**ಲೋಕಮತ**
**ಲೋಕೇಶ್ ಕಾಯರ್ಗ**
kaayarga@gmail.com

ಸಾಯಲಿಕ್ಕೂ ಬಿಡರು, ಬದುಕಲಿಕ್ಕೂ ಬಿಡರು'– ಬೊಫೋರ್ಸ್ ಹಗರಣಕ್ಕೆ ಇದಕ್ಕಿಂತ ಉತ್ತಮ ವ್ಯಾಖ್ಯಾನ ಇರಲಿಕ್ಕಿಲ್ಲ. ಇನ್ನೇನು ತೆರೆ ಬಿತ್ತು ಎನ್ನುವಷ್ಟರಲ್ಲಿ ಮತ್ತೆ ಸುದ್ದಿ ಮಾಡುವ ಹಗರಣಕ್ಕೆ ಈಗ ಬರೋಬ್ಬರಿ 37 ವರ್ಷ. ಹಲವರಿಗೆ ಇದು ಮರೆತ ವಿಷಯ. ಹೊಸ ಪೀಳಿಗೆಯಲ್ಲಿ ಅನೇಕರಿಗೆ ಅರಿಯದ ವಿಷಯ. ಆದರೆ ಬೊಫೋರ್ಸ್ ಫಿರಂಗಿಯ ಹೆಸರು ಬಂದಾಗಲೆಲ್ಲಾ ಅಧಿಕಾರದ ವಲಯದಲ್ಲಿ ಹೊಸ ಸಂಚಲನ ಮೂಡುತ್ತದೆ. ಮಾಧ್ಯಮಗಳಲ್ಲಿ ಪ್ರಮುಖ ಸುದ್ದಿಯಾಗುತ್ತದೆ. ಆದರೆ ದೀಪಾವಳಿಯ ಪಟಾಕಿಯಂತೆ ಕೆಲವೇ ದಿನಗಳಲ್ಲಿ ಸುದ್ದಿಯ ಸದ್ದಡಗುತ್ತದೆ. ಮುಗಿದೇ ಹೋಯಿತು ಎನ್ನುವಷ್ಟರಲ್ಲಿ ಮತ್ತೆ ಅದೇ ಸದ್ದು. ಆರೋಪ, ಪ್ರತ್ಯಾರೋಪಗಳ ಪಟಾಕಿ.

1984ರ ಲೋಕಸಭೆ ಚುನಾವಣೆಯಲ್ಲಿ ಇಂದಿರಾ ಗಾಂಧಿ ಹತ್ಯೆಯ ಅನುಕಂಪದ ಅಲೆ ಏರಿ ಅಧಿಕಾರಕ್ಕೆ ಬಂದ ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷ 414 ಸ್ಥಾನಗಳನ್ನು ಪಡೆದು ಗೆಲುವು ಸಾಧಿಸಿದ್ದು ಇಂದಿಗೂ ದಾಖಲೆ. ಆದರೆ ಐದು ವರ್ಷಗಳ ಆಡಳಿತದ ನಂತರ 1989ರಲ್ಲಿ ನಡೆದ ಚುನಾವಣೆಯಲ್ಲಿ ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷ ಗೆದ್ದಿದ್ದು ಕೇವಲ 197 ಸ್ಥಾನಗಳು. ಇದಕ್ಕೆ ಕಾರಣವಾಗಿದ್ದು ಇದೇ ಬೊಫೋರ್ಸ್ ಹಗರಣ.

ಸ್ವೀಡನ್ ದೇಶದ ಶಸ್ತ್ರಾಸ್ತ್ರ ತಯಾರಿಕಾ ಸಂಸ್ಥೆ ಬೊಫೋರ್ಸ್ ಕಂಪೆನಿಯಿಂದ 1,437 ಕೋಟಿ ರು. ವೆಚ್ಚದಲ್ಲಿ 400 ಬೊಫೋರ್ಸ್ ಫಿರಂಗಿ ಖರೀದಿಸಲು ರಾಜೀವ್ ಸರಕಾರ 1986ರ ಮಾರ್ಚ್ 18ರಂದು ಒಪ್ಪಂದ ಮಾಡಿಕೊಂಡಿತ್ತು. ಇದರಿಂದ ಭಾರತೀಯ ಭೂ ಸೇನೆಯ ಸಾಮರ್ಥ್ಯವನ್ನು ಮೇಲ್ದರ್ಜೆಗೇರಲಿದೆ ಎಂದು ಹೇಳಲಾಗಿತ್ತು. ಕಾರ್ಗಿಲ್ ಯುದ್ಧದಲ್ಲಿ ಬೊಫೋರ್ಸ್ ಗನ್ ಪಾತ್ರ ಗಮನಿಸಿದರೆ ಇದು ನಿಜವೂ ಆಗಿತ್ತು. ಆದರೆ ಈ ಒಪ್ಪಂದ ಏರ್ಪಟ್ಟು ಒಂದು ವರ್ಷದ ನಂತರ 1987ರ ಏಪ್ರಿಲ್ 16ರಂದು ಸ್ವೀಡನ್‌ನ ರೇಡಿಯೋ ಪ್ರಸಾರ ಮಾಡಿದ ಸ್ಫೋಟಕ ಸುದ್ದಿ ಭಾರತದ ರಾಜಕಾರಣದ ದಿಕ್ಕುದೆಸೆ ಬದಲಿಸುವಂತೆ ಮಾಡಿತು. ಬೊಫೋರ್ಸ್ ತೋಪುಗಳ ಖರೀದಿ ಕುದುರಿಸಲು ಸ್ವೀಡಿಸ್ ಕಂಪನಿ ಭಾರತದ ಪ್ರಮುಖ ರಾಜಕಾರಣಿಗಳು ಮತ್ತು ಸೇನಾಧಿಕಾರಿಗಳಿಗೆ ಭಾರಿ ಮೊತ್ತದ ಲಂಚ ನೀಡಿದೆ ಎಂದು ರೇಡಿಯೋದಲ್ಲಿ ಸುದ್ದಿ ಬಿತ್ತರವಾಗಿತ್ತು.

ಅಂತಿಮವಾಗಿ ರಾಜೀವ್ ಗಾಂಧಿ ಅವರೇ 64 ಕೋಟಿ ರು. ಹಗರಣದ ಪ್ರಮುಖ ರೂವಾರಿ ಎಂದು ದೇಶದ ಮತದಾರರನ್ನು ನಂಬಿಸುವಲ್ಲಿ ಪ್ರತಿಪಕ್ಷಗಳು ಯಶಸ್ವಿಯಾಗಿದ್ದವು. ಸೋನಿಯಾ ಗಾಂಧಿ ಅವರ ಕುಟುಂಬದ ನಿಕಟವರ್ತಿ ಎನ್ನಲಾದ ಇಟಲಿ ಮೂಲದ ಉದ್ಯಮಿ ಒಟ್ಟಾವಿಯೊ ಕ್ವಟ್ರೋಕಿ ಈ ಹಗರಣದಲ್ಲಿ ಮುಖ್ಯ ಆರೋಪಿಯಾಗಿದ್ದು ಸಂಶಯಕ್ಕೆ ಇನ್ನಷ್ಟು ಪುಷ್ಟಿ ನೀಡುವಂತಿತ್ತು. ಈ ಹಗರಣದ ಕಾರಣಕ್ಕೆ ಅಧಿಕಾರ ಕಳೆದುಕೊಂಡ ರಾಜೀವ್ ಗಾಂಧಿ ಅವರು ಮತ್ತೆಂದೂ ಪ್ರಧಾನಿ ಹುದ್ದೆಗೆ ಏರಲು ಸಾಧ್ಯವಾಗಲಿಲ್ಲ. ಈ ಹಗರಣವನ್ನೇ ಪ್ರಧಾನ ಭೂಮಿಕೆಯನ್ನಾಗಿಸಿ ಅಧಿಕಾರಕ್ಕೆ ಬಂದ ಪ್ರತಿಪಕ್ಷಗಳಿಗೂ ಹಗರಣಕ್ಕೆ ತಾರ್ಕಿಕ ಅಂತ್ಯ ಕಾಣಿಸಲು ಸಾಧ್ಯವಾಗಲಿಲ್ಲ.

ಹಗರಣದ ತನಿಖೆಯ ಹೊಣೆ ಹೊತ್ತ ಸಿಬಿಐಗೆ ಆರೋಪ ಸಾಬೀತುಪಡಿಸುವುದು ಬಿಡಿ, ಆರೋಪಿಗಳನ್ನು ಕನಿಷ್ಠ ಒಂದು ಬಾರಿ ಮುಖಾಮುಖಿ ವಿಚಾರಣೆಗೊಳಪಡಿಸಲು, ಕಟಕಟೆಗೆ ತರಲು ಸಾಧ್ಯವಾಗಲಿಲ್ಲ. ಸಿಬಿಐ ಆರೋಪ ಪಟ್ಟಿ ಸಲ್ಲಿಸುವ ಮೊದಲೇ ರಾಜೀವ್ ಗಾಂಧಿ ಬಾಂಬ್ ಸ್ಫೋಟಕ್ಕೆ ಬಲಿಯಾಗಿದ್ದರು. ಆರೋಪಿ ಸ್ಥಾನದಲ್ಲಿ ನಿಂತಿದ್ದ ಬೊಫೋರ್ಸ್ ಸಂಸ್ಥೆಯ ಅಧ್ಯಕ್ಷ ಮಾರ್ಟಿನ್ ಅಡ್ಬೊರ್, ಒಟ್ಟಾವಿಯೊ ಕ್ವಟ್ರೋಕಿ, ಲಂಚ ವ್ಯವಹಾರದಲ್ಲಿ ದಲ್ಲಾಳಿಯ ಕೆಲಸ ಮಾಡಿದ್ದರೆನ್ನಲಾದ ವಿನ್ ಚಡ್ಡಾ, ಹಿಂದೂಜಾ ಸಹೋದರರು, ಆಗಿನ ರಕ್ಷಣಾ ಇಲಾಖೆಯ ಕಾರ್ಯದರ್ಶಿ ಆಗಿದ್ದ ಎಸ್.ಕೆ. ಭಟ್ನಾಗರ್ ಸೇರಿದಂತೆ ಎಲ್ಲರೂ ಆರೋಪ ಮುಕ್ತರಾದರು. ಈಗ ಇವರೆಲ್ಲರೂ ಇಹಲೋಕದಿಂದಲೂ ಮುಕ್ತರಾಗಿದ್ದಾರೆ.

### ಮತ್ತದೇ ಸದ್ದು

ಇದೀಗ ಮೂರೂವರೆ ದಶಕಗಳ ಬಳಿಕ ಇದೇ ಹಗರಣದ ಸಂಬಂಧ ವಿವರ ಕೋರಿ ಅಮೆರಿಕಕ್ಕೆ ಸಿಬಿಐ ನ್ಯಾಯಾಂಗ ಕೋರಿಕೆ ರವಾನಿಸಿದೆ. ಬೊಫೋರ್ಸ್ ಹಗರಣದ ಕುರಿತು ತನ್ನ ಬಳಿ ಹೆಚ್ಚಿನ ಮಾಹಿತಿ ಇದೆ ಎಂದಿದ್ದ ಅಮೆರಿಕದ ಖಾಸಗಿ ಗೂಢಚರ, ಫೇರ್‌ಫಾಕ್ಸ್ ಗ್ರೂಪ್‌ನ ಮುಖ್ಯಸ್ಥ ಮೈಕೆಲ್ ಹರ್ಷ್‌ಮನ್ ಅವರಿಂದ ಮಾಹಿತಿ ಸಂಗ್ರಹದ ಸಲುವಾಗಿ ಸಿಬಿಐ ಈ ನ್ಯಾಯಾಂಗ ಕೋರಿಕೆ ರವಾನಿಸಿದೆ. ಸಿಬಿಐ ನಡೆಯ ಹಿಂದೆ ಕೇಂದ್ರ ಸರಕಾರದ ಒತ್ತಾಸೆ ಇರುವುದು ಸ್ಪಷ್ಟ. ಕಾಂಗ್ರೆಸ್ ಪಕ್ಷವನ್ನು ಬೆಂಬಿಡದ ಭೂತವಾಗಿ ಕಾಡುತ್ತಿರುವ ಬೊಫೋರ್ಸ್ ಹಗರಣದಲ್ಲಿ ರಾಜೀವ್ ಗಾಂಧಿ ಇಲ್ಲವೇ ಕ್ವಟ್ರೋಕಿ ಪಾತ್ರದ ಬಗ್ಗೆ ಒಂದೆಳೆ ಸಿಕ್ಕಿದರೂ ಮೋದಿ ಸರಕಾರಕ್ಕೆ ಅದುವೇ ಬೋನಸ್.

ಹರ್ಷ್‌ಮನ್ 2017ರಲ್ಲಿ ಸಮ್ಮೇಳನವೊಂದರಲ್ಲಿ ಭಾಗವಹಿಸಲು ಭಾರತಕ್ಕೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ,'' ಕಾಂಗ್ರೆಸ್ ಪಕ್ಷ ಹಗರಣದ ತನಿಖೆಯನ್ನು ಹಳಿ ತಪ್ಪಿಸಿತ್ತು. ಸಿಬಿಐ ಕೋರಿದರೆ ಅದರ ಜೊತೆ ವಿವರ ಹಂಚಿಕೊಳ್ಳಲು ಸಿದ್ಧ'' ಎಂದು ಹೇಳಿದ್ದರು. ''ವಿದೇಶಗಳಲ್ಲಿ ಇರುವ ಭಾರತೀಯರು ಕರೆನ್ಸಿ ನಿಯಂತ್ರಣ ಕಾನೂನುಗಳನ್ನು ಉಲ್ಲಂಘಿಸಿದ್ದರೆ, ಹಣದ ಅಕ್ರಮ ವರ್ಗಾವಣೆಯಲ್ಲಿ ತೊಡಗಿದ್ದರೆ ಅದರ ಬಗ್ಗೆ ತನಿಖೆ ನಡೆಸಲು ಮತ್ತು ಅಂತಹ ಆಸ್ತಿಗಳ ಮೇಲೆ ಕಣ್ಣಿಡಲು ಕೇಂದ್ರ ಹಣಕಾಸು ಸಚಿವಾಲಯವು 1986ರಲ್ಲಿ ತಮ್ಮನ್ನು ನೇಮಿಸಿತ್ತು. ಆ ಪೈಕಿ ಕೆಲವು ಆಸ್ತಿಗಳು ಬೊಫೋರ್ಸ್ ಒಪ್ಪಂದಕ್ಕೆ ಸಂಬಂಧಿಸಿದವು'' ಎಂದು ಸಂದರ್ಶನವೊಂದರಲ್ಲಿ ಅವರು ಹೇಳಿದ್ದರು.

ಇದಾದ ಮರು ತಿಂಗಳಲ್ಲೇ ಹಗರಣದ ಮರು ತನಿಖೆ ಕೋರಿ ಸಿಬಿಐ ಸುಪ್ರೀಂ ಕೋರ್ಟ್ ಮುಂದೆ ಅರ್ಜಿ ಸಲ್ಲಿಸಿತ್ತು. ಆದರೆ ಮುಖ್ಯ ನ್ಯಾಯಮೂರ್ತಿ ರಂಜನ್ ಗಗೋಯ್ ಅವರ ನೇತೃತ್ವದ ನ್ಯಾಯಪೀಠ ಅರ್ಜಿ ಸಲ್ಲಿಕೆ ವೇಳೆ ಆಗಿರುವ ವಿಳಂಬವನ್ನು ಪರಿಗಣಿಸಿ ಮರು ತನಿಖೆ ಸಾಧ್ಯವಿಲ್ಲ ಎಂದು ಸಿಬಿಐ ಅರ್ಜಿಯನ್ನು ತಳ್ಳಿ ಹಾಕಿತ್ತು. ಇದಾಗಿ ಎಂಟು ವರ್ಷಗಳ ಬಳಿಕ ಗುಜರಿ ಸೇರಿದ್ದ ಬೊಫೋರ್ಸ್ ಫಿರಂಗಿಯನ್ನು ಸಿಬಿಐಗೆ ಕೈ ಕೊಟ್ಟು ಮತ್ತೊಮ್ಮೆ ಕಾಂಗ್ರೆಸ್ ವಿರುದ್ಧ ಟೀಕಾಸ್ತ್ರವಾಗಿ ಬಳಸಲು ಮೋದಿ ಸರಕಾರ ಯೋಜನೆ ರೂಪಿಸಿದೆ.

### ಸಿಬಿಐ ಎಂಬ ಅಧಿಕಾರಸ್ಥರ ಕೈ ಗೊಂಬೆ

ಆಯಾ ಸರಕಾರಗಳ ತಾಳಕ್ಕೆ ತಕ್ಕಂತೆ ಸಿಬಿಐ ಹೆಸರಿನ ತನಿಖಾ ಸಂಸ್ಥೆ ಹೇಗೆ ಕುಣಿಯಬೇಕಾಗುತ್ತದೆ ಎನ್ನುವುದಕ್ಕೆ ಬೊಫೋರ್ಸ್ ಹಗರಣ ಅತ್ಯುತ್ತಮ ಉದಾಹರಣೆ. ಬೊಫೋರ್ಸ್ ಹಗರಣವನ್ನೇ ಪ್ರಧಾನ ಅಸ್ತ್ರವಾಗಿಸಿಕೊಂಡು ಅಧಿಕಾರಕ್ಕೆ ಬಂದ ವಿ.ಪಿ. ಸಿಂಗ್ ಸರಕಾರ ಸಿಬಿಐ ತನಿಖೆಗೆ ಆದೇಶ ನೀಡಿತ್ತು. ಆದರೆ ವರ್ಷ ಕಳೆಯುವ ಮುನ್ನವೇ ಅಧಿಕಾರ ಕಳೆದುಕೊಂಡ ಸರಕಾರಕ್ಕೆ ಈ ನಿಟ್ಟಿನಲ್ಲಿ ಏನನ್ನೂ ಮಾಡಲಾಗಲಿಲ್ಲ. ನಂತರ ಬಂದ ಚಂದ್ರಶೇಖರ್ ಅವರ ಸರಕಾರ ಕಾಂಗ್ರೆಸ್ ಬೆಂಬಲವನ್ನು ನೆಚ್ಚಿಕೊಂಡಿತ್ತು. ಬಳಿಕ 1991ರಿಂದ 1996ರ ತನಕ ಪೂರ್ಣಾವಧಿಗೆ ಸರಕಾರ ನಡೆಸಿದ ನರಸಿಂಹ ಸರಕಾರ ಇದೇ ತನಿಖಾ ಸಂಸ್ಥೆಯನ್ನು ಬಳಸಿಕೊಂಡು ಈ ಹಗರಣಕ್ಕೆ ಸಮಾಧಿ ತೋಡುವ ಕೆಲಸ ಮಾಡಿತು.

ಬೊಫೋರ್ಸ್ ಹಗರಣದ ತನಿಖೆಯಲ್ಲಿ ಮುಖ್ಯ ಘಟ್ಟವಾಗಿದ್ದ ಈ ಅವಧಿಯಲ್ಲಿ ಸಿಬಿಐ ಮನವಿ ಮೇರೆಗೆ ಬ್ರಿಟನ್‌ನಲ್ಲಿ ಉದ್ಯಮಿ ಒಟ್ಟಾವಿಯೋ ಕ್ವಟ್ರೋಕಿ ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು. ಆದರೆ ಇದೇ ಸಿಬಿಐ, ಬಳಿಕ ಕ್ವಟ್ರೋಕಿಗೆ ಬೊಫೋರ್ಸ್ ಕಂಪನಿಯಿಂದ ಕಮಿಷನ್ ರೂಪದಲ್ಲಿ ಹಣ ಪಡೆದಿದ್ದಾರೆ ಎನ್ನಲು ತನ್ನ ಬಳಿ ಯಾವುದೇ ಸಾಕ್ಷ್ಯಾಧಾರಗಳು ಇಲ್ಲ ಎಂದು ಅಫಿಡವಿಟ್ ಸಲ್ಲಿಸಿತ್ತು. ಈ ಅಫಿಡವಿಟ್ ಆಧಾರದಲ್ಲಿ ಲಂಡನ್‌ನ ಬಿಎಸ್‌ಐಎಜಿ ಬ್ಯಾಂಕಿನಲ್ಲಿದ್ದ ಕ್ವಟ್ರೋಕಿಯ ಎರಡು ಬ್ಯಾಂಕ್ ಖಾತೆಗಳ ಮೇಲಿನ ದಿಗ್ಬಂಧನವನ್ನು ಬ್ರಿಟನ್ ನ್ಯಾಯಾಲಯ ರದ್ದುಪಡಿಸಿತ್ತು.

ಬ್ರಿಟನ್ ಕೋರ್ಟ್ ಆದೇಶ ಕೈ ಸೇರಿದ ಮರುದಿನವೇ ಕ್ವಟ್ರೋಕಿ ತನ್ನ ಎರಡೂ ಬ್ಯಾಂಕ್ ಖಾತೆಗಳಲ್ಲಿದ್ದ ಸುಮಾರು 21 ಕೋಟಿ ರೂ.ಗಳನ್ನು ಪತ್ನಿ ಮಾರಿಯಾಳ ಹೆಸರಿಗೆ ವರ್ಗಾಯಿಸಿದ್ದ. ಬ್ಯಾಂಕ್ ಖಾತೆಗಳ ಮರುಸ್ಥಂಭನಕ್ಕೆ ಕ್ರಮಕೈಗೊಳ್ಳುವಂತೆ ಸುಪ್ರೀಂಕೋರ್ಟ್ ಸಿಬಿಐಗೆ ಸೂಚಿಸುವಷ್ಟರಲ್ಲಿ ಈ ಖಾತೆಯಲ್ಲಿದ್ದ ಹಣ ಖಾಲಿಯಾಗಿತ್ತು. ಸಿಬಿಐ ಬಯಸಿದರೆ 'ಘೋಷಿತ ಅಪರಾಧಿ' ಕ್ವಟ್ರೋಕಿ ಆಸ್ತಿ ಮುಟ್ಟುಗೋಲು ಹಾಕಲು ಕಷ್ಟವೇನೂ ಇರಲಿಲ್ಲ. ಒರಿಸ್ಸಾದಲ್ಲಿ ಕ್ವಟ್ರೋಕಿಗೆ ಸೇರಿದ ವಿದ್ಯುತ್ ಕಂಪನಿ ಆ ಸಮಯದಲ್ಲಿ ಕಾರ್ಯಾಚರಣೆ ನಡೆಸುತ್ತಿತ್ತು. !

ಕ್ವಟ್ರೋಕಿಯನ್ನು ದೋಷಮುಕ್ತಗೊಳಿಸಲು ಅಂದು ಸಿಬಿಐ ಸ್ವತಃ ವಕಾಲತ್ತು ವಹಿಸಿತ್ತು. ಪಿ.ವಿ. ನರಸಿಂಹ ರಾವ್ ಸರಕಾರದಲ್ಲಿ ಕಾನೂನು ಸಚಿವರಾಗಿದ್ದ, ಕರ್ನಾಟಕದ ರಾಜ್ಯಪಾಲರಾಗಿಯೂ ಹಲವು ವರ್ಷ ಸೇವೆ ಸಲ್ಲಿಸಿದ ಹಂಸ್‌ರಾಜ್ ಭಾರದ್ವಾಜ್ ಅಂದು ರಾಜೀವ್ ಕುಟುಂಬದ ರಕ್ಷಣೆಗೆ ಟೊಂಕ ಕಟ್ಟಿ ನಿಂತಿದ್ದರು. ಅಡಿಷನಲ್ ಸಾಲಿಸಿಟರ್ ಜನರಲ್ ಬಿ. ದತ್ತಾ ಖುದ್ದಾಗಿ ಬ್ರಿಟನ್‌ಗೆ ಧಾವಿಸಿ ಕ್ವಟ್ರೋಕಿ ವಿರುದ್ಧ ಸಿಬಿಐ ಬಳಿ ಸಾಕ್ಷ್ಯಗಳಿಲ್ಲ ಎಂದು ಅಫಿಡವಿಟ್ ಸಲ್ಲಿಸುವಲ್ಲಿ ಭಾರದ್ವಾಜ್ ನಿರ್ದೇಶನವಿತ್ತು.

ದಿಲ್ಲಿಯ ನ್ಯಾಯಾಲಯ 2004ರ ಮೇ 31 ರಂದು ನೀಡಿದ ತೀರ್ಪಿನಲ್ಲಿ ಈ ಹಗರಣದಲ್ಲಿ ರಾಜೀವ್ ಕುಟುಂಬವನ್ನು ದೋಷಮುಕ್ತಗೊಳಿಸಿದೆಯಾದರೂ ಕ್ವಟ್ರೋಕಿ ಮತ್ತು ರಾಜೀವ್ ಕುಟುಂಬದ ನಂಟನ್ನು ಅಲ್ಲಗಳೆಯಲು ಈವರೆಗೂ ಸಾಧ್ಯವಾಗಿಲ್ಲ. ಬೊಫೋರ್ಸ್ ಹಗರಣ ಬಯಲಾಗುವ ಮುನ್ನ ಕ್ವಟ್ರೋಕಿ ಕುಟುಂಬ ಮತ್ತು ರಾಜೀವ್ ಕುಟುಂಬ ನಿಕಟ ಸ್ನೇಹ ಹೊಂದಿತ್ತು ರಾಜೀವ್ ಕುಟುಂಬದ ಸದಸ್ಯರು ಇಟಲಿಗೆ ಭೇಟಿ ನೀಡಿದಾಗಲೆಲ್ಲಾ ಕ್ವಟ್ರೋಕಿ ಮನೆಗೆ ಭೇಟಿ ನೀಡುತ್ತಿದ್ದರು. ಹಾಗೆಯೇ ಕ್ವಟ್ರೋಕಿಗೆ 10 ಜನಪಥ್ ನಿವಾಸಕ್ಕೆ ಮುಕ್ತ ಪ್ರವೇಶಾವಕಾಶವಿತ್ತು. ಖಾತೆ ನಿರ್ಬಂಧ ರದ್ದಾದ ಬೆನ್ನಿಗೇ '' ಸೋನಿಯಾ ಕುಟುಂಬದೊಂದಿಗೆ ನನಗೆ ಈಗಲೂ ನಂಟಿದೆ. ಈ ಬಗ್ಗೆ ಹೆಮ್ಮೆಯಿದೆ'' ಎಂದು ಕ್ವಟ್ರೋಕಿ ಹೇಳಿಕೊಂಡಿದ್ದರು.

ಈಗ ಹೊರಬರುತ್ತಿರುವ ಸಹಸ್ರ ಕೋಟಿ ರೂ. ಮೊತ್ತದ ಹಗರಣಗಳಿಗೆ ಹೋಲಿಸಿದರೆ ಬೊಫೋರ್ಸ್ ಹಗರಣ ಸಾಸಿವೆ ಕಾಳಿಗೆ ಸಮ. 64 ಕೋಟಿ ರು. ಹಗರಣದ ವಿಚಾರಣೆಗೆ 250 ಕೋಟಿ ರೂಪಾಯಿ ವ್ಯಯಿಸಿದ್ದಕ್ಕೆ ದಿಲ್ಲಿ ಹೈಕೋರ್ಟ್ ಸಿಬಿಐಗೆ ಛೀಮಾರಿ ಹಾಕಿತ್ತು. ನಂತರ ತನಿಖೆ ಮುಂದುವರಿಸುವ ಬಿಜೆಪಿ ಸರಕಾರದ ಮನವಿಗೆ ಸುಪ್ರೀಂಕೋರ್ಟ್ ಕೆಂಪು ನಿಶಾನೆ ತೋರಿಸಿತ್ತು. ಆದರೆ ದೇಶದ ಪ್ರಧಾನಿಯನ್ನೇ ಸಂಶಯದ ದೃಷ್ಟಿಯಲ್ಲಿ ನೋಡುವಂತೆ ಮಾಡಿದ ಈ

ಹಗರಣಕ್ಕೆ ರಾಜಕೀಯ ಇತಿಹಾಸದಲ್ಲಿ ಅತ್ಯಂತ ಹೆಚ್ಚಿನ ಮಹತ್ವವಿದೆ. ದೇಶದ ರಕ್ಷಣೆಗೆ ಸಂಬಂಧಿಸಿದ ಈ ಹಗರಣ ಸ್ವತಂತ್ರ ಭಾರತದ ಮೊಟ್ಟಮೊದಲ ರಾಜಕೀಯ ಹಗರಣವೂ ಹೌದು.

ಎರಡೂ ದೇಶಗಳಲ್ಲಿ ಟ್ರಂಪ್ ಮತ್ತು ಮೋದಿ ಎಂಬ ದೋಸ್ತಿ ಸರಕಾರವಿದೆ. ಈ ಹಂತದಲ್ಲಿ ಬೊಫೋರ್ಸ್ ಬಗ್ಗೆ ಹೆಚ್ಚಿನ ಮಾಹಿತಿ ಕೋರಿ ಸಿಬಿಐ ಸಲ್ಲಿಸಿರುವ ನ್ಯಾಯಾಂಗ ಕೋರಿಕೆಗೆ ಅಲ್ಲಿನ ನ್ಯಾಯಾಂಗ ಮತ್ತು ಸರಕಾರ ಯಾವ ರೀತಿ ಪ್ರತಿಕ್ರಿಯಿಸುತ್ತದೆ ಎಂದು ಕಾದು ನೋಡಬೇಕಾಗಿದೆ.

# ಉತ್ತರಕ್ಕೆ ಬೆಣ್ಣೆ, ದಕ್ಷಿಣಕ್ಕೆ ಸುಣ್ಣವೇ?!

**ಹಿತದೃಷ್ಟಿ**
**ಸುರೇಂದ್ರ ಪೈ, ಭಟ್ಕಳ**
vveditoped@gmail.com

ಕೇಂದ್ರ ಸರಕಾರವು ಪ್ರಸ್ತಾಪಿಸಿರುವ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ (ಡಿಲಿಮಿಟೇಷನ್) ವಿಷಯವು ಕೇಂದ್ರ ಮತ್ತು ದಕ್ಷಿಣ ರಾಜ್ಯಗಳ ನಡುವಿನ ಜಟಾಪಟಿಗೆ ಕಾರಣವಾಗಿದೆ. ಡಿಲಿಮಿಟೇಷನ್ ನೀತಿಯ ವಿರುದ್ಧ ದನಿಯೆತ್ತಿರುವ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್, ''ಡಿಲಿಮಿಟೇಷನ್ ಹೆಸರಲ್ಲಿ ದಕ್ಷಿಣ ರಾಜ್ಯಗಳ ಮೇಲೆ ತೂಗುಗತ್ತಿ ನೇತಾಡುತ್ತಿದ್ದು, ಈ ವಿಚಾರವು ಮುಂದುವರಿಯುವುದಕ್ಕೆ ಬಿಡೆನು'' ಎಂದಿದ್ದಾರೆ. ಕೇಂದ್ರದ ಪಾಲಿಗೆ ಬಿಸಿತುಪ್ಪವಾಗಿ ಪರಿಣಮಿಸಿರುವ ಈ ಡಿಲಿಮಿಟೇಷನ್ ಪರಿಕಲ್ಪನೆಯ ಕುರಿತು ಅವಲೋಕಿಸೋಣ.

ಡಿಲಿಮಿಟೇಷನ್ ಎಂಬುದು, ಜನಸಂಖ್ಯಾ ಬದಲಾವಣೆಗಳನ್ನು ಪ್ರತಿಬಿಂಬಿಸಲು ಸಂಸತ್ತಿನ ಮತ್ತು ರಾಜ್ಯ ವಿಧಾನಸಭಾ ಕ್ಷೇತ್ರಗಳ ಗಡಿಗಳನ್ನು ಮರುರೂಪಿಸುವ ಪ್ರಕ್ರಿಯೆ. ಈ ನೀತಿಯು ಸಾಂವಿಧಾನಿಕ ಅವಶ್ಯಕತೆಯಲ್ಲಿ ಒಂದಾಗಿದ್ದರೂ, ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಗೂ ಮುನ್ನ ಜನಸಂಖ್ಯಾ ತಾರತಮ್ಯವನ್ನು ಹೋಗಲಾಡಿಸಬೇಕಲ್ಲವೇ? ಈ ನೀತಿಯು ಸಂಪೂರ್ಣವಾಗಿ ರಾಜ್ಯದ ಜನಸಂಖ್ಯೆಗಳನ್ನು ಆಧರಿಸಿದ್ದು, ಪ್ರಸ್ತುತ ಉತ್ತರದ ಹಾಗೂ ದಕ್ಷಿಣದ ರಾಜ್ಯಗಳ ನಡುವೆ ಈ ವಿಷಯದಲ್ಲಿ ಭಾರಿ ಅಂತರವಿದೆ. ಪ್ರಸ್ತುತ ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಕ್ರಮವಾಗಿ 543 ಮತ್ತು 250 ಸ್ಥಾನಗಳಿದ್ದು, ಇವು 1971ರ ಜನಗಣತಿ ಸಂಖ್ಯೆಯನ್ನು ಆಧರಿಸಿವೆ. ಆದರೆ, ಸ್ಥಾನಗಳ ಸಂಖ್ಯೆ ಬದಲಾಗದೆ ಉಳಿದಿದ್ದರೂ, 2001ರ ಜನಗಣತಿಯ ನಂತರ ಕ್ಷೇತ್ರದ ಗಡಿಗಳು ಮತ್ತು ಎಸ್‌ಸಿ/ಎಸ್‌ಟಿ ಮೀಸಲುಗಳನ್ನು ಸರಿಹೊಂದಿಸಲಾಗಿದೆ. ಇದರ ಅವಧಿ 2026ರಲ್ಲಿ ಕೊನೆಯಾಗಲಿದ್ದು, ಈಗ ಡಿಲಿಮಿಟೇಷನ್ ಎಂಬ ಚೆಂಡು ಕೇಂದ್ರ ಸರಕಾರದ ಅಂಗಳದಲ್ಲಿದೆ. ಈ ಕುರಿತು ಆದಾಗಲೇ ಅರಿತಿದ್ದ ಕೇಂದ್ರ ಸರಕಾರವು ಪೂರ್ವಸಿದ್ಧತೆಯನ್ನು ಮಾಡಿಕೊಂಡಂತಿದೆ. ಈ ಬಾರಿ ಮತ್ತೇನಾದರೂ ಮರುವಿಂಗಡಣೆಯಾದರೆ, 543ರಷ್ಟಿರುವ ಎಂಪಿ ಸೀಟುಗಳ ಸಂಖ್ಯೆ 753ಕ್ಕೆ ಏರಬಹುದು ಎಂಬ ಲೆಕ್ಕಾಚಾರವಿದೆ (ನೂತನ ಸಂಸತ್ ಭವನವು ಹೊಂದಿರುವ 888 ಆಸನಗಳ ವ್ಯವಸ್ಥೆಯು, ಕ್ಷೇತ್ರಗಳ ಮರುವಿಂಗಡಣೆಯ ಕುರಿತಾದ ಚರ್ಚೆಗಳಿಗೆ ಮತ್ತಷ್ಟು ಉತ್ತೇಜನ ನೀಡಿತು ಎನ್ನಬೇಕು). ಇದರಿಂದ ಮುಖ್ಯವಾಗಿ ದಕ್ಷಿಣದ ರಾಜ್ಯಗಳಿಗೆ ಎಲ್ಲ ವಿಧದಲ್ಲೂ ಅನ್ಯಾಯವಾಗುತ್ತದೆ ಎಂಬ ಕಳವಳ ಎಲ್ಲರಲ್ಲೂ ಮನೆಮಾಡಿದೆ.

ಸ್ವಾತಂತ್ರ್ಯಾನಂತರದಲ್ಲಿ ಕುಟುಂಬ ಯೋಜನೆಗಳ ಮೂಲಕ ದಕ್ಷಿಣ ರಾಜ್ಯಗಳು ಜನಸಂಖ್ಯಾ ಸ್ಫೋಟವನ್ನು ಗಮನಾರ್ಹವಾಗಿ ನಿಯಂತ್ರಿಸಿದವು. ಆದರೆ, ಉತ್ತರಪ್ರದೇಶ ಸೇರಿದಂತೆ ಉತ್ತರದ ಇನ್ನಿತರ ರಾಜ್ಯಗಳು ಈ ವಿಷಯದಲ್ಲಿ ಸೋತಿವೆ. 2011ರ ಜನಗಣತಿಯ ಪ್ರಕಾರ, ಉತ್ತರ ಪ್ರದೇಶ ಹಾಗೂ ಬಿಹಾರ ರಾಜ್ಯಗಳು ಸೇರಿ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ.25ರಷ್ಟು ಪಾಲನ್ನು ಹೊಂದಿದ್ದರೆ, ದಕ್ಷಿಣದ 5 ರಾಜ್ಯಗಳ ಜನಸಂಖ್ಯೆಯನ್ನು ಒಗ್ಗೂಡಿಸಿದರೂ ಶೇ.21ರಷ್ಟು ಆಗುವುದಿಲ್ಲ. ಇವೆಲ್ಲಾ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡೇ ತಮಿಳುನಾಡಿನ ಸಿಎಂ ಸ್ಟಾಲಿನ್, ''ಗಡಿನಿರ್ಣಯವು ಕೇವಲ ತಮಿಳುನಾಡಿಗೆ ಸಂಬಂಧಿಸಿದ್ದಲ್ಲ, ಅದು ಇಡೀ ದಕ್ಷಿಣ ಭಾರತದ ಮೇಲೆ ಪರಿಣಾಮ ಬೀರಲಿದೆ. ಜನಸಂಖ್ಯಾ ಸ್ಫೋಟವನ್ನು ಯಶಸ್ವಿಯಾಗಿ ನಿಯಂತ್ರಿಸಿ ರಾಷ್ಟ್ರೀಯ ಪ್ರಗತಿಗೆ ಗಮನಾರ್ಹ ಕೊಡುಗೆ ನೀಡಿದ ದಕ್ಷಿಣದ ರಾಜ್ಯಗಳನ್ನು ಪ್ರಜಾಪ್ರಭುತ್ವದ ಪ್ರಕ್ರಿಯೆಯೊಂದು ದಂಡಿಸಬಾರದು'' ಎಂದಿರುವುದು.

ಪ್ರಸ್ತುತ, ಕರ್ನಾಟಕ, ತಮಿಳುನಾಡು, ತೆಲಂಗಾಣ, ಆಂಧ್ರ ಪ್ರದೇಶ, ಕೇರಳ ರಾಜ್ಯಗಳು ಸೇರಿ ಒಟ್ಟು 129 ಲೋಕಸಭಾ ಸ್ಥಾನಗಳನ್ನು (ಸರಿಸುಮಾರು ಶೇ.24ರಷ್ಟು ಪ್ರಾತಿನಿಧ್ಯವನ್ನು) ಹೊಂದಿವೆ. ಆದಾಗ್ಯೂ, ಪ್ರಮಾಣಾನುಗುಣ ಹೆಚ್ಚಳದೊಂದಿಗೆ ಈ ಶೇಕಡಾವಾರು ಪ್ರಾತಿನಿಧ್ಯವು ಮತ್ತಷ್ಟು ಕಡಿಮೆಯಾಗುತ್ತದೆ. ಪ್ರತಿ 10 ಲಕ್ಷ ಜನರಿಗೆ ಒಬ್ಬ ಸಂಸದ ಇರಬೇಕು ಎಂಬ ಲೆಕ್ಕವನ್ನೇ ಆಧರಿಸಿದರೆ, ದಕ್ಷಿಣದ ರಾಜ್ಯಗಳು ಹಲವು ಎಂಪಿ ಸೀಟುಗಳನ್ನು (ತಮಿಳುನಾಡು ಕನಿಷ್ಠ 8 ಸೀಟುಗಳನ್ನು) ಕಳೆದುಕೊಳ್ಳಲಿವೆ. ಒಂದೊಮ್ಮೆ, ಪ್ರತಿ ಕ್ಷೇತ್ರಕ್ಕೆ 10 ಲಕ್ಷಕ್ಕೆ ಬದಲಾಗಿ 20 ಲಕ್ಷದಷ್ಟು ಜನಸಂಖ್ಯಾ ಅನುಪಾತವನ್ನು ಅಂದಾಜಿಸಿದರೆ, ಒಟ್ಟು ಎಂಪಿ ಸೀಟುಗಳು 753ನ್ನು ಮುಟ್ಟುತ್ತವೆ; ಇದರನ್ವಯ ದಕ್ಷಿಣದ ರಾಜ್ಯಗಳ ಒಟ್ಟು ಎಂಪಿ ಸೀಟುಗಳು 144ನ್ನು (ಒಟ್ಟು ಪ್ರಾತಿನಿಧ್ಯ ಶೇ.19ರಷ್ಟು) ಮುಟ್ಟುತ್ತವೆ. ಅಂದರೆ, ಮೊದಲಿಗಿಂತಲೂ ಶೇ.5ರಷ್ಟು ಕುಸಿತವಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಈಗಾಗಲೇ ಅತಿಹೆಚ್ಚು ಸಂಸದರಿರುವ ಉತ್ತರ ಪ್ರದೇಶದಲ್ಲಿ ಇದು 80ರಿಂದ 128ಕ್ಕೆ, ಬಿಹಾರದಲ್ಲಿ 40ರಿಂದ 70ಕ್ಕೆ ತೀವ್ರ ಏರಿಕೆಯಾಗುವ ನಿರೀಕ್ಷೆಯಿದ್ದು, ಇದು ನಮಗೆ ಶಾಪವಾಗಲಿದೆ ಎಂಬ ಭೀತಿ ದಕ್ಷಿಣದ ರಾಜ್ಯಗಳನ್ನು ಕಾಡುತ್ತಿದೆ. ಪರಿಣಾಮವಾಗಿ ಲೋಕಸಭೆಯಲ್ಲಿ ಉತ್ತರದ ರಾಜ್ಯಗಳ ಪಾರಮ್ಯ ಹೆಚ್ಚಾಗುತ್ತದೆ, ಇದು ಸಾಂವಿಧಾನಿಕವಾಗಿ ಅಸಮಂಜಸ ನಡೆಯಾಗುತ್ತದೆ ಎಂಬುದಿಲ್ಲಿ ಕೆನೆಗಟ್ಟಿರುವ ಗ್ರಹಿಕೆ.

ಜನಸಂಖ್ಯೆಯನ್ನು ಆಧರಿಸಿ ಮಾತ್ರವೇ ಕ್ಷೇತ್ರದ ಮರುವಿಂಗಡಣೆಯಾದರೆ, ದಕ್ಷಿಣ ಭಾರತದ ಎಂಪಿ ಸೀಟುಗಳ ಪಾಲು ಶೇ.19ಕ್ಕೆ ಇಳಿಯಬಹುದು, ಆದರೆ ಹಿಂದಿ ಭಾಷಿಕ ರಾಜ್ಯಗಳ ಪಾಲು ಶೇ.60ಕ್ಕೆ ಏರಬಹುದು. ಹೀಗಾಗಿ ದಕ್ಷಿಣದವರ ರಾಜಕೀಯ ಪ್ರಾಬಲ್ಯ/ಪ್ರಭಾವ ಕುಸಿಯಬಹುದು ಮತ್ತು ಹಿಂದಿ ಭಾಷಿಕ ರಾಜ್ಯಗಳು ಹೆಚ್ಚಿನ ಲಾಭ ಪಡೆಯುವಂತಾಗಬಹುದು. ಇದು ರಾಷ್ಟ್ರೀಯ ನೀತಿ ನಿರೂಪಣೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂಬುದು ಈಗೆದ್ದಿರುವ ಕೂಗು. ಇಷ್ಟಲ್ಲದೆ, ಕೇಂದ್ರಗಳು ಸಂಗ್ರಹಿಸುವ ತೆರಿಗೆಯಲ್ಲಿ ರಾಜ್ಯಗಳಿಗೆ ನೀಡುವ ಪಾಲನ್ನು ಈಗಿನ ಶೇ.41ರಿಂದ 40ಕ್ಕೆ ಇಳಿಸಲು ಶಿಫಾರಸು ಮಾಡುವಂತೆ ಹಣಕಾಸು ಆಯೋಗಕ್ಕೆ ಕೋರಿಕೆ ಸಲ್ಲಿಸಲು ಕೇಂದ್ರ ಸಜ್ಜಾಗಿದೆ. ಇದೇನಾದರೂ ಕಾರ್ಯರೂಪಕ್ಕೆ ಬಂದಲ್ಲಿ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗಲಿದೆ. ಈಗಾಗಲೇ ಜಿಎಸ್‌ಟಿ ರೂಪದಲ್ಲಿ ದಕ್ಷಿಣದ ರಾಜ್ಯಗಳು ಗಣನೀಯ ಕೊಡುಗೆ ನೀಡುತ್ತಿದ್ದರೂ, ಅದಕ್ಕೆ ಪ್ರತಿಯಾಗಿ ಶೇ.30ರಷ್ಟನ್ನು ಮಾತ್ರ ಪಡೆಯುತ್ತವೆ; ಆದರೆ ಈ ಬಾಬತ್ತಿನಲ್ಲಿ ಉತ್ತರಪ್ರದೇಶ ಮತ್ತು ಬಿಹಾರ ರಾಜ್ಯಗಳಿಗೆ ಸಿಂಹಪಾಲು ಸಿಗುತ್ತಿದೆ. ಇದನ್ನು ಮನಗಂಡಿರುವ ದಕ್ಷಿಣ ರಾಜ್ಯಗಳು, 'ಕೇಂದ್ರವು ನಮಗೆ ಅನ್ಯಾಯ ಮಾಡುತ್ತಿದೆ' ಎಂಬ ಬೇಸರದಲ್ಲಿವೆ. ಕ್ಷೇತ್ರಗಳ ಮರುವಿಂಗಡಣೆಯ ವಿಷಯದಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾದ್ದು ಅಗತ್ಯ. ಪ್ರತಿಯೊಂದು ರಾಜ್ಯವೂ ಭಾರತ ಒಕ್ಕೂಟ ವ್ಯವಸ್ಥೆಯ ಭಾಗವಾಗಿರುವುದರಿಂದ, ರಾಜ್ಯಗಳ ಜತೆಗೆ ಚರ್ಚಿಸದೆಯೇ ಕೇಂದ್ರವು ನಿರ್ಣಯ ಕೈಗೊಂಡರೆ ಅದು ಸರ್ವಾಧಿಕಾರಿ ಧೋರಣೆಯಾಗುತ್ತದೆ.

ಕ್ಷೇತ್ರಗಳ ಮರುವಿಂಗಡಣೆಯಂಥ ಸಂಕೀರ್ಣ ನೀತಿಯನ್ನು, ಯಾರಿಗೂ ಅನ್ಯಾಯವಾಗದಂತೆ ನಿಭಾಯಿಸಿಕೊಂಡು ಜಾರಿಗೆ ತರುವುದು ಸವಾಲಿನ ಕೆಲಸವೇ. ಈ ನಿಟ್ಟಿನಲ್ಲಿ ಕೇಂದ್ರವು ಏನೇ ಕ್ರಮ ಕೈಗೊಳ್ಳುವ ಮುನ್ನ ಒಂದು ಸಂಗತಿಯನ್ನು ಮರೆಯಬಾರದು– ಸ್ವಾತಂತ್ರ್ಯದ ಬಳಿಕ ಚದುರಿಹೋಗಿದ್ದ ಸಂಸ್ಥಾನಗಳನ್ನು ಒಗ್ಗೂಡಿಸಿ ಅಖಂಡ ಭಾರತವನ್ನು ಕಟ್ಟಲು ಶ್ರಮಿಸಿದ ಸರ್ದಾರ್ ವಲ್ಲಭಭಾಯಿ ಪಟೇಲರ ಶ್ರಮವನ್ನು ನೆನಪಿನಲ್ಲಿ ಇಟ್ಟುಕೊಂಡೇ ಅದು ನಿರ್ಣಯ ಕೈಗೊಳ್ಳಬೇಕಿದೆ. ದೇಶದ ಏಕತೆಗೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕಿದೆ.

**(ಲೇಖಕರು ಶಿಕ್ಷಕರು)**

# ದೇಶದ ಸಮಗ್ರತೆಗೆ ಹಾನಿಮಾಡುವ ಹುನ್ನಾರ

**ಪ್ರತಿದೃಷ್ಟಿ**
**ಗಣೇಶ್ ಭಟ್, ವಾರಾಣಸಿ**
vveditoped@gmail.com

ವಿಷಯ ಪ್ರವೇಶಕ್ಕೂ ಮುನ್ನ ನಿಮಗೊಂದು ಪುಟ್ಟಕಥೆ ಹೇಳಬೇಕು. 'ದಿ ಜಡ್ಜ್‌ಮೆಂಟ್ ಆಫ್ ಕಿಂಗ್ ಸಾಲೋಮನ್' ಎಂಬ ಕಥೆಯಿದು. ಇಸ್ರೇಲಿನ ರಾಜ ಸಾಲೋಮನ್‌ನ ಆಸ್ಥಾನದಲ್ಲಿ ಮಗುವೊಂದರ ಅಸ್ತಿತ್ವಕ್ಕೆ ಸಂಬಂಧಿಸಿದ ದಾವೆಯೊಂದು ನಡೆಯುತ್ತದೆ. ಇಬ್ಬರು ಮಹಿಳೆಯರು ಆ ಮಗುವನ್ನು ಆಸ್ಥಾನಕ್ಕೆ ತರುತ್ತಾರೆ, 'ನಾನೇ ಈ ಮಗುವಿನ ಅಮ್ಮ' ಎಂದು ವಾದಿಸಿ, ಮಗುವನ್ನು ತಮ್ಮ ವಶಕ್ಕೆ ಕೊಡಿಸುವಂತೆ ರಾಜನಲ್ಲಿ ವಿನಂತಿಸುತ್ತಾರೆ. ತುಂಬಾ ಹೊತ್ತು ವಾದ-ಪ್ರತಿವಾದಗಳು ನಡೆದರೂ, ನಿಜವಾದ ತಾಯಿ ಯಾರೆಂಬ ನಿರ್ಣಯಕ್ಕೆ ಕೊನೆಗೂ ಬರಲಾಗುವುದಿಲ್ಲ. ಕೊನೆಗೆ ಸಾಲೋಮನ್ ಒಂದು ಉಪಾಯ ಮಾಡಿ, ''ಮಗುವನ್ನು ಕತ್ತಿಯಿಂದ ಎರಡು ತುಂಡಾಗಿಸಿ, ಒಂದೊಂದು ತುಂಡನ್ನು ಇನ್ನರಿಗೂ ಹಂಚಿ'' ಎಂದು ಭಟರಿಗೆ ಆಜ್ಞಾಪಿಸುತ್ತಾನೆ. ಇದಕ್ಕೆ ಒಬ್ಬಾಕೆ ಒಪ್ಪುತ್ತಾಳೆ. ಆದರೆ ಎರಡನೆಯಾಕೆ, ''ಮಗುವನ್ನು ತುಂಡು ಮಾಡುವುದು ಬೇಡ, ಅದು ಇನ್ನೂ ನೂರುಕಾಲ ಬಾಳಿ ಬದುಕಬೇಕು. ಅದನ್ನು ಅವಳಿಗೇ ಕೊಟ್ಟುಬಿಡಿ'' ಎಂದು ರಾಜನಲ್ಲಿ ವಿನಂತಿಸುತ್ತಾಳೆ. ಮಗುವಿನ ಜೀವದ ಮೇಲೆ ನಿಜಪ್ರೀತಿಯಿರುವ ಈ ಎರಡನೆಯ ಮಹಿಳೆಯೇ ಅದರ ನಿಜವಾದ ತಾಯಿ ಎಂಬುದು ರಾಜನಿಗೆ ಮನವರಿಕೆಯಾಗಿ, ಆಕೆಗೇ ಮಗುವನ್ನು ಕೊಡುವಂತೆ ಆಜ್ಞಾಪಿಸುತ್ತಾನೆ. ಅದೇ ರೀತಿ, ಮಗುವನ್ನು ತುಂಡರಿಸಲು ಒಪ್ಪಿದ ಇನ್ನೋರ್ವ ಮಹಿಳೆಯನ್ನು 'ಸುಳ್ಳಗಾರ್ತಿ' ಎಂದು ತೀರ್ಮಾನಿಸಿ ಶಿಕ್ಷೆಯನ್ನು ನೀಡುತ್ತಾನೆ...

★★★

ಭಾರತದಲ್ಲಿ ಉತ್ತರದ ರಾಜ್ಯಗಳು ಬೇರೆ, ದಕ್ಷಿಣದ ರಾಜ್ಯಗಳು ಬೇರೆ ಎನ್ನುವ 'ಭೇದ ಪರಿಕಲ್ಪನೆ' ನಡೆಯುತ್ತಿದೆ. ಕೆಲವು ಪ್ರಾದೇಶಿಕ ರಾಜಕೀಯ ಪಕ್ಷಗಳು ತಮ್ಮ ಅಸ್ತಿತ್ವವನ್ನು ಪ್ರಾದೇಶಕತೆ ಹಾಗೂ ಭಾಷೆಗಳ ಮೇಲೆ ಕಟ್ಟಿಕೊಂಡಿವೆ. ಇಂಥ ಪಕ್ಷಗಳು ಭಾಷೆ ಹಾಗೂ ನೆಲದ ವಿಚಾರವಾಗಿ ಸಂಘರ್ಷಗಳನ್ನು ನಡೆಸಿಯೇ ಅಧಿಕಾರಕ್ಕೆ ಬಂದಿವೆ. ಇಂಥ ವಾದಗಳು ದೇಶದ ಸಮಗ್ರತೆಗೆ ಅಪಾಯ ತರುತ್ತವೆ ಎಂದು ಗೊತ್ತಿದ್ದರೂ, ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಇಂಥ ವಿಚಾರಗಳಿಂದ ಜನರನ್ನು ಅವು ಪ್ರಚೋದಿಸುತ್ತಲೇ ಇರುತ್ತವೆ. ಇವಕ್ಕೆ ದೇಶದ ಹಿತಾಸಕ್ತಿಗಳಿಗಿಂತಲೂ ಪಕ್ಷದ ಹಿತಾಸಕ್ತಿಯೇ ಮುಖ್ಯವಾಗಿದೆ. ಪಕ್ಷಗಳ ಇಂಥ ವರ್ತನೆಗಳನ್ನು ನೋಡುವಾಗ, ಮೇಲೆ ಉಲ್ಲೇಖಿಸಿರುವ ರಾಜ ಸಾಲೋಮನ್ ಆಸ್ಥಾನದಲ್ಲಿನ ನಡೆದ ಕಥೆ ನೆನಪಾಗುತ್ತದೆ.

ಹಿಂದಿ ಭಾಷೆಯನ್ನು ತಮಿಳರ ಮೇಲೆ ಹೇರಲಾಗುತ್ತಿದೆ ಎಂದು ತಮಿಳುನಾಡಿನ ಮುಖ್ಯಮಂತ್ರಿ ಹಾಗೂ ಡಿಎಂಕೆ ಪಕ್ಷದ ಮುಖಂಡ ಎಂ.ಕೆ.ಸ್ಟಾಲಿನ್ ಕೇಂದ್ರ ಸರಕಾರದ ಮೇಲೆ ಆರೋಪಗಳನ್ನು ಹೊರಿಸುತ್ತಲೇ ಇರುತ್ತಾರೆ. ಹಿಂದಿನಿಂದಲೂ ಡಿಎಂಕೆ ಪಕ್ಷವು ಹಿಂದಿ-ವಿರೋಧಿ ಹೋರಾಟದ ಜತೆಗೆ ತನ್ನನ್ನು ಸದಾ ಜೋಡಿಸಿಕೊಳ್ಳುತ್ತಲೇ ಬಂದಿತ್ತು. ದ್ರಾವಿಡ ರಾಜಕೀಯದ ರೂವಾರಿ ಇ.ವಿ.ರಾಮಸ್ವಾಮಿ ಪೆರಿಯಾರ್ ಹಿಂದಿಯನ್ನು ವಿರೋಧಿಸಿದ ನಂತರ, ಅವರನ್ನೇ ಆದರ್ಶವಾಗಿ ಸ್ವೀಕರಿಸಿದ ಡಿಎಂಕೆ ಪಕ್ಷವೂ ಹಿಂದಿ-ವಿರೋಧಿ ಚಟುವಟಿಕೆಗಳನ್ನು ಮುಂದುವರಿಸಿತು. ಆರಂಭದಲ್ಲಿ ಅಣ್ಣಾದೊರೈ, ನಂತರದ ದಿನಗಳಲ್ಲಿ ಕರುಣಾನಿಧಿ ಹಾಗೂ ಈಗ ಸ್ಟಾಲಿನ್ ಆ ಪಾತ್ರವನ್ನು ಮುಂದುವರಿಸಿಕೊಂಡು ಬಂದರು.

2020ರಲ್ಲಿ ಕೇಂದ್ರ ಸರಕಾರವು ಜಾರಿಗೆ ತಂದಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ತಮಿಳುನಾಡಿನ ಮೇಲೆ ಹಿಂದಿಯನ್ನು ಹೇರುತ್ತಿದೆ ಎನ್ನುವುದು ಸ್ಟಾಲಿನ್ ಆರೋಪ. ಆದರೆ ಕೇಂದ್ರ ಶಿಕ್ಷಣ ಸಚಿವರಾದ ಧರ್ಮೇಂದ್ರ ಪ್ರಧಾನ್ ಅವರು ಈ ಬಗ್ಗೆ ಹಲವು ಬಾರಿ ಸ್ಪಷ್ಟನೆ ನೀಡಿ, ''ಎನ್‌ಇಪಿಯು ಹಿಂದಿಯನ್ನು ಹೇರುವುದಿಲ್ಲ, ತಮಿಳುನಾಡು ಸೇರಿದಂತೆ ಭಾರತದ ಎಲ್ಲಾ ರಾಜ್ಯಗಳಲ್ಲಿ ಅಲ್ಲಲ್ಲಿನ ಮಾತೃಭಾಷೆಯಲ್ಲೇ ಶಿಕ್ಷಣ ನೀಡುವುದನ್ನು ಎನ್‌ಇಪಿ ಪ್ರತಿಪಾದಿಸುತ್ತದೆ'' ಎಂದಿದ್ದಾರೆ. ಆದರೂ, 'ಕೇಂದ್ರ ಸರಕಾರವು ತಮಿಳುನಾಡಿನ ಮಥಲೆ ಹಿಂದಿಯನ್ನು ಹೇರುತ್ತಿದೆ' ಎಂಬ ಆರೋಪ ಮುಂದುವರಿದಿದೆ.

ಸಂಸತ್ತಿನ ಕಲಾಪವನ್ನು ಸಂಸ್ಕೃತ ಸೇರಿದಂತೆ 22 ಭಾಷೆಗಳಿಗೆ ಏಕಕಾಲದಲ್ಲಿ ಭಾಷಾಂತರ ಮಾಡುವ ವ್ಯವಸ್ಥೆಯಿದೆ. ಲೋಕಸಭೆಯಲ್ಲಿನ ಈ ಬಾರಿಯ ಬಜೆಟ್ ಅಧಿವೇಶನದಲ್ಲಿ ಡಿಎಂಕೆ ಸಂಸದ ದಯಾನಿಧಿ ಮಾರನ್, ''ದೇಶದಲ್ಲಿ ಕೇವಲ 77,000 ಜನರು ಮಾತನಾಡುವ ಸಂಸ್ಕೃತ ಭಾಷೆಗೆ ಕಲಾಪದ ನಡಾವಳಿಗಳನ್ನು ಭಾಷಾಂತರಿಸುವ ಪರಿಪಾಠವು ತೆರಿಗೆದಾರರ ಹಣವನ್ನು ಪೋಲುಮಾಡುವಂಥದ್ದಾಗಿದೆ'' ಎಂದು ಆಕ್ಷೇಪಿಸಿದ್ದರು. ಇದಕ್ಕೆ ಸ್ಪೀಕರ್ ಓಂ ಬಿರ್ಲಾ, ''ಸಂಸ್ಕೃತವು ಭಾರತದ ಪ್ರಾಥಮಿಕ ಭಾಷೆಯಾಗಿರುವುದರಿಂದ, ಕಲಾಪದ ಸಂಸ್ಕೃತ ಭಾಷಾಂತರ ಮುಂದುವರಿಯಲಿದೆ'' ಎಂದುತ್ತರಿಸಿದರು. ಇನ್ನು, ಸದರಿ ಸಂಸ್ಕೃತ ಭಾಷಾಂತರದ ಬಗ್ಗೆ ಆಕ್ಷೇಪಿಸಿದ ಅದೇ ಡಿಎಂಕೆ ಪಕ್ಷದ ಮುಖ್ಯಸ್ಥ ಹಾಗೂ ತಮಿಳುನಾಡಿನ ಮುಖ್ಯಮಂತ್ರಿ ಸ್ಟಾಲಿನ್, ''ಸಿಂಧೂನದಿ ಕಣಿವೆಯ ನಾಗರಿಕತೆಯ ಕಾಲದ ಲಿಪಿಗಳನ್ನು ಯಾರಾದರೂ ತಜ್ಞರು ಅಧ್ಯಯನ ಮಾಡಿ ಅರ್ಥೈಸಿಕೊಳ್ಳುವಲ್ಲಿ ಯಶಸ್ವಿಯಾದರೆ ಅಂಥವರಿಗೆ/ಅಂಥ ಸಂಸ್ಥೆಗೆ ಒಂದು ಮಿಲಿಯನ್ ಡಾಲರ್ (8.5 ಕೋಟಿ ರುಪಾಯಿ) ಹಣವನ್ನು ಬಹುಮಾನವಾಗಿ ನೀಡುವುದಾಗಿ ಘೋಷಿಸಿದ್ದಾರೆ! ಸಿಂಧೂ ಕಣಿವೆಯ ನಾಗರಿಕತೆಯ ಲಿಪಿಗಳನ್ನು ಭಾಷಾಂತರಿಸುವವರಿಗೆ ಡಿಎಂಕೆ ಸರಕಾರವೇಕೆ ಹಣ ಕೊಡಬೇಕು? ಕಾಲಗರ್ಭದಲ್ಲಿ ನಶಿಸಿಹೋಗಿರುವ ಲಿಪಿಯ ಬಗ್ಗೆ ಡಿಎಂಕೆ ಆಸಕ್ತಿ ವಹಿಸುತ್ತಿರುವುದೇಕೆ?

ಡಿಎಂಕೆಯ ಈ ಉತ್ಸಾಹ/ಆಸಕ್ತಿಗೂ ಒಂದು ಹಿನ್ನೆಲೆಯಿದೆ. 'ಆರ್ಯರು ದ್ರಾವಿಡರ ಮೇಲೆ ಆಕ್ರಮಣ ನಡೆಸಿದ್ದಾರೆ' ಎಂಬ ಸಿದ್ಧಾಂತವನ್ನೇ ಡಿಎಂಕೆ ಇಂದಿಗೂ ಪ್ರತಿಪಾದಿಸುತ್ತಾ ಬಂದಿದೆ. ''ಮಧ್ಯ ಏಷ್ಯಾದಿಂದ ಬಂದ ಆರ್ಯರು, ಸಿಂಧೂನದಿ ಕಣಿವೆಯಲ್ಲಿ ನೆಲೆಸಿದ್ದ ದ್ರಾವಿಡರನ್ನು ದಕ್ಷಿಣಕ್ಕೆ ಓಡಿಸಿದರು'' ಎಂದು ಮ್ಯಾಕ್ಸ್ ಮುಲ್ಲರ್ ಮತ್ತು ವಿಲಿಯಂ ಜೋನ್ಸ್ ಹುಟ್ಟುಹಾಕಿದ್ದ ಸಿದ್ಧಾಂತವನ್ನೇ ಪೆರಿಯಾರ್‌ರಿಂದ ಹಿಡಿದು ಇಂದಿನ ಸ್ಟಾಲಿನ್‌ರವರೆಗಿನ ನಾಯಕರು ಪುನರುಚ್ಚರಿಸುತ್ತಲೇ ಬಂದಿದ್ದಾರೆ. ಆದರೆ, ಇತ್ತೀಚಿನ ಅಧ್ಯಯನಗಳು, ರಾಖಿಗರ್ಹಿಯಲ್ಲಿನ ಉತ್ಖನನದಲ್ಲಿ ಸಿಕ್ಕಿದ ಡಿಎನ್‌ಎ ವರ್ಗೀಕರಣಗಳು, ಬಿರ್ದಾನಾ ಉತ್ಖನನದಲ್ಲಿ ದೊರೆತಿರುವ ಕ್ರಿ.ಪೂ. 8000 ವರ್ಷಗಳ ಹಿಂದಿನ ನಾಗರಕತೆಯ ಕುರುಹುಗಳು (ಇವು ಸಿಂಧೂನದಿ ನಾಗರಿಕತೆಗಿಂತ 6000 ವರ್ಷಗಳಷ್ಟು ಹಳೆಯವು) ಆರ್ಯರ ಆಕ್ರಮಣ ಸಿದ್ಧಾಂತವನ್ನು ಸುಳ್ಳೆಂದು ನಿರೂಪಿಸಿವೆ. ಡಿಎಂಕೆಯ ಜೀವಾಳವಾಗಿರುವ 'ಆರ್ಯ-ದ್ರಾವಿಡ ಭೇದಕಲ್ಪನೆ'ಯೇ ಅವೈಜ್ಞಾನಿಕವೆಂದು ಸಾಬೀತಾಗುತ್ತಿರುವ ಈ ಹೊತ್ತಿನಲ್ಲಿ, ಡಿಎಂಕೆಗೆ ತನ್ನ ತಾತ್ವಿಕ ಅಸ್ತಿತ್ವವೂ ಕೈತಪ್ಪಿಹೋಗುವ ಭೀತಿ ಎದುರಾಗಿದೆ. ಹೀಗಾಗಿ, ತನ್ನ ಪ್ರತಿಪಾದನೆಯ 'ಆರ್ಯರ ಆಕ್ರಮಣ ಸಿದ್ಧಾಂತ'ಕ್ಕೆ ಪೂರಕವಾಗುವಂತೆ, ಸಿಂಧೂ ಕಣಿವೆ ನಾಗರಿಕತೆಯ ಕಾಲದ ಲಿಪಿಗಳನ್ನು/ಬರಹಗಳನ್ನು ವ್ಯಾಖ್ಯಾನಿಸುವ ತಜ್ಞರಿಗೆ ಭರ್ಜರಿ ಬಹುಮಾನವನ್ನು ಡಿಎಂಕೆ ಘೋಷಿಸಿದೆ!

ಇನ್ನು, ಆದಾಯ ಹಂಚಿಕೆಯ ವಿಚಾರದಲ್ಲೂ ಕೇಂದ್ರ ಸರಕಾರವು ತಮಗೆ ಅನ್ಯಾಯ ಮಾಡುತ್ತಿದೆ ಎಂದು ಕೇರಳ, ಕರ್ನಾಟಕ, ತಮಿಳುನಾಡು, ತೆಲಂಗಾಣದ ಮುಖ್ಯಮಂತ್ರಿಗಳು ಆರೋಪಿಸುತ್ತಲೇ ಇರುತ್ತಾರೆ. 'ದೇಶದ ಶೇ.36ರಷ್ಟು ಪಾಲಿನ ತೆರಿಗೆಯನ್ನು ದಕ್ಷಿಣದ ರಾಜ್ಯಗಳು ಸಂಗ್ರಹಿಸಿ ಕೊಡುತ್ತವೆ. ಆದರೆ, ಕೇಂದ್ರದ ಹೆಚ್ಚಿನ ಅನುದಾನಗಳು ಉತ್ತರಪ್ರದೇಶ, ಬಿಹಾರ, ಒಡಿಶಾದಂಥ ರಾಜ್ಯಗಳಿಗೆ ಹೋಗುತ್ತವೆ, ಇದು ಅನ್ಯಾಯ' ಎಂಬುದು ದಕ್ಷಿಣದ ರಾಜ್ಯಗಳ ಆರೋಪ. ಆಯಾ ರಾಜ್ಯದ ಜನಸಂಖ್ಯೆಯನ್ನು ಆಧರಿಸಿ ಕೇಂದ್ರದ ಅನುದಾನದ ಪ್ರಮಾಣವು ಹಂಚಲ್ಪಡುತ್ತದೆ. ಇದು ಹಿಂದಿನಿಂದಲೂ ನಡೆದುಕೊಂಡು ಬಂದ ವಿಧಾನ. ಹಿಂದುಳಿದಿರುವ ಪ್ರದೇಶಗಳಿಗೆ ಸೂಕ್ತ ಅನುದಾನ ನೀಡಿ ಅಭಿವೃದ್ಧಿಗೊಳಿಸಿ, ಪ್ರಾದೇಶಿಕ ಸಮತೋಲನವನ್ನು ತರುವುದು ಸರಕಾರಗಳ ಜವಾಬ್ದಾರಿಯಾಗಿದೆ. ದೇಶದ ಆದಾಯದ ಶೇ.13.3ರಷ್ಟು ಪಾಲನ್ನು ಮಹಾರಾಷ್ಟ್ರವೊಂದೇ ತಂದುಕೊಡುತ್ತದೆ, ಹಾಗೆಂದು ಕೇಂದ್ರದ ಅನುದಾನದಲ್ಲಿ ಶೇ.13.3ರಷ್ಟು ಪಾಲನ್ನು ಮಹಾರಾಷ್ಟ್ರ ಸರಕಾರವು ಕೇಳುತ್ತಿಲ್ಲ.

ಕರ್ನಾಟಕ ಸರಕಾರದ ಶೇ.36ರಷ್ಟು ಆದಾಯವು ಬೆಂಗಳೂರು ನಗರವೊಂದರಿಂದಲೇ ಬರುತ್ತದೆ, ಹಾಗಂತ ಸರಕಾರವು ಅಷ್ಟೂ ಮೊತ್ತವನ್ನು ಬೆಂಗಳೂರಿನ ಅಭಿವೃದ್ಧಿಗಷ್ಟೇ ವಿನಿಯೋಗಿಸುತ್ತದೆಯೇ? ಕಡಿಮೆ ಆದಾಯ ಸಂಗ್ರಹಿಸುವ ಜಿಲ್ಲೆಗಳೂ ಸೇರಿದಂತೆ ಎಲ್ಲ ಜಿಲ್ಲೆಗಳಿಗೂ ಬಜೆಟ್‌ನಲ್ಲಿ ಅನುದಾನವನ್ನು ಯಥೋಚಿತವಾಗಿ ಹಂಚಲಾಗುತ್ತದೆ. ಇದೇ ರೀತಿಯಲ್ಲಿ, ತಮಿಳುನಾಡಿನ ಒಟ್ಟು ಆದಾಯದ ಶೇ.31.6ರಷ್ಟು ಭಾಗವನ್ನು ಚೆನ್ನೈ ನಗರವು ತರುತ್ತದೆ, ಹಾಗಂತ ಅಲ್ಲಿನ ಸರಕಾರ ಚೆನ್ನೈನ ಅಭಿವೃದ್ಧಿಗೆ ಮಾತ್ರವೇ ಅಷ್ಟನ್ನೂ ಬಳಸುವುದಿಲ್ಲ, ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಹಂಚುತ್ತದೆ. ಕೇಂದ್ರ ಅಥವಾ ರಾಜ್ಯ ಸರಕಾರಗಳು ಜಾರಿಮಾಡುವ ಜನಕಲ್ಯಾಣ ಯೋಜನೆಗಳದ್ದೂ ಇದೇ ಪರಿ. ಉಳ್ಳವರಿಂದ/ಆದಾಯ ತೆರಿಗೆದಾರರಿಂದ ತೆರಿಗೆ ರೂಪದಲ್ಲಿ ಸಂಗ್ರಹವಾಗುವ ಹಣವು ಬಡವರ ಅಭಿವೃದ್ಧಿಗಾಗಿ ಬಳಸಲ್ಪಡುತ್ತದೆ. ದೇಶದ ಎಲ್ಲಾ ರಾಜ್ಯಗಳ ಅಭಿವೃದ್ಧಿಯಾಗದೆ ದೇಶದ ಅಭಿವೃದ್ಧಿಯಾಗದು. ಸಂಪತ್ತಿನ ಸಮಾನ ಹಂಚಿಕೆ ಸರಕಾರದ ಜವಾಬ್ದಾರಿಯೂ ಹೌದು.

ಇದೀಗ, ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯ ಬಗ್ಗೆ ಕೂಡ, ಡಿಎಂಕೆ ಸೇರಿದಂತೆ ಮಿತ್ರಪಕ್ಷಗಳು ವಿರೋಧಿಸುತ್ತಿವೆ. 1977ರ ನಂತರ ಭಾರತದಲ್ಲಿ ಜನಸಂಖ್ಯೆ ಹೆಚ್ಚಾದರೂ, ಅದಕ್ಕನುಗುಣವಾಗಿ ಲೋಕಸಭಾ ಸದಸ್ಯರ ಸಂಖ್ಯೆ ಹೆಚ್ಚಾಗಿಲ್ಲ. ಹೀಗಾಗಿ ಮುಂದಿನ ಸಾರ್ವತ್ರಿಕ ಚುನಾವಣೆಗೂ ಮೊದಲು ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಆಗಲಿದೆ. ದಕ್ಷಿಣ ಭಾರತದ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಕಡಿತವಾಗಲಿದೆ ಎಂಬುದು ವಿಪಕ್ಷಗಳ ಆತಂಕ ಮತ್ತು ಆರೋಪ. ಆದರೆ ಕೇಂದ್ರ ಸರಕಾರ, 'ಈ ಆರೋಪ ಸತ್ಯಕ್ಕೆ ದೂರವಾದುದು, ದಕ್ಷಿಣ ರಾಜ್ಯಗಳ ಒಂದೇ ಒಂದು ಎಂಪಿ ಸೀಟು ಕಡಿಮೆಯಾಗುವುದಿಲ್ಲ' ಎಂದು ಪ್ರತಿಕ್ರಿಯಿಸಿದೆ. ಹೆಚ್ಚು ಜನಸಂಖ್ಯೆಯಿರುವ ಉತ್ತರಪ್ರದೇಶದಂಥ ರಾಜ್ಯಗಳ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಹೆಚ್ಚಾಗಲಿದ್ದು, ಜನಸಂಖ್ಯಾ ಸ್ಫೋಟವು ನಿಯಂತ್ರಣದಲ್ಲಿರುವ ತಮಿಳುನಾಡು, ಕೇರಳ, ಕರ್ನಾಟಕದಂಥ ರಾಜ್ಯಗಳಲ್ಲಿನ ಎಂಪಿ ಸೀಟುಗಳ ಸಂಖ್ಯೆ ಹೆಚ್ಚಾಗದೆ, ಲೋಕಸಭೆಯಲ್ಲಿ ತಮ್ಮ ಬಲ ಕಡಿಮೆಯಾಗಲಿದೆ ಎಂಬುದು ಈ ಪಕ್ಷಗಳ ಕಳವಳ. ಹೆಚ್ಚಿನ ಜನಸಂಖ್ಯೆಯಿರುವಲ್ಲಿಗೆ ಹೆಚ್ಚು ಸದಸ್ಯರನ್ನು ಕೊಡಬೇಕೆಂಬ ವಾದ ಸಮರ್ಥನೀಯ; ಆದರೆ, ಒಂದು ಪಕ್ಷದ ಅಸ್ತಿತ್ವವನ್ನು ಉಳಿಸಬೇಕೆಂಬ ಕಾರಣಕ್ಕೆ, ಜನಸಂಖ್ಯೆ ಕಡಿಮೆಯಿದ್ದರೂ ಎಂಪಿ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂಬ ಬೇಡಿಕೆಗೆ ಅರ್ಥವಿಲ್ಲ.

ರಾಜಕೀಯ ಕಾರಣಗಳಿಂದಾಗಿ ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು ಹೊಸ ಶಿಕ್ಷಣ ನೀತಿಯನ್ನು ಜಾರಿಮಾಡದೆ, ಓಬೀರಾಯನ ಕಾಲದ ಪದ್ಧತಿಯನ್ನೇ ಮುಂದುವರಿಸಿವೆ. ಮುಂದೊಂದು ದಿನ ಉದ್ಯೋಗದಾತರು ಹೊಸ ಶಿಕ್ಷಣನೀತಿಯಡಿ ಶಿಕ್ಷಣ ಪಡೆದವರಿಗೆ ಮಾತ್ರವೇ ಉದ್ಯೋಗದಲ್ಲಿ ಆದ್ಯತೆ ನೀಡಿದರೆ ಈ 2 ರಾಜ್ಯಗಳ ಉದ್ಯೋಗಾರ್ಥಿಗಳ ಭವಿಷ್ಯ ಅತಂತ್ರವಾಗಬಹುದು. ಉತ್ತರ ಭಾರತೀಯರು ಬೆಂಗಳೂರಿನಲ್ಲಿ ವ್ಯಾಪಾರ-ಉದ್ದಿಮೆ ನಡೆಸಬಾರದು ಎಂಬ ಬೇಡಿಕೆ, ಹಿಂದಿ ನಾಮಫಲಕಗಳಿಗೆ ಮಸಿಬಳಿಯುವಿಕೆ ಮುಂತಾದವು, ಇಂದಿ ಜಾಗತೀಕರಣ ಯುಗದಲ್ಲಿ ಸಮರ್ಥನೀಯವಲ್ಲ. ಇಂದು ಕೆಲ ರಾಜಕೀಯ ಪಕ್ಷಗಳು ಭಾಷೆ, ಪ್ರಾದೇಶಿಕತೆ, ಗಡಿ, ನದಿನೀರು ಹಂಚಿಕೆ, ಜಾತಿ-ಧರ್ಮಗಳನ್ನು ಮತಗಳಿಕೆಯ ಅಸ್ತ್ರವಾಗಿಸಿಕೊಳ್ಳುತ್ತಿವೆ. ತಮ್ಮ ಅಸ್ತಿತ್ವದ ಉಳಿವಿಗೆ ಜನರನ್ನು ಒಡೆಯುವ, ದೇಶದ ಸಮಗ್ರತೆಗೆ ಧಕ್ಕೆ ತರುವ ಪಕ್ಷಗಳು ಮತ್ತು ಸಂಘಟನೆಗಳನ್ನು ಜನರು ತಿರಸ್ಕರಿಸಬೇಕು.

**(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)**

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 307

## ಸಮಾಚಾರ ಸಣ್ಣದಲ್ಲ

### ಸಮಸ್ಯೆ ಪರಿಹಾರ: ಚು.ಆಯೋಗ ಕರೆ

**ದೆಹಲಿ:** ಚುನಾವಣೆ, ಮತದಾರರ ಪಟ್ಟಿ, ಗುರುತಿನ ಚೀಟಿಗಳ ವಿಚಾರವಾಗಿ ತಕರಾರು, ಸಮಸ್ಯೆಗಳಿದ್ದರೆ ಆಯೋಗದ ಕಚೇರಿಗೆ ಬಂದು ಪರಿಹರಿಸಿಕೊಳ್ಳಬಹುದು ಎಂದು ಕೇಂದ್ರ ಚುನಾವಣಾ ಆಯೋಗ ದೇಶದ ವಿವಿಧ ರಾಜಕೀಯ ಪಕ್ಷಗಳ ಪದಾಧಿಕಾರಿಗಳು, ಹಿರಿಯ ನಾಯಕರನ್ನು ಆಹ್ವಾನಿಸಿದೆ. ಚುನಾವಣಾ ಆಯೋಗದಲ್ಲಿ ಸುಧಾರಣೆಗಳು ಅಗತ್ಯವಿದೆ ಎನಿಸಿದ್ದರೆ ಆ ಬಗೆಗೂ ಸಲಹೆಗಳನ್ನು ನೀಡಬಹುದು. ಈ ವಿಚಾರಗಳಿಗೆ ಸಂಬಂಧಿಸಿ ಏ.30ರೊಳಗೆ ಅರ್ಜಿ, ದೂರು, ಸಲಹಾಪತ್ರಗಳನ್ನು ಆಯೋಗದ ಕಚೇರಿಗೆ ತಲುಪಿಸಿದರೆ ಪರಿಹರಿಸಲು ಪ್ರಯತ್ನಿಸಲಾಗುವುದು ಎಂದು ಕೇಂದ್ರ ಚುನಾವಣಾ ಆಯೋಗ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

### ಸೈಬರ್ ದಾಳಿಯಿಂದಾಗಿ 'ಎಕ್ಸ್' ಸೇವೆ ವ್ಯತ್ಯಯ

**ವಾಷಿಂಗ್ಟನ್:** ಸಂದೇಶವಾಹಕ ಜನಪ್ರಿಯ ಜಾಲತಾಣ 'ಎಕ್ಸ್'ನಲ್ಲಿ ಸೋಮವಾರ ಭಾರೀ ತಾಂತ್ರಿಕ ಸಮಸ್ಯೆಗಳು ಕಂಡು ಬಂದಿದ್ದು, ವಿಶ್ವಾದ್ಯಂತದ ಕೋಟ್ಯಂತರ ಬಳಕೆದಾರರು ಪರಿತಪಿಸಿದರು. ಸರ್ವರ್‌ನಲ್ಲಿ ದೊಡ್ಡ ಲೋಪವಾಗಿದ್ದರಿಂದ ಸೇವೆಯಲ್ಲಿ ವ್ಯತ್ಯಯವಾಗಿದೆ. ಇದಕ್ಕೆ ಅಮೆರಿಕ ವಿರೋಧಿ ದೇಶವೊಂದು ನಡೆಸಿದ ದೊಡ್ಡ ಮಟ್ಟದ ಸೈಬರ್ ದಾಳಿಯೇ ಕಾರಣ ಎಂದು 'ಎಕ್ಸ್' ಕಂಪನಿ ಮಾಲೀಕ ಎಲಾನ್ ಮಸ್ಕ್ ದೂರಿದ್ದಾರೆ. ಈ ಕುರಿತು ಮಂಗಳವಾರ ಪ್ರತಿಕ್ರಿಯಿಸಿರುವ ಮಸ್ಕ್, 'ಎಕ್ಸ್' ಸರ್ವರ್ ಮೇಲೆ ಉದ್ದೇಶಪೂರ್ವಕ ಸೈಬರ್ ದಾಳಿ ನಡೆದಿದೆ. ಇದರ ಹಿಂದೆ ಅಪರಾಧಿಗಳ ಗುಂಪು ಅಥವಾ ಅಮೆರಿಕ ವಿರೋಧಿ ರಾಷ್ಟ್ರದ ಕೈವಾಡವಿದೆ ಎಂದಿದ್ದಾರೆ. ದಾಳಿ ಹಿಂದೆ ಇರುವವರ ಯಾರೆಂಬುದನ್ನು ಕಂಡುಹಿಡಿಯಲು ತನಿಖೆ ನಡೆಯುತ್ತಿದೆ.

ಭಾರತೀಯರಿಂದ ಬಿಹಾರಿ ಸಾಂಪ್ರದಾಯಿಕ ಗೀತ್ ಗವಾಯಿ | ಇಂದು ರಾಷ್ಟ್ರೀಯ ದಿನ ಆಚರಣೆಗೆ ಮೋದಿ ಮುಖ್ಯ ಅತಿಥಿ

# ಪ್ರಧಾನಿ ಮೋದಿಗೆ ಮಾರಿಷಸ್ ಆತ್ಮೀಯ ಸ್ವಾಗತ

**ಪೋರ್ಟ್‌ಲೂಯಿಸ್:** ಆಫ್ರಿಕಾ ಖಂಡದ ಪೂರ್ವ ದಿಕ್ಕಿನಲ್ಲಿ ಹಿಂದೂ ಮಹಾಸಾಗರದಲ್ಲಿರುವ ಪುಟ್ಟ ದ್ವೀಪರಾಷ್ಟ್ರ ಮಾರಿಷಸ್‌ಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಎರಡು ದಿನಗಳ ಅಧಿಕೃತ ಭೇಟಿ ನೀಡಿದ್ದಾರೆ.

ಮಾರಿಷಸ್‌ನ ಸರ್ ಸೀವೂಸಾಗುರ್ ರಾಮಗೂಲಂ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಬೆಳಗ್ಗೆ ಬಂದಿಳಿದ ಪ್ರಧಾನಿ ಮೋದಿ ಅವರನ್ನು ಖುದ್ದು ಮಾರಿಷಸ್ ಪ್ರಧಾನಿ ನವೀನ್‌ಚಂದ್ರ ರಾಮಗೂಲಂ ಅವರೇ ಹಾಜರಿದ್ದು, ಕೊರಳಿಗೆ ಹಾರ ಹಾಕಿ ಅಪ್ಪಿಹಿಡಿದು ಆತ್ಮೀಯವಾಗಿ ಸ್ವಾಗತಿಸಿದರು. ಅವರ ಪತ್ನಿ ವೀಣಾ ರಾಮಗೂಲಂ ಅವರೂ ಹಾಜರಿದ್ದರು.

ಪ್ರಧಾನಿ ಮೋದಿ ಅವರ ಸ್ವಾಗತಕ್ಕಾಗಿ ಮಾರಿಷಸ್ ಉಪ ಪ್ರಧಾನಿ ಪೌಲ್ ಬೆರೆಂಜರ್ ಹಾಗೂ ಇಡೀ ಸಚಿವ ಸಂಪುಟವೇ ಮೋದಿ ಅವರನ್ನು ಬರಮಾಡಿಕೊಳ್ಳಲು ವಿಮಾನ ನಿಲ್ದಾಣದಲ್ಲಿತ್ತು. ಅದಲ್ಲದೇ, ಮಾರಿಷಸ್‌ನಲ್ಲಿ ನೆಲೆಸಿರುವ ಭಾರತೀಯ ಸಮುದಾಯದವರೂ ನೂರಾರು ಸಂಖ್ಯೆಯಲ್ಲಿ ಬಂದು ಪ್ರಧಾನಿ ಮೋದಿ ಅವರಿಗೆ ಆತ್ಮೀಯ ಸ್ವಾಗತ ಕೋರಿದರು. 'ಮಾರಿಷಸ್‌ನಲ್ಲಿರುವ ಭಾರತೀಯ ಸಮುದಾಯದಿಂದ ಬಂದ ಆತ್ಮೀಯ ಸ್ವಾಗತದಿಂದ ನಾನು ತುಂಬಾ ಭಾವುಕನಾಗಿದ್ದೇನೆ. ಭಾರತೀಯ ಪರಂಪರೆ, ಸಂಸ್ಕೃತಿ ಮತ್ತು ಮೌಲ್ಯಗಳಿಗೆ ಅವರ ಬಲವಾದ ನಂಟು ನಿಜವಾಗಿಯೂ ಸ್ಫೂರ್ತಿದಾಯಕವಾಗಿದೆ' ಎಂದು ಪ್ರಧಾನಿ ಮೋದಿ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ. ಬಳಿಕ ಪ್ರಧಾನಿ ಮೋದಿ ಅವರು ಮಾರಿಷಸ್ ಅಧ್ಯಕ್ಷ ಧರಮ್ ಗೋಖೂಲ್ ಅವರನ್ನೂ ಭೇಟಿ ಮಾಡಿ ಮಾತುಕತೆ ನಡೆಸಿದರು. ಪ್ರಧಾನಿ ಮೋದಿ ಕೊನೆಯದಾಗಿ 2015ರಲ್ಲಿ ಮಾರಿಷಸ್‌ಗೆ ಭೇಟಿ ನೀಡಿದ್ದರು.

**ಗಂಗಾಜಲ ಉಡುಗೊರೆ:** ಮಾರಿಷಸ್‌ಗೆ ಭೇಟಿ ನೀಡಿರುವ ಪ್ರಧಾನಿ ಮೋದಿ ಅವರು ಇತ್ತೀಚೆಗೆ ಉತ್ತರ ಪ್ರದೇಶದಲ್ಲಿನ ಪ್ರಯಾಗ್‌ರಾಜ್‌ನಲ್ಲಿ 45 ದಿನಗಳ ಕಾಲ ನಡೆದ ಮಹಾ ಕುಂಭಮೇಳದ ನೆನಪಿನಲ್ಲಿ ತ್ರಿವೇಣಿ ಸಂಗಮ ಸ್ಥಳದಲ್ಲಿನ ಜಲವನ್ನು ಕೊಂಡೊಯ್ದು ಆತಿಥೇಯ ದೇಶದ ಅಧ್ಯಕ್ಷ ಧರಮ್ ಗೋಖೂಲ್ ಅವರಿಗೆ ಉಡುಗೊರೆಯಾಗಿ ನೀಡಿದ್ದಾರೆ. ಜತೆಗೆ ಭಾರತದ ಸಂಸ್ಕೃತಿ ಬಿಂಬಿಸುವ ಹಲವು ಉಡುಗೊರೆಗಳನ್ನೂ ಮಾರಿಷಸ್ ಅಧ್ಯಕ್ಷರ ಕುಟುಂಬಕ್ಕಾಗಿ ಮೋದಿ ಕೊಂಡೊಯ್ದು ನೀಡಿದ್ದಾರೆ.

### ಆರ್ಥಿಕ ಅಪರಾಧ ತಡೆ ಒಪ್ಪಂದಕ್ಕೆ ಇ.ಡಿ ಸಹಿ

ಇದೆಲ್ಲದರ ಬಳಿಕ ಪ್ರಧಾನಿ ಮೋದಿ ಅವರು ಮಾರಿಷಸ್ ಸರಕಾರದ ಜತೆ ಹಿಂದೂ ಮಹಾ ಸಾಗರ ವ್ಯಾಪ್ತಿಯಲ್ಲಿ ರುವ ಭಾರತ-ಮಾರಿಷಸ್ ನಡುವೆ ಭದ್ರತೆ, ಅಭಿವೃದ್ಧಿ ಕಾರ್ಯಗಳು, ಸಾಗರ ಉತ್ಪನ್ನಗಳ ವಹಿವಾಟು ಸೇರಿದಂತೆ ವಿವಿಧ ಒಪ್ಪಂದಗಳನ್ನು ಮಾಡಿಕೊಳ್ಳಲಿದ್ದಾರೆ. ಭಾರತೀಯ ನೌಕಾಪಡೆ ಅಧಿಕಾರಿಗಳು ಸೇರಿದಂತೆ ಉನ್ನತ ನಿಯೋಗದ ಪ್ರತಿನಿಧಿಗಳು ಈ ಒಪ್ಪಂದಗಳಿಗೆ ಸಹಿ ಹಾಕಲಿದ್ದಾರೆ ಎನ್ನಲಾಗಿದೆ. ಜತೆಗೆ ಗಡಿಯಾಚೆಗಿನ ಆರ್ಥಿಕ ಅಪರಾಧಗಳಿಗೆ ತಡೆ ಒಡ್ಡುವುದು, ದ್ವಿಪಕ್ಷೀಯ ವ್ಯಾಪಾರ ಕುರಿತ ಒಪ್ಪಂದವಾಗಲಿದೆ. ಭಾರತದ ಜಾರಿ ನಿರ್ದೇಶನಾಲಯ ಮತ್ತು ಮಾರಿಷಸ್‌ನ ಆರ್ಥಿಕ ಅಪರಾಧಗಳ ಆಯೋಗದ ಉನ್ನತ ಅಧಿಕಾರಿಗಳು ಈ ಒಪ್ಪಂದಗಳಿಗೆ ಅಂಕಿತ ಹಾಕಲಿದ್ದಾರೆ.

### 20 ಯೋಜನೆಗಳ ಉದ್ಘಾಟನೆ

ಮಾರಿಷಸ್ ದ್ವೀಪ ರಾಷ್ಟ್ರದಲ್ಲಿ ಭಾರತದ ಆರ್ಥಿಕ ನೆರವಿನಲ್ಲಿ 20 ಮಹತ್ವದ ಯೋಜನೆಗಳನ್ನು ಕೈಗೊಳ್ಳಲಾಗಿದ್ದು. ಇಪ್ಪತ್ತೂ ಯೋಜನೆಗಳನ್ನು ಪ್ರಧಾನಿ ಮೋದಿ ಇದೇ ಸಂದರ್ಭದಲ್ಲಿ ಉದ್ಘಾಟಿಸಲಿದ್ದಾರೆ. ಸಮುದಾಯಕ್ಕಾಗಿ ಮೂಲ ಸೌಕರ್ಯಗಳ ಸಾಮರ್ಥ್ಯ ವಿಸ್ತರಣೆ, 47.50 ಲಕ್ಷ ಡಾಲರ್ ವೆಚ್ಚದಲ್ಲಿ ನಿರ್ಮಿಸಿದ ನಾಗರಿಕ ಸೇವೆಗಳ ಕಾಲೇಜು, ಕ್ಯಾಪ್ಟನ್ ಮಾಲ್‌ಹ್ಯುರಿಯಾಕ್ಸ್ ಆರೋಗ್ಯ ಕೇಂದ್ರ, ಹಾಗೂ ವಿವಿಧ ಮೂಲಸೌಕರ್ಯ ಘಟಕಗಳು ಸೇರಿದಂತೆ 20 ಯೋಜನೆಗಳನ್ನು ಮೋದಿ ಉದ್ಘಾಟಿಸುವರು.

### ರಾಷ್ಟ್ರೀಯ ದಿನಾಚರಣೆಗೆ ಮೋದಿ ಮುಖ್ಯ ಅತಿಥಿ

ಮಾ.12ರಂದು ನಡೆಯುತ್ತಿರುವ '57ನೇ ಮಾರಿಷಸ್ ರಾಷ್ಟ್ರೀಯ ದಿನ' ಆಚರಣೆ ಮಾರಿಷಸ್ ಸರಕಾರದ ಮಹತ್ವದ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಪ್ರಧಾನಿ ಮೋದಿ ಅವರನ್ನು ಮಾರಿಷಸ್ ಪ್ರಧಾನಿ ಆಹ್ವಾನಿಸಿದ್ದಾರೆ. ಅದೇ ಕಾರಣವಾಗಿ 2 ದಿನಗಳ ಭೇಟಿಗೆ ಮಾರಿಷಸ್‌ಗೆ ಬಂದಿಳಿದಿರುವ ಪ್ರಧಾನಿ ಮೋದಿ ಅವರು ಬುಧವಾರ ಸರಕಾರದ ಅಧಿಕೃತ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗಿಯಾಗಲಿದ್ದಾರೆ. ಭಾರತೀಯ ನೌಕಾಪಡೆ ಮತ್ತು ಒಂದು ಯುದ್ಧ ನೌಕೆ, ಭಾರತೀಯ ರಕ್ಷಣಾ ಪಡೆಗಳ ಒಂದು ತುಕಡಿ ಕಾರ್ಯಕ್ರಮದಲ್ಲಿ ಪ್ರದರ್ಶನ-ಪಥ ಸಂಚಲನ ನಡೆಸಲಿವೆ.

'ನನ್ನ ಸ್ನೇಹಿತ ಪ್ರಧಾನಿ ಡಾ.ನವೀನ್‌ಚಂದ್ರ ರಾಮಗೂಲಂ ಅವರು ಪ್ರೀತಿಯ ಆಹ್ವಾನವನ್ನು ಒಪ್ಪಿ ಬಂದಿದ್ದೇನೆ. ಇಲ್ಲಿಗೆ ನನ್ನ 2 ದಿನಗಳ ಈ ಭೇಟಿ ಉಭಯ ದೇಶಗಳಿಗೆ ಬಹಳ ಮಹತ್ವದ್ದಾಗಿದೆ. ಭಾರತ-ಮಾರಿಷಸ್ ಇತಿಹಾಸ, ಭೂಗೋಳ, ಸಂಸ್ಕೃತಿ ಮೊದಲಾದ ವಿಚಾರಗಳನ್ನು ಪರಸ್ಪರ ಹತ್ತಿರದ ನಂಟು ಹೊಂದಿವೆ' ಎಂದು ಮೋದಿ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

1968ರ ಮಾರ್ಚ್ 12ರಂದು ಮಾರಿಷಸ್ ಬ್ರಿಟನ್‌ನ ರಾಜಾಡಳಿತದಿಂದ ಸ್ವತಂತ್ರಗೊಂಡಿತು. ಆ ಸ್ವಾತಂತ್ರ್ಯದ ದಿನವನ್ನು ಮಾರಿಷಸ್ ಪ್ರತಿವರ್ಷದ ಮಾ.12ರಂದು 'ರಾಷ್ಟ್ರೀಯ ದಿನ'ವಾಗಿ ಆಚರಿಸುತ್ತದೆ. ವಿದೇಶಿ ಗಣ್ಯರನ್ನು, ದೇಶದ ಆಪ್ತಮಿತ್ರರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸುತ್ತದೆ.

### ಭೋಜ್‌ಪುರಿ ಹಾಡು ಕೇಳಿ ಚಪ್ಪಾಳೆ

ಭಾರತೀಯ ಸಮುದಾಯದ ವನಿತೆಯರು ಬಿಹಾರಿ ಗೀತ್ ಗವಾಯಿ ಹಾಡಿ ಸಾಂಪ್ರದಾಯಿಕ ಸ್ವಾಗತಿಸಿದರು. ಪ್ರಧಾನಿ ಮೋದಿ ಅವರೂ ಹರ್ಷಚಿತ್ತರಾಗಿ ಗಾಯಕರ ಹಾಡನ್ನು ಆಲಿಸಿ ಚಪ್ಪಾಳೆ ತಟ್ಟುತ್ತಾ ಆನಂದಿಸಿದರು. ಗೀತ್ ಗವಾಯಿ ಎಂಬುದು ಬಿಹಾರದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ಸಾಂಪ್ರದಾಯಿಕ ಭೋಜ್‌ಪುರಿ ಸಂಗೀತ ಮೇಳವಾಗಿದೆ. ಭಾರತದ ಭೋಜ್‌ಪುರಿ ಪಟ್ಟಿಯ ಮಹಿಳೆಯರು ಮಾರಿಷಸ್‌ಗೆ ಈ ಸಂಪ್ರದಾಯವನ್ನು ಒಯ್ದು ಕಾಪಾಡಿಕೊಂಡಿದ್ದಾರೆ. ಹಬ್ಬ-ವಿಶೇಷ ದಿನಗಳಲ್ಲಿ ಕುಟುಂಬ ಸದಸ್ಯರೆಲ್ಲಾ ಸೇರಿ ಹಾಡುತ್ತಾರೆ.

# ಅಸಂಸದೀಯ ಪದ: ಕ್ಷಮೆ ಕೋರಿದ ಖರ್ಗೆ

**ದೆಹಲಿ:** ರಾಜ್ಯಸಭೆಯಲ್ಲಿ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಆವೇಶದ ಭರದಲ್ಲಿ ಆಡಿದ ಮಾತು 'ಅಸಂಸದೀಯ' ಎಂಬ ಹಿನ್ನೆಲೆಯಲ್ಲಿ ಮಂಗಳವಾರ ಸದನದಲ್ಲಿ ಗದ್ದಲಕ್ಕೆ ಕಾರಣವಾಯಿತು. ಬಳಿಕ ಖರ್ಗೆ ಅವರು ಉಪ ಸಭಾಪತಿ ಅವರಲ್ಲಿ ಕ್ಷಮೆಯಾಚಿಸಿದ ಬಳಿಕ ಸದನ ಸಹಜ ಸ್ಥಿತಿಗೆ ಬಂದಿತು.

ಚರ್ಚೆಗೆ ಅವಕಾಶ ನಿರಾಕರಿಸಿದಾಗ ಸಿಟ್ಟಿಗೆದ್ದ ಖರ್ಗೆ ಅವರು ಉಪ ಸಭಾ ಪತಿ ಹರಿವಂಶ್ ಅವರತ್ತ ಸಿಟ್ಟಿಗೆದ್ದು 'ಇದು ಸರ್ವಾಧಿಕಾರಿ ಧೋರಣೆ' ಎಂದು ಕಿಡಿಕಾರಿದ್ದರು. ಈ ಪದ ಬಳಕೆಗೆ ಸಭಾನಾಯಕ, ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರು ಆಕ್ಷೇಪ ವ್ಯಕ್ತಪಡಿಸಿ, ಪೀಠಕ್ಕೆ ಕ್ಷಮೆ ಕೋರುವಂತೆ ಖರ್ಗೆ ಅವರನ್ನು ಒತ್ತಾಯಿಸಿದ್ದರು. ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ವಿಚಾರವಾಗಿ ಕೇಂದ್ರ ಸರಕಾರ ದೇಶದಲ್ಲಿ ವಿಭಜನೆ ಸೃಷ್ಟಿಸುತ್ತಿದೆ. ಹಾಗಾಗಿ ಕೇಂದ್ರ ಸರಕಾರವನ್ನು ಟೀಕಿಸಲು ಉದ್ದೇಶಿಸಿ 'ಸರ್ವಾಧಿಕಾರಿ' ಪದ ಬಳಸಿದ್ದೇನೆಯೇ ಹೊರತು ಉಪ ಸಭಾಪತಿ ಕುರಿತು ಈ ಮಾತು ಹೇಳಲಿಲ್ಲ ಎಂದು ಖರ್ಗೆ ಹೇಳಿದ್ದಾರೆ.

ಉಪ ಸಭಾಪತಿ ಹರಿವಂಶ್ ಅವರು ಶಿಕ್ಷಣ ಸಚಿವಾಲಯ ಕಾರ್ಯನಿರ್ವಹಣೆ ಕುರಿತು ಚರ್ಚೆ ಆರಂಭಿಸಿ ಎಂದು ಕಾಂಗ್ರೆಸ್ ಸಂಸದ ದಿಗ್ವಿಜಯ್ ಸಿಂಗ್‌ಗೆ ಸೂಚಿಸಿದರು. ಬದಲಾಗಿ ಖರ್ಗೆ ಅವರು ಎದ್ದು ನಿಂತರು. ಕಾಂಗ್ರೆಸ್ ಅಧ್ಯಕ್ಷರು ಬೆಳಗ್ಗೆ ಮಾತನಾಡಿದ್ದಾರೆ ಎಂದ ಸಭಾಪತಿ, ಮತ್ತೆ ಅವಕಾಶ ನೀಡಲಾಗದು ಎಂದರು. ಬೆಳಗ್ಗೆ ಮಾತನಾಡಿದಾಗ ಶಿಕ್ಷಣ ಸಚಿವರು ಸದನದಲ್ಲಿರಲಿಲ್ಲ. ಈಗ ಇದ್ದಾರೆ, ಮಾತನಾಡುವೆ ಎಂದು ಖರ್ಗೆ ಹಠ ಹಿಡಿದರು. ಆದರೆ, ಹರಿವಂಶ್ ಖಂಡಿತಾ ಅವಕಾಶವಿಲ್ಲ ಎಂದರು. ಸಿಟ್ಟಿಗೆದ್ದ ಖರ್ಗೆ 'ಇದು ಸರ್ವಾಧಿಕಾರ ಧೋರಣೆ' ಎನ್ನುತ್ತಲೇ ಹಿಂದಿಯಲ್ಲಿ 'ಟೋಕೇಂಗೆ' ಎಂದರು. ಈ ಪದ ಅಸಂವಿಧಾನಿಕ ಎಂದು ಬಿಜೆಪಿ ಸದಸ್ಯರೆಲ್ಲರೂ ಆಕ್ಷೇಪಿಸಿದರು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು
Telephone No: 9448994705

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office, Procurement Section, CESC, Mysuru-570017.
Website: www.cescmysore.org
E-mail ID: gmpurc@cescmysore.org
Company Identity Number(CIN): U40109KA2004SGC035177

ಚಾವಿಸನಿನಿ/ಪ್ರವ್ಯ/ಉ.ಪ್ರವ್ಯ(ಖ)/ಸ.ಪ್ರವ್ಯ(ಖ)–1/2024–25/32454 ದಿನಾಂಕ: 11.03.2025

**ಅಲ್ಪಾವಧಿ ಟೆಂಡರ್ ಪ್ರಕಟಣೆ**

(ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ವೃತ್ತವಾರು ಸ್ಪನ್‌ಪೋಲ್‌ಗಳನ್ನು ತಯಾರಿಸಿ ಸರಬರಾಜು ಮಾಡಲು ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

| ಕ್ರ.ಸಂ | ವಿವರಗಳು | ವಿಚಾರಣೆ ಸಂಖ್ಯೆ/ದಿನಾಂಕ |
|---|---|---|
| 1 | ಕಾರ್ಯ ಮತ್ತು ಪಾಲನಾ ಮೈಸೂರು ವೃತ್ತ ವ್ಯಾಪ್ತಿಗೆ 11 ಮೀ ಸ್ಪನ್ ಕಂಬಗಳ ತಯಾರಿಕೆ ಮತ್ತು ಸರಬರಾಜು ಮಾಡಲು | ಸಿ2–6149/11–03–2025 |
| 2 | ಕಾರ್ಯ ಮತ್ತು ಪಾಲನಾ ಮಂಡ್ಯ ವೃತ್ತ ವ್ಯಾಪ್ತಿಗೆ 11 ಮೀ ಸ್ಪನ್ ಕಂಬಗಳ ತಯಾರಿಕೆ ಮತ್ತು ಸರಬರಾಜು ಮಾಡಲು | ಸಿ2–6150/11–03–2025 |
| 3 | ಕಾರ್ಯ ಮತ್ತು ಪಾಲನಾ ಚಾಮರಾಜನಗರ–ಕೊಡಗು ವೃತ್ತ ವ್ಯಾಪ್ತಿಗೆ 11 ಮೀ ಸ್ಪನ್ ಕಂಬಗಳ ತಯಾರಿಕೆ ಮತ್ತು ಸರಬರಾಜು ಮಾಡಲು | ಸಿ2–6151/11–03–2025 |
| 4 | ಕಾರ್ಯ ಮತ್ತು ಪಾಲನಾ ಹಾಸನ ವೃತ್ತ ವ್ಯಾಪ್ತಿಗೆ 11 ಮೀ ಸ್ಪನ್ ಕಂಬಗಳ ತಯಾರಿಕೆ ಮತ್ತು ಸರಬರಾಜು ಮಾಡಲು | ಸಿ2–6152/11–03–2025 |

ಟೆಂಡರ್‌ನಲ್ಲಿ ಭಾಗವಹಿಸುವ ಮತ್ತು ಸ್ಪೆಸಿಫಿಕೇಷನ್ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 15.03.2025ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91–8046010000, +91–8068948777 ಅಥವಾ ಇ–ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.
ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

ಸಹಿ/– ಪ್ರಧಾನ ವ್ಯವಸ್ಥಾಪಕರು(ಖರೀದಿ), ಚಾ.ವಿ.ಸ.ನಿ.ನಿ., ಮೈಸೂರು
DIPR-DD-MYS/1432/KSMCA-1053/2024-25

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com
ಸಂಖ್ಯೆ: ನೆಯೋಪ್ರಾ/CLU/90/2024–25 ದಿನಾಂಕ: 11–03–2025

**ಸಾರ್ವಜನಿಕ ಪ್ರಕಟಣೆ**

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಬೈರಶೆಟ್ಟಿಹಳ್ಳಿ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

| ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು | ತಾಲ್ಲೂಕು / ಹೋಬಳಿ / ಗ್ರಾಮ | ಸ.ನಂ. | ವಿಸ್ತೀರ್ಣ (ಎ–ಗು) | ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|
| ಶ್ರೀ ರಾಹುಲ್ ಮೆನನ್ ಬಿನ್ ಸಂತೋಷ್ ಮೆನನ್ | ನೆಲಮಂಗಲ / ಕಸಬಾ / ಬೈರಶೆಟ್ಟಿಹಳ್ಳಿ | 28/10 (ಹಳೇ ಸ.ನಂ.28/3) | 02–17 | ವ್ಯವಸಾಯ | ವಸತಿ |

**ಷರಾ:–** ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿ ಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ದ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.
ವಾಸಾಸಂಇ/ವಾ.ಪ್ರ/5601/ಅಡ್ವಟೋರ್/2024–25

ಹೊಲದಲ್ಲಿದ್ದಾಗ 3 ಅಪರಿಚಿತರಿಂದ ಕೃತ್ಯ

# ಉ.ಪ್ರ. ಬಿಜೆಪಿ ನಾಯಕನಿಗೆ ವಿಷ ಇಂಜೆಕ್ಷನ್ ನೀಡಿ ಕೊಲೆ

**ಸಂಭಾಲ್:** ಉತ್ತರ ಪ್ರದೇಶದ ಸಂಭಾಲ್ ಜಿಲ್ಲೆಯ ಬಿಜೆಪಿ ನಾಯಕರೊಬ್ಬರಿಗೆ ಮೂವರು ದುಷ್ಕರ್ಮಿಗಳು ಬಂದು ವಿಷದ ಇಂಜೆಕ್ಷನ್ ಚುಚ್ಚಿ ಕೊಲೆ ಮಾಡಿ ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೋಮವಾರ ಸಂಜೆ ಜುನಾವೈ ಪೊಲೀಸ್ ಠಾಣೆ ವ್ಯಾಪ್ತಿಯ ದಫ್ತಾರಾ ಗ್ರಾಮದಲ್ಲಿನ ತಮ್ಮ ಜಮೀನಿನಲ್ಲಿ ಬಿಜೆಪಿ ಸ್ಥಳೀಯ ನಾಯಕ ಗುಲ್ಫಾಮ್ ಸಿಂಗ್ ಯಾದವ್(60) ಕುಳಿತಿದ್ದಾಗ ಮೂವರು ದುಷ್ಕರ್ಮಿಗಳು ಮೋಟಾರ್‌ಬೈಕ್‌ನಲ್ಲಿ ಬಂದು ಮೊದಲು ಕುಡಿಯಲು ನೀರು ಕೇಳಿದ್ದಾರೆ. ಯಾದವ್ ಜತೆಗಿದ್ದವರು ನೀರು ತರಲು ಹೋದಾಗ ಮೂವರೂ ಯಾದವ್ ಅವರನ್ನು ಬಲವಾಗಿ ಹಿಡಿದುಕೊಂಡು ವಿಷದ ಇಂಜೆಕ್ಷನ್ ಚುಚ್ಚಿ ಪರಾರಿಯಾಗಿದ್ದಾರೆ' ಎಂದು ಪೊಲೀಸ್ ಇನ್‌ಸ್ಪೆಕ್ಟರ್ ದೀಪಕ್ ತಿವಾರಿ ವಿವರಿಸಿದ್ದಾರೆ.

ಯಾದವ್ ಅವರ ಕಿರುಚಾಟ ಕೇಳಿ ಸಮೀಪದ ಜಮೀನುಗಳಲ್ಲಿದ್ದ ಕೆಲವರು ಧಾವಿಸಿ ಬಂದಿದ್ದಾರೆ. ತಕ್ಷಣವೇ ಯಾದವ್ ಅವರನ್ನು ಆಲಿಗಢ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆದರೆ, ಅಷ್ಟರಲ್ಲಾಗಲೇ ಯಾದವ್ ಅಸುನೀಗಿದ್ದರು ಎಂದು ವೈದ್ಯರು ಘೋಷಿಸಿದ್ದಾರೆ. ಘಟನೆ ಕುರಿತ ತನಿಖೆಗೆ ವಿಶೇಷ ಪೊಲೀಸ್ ತಂಡ ನಿಯೋಜಿಸಲಾಗಿದೆ ಎಂದು ತಿವಾರಿ ತಿಳಿಸಿದ್ದಾರೆ. ಯಾದವ್ ಬಿಜೆಪಿ ಅಭ್ಯರ್ಥಿಯಾಗಿ ವಿಧಾನಸಭೆ ಉಪ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿದ್ದರು ಎಂದು ಸ್ಥಳೀಯರು ಹೇಳಿದ್ದಾರೆ.

# ಮ್ಯಾನ್ಮಾರ್ ಸೈಬರ್ ಕ್ರೈಂ: 283 ಭಾರತೀಯರ ರಕ್ಷಣೆ

**ದೆಹಲಿ:** ವಿದೇಶದಲ್ಲಿ ನೌಕರಿ, ಕೈ ತುಂಬಾ ಸಂಬಳ ಎಂಬ ಆಸೆಯಿಂದ ಮ್ಯಾನ್ಮಾರ್ ದೇಶಕ್ಕೆ ಹೋಗಿ ಸೈಬರ್ ಕ್ರೈಂ ಅಪರಾಧಗಳ ಜಾಲದಲ್ಲಿ ಸಿಲುಕಿಕೊಂಡು ಪರಿತಪಿಸುತ್ತಿದ್ದ 283 ಭಾರತೀಯ ಯುವಜನರನ್ನು ಕಡೆಗೂ ರಕ್ಷಣೆ ಮಾಡಿ ಸೋಮವಾರ ಭಾರತಕ್ಕೆ ಸುರಕ್ಷಿತವಾಗಿ ಕರೆ ತರಲಾಯಿತು.

ಜಾಲತಾಣಗಳಲ್ಲಿ ವಂಚನೆ ಕೃತ್ಯ ನಡೆಸುವ ಅಪರಾಧ ಹಿನ್ನೆಲೆಯ ಜಾಲದಲ್ಲಿ 17 ಯುವತಿಯರು ಸೇರಿದಂತೆ ಭಾರತದ 283 ಯುವಜನತೆ ಸಿಲುಕಿಕೊಂಡು ಭಯದಲ್ಲಿ ದಿನ ದೂಡುತ್ತಿದ್ದರು. ಇವರಷ್ಟೇ ಅಲ್ಲದೇ 12ಕ್ಕೂ ಅಧಿಕ ದೇಶಗಳ 7000 ಯುವಜನತೆ ಚೀನಾ ದೇಶದ ವಂಚಕ ಸಂಸ್ಥೆಗಳು ನಡೆಸುತ್ತಿರುವ ಸೈಬರ್ ಅಪರಾಧ ಜಾಲದಲ್ಲಿ ಸಿಕ್ಕಿಬಿದ್ದಿದ್ದರು. ಭಾರತೀಯ ರಾಯಭಾರ ಕಚೇರಿಯ ಅಧಿಕಾರಿಗಳ ಮುತುವರ್ಜಿ ಮತ್ತು ಶ್ರಮದಿಂದ 7000 ಯುವಜನರು ಒಂದೇ ಬಾರಿಗೆ ದುಷ್ಟಶಕ್ತಿಗಳ ಜಾಲದಿಂದ ಹೊರಬರಲು ಸಾಧ್ಯವಾಗಿದೆ ಎಂದು ವರದಿ ತಿಳಿಸಿದೆ.

7 ಬಸ್ ಗಳಲ್ಲಿ ಭಾರತದ ಯುವಕ-ಯುವತಿಯರನ್ನು ಮ್ಯಾನ್ಮಾರ್ ನಿಂದ ರಕ್ಷಣೆ ಮಾಡಿ ಮೊದಲು ಥೈಲ್ಯಾಂಡ್ ದೇಶದ ಮಾಯಿ ಸೋಟ್ ವಿಮಾನ ನಿಲ್ದಾಣಕ್ಕೆ ಕರೆತರಲಾಯಿತು. ಬಳಿಕ ಭಾರತ ಸರಕಾರ ವ್ಯವಸ್ಥೆ ಮಾಡಿದ್ದ ಭಾರತೀಯ ವಾಯುಪಡೆಯ ಸಿ–17 ಸರಕು ಸಾಗಣೆ ವಿಮಾನದಲ್ಲಿ 283 ಜನರನ್ನು ತವರಿಗೆ ಕರೆತರಲಾಗಿದೆ ಎಂದು ಎಎಫ್‌ಪಿ ಮಾಧ್ಯಮಸಂಸ್ಥೆ ವರದಿ ಪ್ರಕಟಿಸಿದೆ.

**ಜಾಗ್ರತೆ ವಹಿಸಿ:** ವಿದೇಶದಲ್ಲಿನ ಉದ್ಯೋಗ ಎನ್ನುತ್ತಲೇ ಕಣ್ಣು ಮುಚ್ಚಿ ಒಪ್ಪಿಕೊಳ್ಳುವುದಲ್ಲ. ನೌಕರಿ ನೀಡಲು ಮುಂದಾಗಿರುವ ಸಂಸ್ಥೆಯ ಹಿನ್ನೆಲೆ, ಕ್ಷೇತ್ರ, ಅದು ಸಾಗಿಬಂದ ದಾರಿ ಮೊದಲಾದ ಅಂಶಗಳನ್ನು ಪರಿಶೀಲಿಸಬೇಕಿದೆ ಎಂದು ಮಂಗಳವಾರ ಹೇಳಿರುವ ಭಾರತದ ವಿದೇಶಾಂಗ ಸಚಿವಾಲಯ, ಉದ್ಯೋಗಾಕಾಂಕ್ಷಿಗಳಲ್ಲಿ ಜಾಗೃತಿ ಮೂಡಿಸಲು ಯತ್ನಿಸಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ನಗರಸಭಾ ಕಾರ್ಯಾಲಯ ಹೊಸಪೇಟೆ.
ಕ್ರಸಂ/ನಸಹೊ/ಆಶಾ/ಸ್ಕ್ರೀನಿಂಗ್ ಮಷಿನ್/15ನೇ ಹಣಕಾಸು/2024–25
ದಿನಾಂಕ: 06.03.2025

**ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ)**

ಸನ್ 2023–24 ನೇ ಸಾಲಿನ 15 ನೇ ಹಣಕಾಸು ಹಣಕಾಸು ಅನುದಾನದ ಯೋಜನೆಯಡಿ ಅನುದಾನದಡಿಯಲ್ಲಿ ಈ ಕೆಳಗಿನಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮಾವಳಿಯಂತೆ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಸರಬರಾಜುದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು **www.eproc.karnataka.govt.in** ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದು. 1) ಪ್ರೀ ಬಿಡ್ ಮೀಟಿಂಗ್ ದಿನಾಂಕ: 20.03.2025 ಬೆಳಿಗ್ಗೆ 11.56 ಕ್ಕೆ 2) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 21.03.2025 ಬೆಳಿಗ್ಗೆ 11.56 ಗಂಟೆ ವರೆಗೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23.03.2025 ಬೆಳಿಗ್ಗೆ 11.56 ಗಂಟೆಗೆ 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 26.03.2025 ಬೆಳಿಗ್ಗೆ 11.56 ಗಂಟೆಗೆ, ಟೆಂಡರ್‌ಗಳನ್ನು ತೆರೆಯುವ ಸ್ಥಳ ನಗರಸಭೆ. **INDENT No.DMA82024-25/IND3787/Call-2** ಟೆಂಡರ್‌ಗೆ ಇಟ್ಟ ಮೊತ್ತ ಅಂದಾಜೂ ಮೊತ್ತ ರೂ.188.58 ಲಕ್ಷ, ಠೇವಣಿ(90 ದಿನಗಳ ವ್ಯಾಲಿಡಿಟಿ) ರೂ. 2,83,000–00 ಟೆಂಡರ್ ಪ್ರೋಸೆಸ್ಸಿಂಗ್ ಫೀ, ಇ–ಪ್ರೋಕ್ಯೂರ್‌ಮೆಂಟ್ ನಿಗಧಿ ಪಡಿಸಿದಂತೆ, ಹೆಚ್ಚಿನ ಮಾಹಿತಿಗಾಗಿ ಕೆಲಸದಂದು ಕಛೇರಿ ವೇಳೆಯಲ್ಲಿ ಕಾರ್ಯಾಲಯದ ಹೊಸಪೇಟೆ ಕಛೇರಿ ಕೆಲಸದಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–ಸಹಾಯಕ ಕಾರ್ಯಪಾಲಕ ಅಭಿಯಂತರರು(ಪರಿಸರ), ನಗರಸಭೆ ಹೊಸಪೇಟೆ
ಸಹಿ/–ಪೌರಾಯುಕ್ತರು, ನಗರಸಭೆ ಹೊಸಪೇಟೆ
ವಾ.ಸಾ.ಸಂ.ಇ/ವಿಜಯನಗರ/2024–25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/583

ಸುರಂಗ ಕುಸಿದ 18ನೇ ದಿನ | ಹೈದರಾಬಾದ್‌ನ ಕಂಪನಿ ರೋಬೊ

# ಸುರಂಗ ರಕ್ಷಣಾಕಾರ್ಯಕ್ಕೆ ರೋಬೊ

**ಶ್ರೀಶೈಲ:** ತೆಲಂಗಾಣ ರಾಜ್ಯದಲ್ಲಿ ನಾಗರ್‌ಕುರ್ನೂಲ್ ಜಿಲ್ಲೆಯಲ್ಲಿ ಶ್ರೀಶೈಲ ಎಡದಂಡೆ ಕಾಲುವೆ ಸುರಂಗ ಮಾರ್ಗ ನಿರ್ಮಾಣ ಕಾಮಗಾರಿ ನಡೆದಿರುವಲ್ಲಿ 3 ಚದರ ಮೀ. ವಿಸ್ತೀರ್ಣದ ಛಾವಣಿ ಫೆ.22ರಂದು ಕುಸಿದಿದ್ದರಿಂದ 8 ಮಂದಿ ಒಳಗೇ ಸಿಕ್ಕಿಕೊಂಡಿದ್ದರು. ಅವರಲ್ಲೊಬ್ಬರ ಮೃತದೇಹ 2 ದಿನದ ಹಿಂದೆ ಪತ್ತೆಯಾಗಿದೆ. ಉಳಿದ 7 ಮಂದಿಯ ರಕ್ಷಣೆಗಾಗಿ ರೊಬೊ ಬಳಸುವುದಕ್ಕೆ ತೆಲಂಗಾಣ ಸರಕಾರ ನಿರ್ಧರಿಸಿದೆ. ಸುರಂಗದೊಳಗೆ 13.45 ಕಿಮೀಗಳಷ್ಟು ದೂರದವರೆಗೂ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಸೇರಿದಂತೆ ರಕ್ಷಣಾ ಕಾರ್ಯಾಚರಣೆಯ ಹಲವು ತಂಡಗಳು ತೆರಳಿ ಶ್ರಮಿಸಿವೆ. ಅಲ್ಲಿಂದ ಮುಂದಕ್ಕೆ ಮನುಷ್ಯರು ತೆರಳಿ ರಕ್ಷಣಾ ಕಾರ್ಯ ನಡೆಸುವುದು ಅಪಾಯಕಾರಿ ಎಂದು ತೀರ್ಮಾನಿಸಿರುವ ತೆಲಂಗಾಣ ಸರಕಾರ, ಮಂಗಳವಾರದಿಂದಲೇ ರಕ್ಷಣಾ ಕಾರ್ಯಕ್ಕೆ ರೋಬೊ ನಿಯೋಜನೆ ಮಾಡಲು ಮುಂದಾಗಿದೆ.

ರಕ್ಷಣಾ ಕಾರ್ಯಾಚರಣೆ 18ನೇ ದಿನವೂ(ಮಂಗಳವಾರ) ಮುಂದುವರಿದಿದೆ. ಹೈದರಾಬಾದ್‌ನಲ್ಲಿ ಕಚೇರಿ ಹೊಂದಿರುವ ಆನ್ವಿ ರೋಬೊಟಿಕ್ಸ್ ಕಂಪನಿಯ 1 ರೊಬೊ ಮತ್ತು ಕೃತಕ ಬುದ್ಧಿಮತ್ತೆ ಒಳಗೊಂಡ ಕ್ಯಾಮೆರಾಗಳನ್ನು ಸುರಂಗದೊಳಕ್ಕೆ ಮಂಗಳವಾರ ಬೆಳಗ್ಗೆ ಕಳುಹಿಸಿಕೊಡಲಾಗಿದೆ. ಜತೆಗೆ ಕಂಪನಿಯ ತಂತ್ರಜ್ಞರಾದ ವಿಜಯ್ ಮತ್ತು ಅಕ್ಷಯ್ ಎಂಬವರೂ ಲೋಕೊ ಟ್ರೇನ್‌ನಲ್ಲಿ ಸುರಂಗದೊಳಕ್ಕೆ ತೆರಳಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.
ಸಂಖ್ಯೆ: ಬೆಂಅಪ್ರಾ/ನಯೋಸ/CLU-399/3276/2024–25 ದಿನಾಂಕ: 11–03–2025

**ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು **ವಸತಿ ವಲಯದಿಂದ ವಾಣಿಜ್ಯ ಉಪಯೋಗಕ್ಕೆ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ ಸಂ. | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ/ಗುಂ | ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂಉಪಯೋಗ | ಬದಲಾವಣೆ ಕೋರಿರುವ ಭೂಉಪಯೋಗ |
|---|---|---|---|---|---|---|---|---|
| 1 | M/s. Bespoke IT Solutions Pvt. Ltd., | ಬೆಂಗಳೂರು ಪೂರ್ವ | ವರ್ತೂರು | ಸೋರಹುಣಸೆ | 12/1 | 1–11 | ವಸತಿ | ವಾಣಿಜ್ಯ |
| 2 | | | | | 92 | 0–06 | | |

**ಷರಾ:** ಈ ಜಮೀನುಗಳಲ್ಲಿ ಕಟ್ಟಡ ಕಾಮಗಾರಿ ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ವಾಣಿಜ್ಯ ಕಟ್ಟಡದಿಂದ ಹತ್ತಿರದಲ್ಲಿ ದಿನೋಪಯೋಗಿ ವಸ್ತುಗಳು ಕಡಿಮೆ ದರದಲ್ಲಿ ಲಭ್ಯವಾಗುತ್ತದೆ ಮತ್ತು ವಾಣಿಜ್ಯ ಮಳಿಗೆಗಳು ದೊರಕುತ್ತದೆ. ಈ ಜಾಗದಲ್ಲಿ ವಾಣಿಜ್ಯ ಕಟ್ಟಡವನ್ನು ಕಟ್ಟುವುದರಿಂದ, ಸರ್ಕಾರಕ್ಕೆ ಹೆಚ್ಚಿನ ತೆರಿಗೆ ಸಂಗ್ರಹವಾಗುತ್ತವೆ ಹಾಗೂ ವಾಣಿಜ್ಯ ಚಟುವಟಿಕೆಗಳಿಂದ ಸ್ಥಳೀಯರಿಗೆ ನಿರಂತರವಾಗಿ ಉದ್ಯೋಗಗಳು ದೊರಕುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವಸತಿ ವಲಯ'** ದಿಂದ **'ವಾಣಿಜ್ಯ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

# 20 ಅತಿ ಮಾಲಿನ್ಯಭರಿತ ಭಾರತದ 13 ನಗರಗಳು!

**ದೆಹಲಿ:** ವಿಶ್ವದಲ್ಲೇ ಅತ್ಯಧಿಕ ಮಾಲಿನ್ಯದ 20 ಪ್ರದೇಶಗಳ ಪಟ್ಟಿಗೆ ಭಾರತದ್ದೇ ಅತಿದೊಡ್ಡ ಕೊಡುಗೆಯಾಗಿದೆ. ಈ ಪಟ್ಟಿಯಲ್ಲಿ ಭಾರತದ 13 ನಗರಗಳು ಸೇರಿರುವುದು ಆಘಾತಕಾರಿಯಾಗಿದೆ. ಭಾರತದಲ್ಲಿನ ವಾಯು ಮಾಲಿನ್ಯ ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದ್ದು, ಪ್ರತಿ ವ್ಯಕ್ತಿಯ ಜೀವಿತಾವಧಿಯನ್ನು 5.2 ವರ್ಷಗಳಷ್ಟು ಕಡಿಮೆ ಮಾಡುತ್ತಿದೆ ಎಂದು ವರದಿಯಲ್ಲಿ ಎಚ್ಚರಿಸಲಾಗಿದೆ. ವಾಯುಮಾಲಿನ್ಯ ಮಾಪನದ ಸ್ವಿಜರ್ಲೆಂಡ್ ಕಂಪನಿ 'ಐಕ್ಯೂಏರ್' ವಿಶ್ವದ ಗಾಳಿ ಗುಣಮಟ್ಟ ವರದಿ–2024 ಅನ್ನು ಮಂಗಳವಾರ ಪ್ರಕಟಿಸಿದ್ದು, ಅಸ್ಸಾಂನ ಬೈನಿರ್‌ಹಟ್ ಅಗ್ರಸ್ಥಾನದಲ್ಲಿದೆ. ಬೈನಿರ್‌ಹತ್, ದೆಹಲಿ, ಮುಲ್ಲನ್‌ಪುರ(ಪಂಜಾಬ್), ಫರಿದಾಬಾದ್, ಲೋನಿ, ದೆಹಲಿ, ಗುರುಗ್ರಾಮ್, ಗಂಗಾನಗರ, ಗ್ರೇಟರ್ ನೊಯಿಡಾ, ಭಿವಾಡಿ, ಮುಜಫರ್‌ನಗರ, ಹನುಮಾನ್‌ಗಢ ಮತ್ತು ನೊಯಿಡಾ ಭಾರತದ ಅತ್ಯಂತ ಮಾಲಿನ್ಯದ ನಗರಗಳು ಎನಿಸಿ ಕೊಂಡಿವೆ. ದೆಹಲಿ ಜಾಗತಿಕವಾಗಿ ಅತ್ಯಂತ ಮಲಿನ ರಾಜಧಾನಿ ಯಾಗಿಯೇ ಮುಂದುವರಿದಿದೆ. ಒಟ್ಟಾರೆ ಲೆಕ್ಕದಲ್ಲಿ 2023ರಲ್ಲಿ ವಿಶ್ವದ 3ನೇ ಅತ್ಯಂತ ಮಾಲಿನ್ಯಭರಿತ ದೇಶ ಎನಿಸಿಕೊಂಡಿದ್ದ ಭಾರತ, 2024ರಲ್ಲಿ 5ನೇ ಸ್ಥಾನಕ್ಕೆ ಬಂದು ಅಲ್ಪ ಸುಧಾರಣೆ ದಾಖಲಿಸಿದೆ. 2024ರಲ್ಲಿ ಭಾರತ ಎಕ್ಯುಐ 2.5 ಸಾಂದ್ರತೆಯಲ್ಲಿ ಶೇ.7 ರಷ್ಟು ತಗ್ಗಿದೆ. ಘನ ಮೀಟರ್‌ಗೆ ಸರಾಸರಿ 50.6 ಮೈಕ್ರೋಗ್ರಾಂ ಗಳಷ್ಟು(2023ರಲ್ಲಿ 54.4 ಮೈಕ್ರೋಗ್ರಾಂ) ಇಳಿಕೆಯಾಗಿದೆ.

## ಸಮಾಚಾರ ಸಣ್ಣದಲ್ಲ

### ಆಭರಣ ಕಳ್ಳತನ : ಆರೋಪಿ ಬಂಧನ

**ಮುದಗಲ್:** ಪಟ್ಟಣದಲ್ಲಿ ನಾಲ್ಕು ಮನೆ ಕಳ್ಳತನ ಮಾಡಿದ ಆರೋಪಿಯನ್ನು ಸ್ಥಳೀಯ ಪೊಲೀಸ್ ರ ತಂಡ ಬಂಧಿಸಿ ನಂತರ ಬಂಗಾರ ಕಳ್ಳತನವಾದ ಮನೆ ಮನೆಗೆ ಪೊಲೀಸರು ತೆರಳಿ ಸ್ಥಳ ಪರಿಶೀಲನೆ ಮಾಡಿ ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ. ಪಟ್ಟಣದ ಸೋಮವಾರ ಪೇಟೆ ಹಾಗೂ ಖಾದ್ರಿ ಕಾಲೋನಿಯಲ್ಲಿ ಜ. 27 ರಂದು ರಾತ್ರಿ ವೇಳೆ ನಾಲ್ಕು ಮನೆ ಸರಣಿ ಕಳ್ಳತನ ಮಾಡಿದ ದೇವದುರ್ಗ ತಾಲೂಕಿನ ಹೇರೂರ ಗ್ರಾಮದ ಹನುಮಂತ ಈಶ್ವರಪ್ಪ (37) ಈ ಆರೋಪಿಯನ್ನು ಮುದಗಲ್ ಪೊಲೀಸ್ ಠಾಣೆಯ ಸಿಸಿ ಕ್ಯಾಮೆರಾ ಪುಟೇಜ್ನ ಸಹಾಯದಿಂದ ಬಂಧಿಸಲಾಗಿದೆ. ಕಳ್ಳತನವಾದ ಘಟನಾ ಸ್ಥಳಕ್ಕೆ ಭೇಟಿ ನೀಡಿ ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ. ಈ ಆರೋಪಿ ಮೇಲೆ ಮೊದಲೂ ಮುದಗಲ್ ಪೊಲೀಸ್ ಠಾಣೆಯಲ್ಲಿ ಕಳ್ಳತನ ಪ್ರಕರಣ ದಾಖಲಾಗಿದೆ. ಎಂದು ಮಸ್ಕಿ ಸಿಪಿಐ ಬಾಲಚಂದ್ರ ಲಕಂ ಪತ್ರಕರ್ತರಿಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಪಿಎಸ್ಐ ವೆಂಕಟೇಶ ಮಾಡಗೇರಿ ಪೊಲೀಸ್ ಸಿಬ್ಬಂದಿ ಅಮರೇಶ, ಎಚ್, ಕೆ,ವೆಂಕಟೇಶ್ ಅನಿಲಕುಮಾರ್ ಇದ್ದರು.

### ಪ್ರಯೋಗಾಲಯ ಉಪಕರಣಗಳ ವಿತರಣೆ

**ಲಿಂಗಸೂಗೂರು:** ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಗುರುಭವನದಲ್ಲಿ ಬೆಂಗಳೂರಿನ ಕೃತಗ್ಯತಾ ಸಂಸ್ಥೆ ತಾಲೂಕಿನ 3 ಪ್ರೌಢ ಶಾಲೆಗಳಾದ ಸರಕಾರಿ ಪ್ರೌಢಶಾಲೆ ಕೋಠಾ, ಸರಕಾರಿ ಪದವಿ ಪೂರ್ವ ಕಾಲೇಜ್, ಪ್ರೌಢಶಾಲಾ ವಿಭಾಗ ರೋಡಲಬಂಡಾ ಕ್ಯಾಂಪ್, ಸರಕಾರಿ ಪ್ರೌಢ ಶಾಲೆ ಪೂಲಭಾವಿ ಶಾಲೆಗಳಿಗೆ ಪ್ರತಿ ಶಾಲೆಗೂ 75,000 ರು ಗಳ ವಿಜ್ಞಾನ ಪ್ರಯೋಗಾಲಯದ ಉಪಕರಣಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ತಾಲೂಕು ದೈಹಿಕ ಪರಿವೀಕ್ಷರಾದ ಚನ್ನಬಸವರಾಜ್ ಮೇಟಿ, ಶಿಕ್ಷಣ ಸಂಯೋಜಕ ಬಸವರಾಜ್ ಗುಡಿಹಾಳ್, ಜನತಾಪುರ ಶಾಲೆಯ ಸಹ ಶಿಕ್ಷಕರಾದ ಮೌನೇಶ್ವರಚಾರಿ ಎಂ.ಮಹಾಂತೇಶ್ ಬಳ್ಳೊಳ್ಳಿ ಶಿಕ್ಷಣ ಸಂಯೋಜಕರು ಫಲಾನುಭವಿ ಶಾಲೆಯ ಮುಖ್ಯಗುರುಗಳಾದ ಮೌನೇಶ್ ಕಂಬಾರ, ಶಂಕರಗೌಡ, ಹುಸೇನಪ್ಪ, ಫಲಾನುಭವಿ ಶಾಲೆಯ ವಿಜ್ಞಾನ ಶಿಕ್ಷಕರು, ಶರಣಬಸವ ಗುಡದಿನ್ನಿ ಸಹಶಿಕ್ಷಕರು, ಬಸವರಾಜ್ ಬೇಲಾಳ್, ನಾಗರಾಜ್ ಮಾಂಡ್ರೆ, ಅಜೀಮ್ ಪ್ರೇಮ್ಜಿ ಫೌಂಡೇಶನ್ ನ ಸಂಪನ್ಮೂಲ ವ್ಯಕ್ತಿಗಳಾದ ಮೇಘಾ ಕುಲಕರ್ಣಿ, ಸುರೇಶ ಇದ್ದರು.

### ಹಣ ದುರುಪಯೋಗ ಆರೋಪ

**ದೇವದುರ್ಗ:** ಕೆ.ಬಿ.ಜೆ.ಎನ್, ಎಲ್ಎಸ್.ಸಿ.ಪಿ., ಟಿ.ಎಸ್.ಪಿ. ಯೋಜನೆಯಲ್ಲಿ ಅಧಿಕಾರಿಗಳೇ ಲೂಟಿ ಮಾಡಿದ್ದಾರೆಂದು ದೇವದುರ್ಗ ತಾಲೂಕ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಹನುಮಂತ ಮಿಯ್ಯಾಪುರ ಅವರು ಆರೋಪಿಸಿದ್ದಾರೆ. ಅವರು ಪತ್ರಿಕೆಯೊಂದಿಗೆ ಮಾತನಾಡಿ, ದೇವದುರ್ಗ ತಾಲೂಕಿನ ಮಾನಸಗಲ್ ದಿಂದ ಮಿಯ್ಯಾಪುರು ವರೆಗೆ ರಸ್ತೆ ಕಾಮಾಗಾರಿಯನ್ನು ಅರ್ಧಕ್ಕೆ ನಿಲ್ಲಿಸಿದ್ದರೂ, ಬಿಲ್ ಪಾವತಿಸಿದವರ ಮೇಲೆ ಸೂಕ್ತಕ್ರಮ ಜರುಗಿಸುವಂತೆ ವ್ಯವಸ್ಥಾಪಕ ನಿರ್ದೇಶಕರು ಕೃ.ಭಾ.ಜ.ನಿ.ಬಹು ಕಟ್ಟಡ 3ನೇಮಹಡಿ ಕೆ.ಆರ.ವೃತ.ಬೆಂಗಳೂರು ಅವರಿಗೆ ದೂರು ನೀಡಲಾಗಿದೆ. ಇದಕ್ಕೆ ಪರಶುರಾಮ ಎಂಬ ಅಧಿಕಾರಿಯೇ ಇದಕ್ಕೆ ಕಾರಣೀಕರ್ತರು ಎಂದು ಅವರು ದೂರಿದ್ದಾರೆ. 16 ನೇ ವಿತರಣಾ ಕಾಲೂವೆಯಲ್ಲಿ 10 ನೇ ಉಪಕಾಲೂವೆ ಲೈನಿಂಗ್ ಮಾಡಿರುವುದಿಲ್ಲ, ತಾಲೂಕಿನ ಮಾನಸಗಲ್ ದಿಂದ ಮಿಯ್ಯಾಪುರು ವರೆಗೆ ಕೆ.ಬಿ.ಜೆ.ಎನ್.ಎಲ್ಎಸ್.ಸಿ.ಪಿ, ಟಿ.ಎಸ್.ಪಿ ಯೋಜನೆಯಡಿಯಲ್ಲಿ ಕಾಮಗಾರಿಯಲ್ಲಿ ಮಿಯ್ಯಾಪುರು ರಸ್ತೆ ಹತ್ತಿರ 1 ಕೀಮಿ ರಸ್ತೆ ಮಾಡದೆ ಬಿಲ್ ಪಾವತಿ ಮಾಡಿರುತ್ತಾರೆ. ಪರಶುರಾಮ ಎಂಬ ಅಧಿಕಾರಿಯೇ ಕಾರಣೀಕರ್ತರಾಗಿದ್ದಾರೆ ಇವರ ಮೇಲೆ ಸೂಕ್ತ ಕ್ರಮ ಜರುಗಿಸುವಂತೆ ವ್ಯಸ್ತಾಪಕ ನಿರ್ದೇಶಕರು ಕೃ.ಭಾ.ಜ.ನಿ.ಪಿ.ಬಹು ಕಟ್ಟಡ 3 ನೇ ಮಹಡಿ ಕೆ.ಆರ. ವೃತ.ಬೆಂಗಳೂರು ಅವರಿಗೆ ದೂರು ನೀಡಲಾಗಿದೆ. ಎಂದು ಅವರು ತಿಳಿಸಿದ್ದಾರೆ, ತೆಗಿಹಾಳದಿಂದ ಮಿಯ್ಯಾಪುರು 300 ಮೀಟರ್ ಸಿಸಿ ಯನ್ನು ಅಧಿಕಾರಿಗಳ ಬರವಸೆಯ ಮೆರೆಗೆ ಮಾಡಿದ ಬಿಲ್ ಮಾಡಿಕೊಂಡಿರುತ್ತಾರೆ ಸಂಬಂಧಿಸಿದ ಅಧಿಕಾರಿ ಪರುಶುರಾಮ ಎಂಬ ಅಧಿಕಾರಿಗಳ ಮೇಲೆ ಸೂಕ್ತ ಕ್ರವ ಽಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

### ಮಾದರಿ ಮಾರುಕಟ್ಟೆಗೆ ಶ್ರಮಿಸುವೆ: ನಂಜಪ್ಪ

**ಕೊಟ್ಟೂರು:** ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಲ್ಲಿ ಮೂಲಸೌಲಭ್ಯ ಕಲ್ಪಿಸಿ ಮಾದರಿ ಮಾರುಕಟ್ಟೆಯನ್ನಾಗಿಸಲು ಶ್ರಮಿಸುವುದಾಗಿ ಎಪಿಎಂಸಿ ಅಧ್ಯಕ್ಷ ಹರಾಳು ನಂಜಪ್ಪ ಹೇಳಿದರು. ಪಟ್ಟಣದ ಎಪಿಎಂಸಿ ಆವರಣದಲ್ಲಿ ಅಂದಾಜು ಐವತ್ತು ಲಕ್ಷ ವೆಚ್ಚದ ಮುಚ್ಚು ಹರಾಜು ಕಟ್ಟೆ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ಸರಕಾರದ ಮೇಲೆ ಒತ್ತಡ ಹಾಕಿ ಅನುದಾನ ತಂದು ಆದ್ಯತೆ ಮೇರೆಗೆ ಕಾಮಗಾರಿಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದರು.

{ಶಿವರಾಜ ತಂಗಡಗಿ } ಸಚಿವ

**ಪ್ರತಿ ವರ್ಷದಂತೆ ಈ ವರ್ಷವೂ ಕನಕಗಿರಿ ಉತ್ಸವ ಆಚರಿಸುವ ಮೂಲಕ ಕೊಡುಗೆ ನೀಡಬೇಕು ಎಂದು ಅಂದುಕೊಂಡಿದ್ದೆ. ಆದರೆ, ಕೆಲವರ ತಪ್ಪು ಗ್ರಹಿಕೆಯಿಂದಾಗಿ ಅನಿವಾರ್ಯವಾಗಿ ಕನಕಗಿರಿ ಉತ್ಸವ ತಾತ್ಕಾಲಿಕವಾಗಿ ರದ್ದು ಮಾಡಿರುವುದಾಗಿ ಬಹಳ ಬೇಸರ ತರಿಸಿದೆ.**

ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಸುತ್ತೋಲೆ | ಸಣಾಪೂರ ಅತ್ಯಾಚಾರ ಪ್ರಕರಣ ಉಲ್ಲೇಖಿಸಿ ಸೂಚನೆ

# ಪ್ರವಾಸಿಗರ ಸುರಕ್ಷತೆ ರೆಸಾರ್ಟ್ ಮಾಲೀಕರ ಹೊಣೆ

**ಕೊಪ್ಪಳ:** ಜಿಲ್ಲೆಯ ಗಂಗಾವತಿ ತಾಲೂಕು ಸಣಾಪೂರ ಗ್ರಾಮದಲ್ಲಿ ನಡೆದ ವಿದೇಶಿ ಮಹಿಳೆ ಹಾಗೂ ಹೋಂ ಸ್ಟೇ ಮಾಲಕಿ ಮೇಲಿನ ಅತ್ಯಾಚಾರ ಕೃತ್ಯ ದೇಶಾದ್ಯಂತ ಚರ್ಚೆಗೆ ಗ್ರಾಸವಾಗಿದ್ದು, ರಾಜ್ಯ ಸರಕಾರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದೆ. ಸಣಾಪೂರ ಘಟನೆಯನ್ನೇ ಉಲ್ಲೇಖಿಸಿ ಒಳಾಡಳಿತ ಇಲಾಖೆಯ ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಸುತ್ತೋಲೆ ಹೊರಡಿಸಿದ್ದು, ಪ್ರವಾಸಿಗರ ಭದ್ರತೆ ಮತ್ತು ಸುರಕ್ಷತೆ ಹೋಂ ಸ್ಟೇ ಮತ್ತು ರೆಸಾರ್ಟ್ ಮಾಲೀಕರ ಹೊಣೆ ಎಂದು ಸೂಚನೆ ನೀಡಿದ್ದಾರೆ.

ರಾಜ್ಯದ ಎಲ್ಲ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಪತ್ರ ಬರೆದಿರುವ ಅಪರ ಮುಖ್ಯ ಕಾರ್ಯದರ್ಶಿ ಎಸ್.ಆರ್.ಉಮಾಶಂಕರ್, ಈ ಬಗ್ಗೆ ಅಗತ್ಯ ಸೂಚನೆಗಳನ್ನು ನಿಮ್ಮ ಜಿಲ್ಲೆಯ ಪ್ರತಿ ರೆಸಾರ್ಟ್ ಹಾಗೂ ಹೋಂ ಸ್ಟೇಗಳಿಗೆ ಖುದ್ದಾಗಿ ಹೋಗಿ ಜಾರಿ ಮಾಡಬೇಕು. ಅವರಿಂದ ಸೂಕ್ತ ಮುಚ್ಚಳಿಕೆ ಪಡೆದುಕೊಳ್ಳಬೇಕು. ರೆಸಾರ್ಟ್‌ಗಳ ಸ್ಥಳ ವೀಕ್ಷಣೆ ಕಾರ್ಯಕ್ರಮದ ಪಟ್ಟಿ ಪಡೆದು, ಅಲ್ಲಿ ಯಾವುದೇ ಅಪಾಯ ಇಲ್ಲದ್ದನ್ನು ಖಾತರಿ ಮಾಡಬೇಕು. ಮಾ.18ರ ಒಳಗೆ ಈ ಎಲ್ಲ ಪ್ರಕ್ರಿಯೆ



ಕರ್ನಾಟಕ ಸರ್ಕಾರ

ಸಂಖ್ಯೆ:ಒಇ/05/ಅಮುಕಾ/2025

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:10.03.2025.

ಸುತ್ತೋಲೆ

ವಿಷಯ: ರಾಜ್ಯದ ವಿವಿಧ ಪ್ರವಾಸಿ ತಾಣಗಳಲ್ಲಿ ನಡೆಸಲಾಗುತ್ತಿರುವ ರೆಸಾರ್ಟ್/ ಹೋಮ್‌ಸ್ಟೇಗಳಲ್ಲಿ ಬರುವ ಪ್ರವಾಸಿಗರ ಭದ್ರತೆ ಮತ್ತು ಸುರಕ್ಷತೆಯನ್ನು ನಿರ್ವಹಿಸುವ ಕುರಿತು.

ಉಲ್ಲೇಖ: ಡಿಜಿ & ಐಜಿಪಿ ರವರ ಪತ್ರ ಸಂಖ್ಯೆ:ಕಾ.ಮತ್ತುಸು(7)/19/2025 ದಿನಾಂಕ: 08.03.2025.

* * * *

ದಿನಾಂಕ:06.03.2025 ರಂದು ಗಂಗಾವತಿ ತಾಲ್ಲೂಕಿನ ಆನೆಗುಂದಿ ಗ್ರಾಮದಲ್ಲಿ ಹಾರ್ಟ್ ಲ್ಯಾಂಡ್ ಹೋಂ ಸ್ಟೇನಲ್ಲಿ ವಾಸವಿದ್ದ ಎರಡು ವಿದೇಶೀಯರು, ಎರಡು ಭಾರತೀಯರನ್ನು ಹೋಮ್‌ಸ್ಟೇ ಮಾಲೀಕರು ರಾತ್ರಿ ಭೋಜನದ ನಂತರ ನಿರ್ಜನ ಪ್ರದೇಶದಲ್ಲಿ ನಕ್ಷತ್ರ ವೀಕ್ಷಣೆಗೆಂದು ಕರೆದುಕೊಂಡು ಹೋದ ಸಂದರ್ಭದಲ್ಲಿ ಮೂರು ದುಷ್ಕರ್ಮಿಗಳು ಪುರುಷ ಪ್ರವಾಸಿಗರೊಂದಿಗೆ ವಾಗ್ವಾದ ಮಾಡಿ ಅವರುಗಳನ್ನು ಸಮೀಪದಲ್ಲಿಯೇ ತುಂಗಾಭದ್ರ ಎಡದಂಡೆ ಕಾಲುವೆಗೆ ನೂಕಿರುತ್ತಾರೆಂದು ವರದಿ ಮಾಡಿರುತ್ತಾರೆ. ಮುಂದುವರೆದು, ಹೋಮ್‌ಸ್ಟೇ ಮಾಲೀಕಳು ಹಾಗೂ ಮತ್ತೊಬ್ಬ ಇಸ್ರೇಲ್ ಪ್ರಜೆಯ ಮೇಲೆ ಹಲ್ಲೆ ಮಾಡಿ ಅತ್ಯಾಚಾರ ಎಸಗಿರುವುದಾಗಿ ತಿಳಿಸಿರುತ್ತಾರೆ. ಕಾಲುವೆಯ ನೀರಿನಲ್ಲಿ ಕೊಚ್ಚಿ ಹೋಗಿದ್ದವರ ಪೈಕಿ ಒರಿಸ್ಸಾ ಮೂಲದ ವ್ಯಕ್ತಿ ಮೃತರಾಗಿರುವ ಘಟನೆ ಉಲ್ಲೇಖದ ಪತ್ರದಲ್ಲಿ ವರದಿಯಾಗಿರುತ್ತದೆ.

ಮೇಲಿನ ಘಟನೆಯು ಅತ್ಯಂತ ದುಃಖಕರ ಹಾಗೂ ವಿಷಾದನೀಯವಾದುದಾಗಿದೆ. ಈ ಹಿನ್ನೆಲೆಯಲ್ಲಿ ಭವಿಷ್ಯತ್‌ನಲ್ಲಿ ಈ ರೀತಿಯ ದುರ್ಘಟನೆಗಳು ಜರುಗದ ರೀತಿಯಲ್ಲಿ ಕೆಳಕಂಡ ಸೂಚನೆಗಳನ್ನು ಹಾಗೂ ನಿರ್ದೇಶನಗಳನ್ನು ನೀಡಲಾಗಿದೆ:-

a) ರಾಜ್ಯದ ಪ್ರವಾಸಿ ತಾಣಗಳಲ್ಲಿನ ಹೋಮ್‌ಸ್ಟೇಗಳು ವಿದೇಶಿ ಪ್ರವಾಸಿಗರನ್ನು ಒಳಗೊಂಡಂತೆ ಎಲ್ಲಾ ಪ್ರವಾಸಿಗರ ಭದ್ರತೆ ಹಾಗೂ ಸುರಕ್ಷತೆಗಾಗಿ ಸೂಕ್ತ ಕ್ರಮಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳತಕ್ಕದ್ದು.
b) ಹೊರವಲಯಗಳಲ್ಲಿ ಅಥವಾ ನಿರ್ಜನ ಪ್ರದೇಶಗಳಿಗೆ ಪ್ರವಾಸಿಗರನ್ನು ಕರೆದೊಯ್ಯುವ ಮುಂಚಿತವಾಗಿ ಸಂಬಂಧಿಸಿದ ಅಧಿಕಾರ ವ್ಯಾಪ್ತಿಯುಳ್ಳ ಪೊಲೀಸ್ ಠಾಣೆಯಲ್ಲಿ ಮಾಹಿತಿಯನ್ನು ನೀಡಿ, ಅನುಮತಿ ಪಡೆಯತಕ್ಕದ್ದು.
c) ಪೊಲೀಸರಿಂದ/ಅರಣ್ಯ ಇಲಾಖೆ ಸಿಬ್ಬಂದಿಯಿಂದ ಪೂರ್ವಾನುಮತಿಯನ್ನು ಪಡೆಯದೇ ನಿರ್ಜನ ಪ್ರದೇಶ/ಹೊರವಲಯ ಅಥವಾ ಅರಣ್ಯ ಪ್ರದೇಶಗಳಲ್ಲಿ ಪ್ರವಾಸಿಗರನ್ನು ಕರೆದೊಯ್ದಲ್ಲಿ ದುಷ್ಕರ್ಮಿಗಳಿಂದ ಅಥವಾ ಕಾಡು ಪ್ರಾಣಿಗಳಿಂದ ಸಂಭವಿಸುವ ದುರ್ಘಟನೆಗಳಿಗೆ ಆಯಾ ಹೋಮ್‌ಸ್ಟೇ ಮಾಲೀಕರ ಜವಾಬ್ದಾರರಾಗುತ್ತಾರೆ ಹಾಗೂ ಕಾನೂನಿನ್ವಯ ಶಿಕ್ಷಾರ್ಹ ಅಪರಾಧಕ್ಕೆ ಒಳಪಡುತ್ತಾರೆ.

ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಹೊರಡಿಸಿರುವ ಸುತ್ತೋಲೆ.

ಪೂರ್ಣಗೊಳಿಸಿ, ವರದಿ ಸಲ್ಲಿಸುವಂತೆ ಸೂಚಿಸಿದ್ದಾರೆ. ಮುಂದೆ ಇಂಥ ದುರ್ಘಟನೆ ಜರುಗದಿಸಲು ನಿರ್ದೇಶನ ನೀಡಲಾಗಿದೆ ಎಂದು ವಿವರಿಸಿದ್ದಾರೆ.

ಸುತ್ತೋಲೆಯ ಪ್ರಮುಖಾಂಶ: ಕಳೆದ 2025ರ ಮಾರ್ಚ್ 6 ರಂದು ಗಂಗಾವತಿ ತಾಲೂಕು ಸಣಾಪೂರ ಗ್ರಾಮದಲ್ಲಿ ಆನೆಗುಂದಿ ಗ್ರಾಮದ ಸಮೀಪ ನಡೆದ ಘಟನೆ ಉಲ್ಲೇಖಿಸಿ, ಪತ್ರ ಬರೆದಿದ್ದಾರೆ. ಹೋಂ ಸ್ಟೇ ಮಾಲಕಿ, ಇಬ್ಬರು ಭಾರತೀಯ ಮತ್ತು ಇಬ್ಬರು ವಿದೇಶಿ ಪ್ರವಾಸಿಗರನ್ನು ರಾತ್ರಿ ಭೋಜನದ ನಂತರ ನಿರ್ಜನ ಪ್ರದೇಶದಲ್ಲಿ ನಕ್ಷತ್ರ ವೀಕ್ಷಣೆಗೆಂದು ಕರೆದುಕೊಂಡು ಹೋಗಿದ್ದಾಗ ದುರ್ಘಟನೆ ನಡೆದಿದೆ. ಈ ಘಟನೆಯಲ್ಲಿ ಒಬ್ಬ ವಿದೇಶಿ ಮಹಿಳೆ ಮತ್ತು ಹೋಂ ಸ್ಟೇ ಮಾಲಕಿ ಮೇಲೆ 3 ದುಷ್ಕರ್ಮಿಗಳು ಅತ್ಯಾಚಾರ ಮಾಡಿ, ಜೊತೆಗಿದ್ದವರನ್ನು ಕಾಲುವೆಗೆ ತಳ್ಳಿದ್ದಾರೆ. ಈ ಪೈಕಿ ಒಬ್ಬ ಮೃತಪಟ್ಟಿದ್ದಾನೆ. ಈ ಹಿನ್ನೆಲೆ ರಾಜ್ಯದ ಪ್ರವಾಸಿ ತಾಣದಲ್ಲಿನ ಹೋಂ ಸ್ಟೇ ಮತ್ತು ರೆಸಾರ್ಟ್ ನಲ್ಲಿ ವಿದೇಶಿಯರು ಒಳಗೊಂಡು ಎಲ್ಲ ಪ್ರವಾಸಿಗರ ಭದ್ರತೆ ಹಾಗೂ ಸುರಕ್ಷತೆಗೆ ಸೂಕ್ತ ಕ್ರಮ ಕಡ್ಡಾಯವಾಗಿ ತೆಗೆದುಕೊಳ್ಳಬೇಕು ಎಂದು ಸೂಚಿಸಿದ್ದಾರೆ.

ಹೊರ ವಲಯ ಅಥವಾ ನಿರ್ಜನ ಪ್ರದೇಶಕ್ಕೆ ಪ್ರವಾಸಿಗರನ್ನು ಕರೆದೊಯ್ಯುವ ಮೊದಲು ಸಂಬಂಧಿಸಿದ ಅಧಿಕಾರ ವ್ಯಾಪ್ತಿಯ ಪೊಲೀಸ್ ಠಾಣೆಗೆ ಮಾಹಿತಿ ನೀಡಿ, ಅನುಮತಿ ಪಡೆಯಬೇಕು. ಪೊಲೀಸರು ಅಥವಾ ಅರಣ್ಯ ಇಲಾಖೆ ಸಿಬ್ಬಂದಿ ಪೂರ್ವಾನುಮತಿ ಪಡೆಯದೇ ನಿರ್ಜನ ಪ್ರದೇಶ ಅಥವಾ ಅರಣ್ಯ ಪ್ರದೇಶದಲ್ಲಿ ಪ್ರವಾಸಿಗರನ್ನು ಕರೆದೊಯ್ಯುವಂತಿಲ್ಲ. ಒಂದೊಮ್ಮೆ ಪರವಾನಗಿ ಇಲ್ಲದೇ ಹೋಗಿದ್ದರೆ ದುಷ್ಕರ್ಮಿಗಳು ಅಥವಾ ಕಾಡು ಪ್ರಾಣಿಗಳಿಂದ ಸಂಭವಿಸುವ ದುರ್ಘಟನೆಗೆ ಆಯಾ ಹೋಂ ಸ್ಟೇ ಮಾಲೀಕರನ್ನು ಜವಾಬ್ದಾರಿ ಮಾಡಿ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡುವಂತೆ ಪೊಲೀಸ್ ಇಲಾಖೆಗೆ ಸೂಚಿಸಿದ್ದಾರೆ.

#### ಪ್ರಾಥಮಿಕ ಪರವಾನಗಿಯೇ ಇಲ್ಲ

ರಾಜ್ಯ ಸರಕಾರ ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದ್ದು ಕೇವಲ ಸುತ್ತೋಲೆಗೆ ಸೀಮಿತ ಆಗುವ ಸಾಧ್ಯತೆ ಹೆಚ್ಚಿದೆ. ಏಕೆಂದರೆ, ಕೊಪ್ಪಳ ಜಿಲ್ಲೆಯ ಗಂಗಾವತಿ ಗ್ರಾಮೀಣ ಮತ್ತು ಮುನಿರಾಬಾದ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸುಮಾರು 100ಕ್ಕೂ ಹೆಚ್ಚು ರೆಸಾರ್ಟ್ ಇವೆ. ಇವು ಕನಿಷ್ಠ ಗ್ರಾಪಂ ನೀಡುವ ಪ್ರಾಥಮಿಕ ಪರವಾನಗಿಯನ್ನೂ ಪಡೆದಿಲ್ಲ ಎಂಬ ಆರೋಪ ಕೇಳಿ ಬಂದಿವೆ. ಈ ಪೈಕಿ ಬಹುತೇಕರು ತಮ್ಮ ಭೂಮಿ ಎನೆ ಮಾಡಿಕೊಂಡು, ಅಧಿಕೃತ ಪರವಾನಗಿ ಪಡೆದುಕೊಂಡಿಲ್ಲ. ಇಂಥ ಅನಧಿಕೃತ ರೆಸಾರ್ಟ್‌ನಲ್ಲಿ ಸರಕಾರದ ಸುತ್ತೋಲೆಯ ಅಂಶ ಅನುಷ್ಠಾನ ಮಾಡುವುದು ಕಷ್ಟ ಸಾಧ್ಯ ಎಂಬ ಮಾತು ಕೇಳಿ ಬಂದಿವೆ.

#### ರೆಸಾರ್ಟ್‌ಗೆ ಅನಿರೀಕ್ಷಿತ ಭೇಟಿ

ಘಟನೆ ಹಿನ್ನೆಲೆ ಕೊಪ್ಪಳ ಎಸ್ಪಿ ಡಾ.ರಾಮ್ ಎಲ್. ಅರಸಿದ್ದಿ ನೇತೃತ್ವದಲ್ಲಿ ಗಂಗಾವತಿ ಡಿವೈಎಸ್ಪಿ ಸಿದ್ದಲಿಂಗಪ್ಪ ಮತ್ತು ಸಿಬ್ಬಂದಿ ನಾನಾ ರೆಸಾರ್ಟ್‌ಗೆ ಸನಿರೀಕ್ಷಿತ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪ್ರವಾಸಿಗರ ಚೆಕ್ ಇನ್ ಮತ್ತು ಚೆಕ್ ಔಟ್ ದಾಖಲಾತಿ, ಭಾರತೀಯರು ಮತ್ತು ವಿದೇಶಿ ಪ್ರವಾಸಿಗರು ಎಷ್ಟು ಇದ್ದಾರೆ ಎಂಬ ಬಗ್ಗೆ ದಾಖಲಾತಿ ಪರಿಶೀಲಿಸಿದರು. ಎಸ್ಪಿ ಭೇಟಿ ವೇಳೆ, ಕೆಲವು ರೆಸಾರ್ಟ್ ನಲ್ಲಿ ಮದ್ಯಪಾನ ಸೇವನೆಗೆ ಅವಕಾಶ ನೀಡಿದ್ದು ಕಂಡು ಬಂತು. ಇದರಿಂದ ಡಿಸಿಮಿಡಿಕೊಂಡ ಎಸ್ಪಿ ರೆಸಾರ್ಟ್ ಮಾಲೀಕರಿಗೆ ತರಾಟೆ ತೆಗೆದುಕೊಂಡಿದ್ದಾರೆ ಎನ್ನಲಾಗಿದೆ.

## ಅದ್ಭುತವಾದ ಬಜೆಟ್ ಮಂಡಿಸಿದ ಸಿ.ಎಂ ಸಿದ್ದರಾಮಯ್ಯ

**ಸಿಂಧನೂರು:** ತಾಲೂಕಿಗೆ ಕೌಶಲ ಅಭಿವೃದ್ಧಿ ಕೇಂದ್ರವನ್ನ ನೀಡುವ ಮೂಲಕ ಯುವಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಖುಷಿ ಕೊಡುಗೆ ನೀಡಿದ್ದಾರೆ. ದಾಖಲೆಯ 16 ನೇ ಆಯ್ಯುವ್ಯಯ ಮಂಡಿಸುವ ಮೂಲಕ ಬಡವರ ಮತ್ತು ಅಭಿವೃದ್ಧಿ ಪರ ಮುಂಗಡ ಪತ್ರ ಮಂಡಿಸಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಶ್ಲಾಘಿಸಿದರು.

ನಗರದ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ನಾನು ಮನವಿ ಪತ್ರ ಕೊಟ್ಟ ನಂತರ ಬಜೆಟ್‌ನಲ್ಲಿ ಕೌಶಲ್ಯ ಅಭಿವೃದ್ಧಿ ಕೇಂದ್ರವನ್ನು ಘೋಷಣೆ ಮಾಡಿದ್ದಾರೆ. ಇದನ್ನ ತಾಲೂಕಿನ ಜನತೆಗೆ ಸಮರ್ಪಣೆ ಮಾಡುತ್ತೇನೆ. ಮುಂದಿನ ದಿನ ಮಾನಗಳಲ್ಲಿ ಇನ್ನೂ ಅನೇಕ ಅಭಿವೃದ್ಧಿ ಕೆಲಸಗಳ ಕಡೇ ಗಮನ ಹರಿಸುತ್ತೇನೆ ಎಂದರು.

ಮುಂದಿನ ದಿನಗಳಲ್ಲಿ ಸಿಂಧನೂರು ತಾಲೂಕನ್ನು ಜಿಲ್ಲೆಯನ್ನಾಗಿ ಮಾಡುವ ಪ್ರಯತ್ನ ನಡೆದಿದೆ. ನನ್ನ ಅಧಿಕಾರ ಮುಗಿಯುವ ಒಳಗೆ ಜಿಲ್ಲೆಯನ್ನಾಗಿ ಮಾಡೇ ಮಾಡುತ್ತೆನೆ ಎಂಬ ಭರವಸೆ ನೀಡಿದರು.

ಸಿಂಧನೂರು ತಾಲೂಕಿನ ಕುಡಿಯುವ ಹಾಗೂ ಕೃಷಿ ನೀರಿನ ಸಮಸ್ಯೆ ಉದ್ಭವಿಸದಂತೆ ರಾಗಲಪರ್ವಿ ಹತ್ತಿರ ಇರುವ ಸಿಎಸ್ಎಫ್ ಫಾರ್ಮ್ ನಲ್ಲಿ ಸುಮಾರು 500 ಎಕರೆ ಕೆರೆ ನಿರ್ಮಾಣಕ್ಕೆ ಡಿ ಪಿ ಆರ್ ಸಿದ್ದಪಡಿಸಿ ಎಂದು ಮನವಿ ಮಾಡಿದ ತಕ್ಷಣ ಮಾನ್ಯ ಜಲ ಸಂಪನ್ಮೂಲ ಸಚಿವರಾದ ಡಿ ಕೆ ಶಿವಕುಮಾರವರು ಅನುಮತಿ ಕೊಟ್ಟಿದ್ದಾರೆ. ನಾಳೆ ವಿಧಾನ ಪರಿಷತ್ ಕಲಾಪದಲ್ಲಿ ನಮ್ಮ ತಾಲೂಕಿಗೆ ಕಾನೂನು ಕಾಲೇಜು, ಎಂಜಿನಿಯರಿಂಗ್ ಕಾಲೇಜು, ಡಿಪ್ಲೊಮಾ ಕಾಲೇಜು, ಸರಕಾರಿ ಐಟಿಐ ಕಾಲೇಜು ಮಂಜೂರು ಮಾಡಸಲು ಪ್ರಯತ್ನ ಮಾಡುವೆ. ಇನ್ನೂ 6 ತಿಂಗಳಲ್ಲಿ ನಾನು ಹೇಳಿದ್ದ ಎಲ್ಲಾ ಕಾರ್ಯಗಳಿಗೆ ಮಂಜೂರಾತಿ ಸಿಗಲಿದೆ ಎಂದರುಮ

ಕಳೆದ ವರ್ಷ ನಮ್ಮ ಸಿಂಧನೂರು ತಾಲೂಕಿನ ಜೋಳ ಖರೀದಿಯಲ್ಲಿ ಸುಮಾರು 150 ಕೋಟಿ ಭ್ರಷ್ಟಾಚಾರ ನಡದಿದೆ ಎಲ್ಲಾ ದಾಖಲಾತಿಗಳನ್ನು ತೆಗೆದುಕೊಂಡಿದ್ದೇನೆ. ಸಂಬಂಧಿಸಿದ ಇಲಾಖೆಗೆ ದಾಖಲಾತಿಗಳು ಸಲ್ಲಿಸಲಾಗಿದೆ. ತಪ್ಪು ಮಾಡಿದ ಅಧಿಕಾರಗಳ ತಲೆ ದಂಡ ಆಗಲೇ ಬೇಕು. ಆಗುವವರೆಗೂ ನಾನು ಎಲ್ಲಿಗೆ ಬೇಕಾದರೂ ಹೋಗುತ್ತೇನೆ ಎಂದು ಶಪಥ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಕುಮಾರ್ ಜವಳಿ, ವೆಂಕಟೇಶ ರಾಗಲಪರ್ವಿ, ಅಮರೇಶ ಗೀರಿಜಾಲಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಚೇರಿಯಲ್ಲಿ ಸುದ್ದಿಗೋಷ್ಠಿ ಯಲ್ಲಿ ಬಸನಗೌಡ ಬಾದರ್ಲಿ ಮಾತನಾಡಿದರು.

**ನಮ್ಮ ಸಿಂಧನೂರ ಅಭಿವೃದ್ಧಿಗೆ ಕೆಲವೊಂದು ಅಧಿಕಾರಿಗಳು ಅಡ್ಡಿಯಾಗುತ್ತಿದ್ದಾರೆ. ಅತಿಯಾಗಿ ಭ್ರಷ್ಟಾಚಾರದಲ್ಲಿ ತೊಡಗಿ ಕೊಂಡಿದ್ದಾರೆ. ಅಂತಹ ಅಧಿಕಾರಿಗಳನ್ನು ಭೇಟಿಯಾಡಲು ನಮ್ಮ ಕಾರ್ಯಕರ್ತರ ಟಿಮ್ ತಮ್ಮ ಕೆಲಸ ಶುರು ಮಾಡಿದ್ದಾರೆ. ಎಲ್ಲಾ ಅಧಿಕಾರಿಗಳು ಹುಷಾರಾಗಿ ಕೆಲಸ ಮಾಡಿ.**

**- ಬಸನಗೌಡ ಬಾದರ್ಲಿ,** ವಿಧಾನ ಪರಿಷತ್ ಸದಸ್ಯ

## ಬೃಹತ್ ಆರೋಗ್ಯ ಮೇಳ ಯಶಸ್ಸಿಗೆ ಶ್ರಮಿಸಿ

**ರಾಯಚೂರು:** ಜಿಲ್ಲಾಡಳಿತದ ವತಿಯಿಂದ ಮಾ.15ರಂದು ಜಿಲ್ಲೆಯ ಮಾನ್ವಿ ಪಟ್ಟಣದಲ್ಲಿ ಬೃಹತ್ ಆರೋಗ್ಯ ಮೇಳವನ್ನು ಹಮ್ಮಿಕೊಳ್ಳಲಾಗಿದ್ದು, ಮೇಳದ ಯಶಸ್ವಿಗೆ ಶ್ರಮಿಸಬೇಕೆಂದು ಜಿಲ್ಲಾಧಿಕಾರಿ ನಿತೀಶ್ ಕೆ. ಅವರು ಸಂಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬೃಹತ್ ಆರೋಗ್ಯ ಮೇಳದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಆರೋಗ್ಯ ಮೇಳ ಆಯೋಜನೆಗೆ ಕಡಿಮೆ ಸಮಯವಿದ್ದು, ಸಂಬಂಧಿಸಿದ ಅಧಿಕಾರಿಗಳು ತಮಗೆ ವಹಿಸಿದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಬೇಕು. ಮೇಳಕ್ಕೆ ಆಗಮಿಸುವ ಜನರಿಗೆ ಶುದ್ಧ ಕುಡಿಯುವ ನೀರು ಸೇರಿದಂತೆ ಮೂಲ ಸೌಲಭ್ಯಗಳನ್ನು ಒದಗಿಸಲು ಅಗತ್ಯ ಕ್ರಮವಹಿಸಿಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ತುಕಾರಂ ಪಾಂಡ್ವೆ, ಅಪರ ಜಿಲ್ಲಾಧಿಕಾರಿ ಶಿವಾನಂದ, ರಾಯಚೂರು ವಿಭಾಗದ ಸಹಾಯಕ ಆಯುಕ್ತ ಗಜಾನನ ಬಾಳೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ರಿಮ್ಸ್ ನಿರ್ದೇಶಕರಾದ ಡಾ.ರಮೇಶ, ಓಪೆಕ್ ಆಸ್ಪತ್ರೆಯ ವಿಶೇಷಾಧಿಕಾರಿ ಡಾ.ರಮೇಶ ಸಾಗರ್, ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ.ವಿಜಯಶಂಕರ್, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕಾಳಪ್ಪ ಬಡಿಗೇರ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ರಂಗಪ್ಪ ನಾಯಕ, ಜಿಲ್ಲಾ ಆರ್.ಸಿ.ಎಚ್ ಅಧಿಕಾರಿ ಡಾ.ನಂದಿತಾ, ಜಿಲ್ಲಾ ಕುಷ್ಠರೋಗ ನಿವಾರಣೆ ಅಧಿಕಾರಿ ಡಾ.ಯಶೋಧ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಗಣೇಶ, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಶಿವಕುಮಾರ, ಜಿಲ್ಲಾ ಕ್ಷಯ ಮತ್ತು ಏಡ್ಸ್ ನಿಯಂತ್ರಣಾಧಿಕಾರಿ ಡಾ. ಮಹ್ಮದ್ ಶಾಕೀರ ಮೊಹಿಯುದ್ದೀನ್ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲೂಕು ಆರೋಗ್ಯಾಧಿಕಾರಿಗಳು ಹಾಗೂ ಇತರರೆ ಸಂಸ್ಥೆಯ ಮುಖ್ಯಸ್ಥರು ಇದ್ದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬೃಹತ್ ಆರೋಗ್ಯ ಮೇಳದ ಪೂರ್ವಭಾವಿ ಸಭೆ ನಡೆಯಿತು.

#### ಆರೋಗ್ಯ ಮೇಳದಲ್ಲಿ 200ಕ್ಕೂ ಹೆಚ್ಚು ವಿಶೇಷ ತಜ್ಞರು

ಮನವಿ ಪಟ್ಟಣದಲ್ಲಿ ಬೃಹತ್ ಆರೋಗ್ಯ ಮೇಳ ಶಿಬಿರಕ್ಕೆ ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಸುಮಾರು ಐದು ಸಾವಿರಕ್ಕೂ ಹೆಚ್ಚು ರೋಗಿಗಳು ಬರುವ ನಿರೀಕ್ಷೆವಿದ್ದು, ಶಿಬಿರದಲ್ಲಿ 200 ಕ್ಕೂ ಹೆಚ್ಚು ವಿಶೇಷ ತಜ್ಞ ವೈದ್ಯರಿಂದ ರೋಗಿಗಳ ಉಪಚಾರ ಮಾಡಲಿದ್ದಾರೆ ಜೊತೆಗೆ ರಾಯಚೂರು ವೈದ್ಯಕೀಯ ಮಹಾವಿದ್ಯಾಲಯ, ಓಪೆಕ್ ಆಸ್ಪತ್ರೆ, ನವೋದಯ ವೈದ್ಯಕೀಯ ಮಹಾವಿದ್ಯಾಲಯ, ನವೋದಯ ದಂತ ಮಹಾವಿದ್ಯಾಲಯ, ಎಎಂಇ ದಂತ ಮಹಾವಿದ್ಯಾಲಯ, ಕೆ.ಪಿ.ಎಸ್.ವಿ.ಎಸ್ ಆಯುಷ್ ಮಹಾವಿದ್ಯಾಲಯ, ಐಎಂಎ, ದೃಷ್ಟಿ ಕಣ್ಣಿನ ಆಸ್ಪತ್ರೆ, ಎಂ.ಎಂ ಜೋಶಿ ಕಣ್ಣಿನ ಆಸ್ಪತ್ರೆ ಹಾಗೂ ವಿವಿಧ ಸಂಘಗಳು ಸಹಕಾರ ನೀಡಲಿವೆ ಎಂದರು.

## ಸ್ವಚ್ಛತೆ ಹಾಗೂ ನೈರ್ಮಲ್ಯ ಕುರಿತು ಜಾಗೃತಿ

**ರಾಯಚೂರು:** ನಗರದಲ್ಲಿ ಸ್ವಚ್ಛತೆ ಹಾಗೂ ನೈರ್ಮಲ್ಯ ಕುರಿತು ಅರಿವು ಮೂಡಿಸಲು ಸೋಮವಾರ ಯುನೈಟೆಡ್ ವೇ ಬೆಂಗಳೂರು ಸಂಸ್ಥೆಯ ಆಯೋಜನೆ ಮೂಲಕ ಮೂರು ತಂಡಗಳಿಂದ ಮ್ಯಾರಾಥಾನ್ ಓಟದ ಜತೆಗೆ ಜಾಗೃತಿ ಮೂಡಿಸಲಾಯಿತು.

ಜಾಥವನ್ನು ಯುನೈಟೆಡ್ ವೇ ಬೆಂಗಳೂರು ಸಂಸ್ಥೆಯ ಹಿರಿಯ ವ್ಯವಸ್ಥಾಪಕ ಗೌರಿ ಯಳವತ್ತಿಮಠ ಅವರು ಚಾಲನೆ ನೀಡಿ ಮಾತನಾಡಿ, ರಾಯಚೂರು ನಗರದ ಜನತೆಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸ್ವಚ್ಛತೆ ಹಾಗೂ ನೈರ್ಮಲ್ಯದ ಕುರಿತು ಸ್ವಚ್ಛತಾ ಮ್ಯಾರಾಥಾನ್ ಆಯೋಜಿಸಲಾಗಿದ್ದು, ನಗರದ ಸ್ವಚ್ಛತೆ ಕಾಪಾಡುವುದು ಕೇವಲ ಸರಕಾರದ ಕೆಲಸವಲ್ಲ. ಸಾರ್ವಜನಿಕರ ಕೆಲಸವು ಅಗತದ್ಯವಾಗಿದೆ ಎಂದರು.

ನಂತರ ಜಾಥವು ನಗರದ ಸಾರ್ವಜನಿಕ ಉದ್ಯಾನವನ, ಸರಕಾರಿ ಪದವಿ ಕಾಲೇಜು ಹಾಗೂ ಮಹಾತ್ಮ ಕ್ರೀಡಾಂಗಣದಲ್ಲಿ ಹಸಿರು, ನೀಲಿ, ಬಿಳಿ ಸೇರಿ ಒಟ್ಟು ಮೂರು ತಂಡಗಳಾಗಿ ಸ್ವಚ್ಛತೆ ಹಾಗೂ ನೈರ್ಮಲ್ಯದ ಕುರಿತು ಅರಿವು ಮೂಡಿಸಲು ಜಾಗೃತಿ ಹಾಡು ಹಾಗೂ ಘೋಷಣೆಗಳೊಂದಿಗೆ ಸಾರ್ವಜನಿಕ ಸ್ಥಳಗಳಲ್ಲಿ ಸಂಚರಿಸುತ್ತಾ ಜಾಥಾ, ಮ್ಯಾರಾಥಾನ್ ಮಾಡಲಾಯಿತು.

ಈ ಸಂದರ್ಭದಲ್ಲಿ ಕಾವೇರಿ, ವೈಜುನಾಥ, ಜಮುನ, ಶೈಲಜ, ಈರಮ್ಮ, ರಾಧ, ರಮೇಶ, ನಾಗರಾಜ ಸೇರಿ ಅನೇಕರು ಇದ್ದರು.

ಸ್ವಚ್ಛತೆ, ನೈರ್ಮಲ್ಯ ಕುರಿತು ಅರಿವು ಮೂಡಿಸಲ ಯುನೈಟೆಡ್ ವೇ ಬೆಂಗಳೂರು ಸಂಸ್ಥೆಯ ಆಯೋಜನೆ ಮೂಲಕ'ತಂಡಗಳಿಂದ ಮ್ಯಾರಾಥಾನ್ ಓಟದ ಜತೆಗೆ ಜಾಗೃತಿ ಮೂಡಿಸಲಾಯಿತು.

ಸಿದ್ದಾಪುರ: ಇಲ್ಲಿನ ಸಮೀಪದ ಗುಂಡೂರಿನ ಸರಕಾರಿ ಉನ್ನತಿಕರಿಸಿದ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಜ್ಯೋತಿ ಎ. ಗೋಂದಕರ ಅವರಿಗೆ ಸಾವಿತ್ರಿಭಾಯಿ ಪುಲೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಶಿಕ್ಷಕಿ ಜ್ಯೋತಿ ಅವರು 18 ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ರಾಜ್ಯ ಮಟ್ಟದ ಸಾವಿತ್ರಿಭಾಯಿ ಪುಲೆ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿಯನ್ನು ನೀಡಲಾಗಿದೆ. ಕಾವ್ಯಶ್ರೀ ಚಾರಿಟೇಬಲ್ ಟ್ರಸ್ಟ್ ಕರ್ನಾಟಕ ಹಾಗೂ ಚೇತನ ಫೌಂಡೇಶನ್ ಧಾರವಾಡ ಮತ್ತು ಕರ್ನಾಟಕ ಸೋಸಿಯಲ್ ಕ್ಲಬ್ ಇವರುಗಳ ಸಂಯುಕ್ತ ಆಶ್ರಯದಲ್ಲಿ ಭಾನುವಾರ ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತದ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

## ವೈದ್ಯರಿಗೆ ಸಹಕಾರ ನೀಡಿ: ಅನಂತ್‌ಕುಮಾರ್

ಮಾಕಾಪೂರು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಹೆರಿಗೆ ಕೊಠಡಿಯನ್ನು ಗಣ್ಯರು ಉದ್ಘಾಟಿಸಿದರು.

**ಮುದಗಲ್:** ಗ್ರಾಮೀಣ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸುವ ವೈದ್ಯರಿಗೆ ಹಾಗೂ ಸಿಬ್ಬಂದಿಗಳಿಗೆ ಸಾರ್ವಜನಿಕರು ಸಹಕಾರ ನೀಡದರೆ, ಮಾತ್ರ ಉತ್ತಮವಾದ ಸೇವೆ ನೀಡಲು ಸಾಧ್ಯವೆಂದು ವೈದ್ಯಾಧಿಕಾರಿ ಡಾ. ಅನಂತಕುಮಾರ ಮನವಿ ಮಾಡಿಕೊಂಡರು. ಪಟ್ಟಣ ಸಮೀಪದ ಮಾಕಾಪೂರು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಹೆರಿಗೆ ಕೊಠಡಿ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ನಂತರ ಮಾತನಾಡಿದ ಅವರು, ಬಡವರಿಗೆ ಹಾಗೂ ಸಾರ್ವಜನಿಕರಿಗೆ ಗುಣಮಟ್ಟದ ಸೇವೆ ಮಾಡಲು ಆರೋಗ್ಯ ಇಲಾಖೆ ಸಿಬ್ಬಂದಿಗಳು ಸದಾ ಸಿದ್ದರಿದ್ದೇವೆ. ಪ್ರಾಮಾಣಿಕವಾಗಿ ಸರಕಾರ ಯೋಜನೆಗಳನ್ನು ಸಮರ್ಪಕವಾಗಿ ಜನರಿಗೆ ಮುಟ್ಟಿಸುವ ಕೆಲಸ ಮಾಡುತ್ತೇವೆ. ಇದರ ಜೊತೆಗೆ ಆರೋಗ್ಯ ಇಲಾಖೆಗೆ ಸಹಕಾರ ಮುಖ್ಯವಾಗಿದೆ ಎಂದರು.

ಇದೆ ವೇಳೆ ಹೂನೂರು ಗ್ರಾಮ ಪಂಚಾಯತಿ ಅಧ್ಯಕ್ಷೆ ರೇಣುಕಾ ಶಿವಪ್ಪ ನಾಯಕ ರವರು ನೂತನ ಹೆರಿಗೆ ಕೊಠಡಿ ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ ಡಾ: ಲಕ್ಷ್ಮಿಕಾಂತ ಸದಸ್ಯ ಪರಮೇಶ್ವರಪ್ಪ, ಕರುನಾಡ ವಿಜಯ ಸೇನೆ ಅಧ್ಯಕ್ಷ ಸಂಗನಗೌಡ ರಾಮತ್ನಾಳ, ರಮೇಶ ಇಟ್ಟಗಿ,ಶರಣಪ್ಪ ಮಾಕಾಪೂರು, ಶುಭಾಸ ಸೇರಿದಂತೆ ಮುಂತಾದವರು ಇದ್ದರು.

## ಕಾಲುವೆ ಡಿಪಿಆರ್ ಸಿದ್ದಪಡಿಸಿ: ಶಾಸಕ

**ಮಸ್ಕಿ:** ತಾಲೂಕಿನ ನಾರಾಯಣಪೂರ ಬಲದಂಡೆ 5ಎ ಕಾಲುವೆ ಡಿಪಿಆರ್ ಸಿದ್ದಪಡಿಸಿ ಕೆನಾಲ್ ಕಾಮಗಾರಿ ಯನ್ನು ಶೀಘ್ರದಲ್ಲೇ ಆರಂಭಿಸಬೇಕೆಂದು ಶಾಸಕ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ನಿಗಮ ಅಧ್ಯಕ್ಷ ಆರ್.ಬಸನಗೌಡ ತುರವಿಹಾಳ ಅವರು ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಬೆಂಗಳೂರಿನ ಜಲ ಸಂಪನ್ಮೂಲ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ಕೆಬಿಜೆಎನ್ಎಲ್ ವ್ಯವಸ್ಥಾಪಕ ನಿರ್ದೇಶಕರ ಜತೆ ಸಮಾಲೋಚನೆ ನಡೆಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 5ಎ ಕಾಲುವೆ ನಿರ್ಮಾಣದಿಂದ ಮಳೆಯಾಶ್ರಿತ ಪ್ರದೇಶ ರೈತರಿಗೆ ಅನುಕೂಲವಾಗಲಿದ್ದು, ಸಾವಿರಾರು ಜನ ರೈತರು ಗುಳೆ ಹೋಗುವುದನ್ನು ತಪ್ಪಿಸುತ್ತದೆ. 5ಎ ಕೆನಾಲ್ ಕುರಿತು ಈಗಾಗಲೇ ಸರ್ವೆ ಮಾಡುತ್ತಿದ್ದು, ಆದಷ್ಟು ಬೇಗನೆ ಡಿಪಿಆರ್ ಸಿದ್ದಪಡಿಸಿ ಕಾಲುವೆ ಕಾಮಗಾರಿಯನ್ನು ಆರಂಭಿಸಬೇಕೆಂದು ಒತ್ತಾಯಿಸಿದರು.

ಅಧಿಕಾರಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಜಗಳ | ಭೋಸರಾಜು ಹಾಗೂ ಶರಣಪ್ರಕಾಶ್ ಪಾಟೀಲ್ ನಡುವೆ ವಾಕ್ಸಮರ

# ಶಾಸಕಾಂಗ ಪಕ್ಷದ ಸಭೆಯಲ್ಲಿ ಸಚಿವರ ಕಿತ್ತಾಟ

ಬಸವರಾಜ ನಾಗಡದಿನ್ನಿ, ರಾಯಚೂರು

ಸೋಮವಾರ ಬೆಂಗಳೂರಿನಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ, ರಾಯಚೂರು ಜಿಲ್ಲೆಯ ಭಿನ್ನಮತ ಸ್ಫೋಟಗೊಂಡಿದ್ದು, ಸಚಿವರಿಬ್ಬರು ಏಕವಚನದಲ್ಲಿ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಸಮ್ಮುಖದಲ್ಲಿಯೇ ಬೈದಾಡಿಕೊಂಡಿರುವ ಘಟನೆ ನಡೆದಿದೆ.

ರಾಯಚೂರು ಜಿಲ್ಲೆಯಲ್ಲಿ ಭೋಸರಾಜು ಹಾಗೂ ಶರಣಪ್ರಕಾಶ್ ಪಾಟೀಲ್ ನಡುವೆ ಎರಡು ಗುಂಪುಗಳಾಗಿವೆ. ಆರಂಭದಲ್ಲಿ ಕೇವಲ ಜಿಲ್ಲೆಗೆ ಸೀಮಿತಗೊಂಡಿದ್ದ ಈ ಭಿನ್ನಮತ ಇದೀಗ ಬೆಂಗಳೂರಿನಲ್ಲಿ ನಡೆದ ಶಾಸಕಾಂಗ ಪಕ್ಷದ ಸಭೆಗೂ ಮುಂದುವರೆದಿದ್ದು, ಕೊನೆಗೆ ಸಿಎಂ, ಡಿಸಿಎಂ ಇಬ್ಬರನ್ನು ಸಮಾಧಾನಪಡಿಸಿದ ಘಟನೆ ನಡೆದಿದೆ.

ರಾಯಚೂರಿಗೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ. ಆದರೆ ಭೋಸರಾಜು ಅವರು ತಮ್ಮ ಪ್ರಭಾವವನ್ನು ಬಳಸಿಕೊಂಡು, ತಮಗೆ 'ಬೇಕಿರುವ ಅಧಿಕಾರಿಗಳನ್ನು ಆಯಕಟ್ಟಿನ ಸ್ಥಾನದಲ್ಲಿ ಕೂರಿಸುತ್ತಿದ್ದಾರೆ. ಈ ವೇಳೆ ಯಾವ ಶಾಸಕರನ್ನು ವಿಶ್ವಾಸಕ್ಕೆ ಪಡೆಯುತ್ತಿಲ್ಲ. ಈ ವಿಷಯದಲ್ಲಿ ಶರಣಪ್ರಕಾಶ್ ಪಾಟೀಲರು ಭೋಸರಾಜು ಅವರ ನಡೆಗೆ ವಿರೋಧಿಸುತ್ತಿದ್ದಾರೆ. ಆದರೆ ಇತ್ತೀಚಿಗೆ ಈ ಭಿನ್ನಾಭಿಪ್ರಾಯ ತಾರಕಕ್ಕೆ ಹೋಗಿರುವುದರಿಂದ ಸಿಎಲ್‌ಪಿ ಸಭೆಯಲ್ಲಿಯೇ ಈ ಗಲಾಟೆ ನಡೆದಿದೆ ಎನ್ನಲಾಗಿದೆ.

ಈ ಇಬ್ಬರು ಸಚಿವರ ನಡುವೆ ಎರಡು ಬಣಗಳು ನಿರ್ಮಾಣಗೊಂಡಿದೆ. ಶಾಸಕಾಂಗ ಪಕ್ಷದ ಸಭೆಯಲ್ಲಿಯೂ ಇದೇ ಗಲಾಟೆ ಶುರುವಾಗಿದ್ದು, ಅಧಿಕಾರಿಯೊಬ್ಬರ ವರ್ಗಾವಣೆ ಸಂಬಂಧ ಪರಸ್ಪರ ಏಕವಚನದಲ್ಲಿ ನಿಂದಿಸಿಕೊಂಡಿರುವುದು ಇದೀಗ ಜಿಲ್ಲೆಯಲ್ಲಿ ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ. ಇದು ಕೇವಲ ಅಧಿಕಾರಿಗಳ ವರ್ಗಾವಣೆಗೆ ಮಾತ್ರವಲ್ಲದೇ, ಅಭಿವೃದ್ಧಿ ವಿಷಯದಲ್ಲಿಯೂ ಕೂಡ ತಾಳಮೇಳವಿಲ್ಲದಂತಾಗಿದ್ದು, ಅಧಿಕಾರಿಗಳು ಇಬ್ಬರು ಸಚಿವರ ನಡುವೆ ಸಿಲುಕಿದ್ದಾರೆ ಎನ್ನುವ ಆರೋಪ ಕೇಳಿಬಂದಿದೆ.

ಶಾಸಕರಾದ ಹಂಪನಗೌಡ ಬಾದರ್ಲಿ, ಬಸನಗೌಡ ದದ್ದಲ್, ಬಸನಗೌಡ ತುರ್ವಿಹಾಳ, ವಿಧಾನ ಪರಿಷತ್ ಸದಸ್ಯ ಶರಣಗೌಡ ಬಯ್ಯಾಪುರ, ವಸಂತಕುಮಾರ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಪಾಟೀಲ್ ಇಟಗಿ ಒಂದು ಗುಂಪಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣಪ್ರಕಾಶ ಪಾಟೀಲ್ ಜೊತೆ ಗುರುತಿಸಿಕೊಂಡಿದ್ದಾರೆ. ಇನ್ನು ಮಾನ್ವಿ ಶಾಸಕ ಹಂಪಯ್ಯ ನಾಯಕ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಸಚಿವ ಬೋಸರಾಜು ಜೊತೆಗಿದ್ದಾರೆ.

ಈ ಎರಡು ಗುಂಪು ತಮ್ಮದೇ ಕಾರಣಕ್ಕೆ ಬಲಿಷ್ಠವಾಗಿರುವುದರಿಂದ ಅಧಿಕಾರಿಗಳ ವರ್ಗಾವಣೆಯಲ್ಲಿ ನಮ್ಮ ಕೈ ಮೇಲಾಯಿತು, ನಮ್ಮ ಕೈ ಮೇಲಾಯಿತು ಎನ್ನುವ ಟೀಕೆಗಳನ್ನು ಮಾಡಿಕೊಂಡು ಓಡಾಡುತ್ತಿದ್ದಾರೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಬಸವರಾಜ ಪಾಟೀಲ್ ಇಟಗಿ ನೇಮಕವಾಗಿ ಹತ್ತಾರು ತಿಂಗಳುಗಳೆ ಕಳೆದಿವೆ. ಆದರೆ ಇಂದಿಗೂ ಪೂರ್ಣ ಪ್ರಮಾಣದ ಜಿಲ್ಲಾ ಕಮಿಟಿ ಮಾಡಲು ಸಾಧ್ಯವಾಗಿಲ್ಲ.





## ಉತ್ಸವದಲ್ಲಿ ಅವ್ಯವಹಾರ: ಆರೋಪ

**ಕೊಪ್ಪಳ:** ಜಿಲ್ಲೆಯಲ್ಲಿ ಕಳೆದ 2024ರಲ್ಲಿ ನಡೆದ ಕನಕಗಿರಿ, ಆನೆಗೊಂದಿ ಉತ್ಸವ ಹಾಗೂ ಕೊಪ್ಪಳ ಜಿಲ್ಲಾ ಉತ್ಸವದಲ್ಲಿ ಅವ್ಯವಹಾರ ನಡೆದಿದ್ದು, ನಿಯಮ ಗಾಳಿಗೆ ತೂರಿ ಬಿಲ್ ಪಾವತಿ ಮಾಡಲಾಗಿದೆ ಎಂದು ಸಾಮಾಜಿಕ ಕಾರ್ಯಕರ್ತ ರವಿ ನಿಂಗಪ್ಪ ಆಗೋಲಿ ಆರೋಪಿಸಿದರು. ಕೊಪ್ಪಳ ಮೀಡಿಯಾ ಕ್ಲಬ್ ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದರು. ಕನಕಗಿರಿ ಉತ್ಸವಕ್ಕೆ 8.23 ಕೋಟಿ ರು. ಖರ್ಚು ಮಾಡಲಾಗಿದೆ. ಆನೆಗೊಂದಿ ಉತ್ಸವಕ್ಕೆ 1.5 ಕೋಟಿ ರು. ಬಿಡುಡಗೆಯಾಗಿದೆ. ಕೊಪ್ಪಳ ರಜತ ಮಹೋತ್ಸವಕ್ಕೆ ಪ್ರವಾಸೋದ್ಯಮ ಇಲಾಖೆಯಿಂದ 50 ಲಕ್ಷ ರೂ. ಹಾಗೂ ವಿವಿಧೆಡೆಯಿಂದ 50 ಲಕ್ಷ ರು. ಸಂಗ್ರಹಿಸಿ ಖರ್ಚು ಮಾಡಲಾಗಿದೆ. ಆದರೆ, ಟೆಂಡರ್ ಸೇರಿ ಯಾವೊಂದು ನಿಯಮ ಸರಿಯಾಗಿ ಪಾಲಿಸಿಲ್ಲ. ಜಿಲ್ಲಾಡಳಿತದ ಬಳಿ ಹಣ ಬಳಕೆ ಮಾಡಿದ್ದಕ್ಕೆ ಸರಿಯಾದ ಬಿಲ್, ಹಣ ಬಳಕೆ ಪ್ರಮಾಣ ಪತ್ರ, ಸಮಾಜಿಕ ಲೆಕ್ಕ ಪರಿಶೋಧನಾ ವರದಿ ಇಲ್ಲ. ತರಕಾರಿಯನ್ನು ಪ್ರಾವಿಜನ್ ಸ್ಟೋರ್‌ನಲ್ಲಿ ಖರೀದಿ ಮಾಡಿರುವುದಾಗಿ ಬಿಲ್ ಹಚ್ಚಿದ್ದಾರೆ ಎಂದು ಆರೋಪಿಸಿದರು. ವೇದಿಕೆ ನಿರ್ಮಾಣಕ್ಕೆ 1.9 ಕೋಟಿ ರು. ಬಿಲ್ ಮಾಡಲಾಗಿದೆ.ಈ ಬಗ್ಗೆ ತನಿಖೆ ನಡೆಸಬೇಕು. ಮುಖ್ಯ ಕಾರ್ಯದರ್ಶಿ ಸೇರಿ ಸಂಬಂಧಿಸಿದ ಇಲಾಖೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದೇನೆ. ರಾಜ್ಯಪಾಲರು, ಸಿಎಂಗೂ ದೂರು ಸಲ್ಲಿಸಿರುವೆ. ಸೂಕ್ತ ತನಿಖೆ ನಡೆಸಿ ಅಕ್ರಮ ಎಸಗಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಅನುದಿನವೂ ವಿರಾಮಕ್ಕೆ ಒಂದು ನೆಪ

# ಆರಾಮ

ಬೆಂಗಳೂರು 12-03-2025 ಬುಧವಾರ

ವಿಶ್ವವಾಣಿ

@vishwavaninews

## ಚಿತ್ತವಿಹಾರ

# ಎಲ್ಲರನ್ನೂ ಪ್ರೀತಿಸೋಣ

● ಮಹಾದೇವ ಬಸರಕೋಡ

ಬನಾವೆಲ್ಲ ಸದಾ ಸುಖ, ಸಂತೋಷ, ನೆಮ್ಮದಿಯಿಂದ ಬದುಕಬೇಕೆಂದು ಬಯಸುತ್ತೇವೆ. ಅದಕ್ಕಾಗಿ ಇನ್ನಿಲ್ಲದಂತೆ ಪ್ರಯತ್ನಿಸುತ್ತೇವೆ. ನಾವು ನಮ್ಮ ಒಂದು ಬಯಕೆ ಹಾದಿಯ ಗಮ್ಯವನ್ನು ತಲುಪಿ ಒಂದಷ್ಟು ಸಂತಸ ಪಡುತ್ತಿರುವಂತೆಯೇ, ಅದರ ಬೆನ್ನ ಹಿಂದೆಯೇ ಮತ್ತೊಂದು ಬಯಕೆ ಗರಿಗೆದರುತ್ತದೆ. ಮತ್ತೆ ಅದರ ಗಮ್ಯತ್ತಲೇ ನಮ್ಮ ಪಯಣ ಪ್ರಾರಂಭವಾಗುತ್ತದೆ. ಇದೊಂದು ಎಂದಿಗೂ ಅಂತ್ಯಗೊಳ್ಳದ ಪಯಣ.

ಇಂತದೊಂದು ಪಯಣದಲ್ಲಿ ನಾವು ನಮ್ಮ ಸುತ್ತಮುತ್ತಲಿನ ಬಹುತೇಕ ಜನರೊಂದಿಗೆ, ನಮ್ಮವರೊಂದಿಗೆ ಸಣ್ಣದೊಂದು ಅಸಮಾಧಾನ, ಸಿಟ್ಟು ಸೆಡುವುಗಳನ್ನು ಕಟ್ಟಿಕೊಳ್ಳುತ್ತೇವೆ. ಇನ್ನು ಕೆಲವು ಬಾರಿ ಅವರೊಂದಿಗೆ ದ್ವೇಷ ಸಾಧನೆಗೆ ಮುಂದಾಗುತ್ತೇವೆ. ವಾಸ್ತವದಲ್ಲಿ ನಾವು ಸದಾ ಕಾಲ ಸುಖವಾಗಿರಬೇಕೆಂದರೆ, ನಾನೇ ಸರ್ವಸ್ವ ಎಂಬ ಸಂಕುಚಿತ ಭಾವನೆ ಯನ್ನು ದೂರಕ್ಕೆ ಸರಿಸಿ ಇತರರನ್ನು ನಮ್ಮಂತೆಯೇ ಕಾಣುವ ಔದಾರ್ಯ ಬೆಳೆಸಿಕೊ ಳ್ಳುವುದು, ಎಲ್ಲರೊಂದಿಗೆ ಪರಿಶುದ್ಧ ಪ್ರೀತಿಯನ್ನು ಹಂಚಿಕೊ ಳ್ಳುವುದು ನೆಮ್ಮದಿಯ ಬದುಕಿಗೆ ಕಾರಣವಾಗುತ್ತದೆ.

ಶಕುನಿಯ ಕುತಂತ್ರಕ್ಕೆ ಒಳಗಾಗಿ ಹದಿನಾಲ್ಕು ವರುಷಗಳ ವನವಾಸವನ್ನು ಮುಗಿಸಿ ಬಂದ ಪಾಂಡವರ ಪರವಾಗಿ ದುರ್ಯೋಧನನ ಹತ್ತಿರಕ್ಕೆ ಹೋದ ಕೃಷ್ಣನ ಮಾತುಗಳನ್ನು ಧುರ್ಯೋಧನ ಧಿಕ್ಕರಿಸಿದ. ತನ್ನ ಸಹೋದರರಾದ ಪಾಂಡವರಿಗೆ ಒಂದಿನಿತು ರಾಜ್ಯವನ್ನು ನಾನೆಂದೂ ಬಿಟ್ಟು ಕೊಡಲಾರೆ ಎಂದ. ಎಲ್ಲವೂ ನನ್ನದು, ನಾನು ಶ್ರೇಷ್ಠ, ಶಕ್ತಿವಂತ ಎನ್ನುವ ಭ್ರಮೆಯಲ್ಲಿ ಬಂಧಿಯಾದ ಧುರ್ಯೋಧನನಿಗೆ ವಾಸ್ತವವನ್ನು ಅರಿಯಲು ಸಾಧ್ಯವಾಗಲಿಲ್ಲ, ಎಲ್ಲರೂ ತನ್ನವರೆಂದು ಬಗೆಯಲಿಲ್ಲ, ನಾನೇ ಎಂಬ ಭಾವ ನಾಶವಾಗದ

ಕಾರಣಕ್ಕೆ ಎಲ್ಲರನ್ನೂ ಪ್ರೀತಿಸುವಲ್ಲಿ ಸೋತು ಹೋದ.ಇದರಿಂದಾಗಿ ಮಹಾಭಾರತದ ಯುದ್ಧ ಸಂಭವಿಸಿತು. ಆತನ ದಾರುಣ ಅಂತ್ಯಕ್ಕೆ ಅದು ಕಾರಣವಾಗುವುದು ಮಾತ್ರವಲ್ಲದೇ ಸಾವಿರಾರು ಸರ್ವನಾಶಕ್ಕೆ ಮುನ್ನುಡಿ ಬರೆಯಿತು.

ನಮ್ಮ ನೆಮ್ಮದಿ, ಸಂತಸದ ಬದುಕಿಗೆ ಬೇಕಾದ ಅನುಗ್ರಹ ನಮ್ಮಲ್ಲಿಯೇ ಇದೆ. ಎಲ್ಲರನ್ನೂ ನನ್ನಂತೆಯೇ ಎಂದು ಪರಿಭಾವಿಸುವ ಔದಾರ್ಯದ ಭಾವ ನಮ್ಮದಾಗಿರಬೇಕು ಎಂದು ಒತ್ತಿ ಹೇಳುತ್ತದೆ. ಒಳ್ಳೆಯವರಾಗಿರಲಿ, ಕೆಟ್ಟವರಾಗಿರಲಿ ಎಲ್ಲರನ್ನು ಸತತವಾಗಿ ಪ್ರೀತಿಯಿಂದ ಕಾಣವುದನ್ನು ನಾವು ರೂಢಿಸಿಕೊಳ್ಳಬೇಕು. ಇದರಿಂದ ನಮ್ಮ ಮನಸ್ಸು ಕೂಡ ಎಲ್ಲ ಸಂಗತವಲ್ಲದ ಸಂಗತಿಗಳಿಂದ ಹೊರಬಂದು ಪರಿಶುದ್ಧಗೊಳ್ಳುತ್ತದೆ. ಇಂಥದೊಂದು ಸಕಾರಾತ್ಮಕ ಚಿಂತನೆ ನಮ್ಮನ್ನು ನಮಗೊದಗಿ ಬರುವ ಎಲ್ಲ ಕಷ್ಟ-ಕಾರ್ಪಣ್ಯ, ನೋವು-ನರಳಾಟಗಳಿಂದ ದೂರಕ್ಕೆ ಸರಿಸುತ್ತದೆ. ನಮ್ಮೆಲ್ಲ ತೊಳಲಾಟಗಳಿಂದ ನಮ್ಮನ್ನು ಮುಕ್ತಗೊಳಿಸಿ ನಿಜವಾದ ಸಂತಸದ ದಾರಿಯನ್ನು ತೋರುತ್ತದೆ.

# ಶಿರಸಿಯ ಬೇಡರ ವೇಷ

● ಸುರೇಂದ್ರ ಪೈ, ಭಟ್ಕಳ

ಹೋಳಿ ಹಬ್ಬದ ಆಚರಣೆಯ ಹಿಂದಿನ ಪೌರಾಣಿಕ ಕಥೆ ಏನೇ ಇರಲಿ, ಬಣ್ಣಗಳ ಹೊರತಾಗಿಯೂ ಹೋಳಿ ಹಬ್ಬವನ್ನು ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನಲ್ಲಿ ಸಾಂಪ್ರದಾಯಿಕ ಜಾನಪದ ಸೊಗಡಿನ ಹಿನ್ನೆಲೆಯಲ್ಲಿ ಆಚರಿಸುವುದನ್ನು ನಾವು ನೋಡಬಹುದಾಗಿದೆ.

ಶಿರಸಿ ಎಂದಾಕ್ಷಣ ನೆನಪಾಗುವುದೇ ಶಿರಸಿಯ ಮಾರಿಕಾಂಬೆಯ ಜಾತ್ರೆ. ಈ ಜಾತ್ರೆಯು ದ್ವೈವಾರ್ಷಿಕವಾಗಿ ಬಹಳ ಪುರಾತನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಶಿರಸಿಯ ಮಾರಿಕಾಂಬ ಜಾತ್ರೆ ಎಂಬುದು ಬಹಳ ಪ್ರಸಿದ್ಧ. ಯಾವ ವರ್ಷ ಜಾತ್ರೆ ನಡೆಯುತ್ತದೆಯೋ ಆ ವರ್ಷ ಶಿರಸಿಯಲ್ಲಿ ಸಾರ್ವಜನಿಕವಾಗಿ ಹೋಳಿ ಹಬ್ಬವನ್ನು ಆಚರಿಸಲಾಗುವುದಿಲ್ಲ. ಅದರ ಬದಲಾಗಿ ಮುಂದಿನ ವರ್ಷ, ಅಂದರೆ ಮಾರಿಜಾತ್ರೆ ಇಲ್ಲದೇ ಇರುವ ವರ್ಷ, ಇ ಹೋಳಿ ಹಬ್ಬವನ್ನು ನಾಲ್ಕು ದಿನಗಳ ಕಾಲ ಆಚರಿಸಲಾಗುತ್ತದೆ. ಈ ಹೋಳಿ ಹಬ್ಬದ ವಿಶೇಷ ಆಕರ್ಷಣೆಯೇ ಬೇಡರ ವೇಷದ ಕುಣಿತ. ಶಿರಸಿಯಲ್ಲಿ ಹೋಳಿಯ ಸಮಯದಲ್ಲಿ ತಲೆತಲಾಂತರದಿಂದಲೂ ನಡೆದುಕೊಂಡು ಬರುತ್ತಿರುವ ಈ ಬೇಡರ ವೇಷದ ಕುಣಿತವು ಬಹಳಷ್ಟು ಪ್ರಸಿದ್ಧಿ ಪಡೆದಿದೆ.

ಕೆಂಪಿನ ಬಣ್ಣದ ಉದ್ದ ತೋಳಿನ ಅಂಗಿ, ಮೊಣಕಾಲು ಮುಟ್ಟುವ ಚಡ್ಡಿ, ಕಾಲಿಗೆ ಗೆಜ್ಜೆ, ಬೆನ್ನಿಗೆ ವಿಶಾಲವಾಗಿ ಹಬ್ಬಿದ ನವಿಲು ಗರಿಗಳ ಪದರು, ತಲೆಯ ಮೇಲೆ ಮುತ್ತಿನಿಂದ ಪೋಣಿಸಲ್ಪಟ್ಟ ಕೀರಿಟ, ರೋಷ ಉಕ್ಕಿ ತೋರಿಸುವ ಕಣ್ಣು, ಮೂಗಿನ ಮೇಲೊಂದು ಹತ್ತಿ ಉಂಡೆ, ಕೆಂಡ ಉಗುಳುವ ಕೆಂಪು ಮುಖದ ಮೇಲೆ ಬಿಳಿ-ಹಳದಿ ಬಣ್ಣದ ಗೆರೆಗಳ ನಡುವೆ ಕಡುಗಪ್ಪಿನ ದಪ್ಪ ಮೀಸೆ. ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ಗುರಾಣಿ ಹಿಡಿದು ಬೇಡ ವೇಷಧಾರಿ ಮುಂದೆ ಬರುತ್ತಾನೆ. ಆತನು ರೋಷದಿಂದ ಕುಣಿಯುವುದು, ಆಕ್ರಮಣ ಮಾಡುವುದು ಇವೆಲ್ಲವ್ನೂ ನೋಡುವುದೇ ಒಂದು ವಿಶೇಷ ಅನುಭವ. ಆತನನ್ನು ನಿಯಂತ್ರಿಸಲು ಹಗ್ಗವನ್ನು ಹಿಡಿದು ಹಿಂಬದಿಯಲ್ಲಿ ನಿಂತ ಇಬ್ಬರು ಸಹಚರರು. ಒಮ್ಮೆ ಬೇಡ ವೇಷಧಾರಿ ನಾಲ್ಕಾರು ಜನರು ಬಾರಿಸುವ ತಮಟೆಯ ಹಲಗೆಯ ಸದ್ದಿಗೆ ಬೀದಿಯಲ್ಲಿ ಹೆಜ್ಜೆ ಹಾಕಿದರೆ ಸುತ್ತ ನಿಂತಿದ್ದ ಜನರ ಎದೆಯಲ್ಲಿ ನಡುಕ ಶುರುವಾದೀತು! ಇದೇ ಶಿರಸಿಯ ಜನಪದ ಶೈಲಿಯ ಬೇಡರ ವೇಷದ ರುದ್ರ ನರ್ತನ ದೃಶ್ಯ.

**ಪ್ರತಿ ಎರಡು ವರ್ಷಗಳಿಗೊಮ್ಮೆ, ಹೋಳಿ ಹಬ್ಬದ ಸಮಯದಲ್ಲಿ ಶಿರಸಿಯಲ್ಲಿ ಬೇಡರ ಕುಣಿತ ನಡೆಯುವುದು ವಿಶೇಷ. ಪುರಾತನ ವಿದ್ಯಮಾನವೊಂದನ್ನು ಜನಪದ ಆಚರಣೆಯ ರೂಪದಲ್ಲಿ ಇಲ್ಲಿ ಕಾಣಬಹುದು. ಇದು ಹೋಳಿ ಹಬ್ಬದ ಸಮಯದಲ್ಲಿ ನಡೆಯುವುದು ಕುತೂಹಲಕಾರಿ.**

### ಐತಿಹಾಸಿಕ ವ್ಯಕ್ತಿ

ಈ ಬೇಡರ ವೇಷಕ್ಕೆ ಸುಮಾರು 300 ವರ್ಷಗಳ ಇತಿಹಾಸವಿದೆ. ಬೇಡರ ವೇಷದ ಆಚರಣೆಯ ಕುರಿತಾಗಿ ಹಲವಾರು ಕಥೆಗಳು ಪ್ರಚಲಿತದಲ್ಲಿವೆ. ಹೋಳಿ ಹಬ್ಬಕ್ಕೆ ಸರಿಯಾಗಿ ಬೇಡನ ಕುಣಿತ, ಅದನ್ನು ಜನರು ನೋಡಿ ಆನಂದಿಸುವುದು ಎಲ್ಲವೂ ಶಿರಸಿಯ ವಿಶೇಷ. ಬಹು ಹಿಂದೆ ನಡೆದ ಒಂದು ವಿದ್ಯಮಾನವೇ ಈ ಬೇಡನ ರೂಪದಲ್ಲಿ, ಬೇಡರ ವೇಷದ ರೂಪದಲ್ಲಿ ಆಚರಣೆಗೆ ಬಂದಿದೆ. ಇದು ಜನಪದ ಕುಣಿತ ಮತ್ತು ಆಚರಣೆಯ ಸ್ವರೂಪ ಪಡೆದಿರುವುದು ಕುತೂಹಲಕಾರಿ.

ಈ ಬೇಡರ ವೇಷದ ಕುಣಿತವು ಹೋಳಿ ಹಬ್ಬದ ನಾಲ್ಕು ದಿನ ಮೊದಲು ಪ್ರತಿ ರಾತ್ರಿಯು ಶಿರಸಿ ಪೇಟೆಯ ಎಲ್ಲಾ ಬೀದಿಗಳಲ್ಲೂ ಕಾಣಸಿಗುತ್ತದೆ. ಇದನ್ನು ನೋಡಲು ಅಕ್ಕಪಕ್ಕದ ಊರಿನ ಸಾವಿರಾರು ಜನರು ಬಂದು ಸೇರುತ್ತಾರೆ.

# ಸರಳ ಆಟಿಕೆ

● ಹೊಸ್ಮನೆ ಮುತ್ತು

ಹಳೆಯ ಕಾಲದಿಂದಲೂ ಮಕ್ಕಳಿಗೆ ಮನರಂಜನೆ ಒದಗಿಸುವ ಹಲವಾರು ರಚನಾತ್ಮಕ ಆಟಿಕೆಗಳು ಲಭ್ಯವಿದ್ದವು. ಈ ಆಟಿಕೆಗಳು ಕೇವಲ ಮನರಂಜನೆಯ ಸಾಧನವಾಗಿರದೇ, ಮಕ್ಕಳ ಕಲಿಕೆಯ ಪ್ರಮುಖ ಅಂಗವಾಗಿಯೂ ಕಾರ್ಯನಿರ್ವಹಿಸುತ್ತಿದ್ದವು.

ಚಿತ್ರದಲ್ಲಿರುವ ಆಟಿಕೆಗಳು ಮರದ ತುಂಡಿನಲ್ಲಿ ಕೆತ್ತಲ್ಪಟ್ಟ ಸರಳ ಹಾಗೂ ಆಕರ್ಷಕ ವಿನ್ಯಾಸದ ಸಾಂಪ್ರದಾಯಿಕ ಆಟಿಕೆಗಳು. ಇದರ ವಿನ್ಯಾಸ ಸರಳವಾದರೂ ಕ್ರಿಯಾಶೀಲತೆ, ವಿಶಿಷ್ಟತೆಯನ್ನು ಹೊಂದಿದ್ದು, ನಮ್ಮ ಸಂಸ್ಕೃತಿ, ತಾಂತ್ರಿಕ ಜಾಣ್ಮೆ ಮತ್ತು ಪರಿಸರ ಸ್ನೇಹಿ ಜೀವನಶೈಲಿಯ ಉದಾಹರಣೆಗಳಾಗಿವೆ. ಈ ಆಟಿಕೆಗಳು ಕೇವಲ ಮನೋರಂಜನೆಗಾಗಿ ಮಾತ್ರವಲ್ಲ ಬದಲಾಗಿ ವಿಜ್ಞಾನ ಮತ್ತು ತರ್ಕದ ಪ್ರಾಥಮಿಕ ಪಾಠವನ್ನು ಹೇಳಿಕೊಡುವ, ಆಟದ ಮೂಲಕ ಜ್ಞಾನವನ್ನು ಹಂಚುವ ನಿರ್ಮಿತಿಗಳು.

ಈ ಆಟಿಕೆಗಳನ್ನು ಸಾಮಾನ್ಯವಾಗಿ ಮೃದುವಾದ ಮರದಿಂದ ತಯಾರಿಸಲಾಗುತ್ತದೆ. ಏಣಿಯಾಕಾರದ ಈ ಆಟಿಕೆಯ ತುದಿಯಲ್ಲಿ ಪಕ್ಷಿಯ ಆಕಾರದ ರಚನೆಯಿದ್ದು, ತಳಭಾಗದ ಎರಡು ಮರದ ಪಟ್ಟಿಗಳನ್ನು ಅಮುಕುವಂತೆ ವಿನ್ಯಾಸಗೊಳಿಸಲಾಗಿದೆ. ಪಟ್ಟಿಯ

ಕೆಳಭಾಗವನ್ನು ಕೈಯಲ್ಲಿ ಹಿಡಿದು ಬೆರಳುಗಳಿಂದ ಪರಸ್ಪರ ಏಕಕಾಲದಲ್ಲಿ ಅದುಮಿದಾಗ ಮೇಲಿನ ಪಕ್ಷಿ ಆಕಾರದ ಬೊಂಬೆ ರಕ್ಕೆ ಅಗಲಿಸಿಕೊಂಡು ವೃತ್ತಾಕಾರವಾಗಿ ಸುತ್ತುತ್ತದೆ. ಈ ಆಟಿಕೆಯು ಮಕ್ಕಳಿಗೆ ಕೈ-ಕಣ್ಣಿನ ಸಮನ್ವಯವನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಈ ರೀತಿಯ ಮರದ ಗೊಂಬೆಗಳು ವಿವಿಧ ವಿನ್ಯಾಸಗಳಲ್ಲಿ ಲಭ್ಯವಿವೆ. ಈ ವಿನ್ಯಾಸದಲ್ಲಿ ರಚನೆಯಾದ ಮತ್ತೊಂದು ಆಟಿಕೆಯಲ್ಲಿ ಮಗುವಿನ ಬೊಂಬೆ ಇದ್ದು ಈ ಆಟಿಕೆಯೂ ಇದೇ ತಂತ್ರದಲ್ಲಿ ಕಾರ್ಯ ನಿರ್ವಹಿಸುತ್ತದೆ.

ಇವುಗಳನ್ನು ಹೆಚ್ಚಾಗಿ ಸ್ಥಳೀಯ ಕುಶಲಕರ್ಮಿಗಳು ತಯಾರಿಸುತ್ತಾರೆ. ಡಿಜಿಟಲ್ ಜಗತ್ತಿನಲ್ಲಿ ಕಳೆದು ಹೋಗಿರುವ ಇಂದಿನ ಮಕ್ಕಳ ಕೈಗೆ ಇಂಥಹ ಆಟಿಕೆಗಳನ್ನ ನೀಡಬೇಕಿದೆ. ಇಂದಿನ ಆಧುನಿಕ ಯುಗದಲ್ಲಿ ಪ್ಲಾಸ್ಟಿಕ್ ಮತ್ತು ಎಲೆಕ್ಟ್ರಾನಿಕ್ ಆಟಿಕೆಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದರೂ, ಮರದ ಆಟಿಕೆಗಳು ತಮ್ಮದೇ ಆದ ಮಹತ್ವವನ್ನು ಹೊಂದಿವೆ. ಮರದ ಆಟಿಕೆಗಳು ಪರಿಸರ ಸ್ನೇಹಿ, ಜೊತೆಗೆ ಮಕ್ಕಳ ಕೈಗೆ ಹಿತ. ಈ ಗೊಂಬೆಗಳು ಮಕ್ಕಳನ್ನು ರಂಜಿಸಲೂ, ಅವರ ಸೃಜನಶೀಲತೆ ಮತ್ತು ಕಲ್ಪನಾಶಕ್ತಿಯನ್ನು ಹೆಚ್ಚಿಸಲು ಸಹಾಯಕವಾಗಿವೆ.

# ಮಧು ಬನದಲೊಮ್ಮೆ

● ಜೆ. ಎನ್. ಜಗನ್ನಾಥ್

ನರಹರಿ ಕರಣೀಕರು ವೇದ, ಉಪನಿಷತ್ತುಗಳನ್ನು ಅಭ್ಯಾಸ ಮಾಡಿರುವುದರ ಜೊತೆಗೆ ಜ್ಯೋತಿಷ್ಯ, ಪೌರೋಹಿತ್ಯ ಕ್ಷೇತ್ರಗಳಲ್ಲಿ ಸಾಧಕರಾಗಿದ್ದಾರೆ. ಇವರ ಕವನಗಳಲ್ಲಿ ಇವರ ಭಾಷೆ ಮತ್ತು ಭಾವಗಳು ಆಧ್ಯಾತ್ಮ ಸಾಧನಗಳಾಗಿಯೇ ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ, ಇವರ ಕವನಸಂಕಲನ 'ಮಧುಬನದಲೊಮ್ಮೆ' ಯನ್ನು ಓದಲು ಕೈಗೆತ್ತಿಕೊಳ್ಳಬಹುದು. ಇಲ್ಲಿ 72 ಕವನಗಳಿವೆ. 'ಗಣಪ ನಮನ' ಕವನದಲ್ಲಿ, ''ವರ್ಷ ಋತು/ ಭಾದ್ರಪದ ಶುಕ್ಲ ಚೌತಿಯ ದಿವಸ / ಸುರಪತಿಯ ಪತಿಯಸುತ / ಸುಮುಖ ನಾಗಮನ /ಎಂದು ಪ್ರಾರಂಭಿಸುತ್ತಾರೆ. ಈ ಕವನ ಸಂಕಲನದ ಶೀರ್ಷಿಕೆಯ ಗೀತೆಯಾದ 'ಮಧು ಬನದಲೊಮ್ಮೆ' ಕವಿತೆ ಹರಿ ಹರರ ಮಹತ್ವವನ್ನು, ಅವರು ಈ ಭೂಮಿಗೆ ಇಳಿದು ಬಂದ ಪ್ರೀತಿಯನ್ನು ಹೇಳುತ್ತಲೇ ನಮ್ಮ ಬದುಕು ಕೂಡ ಅವರಂತೆಯೇ ಹೊಂದಿಕೊಂಡರೆ ಮಾತ್ರ ಪಾರಮ್ಯತೆಯನ್ನು ಪಡೆಯಬಲ್ಲದು ಎಂಬ ಚಿತ್ರಣವನ್ನು ಪಂಚಮಾತ್ರಾಲಯದಲ್ಲಿ ಸೊಗಸಾಗಿ ವಿವರಿಸಿದ್ದಾರೆ. ಈ ಕವನ ಸಂಕಲನ ಈ ವಲಯದ ಸಾಹಿತ್ಯಾಸಕ್ತರ ಮನಕ್ಕೆ ಮುದ ನೀಡಬಲ್ಲದು.

ಮಧುಬನದಲೊಮ್ಮೆ
ಲೇ:ನರಹರಿ ಕರಣೀಕ
ಪ್ರ:ಕದಂಬ ಪ್ರಕಾಶನ

## ಹನಿ ಮಳೆ

### ಪ್ರಶಸ್ತಿ

ಪ್ರಶಸ್ತಿಗಳು ಬರಬೇಕು
ಸಾಧನೆಯ
ಹುಡುಕಿಕೊಂಡು!
ಆದರೆ ಜನರು
ತರುತ್ತಿದ್ದಾರೆ ಈಗ
ಅವುಗಳನು
ಹುಡುಕಿ ಮತ್ತು 'ಕೊಂಡು'

● ಮಹಾಂತೇಶ ಮಾಗನೂರ

# ಸಂಡೂರು ಕ್ಷೇತ್ರದ 'ಕುಮಾರಸ್ವಾಮಿ'

## ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಬಳ್ಳಾರಿ ಜಿಲ್ಲೆ ಸಂಡೂರಿನ ದಕ್ಷಿಣ ಭಾಗದಲ್ಲಿ ಪ್ರಸಿದ್ಧಿಯಾದ ಹಾಗೂ ಸಂಡೂರಿನ ಅಧಿದೇವತೆ ಎಂದೇ ಹೆಸರಾದ ಕುಮಾರಸ್ವಾಮಿ (ಸ್ಕಂದ) ಇಲ್ಲಿ ''ಕ್ರೌಂಚ'' ಪರ್ವತದಲ್ಲಿ ಶತ ಮಾನಗಳಿಂದ ನೆಲೆಸಿದ್ದಾನೆ. ತಾಯಿ ಪಾರ್ವತಿ ದೇವಿ ಪಕ್ಕದಲ್ಲೆ ನೆಲೆಸಿದ್ದು ಈ ದೇವಾಲಯವನ್ನು ಬಾದಾಮಿ ಚಾಲುಕ್ಯರು ನಿರ್ಮಿಸಿದ ಇತಿಹಾಸ ವಿದೆ. ರಾಷ್ಟ್ರಕೂಟರು ಕುಮಾರಸ್ವಾಮಿ ದೇವಸ್ಥಾನವನ್ನು ನಿರ್ಮಿಸಿ ವಿಗ್ರಹ ಪ್ರತಿಷ್ಠಾಪಿಸಿದರು. ಮುಂದೆ ಈ ದೇವಸ್ಥಾನ ವನ್ನು ಕಲ್ಯಾಣ ಚಾಲುಕ್ಯರು ಅಭಿವೃದ್ಧಿ ಪಡಿಸಿದರು ಎಂಬ ಉಲ್ಲೇಖವಿದೆ.

ಸ್ಥಳ ಪುರಾಣ ಹೇಳುವಂತೆ, ಕುಮಾರಸ್ವಾಮಿ ಯುವಕನಾದಾಗ ಪಾರ್ವತಿ ವಿವಾಹ ಮಾಡಲು ಕನ್ಯಾನ್ವೇಷಣೆ ನಡೆಸಿ ಅವನಿಗೆ ಚಂದದ ಯೋಗ್ಯ ಕನ್ಯೆಯ ಕುರಿತು ತಿಳಿಸಿದಳು. ಸಹಜವಾಗಿ ಯೇ ಕುಮಾರನು ಅಮ್ಮ ಹುಡುಗಿ ಹೇಗಿದ್ದಾಳೆ? ಎಂದು ಕೇಳಿದ. ನನ್ನ ಹಾಗೆ ಸುಂದರಿಯಾಗಿದ್ದಾಳೆ ಎಂದು ಪಾರ್ವತಿ ಹೇಳಿದಳು. ಇದನ್ನು ಕೇಳಿದ ತಕ್ಷಣ ಅಮ್ಮ ಹುಡುಗಿ 'ನಿನ್ನ ಹಾಗೆ ಇದ್ದಾಳೆ ಎಂದ ಮೇಲೆ ಅವಳು ಮಾತೃ ಸಮಾನ, ನಾನು ವಿವಾಹ ವಾಗುವುದಿಲ್ಲ' ಎಂದಾಗ, ಎಲ್ಲಾ ಹೆಣ್ಣು ಮಕ್ಕಳಲ್ಲೂ ನನ್ನ ಅಂಶ ಇದ್ದೇ ಇರುತ್ತದೆ ಎಂದು ಕೋಪದಿಂದ ಪಾರ್ವತಿ ಹೇಳಿದಳು. ಆದರೆ ಕುಮಾರ ಈ ಮಾತಿಗೆಲ್ಲ ಬಗ್ಗದೆ ವಿವಾಹ ಆಗುವುದೇ ಇಲ್ಲ ಎಂದನು.

ಪಾರ್ವತಿ ಎಷ್ಟೇ ಹೇಳಿದರೂ ವಿವಾಹವಾಗಲು ನಿರಾಕರಿಸಿದಾಗ, ಸಿಟ್ಟಿನಿಂದ ಮಗನಾದ 'ನೀನು ತಾಯಿಯ ಮಾತನ್ನೇ ಧಿಕ್ಕರಿಸುವ ನಿನ್ನನ್ನು ಹಾಲು ಕುಡಿಸಿ ಬೆಳೆಸಿದ್ದು ನಿಷ್ಪ್ರಯೋಜಕವಾಯಿತು' ಎಂದು ಪಾರ್ವತಿ ಹೇಳಿದ ಮಾತನ್ನು ಕೇಳಿ ಕುಮಾರ ಸ್ವಾಮಿಯ ಮನಸ್ಸಿಗೆ ನೋವಾಗಿ, 'ಹಾಗಾದರೆ ನನಗೆ ತಾಯಿಯ ಹಾಲಿನ ಹಂಗೇ ಬೇಡ' ಎಂದು ತಾಯಿ ಕುಡಿಸಿದ ಹಾಲನ್ನೆಲ್ಲ ಕಕ್ಕಿದ. ಮೊದಲು ಕಕ್ಕಿದ ಹಾಲು ಬೆಳ್ಳಗಿರುವ ವಿಭೂತಿ ಬೆಟ್ಟವಾಯಿತು. ಮಗನ ಉದ್ಧಟತನ ಕಂಡ ತಾಯಿ ಇನ್ನೂ ಕೋಪಗೊಂಡು ಇಷ್ಟೇ ಅಲ್ಲ ಇನ್ನೂ ನನ್ನ ಹಾಲು ಕುಡಿದಿರುವೆ ಎಂದಳು. ಕುಮಾರನು ಮತ್ತೆ ಎರಡನೇ ಬಾರಿ ಹಾಲನ್ನು ಕಕ್ಕುತ್ತಾನೆ. ಅದು ರಕ್ತ ಮಿಶ್ರಿತ ಹಾಲಾಗಿದ್ದು, ಬಿಳಿ ಬೆಟ್ಟದ ಪಕ್ಕದಲ್ಲಿ ಮತ್ತೊಂದು ತಾಮ್ರದ ಬಣ್ಣದ ಬಟ್ಟವಾಯಿತು. ಹೆದರಿದ ಪಾರ್ವತಿ ಸಾಕು ನಿಲ್ಲಿಸು ಎಂದಳು, ಕೇಳದ ಕುಮಾರನು 'ಅಮ್ಮ, ನೀನು ಕೊಟ್ಟ ಆಹಾರ, ಹಾಲಿನ ಅಂಶ ನನಗೆ ಯಾವುದೂ ಬೇಡ' ಎಂದು ಮತ್ತಷ್ಟು ಕಕ್ಕಿದನು. ಅದು ಪೂರ್ತಿ ರಕ್ತವಾಗಿದ್ದು ಮೊದಲ ಎರಡು ಬೆಟ್ಟಗಳ ಸಮೀಪ ಮತ್ತೊಂದು ಕೆಂಪು ವರ್ಣದ ಬೆಟ್ಟವಾಯಿತು. ಸಂಡೂರಿನಲ್ಲಿ ವರ್ಷಕ್ಕೊಮ್ಮೆ ಜಾತ್ರಾ ಮಹೋ ತ್ಸವ ನಡೆಯುತ್ತದೆ. ಆ ಸಮಯದಲ್ಲಿ ವಿಧಿವತ್ತಾಗಿ ಪೂಜೆ ಹೋಮ ಹವನ ಮಾಡುತ್ತಾರೆ. ಹಾಲಿನ ಬೆಟ್ಟದಲ್ಲಿ ಬಾವಿ ತರದ ಹೊಂಡದಿಂದ ಬಿಳಿಯ ವಿಭೂತಿ ರಾಶಿ ತೆಗೆಯುತ್ತಾರೆ. ಪುನಃ ವಿಧಿವತ್ತಾದ ಮಂತ್ರ ಪೂಜೆಗಳನ್ನು ಮಾಡಿ ವಿಭೂತಿ ಬಾವಿ ಯನ್ನು ಮುಚ್ಚಿ ಮತ್ತೆ ಮುಂದಿನ ವರ್ಷ ಬರುವ ಜಾತ್ರೆಯಲ್ಲಿ ತೆಗೆಯುತ್ತಾರೆ. ಪ್ರತಿ ವರ್ಷವೂ ತೆಗೆದ ವಿಭೂತಿಯನ್ನು ಭಕ್ತರಿಗೆ ಪ್ರಸಾದ ಕೊಡುತ್ತಾರೆ.

ಸುಬ್ರಹ್ಮಣ್ಯ ಸ್ವಾಮಿ ಎರಡನೆಯ ಸಾರಿ ಕಕ್ಕಿದ ಹಾಲು ರಕ್ತ ಮಿಶ್ರಿತವಾದ ಬೆಟ್ಟ ಹಾಗೂ ಪೂರ್ತಿ ರಕ್ತವನ್ನೇ ಕಕ್ಕಿದ ಬೆಟ್ಟ ಇವು ಅಪಾರವಾದ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರಿನ ಸಂಪತ್ಭರಿತ ಬೆಟ್ಟಗಳಾಗಿವೆ. ಈ ಪರ್ವತದ ಆಕಾರವು ವೃತ್ತಾಕಾರವಾ ಗಿದ್ದು ಮಧ್ಯದಲ್ಲಿ ರಂಧ್ರವಿದೆ. ದಂತ ಕಥೆಯಂತೆ ಕಾರ್ತಿಕೇಯ ತಾರಕಾಸುರನೊಡನೆ ಯುದ್ಧ ಮಾಡುವಾಗ ಎಲ್ಲರನ್ನೂ ಸಂಹಾರ ಮಾಡಿದನು. ಆದರೆ ಕೆಲವು ರಾಕ್ಷಸರು ಈ ಪರ್ವತ ದಲ್ಲಿ ಅಡಗಿದ್ದರು. ಕಾರ್ತಿಕೇಯನು ತನ್ನ ಶಸ್ತ್ರದಿಂದ ಈ ಬೆಟ್ಟ ವನ್ನು ಚುಚ್ಚಿ ರಂಧ್ರ ಮಾಡಿ ಒಳಗೆ ಅಡಗಿದ್ದ ರಾಕ್ಷಸರನ್ನೆಲ್ಲ ಸಂಹಾರ ಮಾಡುವಾಗ ಆ ಸಣ್ಣ ರಂಧ್ರ ದೊಡ್ಡದಾಗುತ್ತದೆ. ಈಗ ಗುಹೆಯಂತಿದೆ. ಮೊದಲು ಈ ದೇವಾಲಯಕ್ಕೆ ಮಹಿಳೆಯರು ಹೋಗದಂತೆ ನಿರ್ಬಂಧವಿತ್ತು. ಈಗ ಇಲ್ಲ. ಇಲ್ಲಿನ ಇನ್ನೊಂದು ವಿಶೇಷ ಎಂದರೆ ಕುಮಾರ ಸ್ವಾಮಿ ದೇವರ ದರ್ಶನಕ್ಕೆ ಹೋದವರಿಗೆ ಅವರಷ್ಟೇ ಎತ್ತರ ಇದ್ದಂತೆ ಗೋಚರಿಸುತ್ತಾನೆ. ಮಕ್ಕಳಿಗೆ ಮಕ್ಕಳಂತೆ ಯುವಕರಿಗೆ ಯುವಕರಂತೆ ಪ್ರೌಢರಿಗೆ ಪ್ರೌಢರಂತೆ. ಇಲ್ಲಿನ ಕ್ರೌಂಚ ಪರ್ವತದ ಸುತ್ತಮುತ್ತ

ಕುಮಾರಸ್ವಾಮಿ ವಾಹನವಾದ ನವಿಲುಗಳು ಸಾಕಷ್ಟು ಇದೆ. ಇಲ್ಲಿ ಅಗಸ್ತ್ಯರು ನಿರ್ಮಿಸಿದ ಪುಷ್ಕರಣಿಯಲ್ಲಿ ಸ್ನಾನ ಮಾಡಿದರೆ ಚರ್ಮ ವ್ಯಾಧಿ ಗುಣವಾಗುತ್ತದೆ ಎಂಬ ನಂಬಿಕೆ. ಸುತ್ತ ಆವರಿಸಿರುವ ಬೆಟ್ಟ ಗುಡ್ಡಗಳ ನಡುವೆ ಹರಿಯುವ 'ನಾರಿ ಹಳ್ಳ' ದ ಇನ್ನೊಂದು ಹೆಸರು 'ಮಾನಸ ಸರೋವರ'. ಇಂತಹ ಪುರಾಣ ಪ್ರಸಿದ್ಧವಾದ ಕ್ಷೇತ್ರಗಳಿಗೆ ಭೇಟಿಕೊಟ್ಟು , ನಮ್ಮ ಮಕ್ಕಳಿಗೂ ಇದರ ಬಗ್ಗೆ ತಿಳಿಸೋಣ.

## ಪದಬಂಧ

| | | | | | | | | |
|---|---|---|---|---|---|---|---|---|
| 1 | ■ | 2 | | 3 | ■ | 4 | ■ | 5 |
| | ■ | | ■ | 6 | | | ■ | |
| 7 | 8 | | ■ | | ■ | 9 | 10 | |
| ■ | | ■ | 11 | | 12 | ■ | | ■ |
| 13 | | | | ■ | 14 | | | |
| ■ | | ■ | 15 | 16 | | ■ | | ■ |
| 17 | | 18 | ■ | | ■ | 19 | | 20 |
| | ■ | 21 | | | ■ | | ■ | |
| | ■ | | ■ | 22 | | | ■ | |

### ಎಡದಿಂದ ಬಲಕ್ಕೆ

2. ನಿಂದಿಸು ಅಥವಾ ಶಾಪ ಕೊಡು (3)
6. ಹೊಡೆತ ಕೊನೆಗೆ ದೀರ್ಘವಾಗಿ ಬಂದಿದೆ (3)
7. ಒಳ್ಳೆಯ ಹಾದಿ ಎಂದರ್ಥ (3)
9. ಪ್ರಾತಃಕಾಲ ಎನ್ನುವುದು ಅಸ್ತವ್ಯಸ್ತವಾಗಿ ಬಂದಿದೆ (3)
11. ನಡುವಿನ ಭಾಗ ಅಥವಾ ವ್ಯತ್ಯಾಸ (3)
13. ಪತ್ರಿಕೆಯಲ್ಲಿ ಪ್ರಕಟಿಸಬೇಕಾದ ಸುದ್ದಿಯನ್ನು ಪರಿಷ್ಕರಿಸುವವನು (4)
14. ದೇಶದ ಮೊದಲ ಪ್ರಜೆಯೆನೆಂಬ ಗೌರವ ಇವರಿಗೆ (4)
15. ಅಸ್ತವ್ಯಸ್ತವಾಗಿ ಬಂದಿರುವ ಯುವಕ (3)
17. ಕಮ್ಮಾರನ ಒಲೆ (3)
19. ಕೆಸರಿನಲ್ಲಿ ಹುಟ್ಟಿದ ತಾವರೆ (3)
21. ಕೆಂಬಣ್ಣದ ರಕ್ತ (3)
22. ಉಗ್ರವಾದ ಅಥವಾ ಬಿರುಸಾದ ಎಂದರ್ಥ (3)

### ಮೇಲಿನಿಂದ ಕೆಳಕ್ಕೆ

1. ರಭಸ ಎನ್ನುವ ಇನ್ನೊಂದು ಪದ (3)
2. ಆ ಪಥದಲ್ಲಿ ಹೋಗುವಾಗ ಮಾಡಿದ ಪ್ರತಿಜ್ಞೆ (3)
3. ಸುಂದರವಾದ ಅರುಣೋದಯವನ್ನು ಹೀಗೆನ್ನಬಹುದು (4)
4. ಆಯುಧಗಳ ಏಟು ತಪ್ಪಿಸಲು ಬಳಸುವ ಸಾಧನ ತಿರುಗಿದೆ (3)
5. ತಿಂಗಳ ಕೊನೆಗೆ ಪಡೆಯುವ ಪಗಾರ (3)
8. ಅತಿಯಾದ ತೊಂದರೆಯನ್ನು ಹೀಗೆನ್ನುವರು (5)
10. ಸ್ಪರ್ಧೆಯಲ್ಲಿ ಎರಡನೇ ಸ್ಥಾನ ಪಡೆದವರಿಗೆ ಸಿಗುವ ಬಿಲ್ಲೆ (5)
11. ಮನೆಯ ಎರಡು ಕಂಬಗಳ ನಡುವಿನ ಪ್ರದೇಶ (3)
12.ಕಾರು ತರುವಾಗ ಮಾಡಿಕೊಂಡ ಒಪ್ಪಂದ (3)
16. ಸಿದ್ಧಪಡಿಸುವವನು (4)
17.ಗುರುತು ಎನ್ನುವ ಇನ್ನೊಂದು ಪದ (3)
18. ಹೊರಗೂ ಉಂಟು ಹೊಳಪು (3)
19. ಹಕ್ಕಿಯ ಗೂಡು (3)
20. ಒಂದಕ್ಕೊಂದು ಹೆಣೆದುಕೊಂಡಿರುವುದು ಅಥವಾ ಕ್ಲಿಷ್ಟವಾದುದು (3)

### ಸರಿಯುತ್ತರಗಳು

**ಎಡದಿಂದ ಬಲಕ್ಕೆ:** 2. ಶಪಿಸು 6. ಪ್ರಹಾರಾ 7. ಸುಪಥ 9. ಗುಬೆಳ 11. ಅಂತರ 13. ಸಂಪಾದಕ 14. ರಾಷ್ಟ್ರಪತಿ 15. ಣತರು 17. ಕುಲುಮೆ 19. ಪಂಕಜ 21. ರುಧಿರ 22. ಕಠೋರ

**ಮೇಲಿನಿಂದ ಕೆಳಕ್ಕೆ:** 1. ತುರುಸು 2. ಶಪಥ 3. ಸುಪ್ರಭಾತ 4. ಣಿರಾಗು 5. ಸಂಬಳ 8. ಪಡಿಪಾಟಲು 10. ಬೆಳ್ಳಿಪದಕ 11. ಅಂಕಣ 12. ಕರಾರು 16. ತಯಾರಕ 17. ಕುರುಹು 18. ಮೆರುಗು 19. ಪಂಜರ 20. ಜಟಿಲ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

# ಸದಾ ತೃಪ್ತನಾಗಿರುವುದು

## ನಿತ್ಯಜೀವನದಲ್ಲಿ ಭಗವದ್ಗೀತೆ

● ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಒಮ್ಮೆ ಹಸಿದಿರುವ ನರಿಯು ಮೇಲಿರುವ ದ್ರಾಕ್ಷಿ ಹಣ್ಣುಗಳನ್ನು ಕೀಳುವಲ್ಲಿ ವಿಫಲವಾಗಿ ಕೊನೆಗೆ ದ್ರಾಕ್ಷಿ ಹಣ್ಣುಗಳು ಹುಳಿ ಎಂದು ಹೇಳಿತು. ಈ ಜನಪ್ರಿಯ ಕಥೆಯು ನಿರಾಸೆ, ತೃಪ್ತಿ ಮತ್ತು ಸಂತೋಷ ಗಳಂತಹ ವಿಷಯಗಳನ್ನು ನಿರ್ವಹಿಸುವ ವಿವಿಧ ದೃಷ್ಟಿಕೋನಗಳನ್ನು ಪ್ರಸ್ತುತ ಪಡಿಸುತ್ತದೆ.

ನಾವು ಸಂಕಷ್ಟದ ಪರಿಸ್ಥಿತಿಗಳಿಂದ ಹೊರಬರುವಲ್ಲಿ ನಮಗೆ ಸಹಾಯ ಮಾಡುವ ಮಾನವನ ಮೆದುಳಿನ ಕಾರ್ಯಗಳಲ್ಲಿ ಒಂದಾದ ಸಂತೋಷದ ಸಂಯೋಜನೆ ಬಗ್ಗೆ ಆಧುನಿಕ ಮನಶಾಸ್ತ್ರ ಹೇಳುತ್ತದೆ. ಮೇಲಿನ ಕಥೆಯಲ್ಲಿಯ ನರಿಯು ಸರಿಯಾಗಿ ಇದನ್ನೇ ಮಾಡಿದೆ. ದ್ರಾಕ್ಷಿ ಹಣ್ಣು ಹುಳಿ ಎಂದು ತನಗೆ ತಾನೇ ತೃಪ್ತಿಪಟ್ಟುಕೊಂಡು ಹೋಯಿತು. ತೃಪ್ತಿಯ ವಿಚಾರದಲ್ಲಿ ಸಂತೋಷದ ಸಂಯೋಜನೆಯನ್ನು ಮೀರಿ ಕೃಷ್ಣ ಹೋಗುತ್ತಾನೆ ಮತ್ತು ಹೇಳುತ್ತಾನೆ.

ಕರ್ಮಫಲದ ಬಗ್ಗೆ ಮೋಹವನ್ನು ತೊರೆದಾಗ ವ್ಯಕ್ತಿ -ನಿತ್ಯತೃಪ್ತನಾದವ- ಯಾವುದನ್ನು ಅವಲಂಬಿಸಿರುವುದಿಲ್ಲ. ಅವನು ಕಾರ್ಯ ನಿರತನಾಗಿದ್ದರೂ ಏನನ್ನೂ ಮಾಡುವುದಿಲ್ಲ. (4.20) ಆತ್ಮತೃಪ್ತಿ ಗೀತೆಯ ಅನೇಕ ಎಳೆಗಳಲ್ಲಿ ಒಂದಾಗಿದೆ. ಬಹಳ ಸಂದರ್ಭಗಳಲ್ಲಿ ಕೃಷ್ಣ ಅರ್ಜುನನಿಗೆ ಆತ್ಮತೃಪ್ತನಾಗಿರು ಎಂದು ಉಪದೇಶ ಮಾಡುತ್ತಾನೆ. ಅಂತವನು ಯಾವುದೇ ಪರಿಸ್ಥಿತಿಯಲ್ಲಿದ್ದರೂ ತೃಪ್ತಿಯ ಸುಗಂಧವನ್ನು ಹರಡುತ್ತಾನೆ. ಈ ಮೊದಲು ಕೃಷ್ಣ ಕರ್ಮ ಮತ್ತು ಅಕರ್ಮಗಳ ಬಗ್ಗೆ ಹೇಳಿದ್ದಾನೆ. ಈ ಎರಡು ಕ್ಲಿಷ್ಟ ವಿಷಯಗಳನ್ನು ನಿರ್ವಹಿಸುವಲ್ಲಿ ಜ್ಞಾನಿಗಳು

ಗೊಂದಲಕ್ಕೀಡಾಗುತ್ತಾರೆ ಎಂದು ತಿಳಿಸಿದ್ದಾನೆ. ಈಗಿನ ಶ್ಲೋಕದಲ್ಲಿ ನಿತ್ಯತೃಪ್ತನು ಕಾರ್ಯದಲ್ಲಿ ತೊಡಗಿದ್ದರೂ ಏನನ್ನೂ ಮಾಡುವುದಿಲ್ಲ ಎಂದು ಹೇಳಿ ಕರ್ಮದಲ್ಲಿಯ ಅಕರ್ಮದ ಬಗ್ಗೆ ಒಂದು ದೃಷ್ಟಿಯನ್ನು ನೀಡುತ್ತಾನೆ. ನಮ್ಮ ಸದ್ಯದ ಪರಿಸ್ಥಿತಿ ನಾವು ಈಗಿರುವುದಕ್ಕಿಂತ ಭಿನ್ನವಾಗಿದೆ. ಬೇರೆ ಯಾರೋ ಆಗಬೇಕೆಂದು ಬಯಸುತ್ತೇವೆ. ಕುತೂಹಲಕಾರಿ ಅಂಶವೆಂದರೆ ಆ ಬೇರೆ ಯಾರೋ ಮತ್ತೊಬ್ಬರಾರೋ ಆಗಬೇಕೆಂದು ಬಯಸುತ್ತಾರೆ.

ಸುಖ ಮತ್ತು ಸಂಪಾದನೆಯ ವಿಷಯದಲ್ಲಿಯೂ ಇದೇ ಕಥೆಯಾಗಿದೆ.

ಅಲ್ಲಿ ನಮ್ಮ ಗುರಿಗಳು ಸತತವಾಗಿ ಬದಲಾಗುತ್ತಿರುತ್ತವೆ. ಸುಖ ಮತ್ತು ಸಂಪತ್ತನ್ನು ಬೆನ್ನು ಹತ್ತುವದು ಮರೀಚಿಕೆಯ ಬೆನ್ನು ಹತ್ತಿದಂತೆ ಹಾಗೂ ಅವು ನಮ್ಮನ್ನು ರೋಗಿಷ್ಠರನ್ನಾಗಿ ಮಾಡಿ ದಣಿಸುತ್ತವೆ ಎಂಬ ಅರಿವು ನಮಗಾದಾಗ ನಾವು ನಿತ್ಯತೃಪ್ತರಾಗಿರಲು ನಿಧಾನವಾಗಿ ಕರ್ಮಫಲದ ಆಸೆಯನ್ನು ಬಿಡುತ್ತೇವೆ. ಇದು ಮಗು ಈ ಕ್ಷಣ ಸಂತೋಷದಿಂದ ಇದ್ದು ವಿನಾಕಾರಣ ನಗುವಂತಿದೆ.

## ನೀವೂ ಬರೆಯಬಹುದು

**ನಮ್ಮ ವಿಳಾಸ:**
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ
ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ
ಹತ್ತಿರ, ಬಿಇಎಂಎಲ್ ಬಡಾವಣೆ,
ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine
@gmail.com

ದುಬೈನಿಂದ 14.8 ಕೆ.ಜಿ.ಯಷ್ಟು ಚಿನ್ನವನ್ನು ಭಾರತಕ್ಕೆ ಕಳ್ಳಸಾಗಣೆ ಮಾಡಿದ ಸಂಬಂಧ ಚಿತ್ರನಟಿ ರನ್ಯಾ ರಾವ್ ಅವರು ಈಗ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಳಗಾಗಿದ್ದಾರೆ. ದುಬೈನಿಂದ ವಿಮಾನದಲ್ಲಿ ಬಂದಿಳಿಯುತ್ತಿದ್ದಂತೆ ಅವರನ್ನು ಬಂಧಿಸಿ ತೀವ್ರ ವಿಚಾರಣೆಗೆ ಒಳಪಡಿಸಲಾಯಿತು. ಅವರು ಭೂಗತ ಲೋಕದ 'ಚಿನ್ನದ ಕಳ್ಳಸಾಗಣೆ' ಜಾಲದ ಸದಸ್ಯೆಯಾಗಿರುವ ಮಾಹಿತಿ ಬಯಲಾಗಿದೆ ಹಾಗೂ ಈ ಬಾಬತ್ತಿನಲ್ಲಿ ಕೆಲ ರಾಜಕೀಯ ನಾಯಕರ ಜತೆ ನಂಟು ಹೊಂದಿದ್ದಾರೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ದುಬೈನಿಂದ ಭಾರತೀಯರು ಚಿನ್ನವನ್ನು ತರುವುದಕ್ಕೆ ಸಂಬಂಧಿಸಿದ ಮಾರ್ಗಸೂಚಿಗಳ ಕುರಿತಾದ ಕಿರುನೋಟವನ್ನು ಇಲ್ಲಿ ನೀಡಲಾಗಿದೆ.

# ಚಿತ್ರನಟಿಯ ಚಿನ್ನ ಚಿನ್ನ ಆಸೈ..!

## ಬಂಗಾರ ಬಾಚಲು ಹೋಗಿ, ಬಕಾಬೋರಲು ಬಿದ್ದೀರಿ, ಜೋಕೆ!

ಚಿನ್ನದ ಕುರಿತು ಯಾರಿಗೆ ತಾನೇ ಆಸೆಯಿಲ್ಲ? ಅದರಲ್ಲೂ, ಎಲ್ಲಾದರೊಂದು ಕಡೆ ಕೊಂಚ ಕಡಿಮೆ ಬೆಲೆಗೆ ಸಿಗುತ್ತೆ ಅಂತ ಗೊತ್ತಾಗಿಬಿಟ್ಟರಂತೂ ಶತಾಯಗತಾಯ ಅದನ್ನು ದಕ್ಕಿಸಿಕೊಳ್ಳಲು ಹಪಹಪಿಸುವವರಿಗೆ ನಮ್ಮಲ್ಲೇನೂ ಕಮ್ಮಿಯಿಲ್ಲ. ಭಾರತೀಯ ಮಾರುಕಟ್ಟೆಗೆ ಹೋಲಿಸಿದರೆ ದುಬೈನಲ್ಲಿ ಬಂಗಾರ ಅಗ್ಗ ಎಂಬ ವಸ್ತುಸ್ಥಿತಿಯು ಕೆಲವರನ್ನು ದುಬೈನತ್ತ ಮುಖಮಾಡುವಂತೆ ಮಾಡಿಬಿಡುತ್ತದೆ. ಆದರೆ, ಈ ಬಾಬತ್ತಿಗೆ ಸಂಬಂಧಿಸಿದ ವಸ್ತುಸ್ಥಿತಿಯೇನು? ದುಬೈನಿಂದ ಚಿನ್ನವನ್ನು ಖರೀದಿಸಿ ತಂದರೆ ಎಷ್ಟು ಹಣ ಉಳಿತಾಯವಾಗುತ್ತದೆ? ಅನುಮತಿಸಲಾದ ಚಿನ್ನದ ಪ್ರಮಾಣವೆಷ್ಟು? ಅದಕ್ಕೆ ತಗಲುವ ಆಮದು ಸುಂಕವೆಷ್ಟು? ಎಂಬೆಲ್ಲ ವಿಷಯಗಳ ಕುರಿತಾದ ಒಂದಷ್ಟು ಹೊಳಹುಗಳು, ದುಬೈ ಮತ್ತು ಮುಂಬೈನಲ್ಲಿನ ಚಿನ್ನದ ದರ, ಆಮದು ಸುಂಕದ ತುಲನಾತ್ಮಕ ವಿಶ್ಲೇಷಣೆ ಇಲ್ಲಿದೆ.

### ಚಿನ್ನದ ಬೆಲೆ: ಅಲ್ಲೆಷ್ಟು, ಇಲ್ಲೆಷ್ಟು?

**ಮೊನ್ನಿನ ಮಾರ್ಚ್ 7ರ ವೇಳೆಗಿನ ಅಂಕಿ-ಅಂಶದಂತೆ, ದುಬೈನಲ್ಲಿ 10 ಗ್ರಾಂ ಚಿನ್ನದ ಬೆಲೆಯು 3,260 ದಿರ್ಹಮ್‌ನಷ್ಟು ಇತ್ತು. ಇದು ಡಾಲರ್ ಲೆಕ್ಕದಲ್ಲಿ 887.63 ಡಾಲರ್ ಆಗಿದ್ದರೆ, ರುಪಾಯಿ ಲೆಕ್ಕದಲ್ಲಿ 77,281.46 ರು. ಆಗಿದೆ. ಮುಂಬೈನಲ್ಲಿ 10 ಗ್ರಾಂ ಚಿನ್ನದ ಮಾರಾಟ ಬೆಲೆ 87,480 ರುಪಾಯಿ. ಇದಕ್ಕೆ ಹೋಲಿಸಿದಾಗ, ದುಬೈನಲ್ಲಿನ ಚಿನ್ನದ ದರವು ಸುಮಾರು ಶೇ.11.58ರಷ್ಟು ಅಗ್ಗ. ಇನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಯ ವಿಷಯಕ್ಕೆ ಬರುವುದಾದರೆ, ನ್ಯೂಯಾರ್ಕ್ ಮೂಲದ ಸರಕು ವಿನಿಮಯ ಕೇಂದ್ರದಲ್ಲಿ ಚಿನ್ನವು ಔನ್ಸ್‌ಗೆ 2,908.9 ಡಾಲರ್‌ನಷ್ಟು ದರದಲ್ಲಿ ಮಾರಾಟವಾಗುತ್ತಿದೆ. ತುಲನಾತ್ಮಕವಾಗಿ ನೋಡಿದರೆ, ಇದು ದುಬೈ ಮತ್ತು ಮುಂಬೈನಲ್ಲಿರುವ ದರಕ್ಕಿಂತ 1,026.08 ಡಾಲರ್‌ನಷ್ಟು ಹೆಚ್ಚಿದೆ (ಒಂದು ಔನ್ಸ್ ಪ್ರಮಾಣವು 28.3495 ಗ್ರಾಂಗಳಿಗೆ ಸಮ).**

### ಚಿನ್ನ ಸಾಗಿಸಿದ ಚಿತ್ರನಟಿ!

ಭಾರಿ ಪ್ರಮಾಣದ ಚಿನ್ನದ ಕಳ್ಳಸಾಗಣೆಯ ಆರೋಪದ ಮೇಲೆ ಚಿತ್ರನಟಿ ರನ್ಯಾ ರಾವ್ ಬಂಧನಕ್ಕೊಳಗಾಗಿದ್ದಾರೆ. ದುಬೈನಿಂದ ಎಮಿರೇಟ್ಸ್ ವಿಮಾನದಲ್ಲಿ ಬಂದಿಳಿಯುತ್ತಿದ್ದಂತೆ ಅವರನ್ನು ಬಂಧಿಸಿ, ಅವರಿಂದ 14.8 ಕೆ.ಜಿ.ಯಷ್ಟು ಚಿನ್ನವನ್ನು ವಶಪಡಿಸಿಕೊಂಡು, ತೀವ್ರ ವಿಚಾರಣೆಗೆ ಒಳಪಡಿಸಲಾಯಿತು. ಈಕೆ ಗಣನೀಯ ಪ್ರಮಾಣದ ಚಿನ್ನವನ್ನು ಆಭರಣದ ರೂಪದಲ್ಲಿ ಧರಿಸುವ ಮೂಲಕ ಹಾಗೂ ವಿಶಿಷ್ಟ-ವಿನ್ಯಾಸದ ತಮ್ಮ ಉಡುಪಿನಲ್ಲಿ ಚಿನ್ನದ ಗಟ್ಟಿಗಳನ್ನು ಅಡಗಿಸಿಟ್ಟುಕೊಳ್ಳುವ ಮೂಲಕ ಕಳ್ಳಸಾಗಣೆ ಮಾಡಿದ್ದಾರೆ ಎಂಬುದು ತನಿಖಾಧಿಕಾರಿಗಳ ಆರೋಪ. 15 ದಿನಗಳ ಅವಧಿಯಲ್ಲಿ ಈಕೆ 4 ಬಾರಿ ದುಬೈಗೆ ಪಯಣಿಸಿದ್ದನ್ನು ಗಮನಿಸಿದ ಅಧಿಕಾರಿಗಳಿಗೆ ಅನುಮಾನ ಬಂದು, ಈಕೆ ಹಿಂದಿರುಗುತ್ತಿದ್ದಂತೆ ಉದ್ದೇಶಿತ ಕಾರ್ಯಾಚರಣೆಯನ್ನು ನಡೆಸಿದರು. ಕಸ್ಟಮ್ಸ್ ಸಂಬಂಧಿತ ತಪಾಸಣೆಗಳಿಂದ ತಪ್ಪಿಸಿಕೊಳ್ಳಲು ಈಕೆ ತಮಗಿರುವ ಪ್ರಭಾವ/ಸಂಪರ್ಕಗಳನ್ನು ಬಳಸಿಕೊಳ್ಳಲು ಯತ್ನಿಸಿದ್ದಿರಬಹುದು ಎಂಬುದು ಪ್ರಾಥಮಿಕ ತನಿಖೆಗಳ ಗ್ರಹಿಕೆ.

### ದುಬೈನಿಂದ ತಂದರೆ ಎಷ್ಟು ಉಳಿತಾಯವಾಗುತ್ತೆ?

**ಒಂದೊಮ್ಮೆ ದುಬೈನಿಂದ ಚಿನ್ನವನ್ನು ತಂದರೆ, 927 ಡಾಲರ್‌ನಷ್ಟಿರುವ ಚಿನ್ನದ ಸುಂಕಮೌಲ್ಯದ ಮೇಲೆ ಶೇ.6ರಷ್ಟು ಸುಂಕವನ್ನು ವಿಧಿಸಲಾಗುತ್ತದೆ ಮತ್ತು ಅದು 55.62 ಡಾಲರ್‌ನಷ್ಟಿರುತ್ತದೆ. ಇದನ್ನು ರುಪಾಯಿಗೆ ಪರಿವರ್ತಿಸಿದರೆ, 10 ಗ್ರಾಂ ಚಿನ್ನಕ್ಕೆ ಸುಮಾರು 4,842 ರುಪಾಯಿಯಷ್ಟು ಸುಂಕವಾಗುತ್ತದೆ (1 ಡಾಲರ್ ಬೆಲೆಯನ್ನು 87.06 ರುಪಾಯಿ ಎಂದು ಪರಿಗಣಿಸಿದಾಗ). ದುಬೈನಿಂದ ತಂದ ಚಿನ್ನದ ಮೇಲೆ ವಿಧಿಸಲಾಗುವ 55.62 ಡಾಲರ್‌ನಷ್ಟು ಕಸ್ಟಮ್ಸ್ ಸುಂಕವನ್ನು ಪಾವತಿಸಿದರೂ, ಈ 'ಹಳದಿ ಲೋಹ'ಕ್ಕೆ ನೀವು ಮಾಡುವ ವೆಚ್ಚವು 10 ಗ್ರಾಂಗೆ 943.25 ಡಾಲರ್‌ನಷ್ಟಾಗುತ್ತದೆ (ಅಂದರೆ, ಇದು ಸದರಿ ಚಿನ್ನಕ್ಕೆ ನೀವು ದುಬೈನಲ್ಲಿ ಪಾವತಿಸಿದ 887.63 ಡಾಲರ್ ಮತ್ತು ಅದಕ್ಕೆ ಸೇರಿಸಲಾದ 55.62 ಡಾಲರ್‌ನಷ್ಟು ಕಸ್ಟಮ್ಸ್ ಸುಂಕದ ಮೊತ್ತ). ರುಪಾಯಿಯ ಲೆಕ್ಕದಲ್ಲಿ ಇದು 82,119 ರುಪಾಯಿಗಳಷ್ಟಾಗುತ್ತದೆ ಮತ್ತು ಮುಂಬೈನಲ್ಲಿ ಚಿನ್ನಕ್ಕಿರುವ 87,480 ರುಪಾಯಿ ಬೆಲೆಗೆ ಹೋಲಿಸಿದಾಗ 5,360 ರುಪಾಯಿಯಷ್ಟು ಅಗ್ಗವಾಗಿರುತ್ತದೆ.**

### ಚಿನ್ನದ 'ಸುಂಕಮೌಲ್ಯ' ಎಂದರೇನು?

ನೀವು ಒಂದೊಮ್ಮೆ ದುಬೈನಿಂದ ಭಾರತಕ್ಕೆ ಚಿನ್ನವನ್ನು ತಂದಲ್ಲಿ, ಸರಕಾರವು ಸೂಚಿಸಿದ ಚಿನ್ನದ ದರವನ್ನು ಆಧರಿಸಿ ಕಸ್ಟಮ್ಸ್ ಸುಂಕವನ್ನು ವಿಧಿಸಲಾಗುತ್ತದೆಯೇ ವಿನಾ (ಇದಕ್ಕೆ ಸುಂಕಮೌಲ್ಯ ಅಥವಾ ಮೂಲದರ ಎನ್ನಲಾಗುತ್ತದೆ), ದುಬೈನಲ್ಲಿ ನೀವು ಅದನ್ನು ಖರೀದಿಸಿದ ಬೆಲೆಯನ್ನು ಆಧರಿಸಿ ಅಲ್ಲ. ಪ್ರಸ್ತುತ, ಚಿನ್ನದ ಸುಂಕಮೌಲ್ಯವು ಪ್ರತಿ 10 ಗ್ರಾಂಗೆ 927 ಡಾಲರ್‌ನಷ್ಟಿದೆ. ಕೇಂದ್ರದ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿಯು (ಸಿಬಿಐಸಿ) ಫೆಬ್ರವರಿ 28ರಂದು, ಈ ಬೆಲೆಯನ್ನು ಹಿಂದಿನ 938 ಡಾಲರ್‌ನಿಂದ ಪ್ರಸಕ್ತ ಮಟ್ಟಕ್ಕೆ ಇಳಿಸಿತು ಎಂಬುದು ಗಮನಾರ್ಹ.

### ಚಿನ್ನದ ಮೇಲಿನ ಆಮದು ಸುಂಕವೆಷ್ಟು?

ಪ್ರಸ್ತುತ, ಚಿನ್ನದ ಮೇಲಿನ ಆಮದು ಸುಂಕವು ಶೇ.6ರಷ್ಟಿದೆ. ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು 2024-25ರ ಕೇಂದ್ರ ಬಜೆಟ್‌ನಲ್ಲಿ ಈ ಸುಂಕವನ್ನು ಶೇ.15ರಿಂದ ಶೇ.6ಕ್ಕೆ ಇಳಿಸಿದರು.

### ಯಾರು, ಎಷ್ಟು ಚಿನ್ನ ತರಬಹುದು?

**ದುಬೈನಲ್ಲಿ ಚಿನ್ನ ಅಥವಾ ಚಿನ್ನಾಭರಣಗಳಿಗೆ ಜಿಎಸ್‌ಟಿ ಇಲ್ಲ; ಆದರೆ ಭಾರತದಲ್ಲಿ ಶೇ.3ರಷ್ಟು ಜಿಎಸ್‌ಟಿ ಕಟ್ಟಬೇಕಾಗುತ್ತದೆ. ಪುರುಷರು ದುಬೈನಿಂದ 20 ಗ್ರಾಂ.ವರೆಗೆ ಸುಂಕರಹಿತವಾಗಿ ಚಿನ್ನ ತರಬಹುದು. ಅದು ಚಿನ್ನದ ಗಟ್ಟಿ ಅಥವಾ ನಾಣ್ಯದ ರೂಪದಲ್ಲಿರಬಹುದು. ಇದೇ ರೀತಿ ಸ್ತ್ರೀಯರು 40 ಗ್ರಾಂ. ವರೆಗೆ ತರಬಹುದು ಮತ್ತು ಅದು ಆಭರಣ, ಗಟ್ಟಿ ಅಥವಾ ನಾಣ್ಯದ ರೂಪದಲ್ಲಿರಬಹುದು. 15 ವರ್ಷದೊಳಗಿನ ಮಕ್ಕಳು ಸಹ 40 ಗ್ರಾಂ.ವರೆಗೆ ಚಿನ್ನವನ್ನು ತರಲು ಸುಂಕ ಕಟ್ಟಬೇಕಿಲ್ಲ.**

### ಚಿನ್ನ ತರಲು ಮಾರ್ಗಸೂಚಿ

ಭಾರತೀಯ ಮೂಲದ ಪ್ರಯಾಣಿಕರು ಅಥವಾ ಕನಿಷ್ಠಪಕ್ಷ 6 ತಿಂಗಳವರೆಗೆ ವಿದೇಶದಲ್ಲಿ ಉಳಿದು ಭಾರತಕ್ಕೆ ಮರಳುತ್ತಿರುವ, ಮಾನ್ಯ ಪಾಸ್‌ಪೋರ್ಟ್ ಹೊಂದಿರುವ ಪ್ರಯಾಣಿಕರು ತಮ್ಮ ಸಾಮಾನು-ಸರಂಜಾಮುಗಳ ಜತೆ ಚಿನ್ನವನ್ನು ತರಲು ಅನುಮತಿಸಲಾಗಿದೆ. ಆದಾಗ್ಯೂ, ಈ ಆರು ತಿಂಗಳ ಅವಧಿಯಲ್ಲಿ ಸದರಿ ಪ್ರಯಾಣಿಕರು ಮಾಡಿದ ಸಂಕ್ಷಿಪ್ತ ಭೇಟಿಗಳು ಒಟ್ಟು 30 ದಿನಗಳನ್ನು ಮೀರದಿದ್ದರೆ ಮತ್ತು ಸಣ್ಣ ಭೇಟಿಗಳ ಅವಧಿಯಲ್ಲಿ ಪ್ರಯಾಣಿಕರು ಈಗಾಗಲೇ ಈ ವಿನಾಯಿತಿಯ ಪ್ರಯೋಜನವನ್ನು ಪಡೆದುಕೊಂಡಿಲ್ಲದಿದ್ದರೆ, ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಇತರ ಎಲ್ಲಾ ಪ್ರಯಾಣಿಕರು ತಮ್ಮ ಸಾಮಾನು-ಸರಂಜಾಮುಗಳಲ್ಲಿ ಚಿನ್ನವನ್ನು ಒಯ್ಯುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

### ಸುಂಕದ ಲೆಕ್ಕಾಚಾರ ಹೇಗೆ?

ಚಿನ್ನದ ಆಮದಾಗಿರುವ ದಿನ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ 24 ಕ್ಯಾರೆಟ್ ಚಿನ್ನದ ಬೆಲೆ ಎಷ್ಟಿದೆ ಎಂಬುದನ್ನು ಆಧರಿಸಿ ಕಸ್ಟಮ್ಸ್ ಸುಂಕವನ್ನು ಲೆಕ್ಕಿಸಲಾಗುತ್ತದೆ. ಕಸ್ಟಮ್ಸ್ ಅಧಿಕಾರಿಗಳು ಚಿನ್ನದ ಮೌಲ್ಯವನ್ನು ನಿರ್ಧರಿಸಿದ ನಂತರ ಅದಕ್ಕೆ ಅನ್ವಯವಾಗುವ ರೀತಿಯಲ್ಲಿ ಶೇಕಡಾವಾರು ಸುಂಕ ವಿಧಿಸುತ್ತಾರೆ. ಆದ್ದರಿಂದ ಕರಾರುವಾಕ್ಕಾದ ಇನ್‌ವಾಯ್ಸ್, ಶುದ್ಧತೆ ಹಾಗೂ ತೂಕದ ಪ್ರಮಾಣವನ್ನು ಸಾದರಪಡಿಸಬೇಕಾದ್ದು ಅಗತ್ಯ. ಸೂಕ್ತ ದಾಖಲೆಗಳಿಲ್ಲದ ಬಂಗಾರವನ್ನು ಮುಟ್ಟುಗೋಲು ಹಾಕಿಕೊಳ್ಳುವುದರ ಜತೆಗೆ

ದಂಡವನ್ನೂ ವಿಧಿಸಬಹುದು.

### ಸುಂಕ ಪಾವತಿಸಿ ತರಬಹುದಾದ ಚಿನ್ನ

ದುಬೈನಿಂದ ಭಾರತಕ್ಕೆ ಪುರುಷರು 20-50 ಗ್ರಾಂ.ವರೆಗೆ ಚಿನ್ನ ತಂದರೆ ಶೇ.3ರಷ್ಟು; 50-100 ಗ್ರಾಂ.ವರೆಗೆ ತಂದರೆ ಶೇ.6ರಷ್ಟು; 100 ಗ್ರಾಂ.ಗಿಂತ ಹೆಚ್ಚು ತಂದರೆ ಶೇ.10ರಷ್ಟು ಸುಂಕ ಕಟ್ಟಬೇಕಾಗುತ್ತದೆ. ಸ್ತ್ರೀಯರು ಮತ್ತು ಮಕ್ಕಳು 40-100 ಗ್ರಾಂ.ವರೆಗೆ ಚಿನ್ನ ತರಲು ಶೇ. 3ರಷ್ಟು; 100-200 ಗ್ರಾಂ.ಗೆ ಶೇ.6ರಷ್ಟು; 200 ಗ್ರಾಂ.ಗಿಂತ ಜಾಸ್ತಿ ತರಲು ಶೇ.10ರಷ್ಟು ಸುಂಕವನ್ನು ಪಾವತಿಸಬೇಕಾಗುತ್ತದೆ.

---

ಈಶಾ ಆದಿಯೋಗಿ ಧ್ಯಾನಕೇಂದ್ರ ಪ್ರಾರಂಭವಾದ ಬಳಿಕ ಚಿಕ್ಕಬಳ್ಳಾಪುರ ಪ್ರವಾಸಿ ತಾಣವಾಗಿ ಬದಲಾಗಿದೆ. ಸ್ಥಳೀಯರಿಗೆ ಉದ್ಯೋಗ ಸಿಕ್ಕಿದೆ. ಹೋಟೆಲ್ ಉದ್ಯಮ ಚೇತರಿಸಿಕೊಂಡಿದೆ. ಸಾರಿಗೆ ಸಂಚಾರದ ಆದಾಯವೂ ದುಪ್ಪಟ್ಟಾಗಿದೆ. ರಸ್ತೆ ಸಂಪರ್ಕ ಸುಧಾರಿಸಿದೆ. ಸ್ಥಳೀಯ ಸಂಸ್ಥೆಗಳ ಹೊಣೆ ಹೆಚ್ಚಿದೆ. ಭೂಮಿಯ ಬೆಲೆ ಗಗನಕ್ಕೇರಿದೆ! ಹೀಗೆ ಆದಿಯೋಗಿಯ ದಿವ್ಯದರ್ಶನ, ಧ್ಯಾನ, ಭಕ್ತಿ, ಮುಕ್ತಿಗೆ ಮಾತ್ರ ಸೀಮಿತವಾಗದೆ ಸ್ಥಳೀಯರ ಬದುಕಿಗೆ ಅದು ಶಕ್ತಿಯನ್ನು ಧಾರೆಯೆರೆದಿದೆ.

# ಆದಿಯೋಗಿ ನೆಲೆ, ಭೂಮಿಗೆ ಚಿನ್ನದ ಬೆಲೆ

● ಮುನಿರಾಜು ಎಂ.ಅರಿಕೆರೆ, ಚಿಕ್ಕಬಳ್ಳಾಪುರ

ತಾಲೂಕಿನ ಆವಲಗುರ್ಕಿ ಪಂಚಾಯಿತಿ ವ್ಯಾಪ್ತಿಯ ಕೌರನಹಳ್ಳಿ-ಲಿಂಗಶೆಟ್ಟಿಪುರ ಮಾರ್ಗದಲ್ಲಿರುವ ಜಾಲಾರಿ ನರಸಿಂಹಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಈಶಾ ಧ್ಯಾನ ಕೇಂದ್ರದಿಂದ ಬೃಹತ್ ಆದಿಯೋಗಿ ಪ್ರತಿಮೆ ಸ್ಥಾಪನೆಗೊಳ್ಳುತ್ತಿದ್ದಂತೆ ಜಿಲ್ಲೆಗೆ ಭೇಟಿ ನೀಡುವ ರಾಜ್ಯದ, ಹೊರ ರಾಜ್ಯದ ಪ್ರವಾಸಿಗರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಹೋಟೆಲ್ ಉದ್ಯಮಗಳು ಬೆಳೆದಿವೆ, ಸಾರಿಗೆ ಸಂಚಾರದ ಆದಾಯ ದುಪ್ಪಟ್ಟಾಗಿದೆ. ಆ ಬೆನ್ನಲ್ಲೇ ಇಲ್ಲಿನ ಭೂಮಿಗೆ ಚಿನ್ನದ ಬೆಲೆ ಬಂದಿದೆ. ರಿಯಲ್ ಎಸ್ಟೇಟ್ ಉದ್ಯಮ ಏರುಗತಿಯಲ್ಲಿದೆ. ಭೂಮಿ ಮೇಲೆ ಹಣಹೂಡುವವರ ಸಂಖ್ಯೆಗೇನೂ ಕಡಿಮೆ ಇಲ್ಲ.

- **ಈಶಾ ಧ್ಯಾನ ಕೇಂದ್ರಕ್ಕೆ ಭೇಟಿ ನೀಡುವವರ ಸಂಖ್ಯೆಯಲ್ಲಿ ಹೆಚ್ಚಳ**
- **ಸ್ಥಳೀಯರಿಗೆ ಉದ್ಯೋಗಾವಕಾಶ, ವ್ಯಾಪಾರಿಗಳಿಗೆ ಭರ್ಜರಿ ವ್ಯಾಪಾರ**

ಸದ್ಗುರು ಜಗ್ಗಿ ವಾಸುದೇವ್ ಅವರ ಪರಿಕಲ್ಪನೆಯಲ್ಲಿ, 112 ಅಡಿ ಎತ್ತರ, 147 ಅಡಿ ಉದ್ದ, 82 ಅಡಿ ಅಗಲದ ಬೃಹತ್ ಶಿಲಾಲೋಹದ ಶಿವನ ಪ್ರತಿಮೆ ಮತ್ತು ನಾಗಮಂಟಪವುಳ್ಳ ಧ್ಯಾನಕೇಂದ್ರವನ್ನು ಅಂದು ಸಚಿವರಾ ಗಿದ್ದ ಡಾ.ಕೆ.ಸುಧಾಕರ್ ಅಪೇಕ್ಷೆ ಮೇರೆಗೆ, 2022ರಲ್ಲಿ ಆಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಅಮೃತಹಸ್ತದಿಂದ ಉದ್ಘಾಟಿಸಿದ್ದರು. ಅಂದಿನಿಂದ ಇಂದಿನವರೆಗೆ ಹತ್ತು ಹಲವು ವಿದ್ಯಮಾನಗಳಿಗೆ ಸಾಕ್ಷಿಯಾಗಿರುವ ಈಶಾ ಸನ್ನಿಧಿಯು ಕೇವಲ ಭಕ್ತಿ, ಪೂಜೆ, ಧಾರ್ಮಿಕ ಆಚರಣೆಗೆ ಮಾತ್ರ ಸೀಮಿತವಾಗಿಲ್ಲ. ಬದಲಿಗೆ ವಿಶ್ವವಿಖ್ಯಾತ ಎಂಜಿನಿಯರ್ ವಿಶ್ವೇಶ್ವರಯ್ಯ ಅವರ ನಂತರ ಚಿಕ್ಕಬಳ್ಳಾಪುರ ಎಂಬ ಬಯಲುಸೀಮೆಗೆ, ಪಂಚಗಿರಿಗಳ ನಾಡಿಗೆ ಪ್ರವಾಸಿ ಕ್ಷೇತ್ರವಾಗಿ ಜಾಗತಿಕ ಮನ್ನಣೆ ತಂದುಕೊಟ್ಟ ಕೀರ್ತಿಗೆ ಅದು ಪಾತ್ರವಾಗಿದೆ.

ಬೆಟ್ಟಸಾಲುಗಳ ರಮ್ಯ ತಾಣದಲ್ಲಿರುವ ಆದಿಯೋಗಿ ಶಿವನ ಪ್ರತಿಮೆ ಜತೆಗೆ ನಂದಿಮೂರ್ತಿ, ಮಹಾಶೂಲದ ಜತೆಗೆ ಶಕ್ತಿಶಾಲಿ ನಾಗಮಂಟಪದ ದರ್ಶನ ಮಾಡಬಹುದಾಗಿದೆ. ನಿತ್ಯ ಸಂಜೆ ವೇಳೆ ಇಲ್ಲಿ ನಡೆಯುವ ಲೇಸರ್ ಶೋನ ಕೌತುಕ ನೋಡಗರನ್ನು ಒಮ್ಮಿಂದೊಮ್ಮೆಲೇ ಲೌಕಿಕದಿಂದ ಅಲೌಕಿಕದ ಕಡೆ ಕರೆದೊಯ್ಯುತ್ತದೆ.

ಪ್ರತಿವರ್ಷ ಮಕರ ಸಂಕ್ರಾಂತಿ ದಿನ ಆದಿಯೋಗಿ ಸನ್ನಿಧಿಯಲ್ಲಿ ನಡೆಯುವ ಆದಿಯೋಗಿಯ ದಿವ್ಯದರ್ಶನ, ಸುಗ್ಗಿ ಹಬ್ಬದ ಆಚರಣೆ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ಲಕ್ಷಾಂತರ ಮಂದಿ ಕಾತರದಿಂದ ಕಾಯತ್ತಾರೆ. ಸಂಜೆ 6ರಿಂದ ರಾತ್ರಿ 8ರತನಕ ನಡೆಯುವ ವೈವಿಧ್ಯಮಯ ಕಾರ್ಯಕ್ರಮಗಳಲ್ಲಿ ಸದ್ಗುರು ಜಗ್ಗಿ ವಾಸುದೇವ್ ಉಪಸ್ಥಿತರಿರುವುದು ವಿಶೇಷ. ಇವರನ್ನು ಕಾಣಲು ಮಂತ್ರಿಗಳು, ಸಿನಿತಾರೆಯರು, ನ್ಯಾಯಾಧೀಶರು ಸೇರಿ ಅತಿ ಗಣ್ಯರು ಅಪಾರ ಸಂಖ್ಯೆಯ ಭಕ್ತರು ಆಗಮಿಸುತ್ತಾರೆ.

### ಹೋಟೆಲ್ ಉದ್ಯಮ ಚೇತರಿಕೆ

**ಈಶಾ ಪ್ರಾರಂಭವಾದ ನಂತರದಲ್ಲಿ ಚಿಕ್ಕಬಳ್ಳಾಪುರ ನಗರದಂಚಿನ ರಾಷ್ಟ್ರೀಯ ಹೆದ್ದಾರಿಯುದ್ದಕ್ಕೂ ಹೋಟೆಲ್ ಉದ್ಯಮ ಕ್ಷಿಪ್ರವಾಗಿ ಬೆಳವಣಿಗೆಯಾಗುತ್ತಿದೆ. ನಗರದ ಎಲ್ಲ ಹೋಟೆಲ್‌ಗಳಲ್ಲಿ ವಾರಾಂತ್ಯದಲ್ಲಿ ಭರ್ಜರಿ ವ್ಯಾಪಾರ ನಡೆಯುತ್ತಿದೆ. ಇದು ಸಾವಿರಾರು ಮಂದಿಯ ಬದುಕಿಗೆ ಆಸರೆಯಾಗಿದೆ.**

### ಸಾರಿಗೆ ನಿಗಮಕ್ಕೆ ಲಾಭ

**ಚಿಕ್ಕಬಳ್ಳಾಪುರದಲ್ಲಿ ಈಶಾ ಧ್ಯಾನಕೇಂದ್ರ ತಲೆಯೆತ್ತಿದ ಮೇಲೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ನಿಗಮದ ಬಸ್‌ಗಳ ಓಡಾಟವೂ ನಿರಂತರವಾಗಿದೆ. ಬಿಎಂಟಿಸಿ ಬೆಂಗಳೂರು ಘಟಕ ವಾರಾಂತ್ಯದ ಟ್ರಿಪ್‌ಗಳನ್ನು ಆಯೋಜಿಸಿದೆ.**

**ಈಶಾ ರೈತ ಕೇಂದ್ರ:** ಈಶಾ ಫೌಂಡೇಷನ್‌ನಿಂದಲೇ ಚಿಕ್ಕಬಳ್ಳಾಪುರವೂ ಸೇರಿದಂತೆ ದೇಶದ ನಾನಾ ಜಿಲ್ಲೆಗಳಲ್ಲಿ ರೈತ ಉತ್ಪಾದಕ ಕೇಂದ್ರಗಳನ್ನು ಪ್ರಾರಂಭ ಮಾಡಲಾಗಿದೆ. ಆ ಮೂಲಕ ರೈತರಿಗೆ ಮಾಹಿತಿ, ಕೃಷಿ ಸಂಬಂಧಿ ಸಲಹೆ, ಮಾರ್ಗ ದರ್ಶನ ನೀಡಲಾಗುತ್ತಿದ್ದು, ಸುಮಾರು ಹತ್ತು ಸಾವಿರ ರೈತರಿಗೆ ಮಾರ್ಗದರ್ಶನ ನೀಡುತ್ತಿರುವುದು ಸದ್ಗುರುಗಳ ಜನಮುಖಿ ಆಶಯಕ್ಕೆ ಸಾಕ್ಷಿ.

**ಗ್ರಾಮೋತ್ಸವದ ವಿಶೇಷ:** ಸದ್ಗುರುಗಳು ಚಿಕ್ಕಬಳ್ಳಾಪುರ ಈಶಾ ಕೇಂದ್ರವೂ ಸೇರಿ ದಕ್ಷಿಣ ಭಾರತದ 5 ರಾಜ್ಯಗಳಲ್ಲಿ ಗ್ರಾಮೋತ್ಸವ ನಡೆಸುತ್ತಾರೆ. ಗ್ರಾಮೀಣ ಪ್ರದೇಶದ ಜನರು ಮದ್ಯವ್ಯಸನಿಗಳಾಗುತ್ತಿದ್ದಾರೆ. ಬೆಳಗಿನಿಂದ ಕೃಷಿ ಕಾಯಕ ಮಾಡಿ ಸಂಜೆ ವೇಳೆಗೆ ಮದ್ಯ ಸೇವನೆ ಮಾಡಿ ಮಲಗಿಕೊಳ್ಳುತ್ತಿದ್ದಾರೆ. ಇದನ್ನು ತಪ್ಪಿಸಿ ಅವರ ಜೀವನದಲ್ಲಿ ಉತ್ಸಾಹ, ಚೈತನ್ಯ ತುಂಬಲು ಗ್ರಾಮೋತ್ಸವದ ಹೆಸರಿನಲ್ಲಿ ಕ್ರೀಡಾಕೂಟ ನಡೆಸಿ ವ್ಯಸನದಿಂದ ದೂರವಾಗುವಂತೆ ಮಾಡುತ್ತಿದ್ದಾರೆ. ವಿಜೇತ ಕ್ರೀಡಾಪಟುಗಳನ್ನು, ಪ್ರಗತಿಪರ ರೈತರನ್ನು ಸನ್ಮಾನಿಸುವ ಕೆಲಸವೂ ಸಾಗಿದೆ.

**ಶಿವರಾತ್ರಿ, ಜಾಗರಣೆ:** ಈಶಾ ಕೇಂದ್ರ ಪ್ರತಿವರ್ಷ ಮಹಾಶಿವರಾತ್ರಿ ಜಾಗರಣೆಗೆ ವಿಶೇಷ ಒತ್ತು ನೀಡಿದೆ. ತಮಿಳುನಾಡಿನ ಕೊಯಮತ್ತೂರಿನಲ್ಲಿರುವ ಆದಿಯೋಗಿ ಕೇಂದ್ರದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳನ್ನು ಚಿಕ್ಕಬಳ್ಳಾಪುರದ ಆದಿಯೋಗಿ ಸನ್ನಿಧಿಯಲ್ಲಿ ಬೃಹತ್ ಪರದೆಗಳ ಮೂಲಕ ಪ್ರದರ್ಶನ ಮಾಡಿಸುತ್ತಾರೆ. ಸದ್ಗುರುಗಳು ಅಲ್ಲಿ ನಡೆಸಿಕೊಡುವ ಧಾರ್ಮಿಕ ಆಚರಣೆಗಳಿಂದ ವಂಚಿತವಾಗಬಾರದು ಎಂಬ ಸದುದ್ದೇಶದಿಂದ ಈ ವ್ಯವಸ್ಥೆ ಮಾಡಲಾಗಿದೆ. ಇಲ್ಲಿಗೆ ಆ ದಿನ ಸಾವಿರಾರು ಮಂದಿ ಭೇಟಿ ನೀಡುತ್ತಾರೆ.

**ಪ್ರತಿರೋಧ ಸ್ಥಗಿತ:** ಈಶಾ ಕೇಂದ್ರವು ಇಲ್ಲಿ ಪ್ರಾರಂಭವಾಗುವಾಗ ಸ್ಥಳೀಯರಿಂದ ಎದುರಾದ ಪ್ರತಿರೋಧ ಈಗ ಇಲ್ಲ. ಇಲ್ಲಿನ ಜನರು ಧ್ಯಾನ ಕೇಂದ್ರದ ಸಮಾಜಮುಖಿ ಕಾರ್ಯಕ್ರಮಗಳನ್ನು ಕಣ್ಣಾರೆ ಕಾಣುತ್ತಾ ತಮ್ಮೊಳಗಿದ್ದ ಮುನಿಸನ್ನು ಮಂಜಿನಂತೆ ಕರಗಿಸಿಬಿಟ್ಟಿದ್ದಾರೆ.

---

# ಸಹಜ ಪ್ರಸವ ಮಾಯ, ಶಸ್ತ್ರಚಿಕಿತ್ಸೆ ಅಯೋಮಯ

ವರ್ಷದಿಂದ ವರ್ಷಕ್ಕೆ ತುಮಕೂರು ಜಿಲ್ಲೆಯ ಖಾಸಗಿ ಆಸ್ಪತ್ರೆಗಳಲ್ಲಿ ಶಸ್ತ್ರ ಚಿಕಿತ್ಸೆ ಹೆರಿಗೆ ಅಬ್ಬರ ಹೆಚ್ಚಳವಾಗಿದ್ದು, ಸರಕಾರಿ ಆಸ್ಪತ್ರೆಗಳಲ್ಲಿಯೂ ಸಹಜ ಪ್ರಸವ ಪ್ರಮಾಣ ತಗ್ಗಿದೆ. ಸಹಜ ಹೆರಿಗೆಯ ಲಕ್ಷಣಗಳಿದ್ದರೂ ಆತಂಕ ಮೂಡಿಸಿ ಸಿಸೇರಿಯನ್ ಹೆರಿಗೆಗೆ ಪ್ರಾಮುಖ್ಯ ನೀಡುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ. ಆ ಮೂಲಕ ಆಸ್ಪತ್ರೆಗಳು ಹಣ ಮಾಡುತ್ತಿವೆ. ಇದಕ್ಕೆ ಕಡಿವಾಣ ಹಾಕಲು ಕಾನೂನು ಜಾರಿಗೊಳಿಸುವ ಅವಶ್ಯಕತೆ ಇದೆ.

● ರಂಗನಾಥ ಕೆ.ಹೊನ್ನಮರಡಿ, ತುಮಕೂರು

ಕಲ್ಪತರು ನಾಡಿನ ಖಾಸಗಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ಹೆರಿಗೆ ಪ್ರಮಾಣ ಹೆಚ್ಚಾಗುತ್ತಿ ರುವುದು ಆತಂಕ ಮೂಡಿಸಿದೆ. ಜಿಲ್ಲೆಯಲ್ಲಿ ವರ್ಷದಿಂದ ವರ್ಷಕ್ಕೆ ಸಹಜ ಪ್ರಸವ ಪ್ರಕ್ರಿಯೆ ಮಾಯವಾಗುತ್ತಿದ್ದು , ಸಿಸೇರಿಯನ್ ಮಾಯೆ ಎಲ್ಲೆಡೆ ಆವರಿಸುವ ಮೂಲಕ ರಾಜ್ಯದಲ್ಲಿ ತುಮಕೂರು ಜಿಲ್ಲೆ ಈ ಬಾಬತ್ತಿನಲ್ಲಿ ಮುಂಚೂಣಿಯಲ್ಲಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಬಹುತೇಕ ಸಿಸೇರಿಯನ್ ಹೆರಿಗೆಗೆ ಆದ್ಯತೆ ನೀಡಲಾಗುತ್ತದೆ. ಸಹಜ ಹೆರಿಗೆಯ ಲಕ್ಷಣಗಳಿದ್ದರೂ ಗರ್ಭಿಣಿಯರಲ್ಲಿ ಆತಂಕ ಮೂಡಿಸಿ, ಸಿಸೇರಿಯನ್‌ಗೆ ಪ್ರೋತ್ಸಾಹಿಸಲಾಗುತ್ತದೆ. ಸಹಜ ಹೆರಿಗೆಗೆ ಹೋಲಿಸಿದರೆ ಸಿಸೇರಿಯನ್ ತಾಯಿ, ಮಗುವಿನ ಆರೋಗ್ಯ ಕಾಪಾಡಲು ಉತ್ತಮ ಎನಿಸಿದರೂ ಬಡವರ ಪಾಲಿಗೆ ಬಿಸಿ ತುಪ್ಪವಾಗಿದೆ. ಕೆಲವು ಖಾಸಗಿ ಆಸ್ಪತ್ರೆಗಳು ಸಿಸೇರಿಯನ್ ಹೆರಿಗೆ ನೆಪದಲ್ಲಿ ಹಣ ಮಾಡುವ ದಂಧೆ ಮಾಡುತ್ತಿವೆ. ಸರಕಾರಿ ಆಸ್ಪತ್ರೆಗಳಲ್ಲಿಯೂ ಸಹಜ ಹೆರಿಗೆಗೆ ಆದ್ಯತೆ ನೀಡದೆ ಸಿಸೇರಿಯನ್ ಹೆರಿಗೆಗೆ ಪ್ರಾಮುಖ್ಯ ನೀಡುವ ಮೂಲಕ ಹೆರಿಗೆ ಪ್ರಕ್ರಿಯೆಯನ್ನು ಸುಲಭ ಮಾಡಿಕೊಂಡಿದ್ದಾರೆ. ಸರಕಾರಿ ಆಸ್ಪತ್ರೆಗಳಲ್ಲಿ ಸಹಜ ಹೆರಿಗೆ ಪ್ರಕ್ರಿಯೆ ಪ್ರಮಾಣ ಅಧಿಕವಾಗಿದ್ದರೂ ಹೆರಿಗೆ ಸಂದರ್ಭದಲ್ಲಿ ಕೆಲವು ವೈದ್ಯರುಗಳು ಗರ್ಭಿಣಿಯರಲ್ಲಿ ಆತಂಕ ಮೂಡಿಸಿ ಸಿಸೇರಿಯನ್ ಹೆರಿಗೆಗೆ ಖಾಸಗಿ ಆಸ್ಪತ್ರೆಗಳಿಗೆ ಶಿಫಾರಸು ಮಾಡುವ ಪ್ರಕ್ರಿಯೆ ಜಿಲ್ಲೆಯಲ್ಲಿ ಅಧಿಕವಾಗಿದ್ದು, ಸರಕಾರಿ ಆಸ್ಪತ್ರೆಗಳಲ್ಲಿ ಹೆರಿಗೆ ಪ್ರಮಾಣ ಕಡಿಮೆಯಾಗುತ್ತಿದೆ. ಆಸ್ಪತ್ರೆಗಳು ಸಹಜ ಪ್ರಸವ ಪ್ರಕ್ರಿಯೆಗೆ ಮೊದಲ ಆದ್ಯತೆ ನೀಡಬೇಕು. ತಾಯಿ, ಮಗುವಿನ ಆರೋಗ್ಯಕ್ಕೆ ತೊಂದರೆ ಇದ್ದಾಗ ಮಾತ್ರ ಸಿಸೇರಿಯನ್ ಹೆರಿಗೆ ಪ್ರಕ್ರಿಯೆ ಕೈಗೊಳ್ಳಬೇಕು. ಆದರೆ ಸಹಜ ಹೆರಿಗೆಯ ಲಕ್ಷಣಗಳಿ ದ್ದರೂ ಆತಂಕ ಮೂಡಿಸಿ ಸಿಸೇರಿಯನ್ ಹೆರಿಗೆಗೆ ಪ್ರಾಮುಖ್ಯ ನೀಡುತ್ತಿರುವುದು ದುರದೃಷ್ಟಕರ.

**ಸಹಜ ಹೆರಿಗೆ ಸಾಧ್ಯವಾಗದಿದ್ದ ಸಂದರ್ಭದಲ್ಲಿ ಮಾತ್ರ ಸಿಸೇರಿಯನ್ ಹೆರಿಗೆ ಮಾಡಬೇಕು. ಹೆರಿಗೆ ಮಾಡುವ ವೈದ್ಯರು ಹಾಗೂ ಹೆರಿಗೆಗೆ ಸಹಕರಿಸುವ ಶುಶ್ರೂಷಕರಿಗೆ ನೈಪುಣ್ಯತಾ ತರಬೇತಿ ನೀಡಬೇಕು. ವೈದ್ಯ ವೃತ್ತಿಯನ್ನೇ ಆಯ್ಕೆ ಮಾಡಿಕೊಂಡು ಸೇವೆ ಸಲ್ಲಿಸುತ್ತಿರುವ ವೈದ್ಯರು ಮಾನವೀಯತೆಯಿಂದ ರೋಗಿಗಳಿಗೆ ಚಿಕಿತ್ಸೆ ನೀಡಬೇಕು.**

-**ಶುಭ ಕಲ್ಯಾಣ್** ಜಿಲ್ಲಾಧಿಕಾರಿ, ತುಮಕೂರು

### ಕಠಿಣ ಕಾನೂನು ಜಾರಿಯಾಗಲಿ

**ಆಸ್ಪತ್ರೆಗಳು ಸಹಜ ಹೆರಿಗೆಗೆ ಆದ್ಯತೆ ನೀಡಬೇಕು. ಸ್ವಯಂ ಪ್ರೇರಿತವಾಗಿ ಬಯಸುವ ಗರ್ಭಿಣಿಯರಿಗೆ ಸಿಸೇರಿಯನ್ ಹೆರಿಗೆ ಮಾಡಿಸುವುದರಲ್ಲಿ ತಪ್ಪಿಲ್ಲ. ತಾಯಿ ಮಗುವಿನ ಆರೋಗ್ಯದ ಕುಂಟುನೆಪದಲ್ಲಿ ಗರ್ಭಿಣಿಯರಿಗೆ ಆತಂಕ ಮೂಡಿಸಿ ಸಹಜ ಹೆರಿಗೆಯ ಲಕ್ಷಣಗಳಿದ್ದರೂ ಸಿಸೇರಿಯನ್ ಹೆರಿಗೆ ನೆಪದಲ್ಲಿ ಸರಕಾರಿ, ಖಾಸಗಿ ಆಸ್ಪತ್ರೆಗಳು ಹಣ ಮಾಡುವ ಮಾರ್ಗ ಹುಡುಕಿಕೊಂಡಿವೆ. ಇದಕ್ಕೆ ಕಡಿವಾಣ ಹಾಕಲು ಕಾನೂನು ಜಾರಿಗೊಳಿಸುವ ಅವಶ್ಯಕತೆ ಇದೆ.**

**ಜಿಲ್ಲೆಯಲ್ಲಿ ಸಹಜ ಹೆರಿಗೆಗೆ ಆದ್ಯತೆ ನೀಡಲು ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಕ್ರಮ ಕೈಗೊಳ್ಳಲಾಗಿದೆ. ಸಿಸೇರಿಯನ್ ಹೆರಿಗೆ ಕೈಗೊಳ್ಳುವ ವೈದ್ಯರಿಗೆ ನೋಟಿಸ್ ಮೂಲಕ ಎಚ್ಚರಿಕೆ ನೀಡಲಾಗಿದೆ. ಡಿಸಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿಯೂ ಸಿಸೇರಿಯನ್ ಹೆರಿಗೆಗೆ ಆದ್ಯತೆ ನೀಡದಂತೆ ಸೂಚಿಸಲಾಗಿದೆ. ಜಿಲ್ಲೆಯ ಸರಕಾರಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಹೆರಿಗೆ ಪ್ರಮಾಣ ಕಡಿಮೆಯಾಗುತ್ತಿದ್ದು, ಖಾಸಗಿ ಆಸ್ಪತ್ರೆಗಳಲ್ಲಿ ಅಧಿಕವಾಗುತ್ತಿದೆ.**

- **ಡಾ.ಬಿ.ಎಂ.ಚಂದ್ರಶೇಖರ್** ಡಿಎಚ್‌ಒ, ತುಮಕೂರು

### ಖಾಸಗಿ ಆಸ್ಪತ್ರೆಗಳ ಹೆರಿಗೆ

(ಏಪ್ರಿಲ್ 2024ರಿಂದ ಜನವರಿ 2025ರ ವರೆಗೆ)

| ತಾಲೂಕು | ಒಟ್ಟು ಹೆರಿಗೆ | ಶಸ್ತ್ರ ಚಿಕಿತ್ಸೆ ಹೆರಿಗೆ |
|---|---|---|
| ಚಿ.ನಾ.ಹಳ್ಳಿ | 54 | 31 |
| ಗುಬ್ಬಿ | 603 | 451 |
| ಕೊರಟಗೆರೆ | 94 | 72 |
| ಕುಣಿಗಲ್ | 424 | 240 |
| ಮಧುಗಿರಿ | 716 | 617 |
| ಪಾವಗಡ | 1,663 | 1,353 |
| ಶಿರಾ | 841 | 714 |
| ತಿಪಟೂರು | 1,525 | 1,169 |
| ತುಮಕೂರು | 5,852 | 4,763 |
| ತುರುವೇಕೆರೆ | 107 | 100 |
| ಒಟ್ಟು | 11,879 | 9,510 |

### ಸರಕಾರಿ ಆಸ್ಪತ್ರೆಗಳ ಹೆರಿಗೆ

(ಏಪ್ರಿಲ್ 2024ರಿಂದ ಜನವರಿ 2025ರ ವರೆಗೆ)

| ತಾಲೂಕು | ಒಟ್ಟು ಹೆರಿಗೆ | ಸಿಸೇರಿಯನ್ |
|---|---|---|
| ಚಿ.ನಾ.ಹಳ್ಳಿ | 170 | 89 |
| ಗುಬ್ಬಿ | 661 | 381 |
| ಕೊರಟಗೆರೆ | 599 | 385 |
| ಕುಣಿಗಲ್ | 721 | 481 |
| ಮಧುಗಿರಿ | 159 | 93 |
| ಪಾವಗಡ | 993 | 524 |
| ಶಿರಾ | 3,015 | 1,585 |
| ತಿಪಟೂರು | 1,683 | 989 |
| ತುಮಕೂರು | 3,424 | 2,195 |
| ತುರುವೇಕೆರೆ | 61 | 30 |
| ಒಟ್ಟು | 11,486 | 6,752 |

## ಸಮಾಚಾರ ಸಣ್ಣದಲ್ಲ

### ಪಾಕ್ ವಿರುದ್ಧ ಸರಣಿ: ಬ್ರೇಸ್‌ವೆಲ್ ನಾಯಕ

**ದೆಹಲಿ:** ಭಾರತದ ವಿರುದ್ಧ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ಫೈನಲ್‌ನಲ್ಲಿ ಸೋತ ಬೇಸರದಲ್ಲಿರುವ ನ್ಯೂಜಿಲೆಂಡ್ ತಂಡ,ಪಾಕಿಸ್ತಾನ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿಯನ್ನು ಆಡಲಿದ್ದು, ಈ ಸರಣಿಗಾಗಿ 15 ಸದಸ್ಯರ ನ್ಯೂಜಿಲೆಂಡ್ ತಂಡವನ್ನು ಪ್ರಕಟಿಸಲಾಗಿದೆ. ಆಲ್‌ರೌಂಡರ್ ಮೈಕಲ್ ಬ್ರೇಸ್‌ವೆಲ್ ಅವರಿಗೆ ನಾಯಕತ್ವದ ಹೊಣೆಯನ್ನು ನೀಡಲಾಗಿದೆ. ಕಳೆದ ವರ್ಷ ಪಾಕಿಸ್ತಾನ ಪ್ರವಾಸದ ಟಿ20 ಸರಣಿಯಲ್ಲಿ ಕಿವೀಸ್ ತಂಡವನ್ನು ಮೈಕಲ್ ಬ್ರೇಸ್‌ವೆಲ್ ಅವರೇ ಮುನ್ನಡೆಸಿದ್ದರು. ಆದರೆ ಆ ಸರಣಿಯಲ್ಲಿ ಉಭಯ ತಂಡಗಳು 2-2 ಅಂತರದಲ್ಲಿ ಸಮಬಲ ಮಾಡಿಕೊಂಡಿದ್ದವು. ಮಿಚೆಲ್ ಸ್ಯಾಂಟ್ನರ್ ಅವರು ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಗೆ ಸಜ್ಜಾಗುತ್ತಿರುವ ಹಿನ್ನೆಲೆಯಲ್ಲಿ ಟಿ20 ಸರಣಿಗೆ ಅಲಭ್ಯರಾಗಿದ್ದಾರೆ. ಈ ಕಾರಣದಿಂದಾಗಿ ಮೈಕಲ್ ಬ್ರೇಸ್‌ವೆಲ್‌ಗೆ ನಾಯಕತ್ವವನ್ನು ನೀಡಲಾಗಿದೆ. ಬ್ರೇಸ್‌ವೆಲ್ ಅವರು ಇತ್ತೀಚೆಗೆ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ರನ್ನರ್ ಅಪ್ ಆಗಿ ಕಿವೀಸ್ ಪರ ಆಡಿದ್ದರು. ಬಾಂಗ್ಲಾದೇಶ ವಿರುದ್ಧದ ಪಂದ್ಯದಲ್ಲಿ 4 ವಿಕೆಟ್ ಹಾಗೂ ಭಾರತದ ವಿರುದ್ಧ ಫೈನಲ್ ಪಂದ್ಯದಲ್ಲಿ ಅರ್ಧಶತಕ ಬಾರಿಸಿದ್ದರು.

### ಸ್ನೂಕರ್ ಕ್ಲಾಸಿಕ್ ಪಂಕಜ್‌ಗೆ ಪ್ರಶಸ್ತಿ

**ಮುಂಬೈ:** ಹಿನ್ನಡೆಯಿಂದ ಚೇತರಿಸಿಕೊಂಡ ಅನುಭವಿ ಭಾರತೀಯ ಆಟಗಾರ ಪಂಕಜ್ ಅಡ್ವಾಣಿ ಇಲ್ಲಿ ನಡೆಯುತ್ತಿರುವ ಸಿಸಿಐ ಸ್ನೂಕರ್ ಕ್ಲಾಸಿಕ್ ಸ್ನೂಕರ್ ಟೂರ್ನಿಯಲ್ಲಿ 8-6 ಫ್ರೇಮ್‌ಗಳಿಂದ ಈಶ್‌ಪ್ರೀತ್ ಛಡ್ಡಾ ಅವರನ್ನು ಸೋಲಿಸಿ ಪ್ರಶಸ್ತಿಗಳ ಹ್ಯಾಟ್ರಿಕ್ ಪೂರೈಸಿದರು. ಪ್ರಸ್ತುತ ರಾಷ್ಟ್ರೀಯ ಹಾಗೂ ಏಷ್ಯನ್ ಸ್ನೂಕರ್ ಆಗಿರುವ ಪಂಕಜ್ ಫೈನಲ್‌ನಲ್ಲಿ ಒಂದು ಹಂತದಲ್ಲಿ 1-4ರಿಂದ ಹಿಂದಿದ್ದರು. ಆದರೆ ಅಂತಿಮವಾಗಿ ಈಶ್‌ಪ್ರೀತ್ ಅವರನ್ನು ಸೋಲಿಸಿದರು.

### ಕುಶ್ ಮೈನಿ: ಮೀಸಲು ಚಾಲಕ

**ದೆಹಲಿ:** ಭಾರತದ ಯುವ ಚಾಲಕ ಕುಶ್ ಮೈನಿ ಅವರು ಫಾರ್ಮುಲಾ-1 ಟೆಸ್ಟ್ ಹಾಗೂ ಮೀಸಲು ಚಾಲಕರಾಗಿ ಆಯ್ಕೆಯಾಗಿದ್ದಾರೆ. ಈ ಬಗ್ಗೆ ಮಂಗಳವಾರ ಘೋಷಣೆ ಹೊರಬಿದ್ದಿದೆ. ಕುಶ್ ಮೈನಿ ಎಫ್1ಗೆ ಸೇರಿದ ಮೂರನೇ ಭಾರತೀಯ ಚಾಲಕರಾಗಿದ್ದಾರೆ. ನರೇನ್ ಕಾರ್ತಿಕೇಯನ್ ಮತ್ತು ಕರುಣ್ ಚಂದೋಕ್ ಅವರ ಸಾಲಿಗೆ ಈಗ ಕುಶ್ ಮೈನಿ ಸೇರ್ಪಡೆಯಾಗಿದ್ದಾರೆ.

ಸದ್ದಿಲ್ಲದೆ ಸ್ವದೇಶಕ್ಕೆ ಆಗಮಿಸಿದ ಚಾಂಪಿಯನ್ಸ್ ಟ್ರೋಫಿ ವಿಜೇತ ಭಾರತ ತಂಡ

# ಆಟಗಾರರ ಚಿತ್ತ ಐಪಿಎಲ್‌ನತ್ತ

**ಮುಂಬಯಿ:** ಹನ್ನೆರಡು ವರ್ಷಗಳ ಬಳಿಕ ಚಾಂಪಿಯನ್ಸ್ ಟ್ರೋಫಿ ಗೆದ್ದು ಐತಿಹಾಸಿಕ ಸಾಧನೆ ಮಾಡಿದ್ದ ಟೀಮ್ ಇಂಡಿಯಾ ಆಟಗಾರರು ತವರಿಗೆ ಆಗಮಿಸಿದ್ದಾರೆ. ಈ ಬಾರಿ ಬಿಸಿಸಿಐ 'ವಿಜಯೋತ್ಸವ ಮೆರವಣಿಗೆ' ನಡೆಸದಿರಲು ನಿರ್ಧರಿಸಿದ್ದು, ಐಪಿಎಲ್ ಟೂರ್ನಿ ಪ್ರಾರಂಭವಾಗುವ ನಿಟ್ಟಿನಲ್ಲಿ ವಿಜಯೋತ್ಸವ ಕಾರ್ಯಕ್ರಮವನ್ನು ಕೈಬಿಡಲಾಗಿದೆ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಈಗಾಗಲೇ ಟೀಮ್ ಇಂಡಿಯಾದ ಬಹುತೇಕ ಆಟಗಾರರು, ಕೋಚ್‌ಗಳು ಸ್ವದೇಶಕ್ಕೆ ಆಗಮಿಸಿದ್ದಾರೆ. ರೋಹಿತ್ ಶರ್ಮಾ, ಹಾರ್ದಿಕ್ ಪಾಂಡ್ಯ, ವಿರಾಟ್ ಕೊಹ್ಲಿ ಮುಂಬೈಗೆ ಆಗಮಿಸಿದ್ದರೆ, ರವೀಂದ್ರ ಜಡೇಜಾ ಚೆನ್ನೈಗೆ ಬಂದಿಳಿದಿದ್ದಾರೆ. ಉಳಿದ ಆಟಗಾರರು ತಮ್ಮ ತವರಿಗೆ ಮರಳಿದ್ದಾರೆ. ಇನ್ನೆರಡು ದಿನಗಳಲ್ಲಿ ಇವರೆಲ್ಲರೂ ಐಪಿಎಲ್ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ ಎನ್ನಲಾಗಿದೆ.

ಈ ಕುರಿತು ಮಾತನಾಡಿರುವ ಬಿಸಿಸಿಐ ಹಿರಿಯ ಅಧಿಕಾರಿಯೊಬ್ಬರು, ಮಾರ್ಚ್ 22ರಿಂದ ಐಪಿಎಲ್ ಆರಂಭವಾಗಲಿದ್ದು, ಆಟಗಾರರು ತಾವು ಪ್ರತಿನಿಧಿಸುವ ಫ್ರಾಂಚೈಸಿ ಕ್ಯಾಂಪ್‌ಗಳನ್ನು ತುರ್ತಾಗಿ ಕೂಡಿಕೊಳ್ಳುವ ಅನಿವಾರ್ಯತೆ ಇರುವುದರಿಂದ ಅದಕ್ಕಿಂತ ಮುನ್ನ ಆಟಗಾರರಿಗೆ ವಿಶ್ರಾಂತಿಯ ಅಗತ್ಯವಿದ್ದು, ಆ ಕಾರಣಕ್ಕಾಗಿ ಈ ಸಲದ ಚಾಂಪಿಯನ್ಸ್ ಟ್ರೋಫಿ ವಿಜೇತ ತಂಡದ 'ಓಪನ್ ಬಸ್ ರ‍್ಯಾಲಿ' ಮತ್ತು 'ಸನ್ಮಾನ ಸಮಾರಂಭ'ವನ್ನು ಹಮ್ಮಿಕೊಂಡಿಲ್ಲ ಎಂದಿದ್ದಾರೆ.

ದುಬೈನಲ್ಲಿ ಭಾನುವಾರ ನಡೆದಿದ್ದ ಫೈನಲ್ ಪಂದ್ಯದಲ್ಲಿ ಭಾರತ ತಂಡವು ನ್ಯೂಜಿಲೆಂಡ್ ವಿರುದ್ಧ 4 ವಿಕೆಟ್‌ಗಳ ಗೆಲುವು ಸಾಧಿಸಿ ಮೂರನೇ ಬಾರಿಗೆ ಚಾಂಪಿಯನ್ಸ್ ಟ್ರೋಫಿ ಗೆದ್ದ ಸಾಧನೆ ಮಾಡಿತ್ತು, ಅಲ್ಲದೆ ನ್ಯೂಜಿಲೆಂಡ್ ವಿರುದ್ಧದ 25 ವರ್ಷಗಳ ಹಿಂದಿನ ಫೈನಲ್ ಸೋಲಿನ ಸೇಡನ್ನೂ ಕೂಡ ಭಾರತ ತೀರಿಸಿಕೊಂಡಿತ್ತು, 2000ದಲ್ಲಿ ನ್ಯೂಜಿಲೆಂಡ್ ತಂಡವು ಭಾರತವನ್ನು ಸೋಲಿಸಿ ಚೊಚ್ಚಲ ಚಾಂಪಿಯನ್ಸ್ ಟ್ರೋಫಿ ಗೆದ್ದಿತು. ಹಾಗಾಗಿ ಈ ಸಲದ ಭಾರತ ತಂಡದ ಚಾಂಪಿಯನ್‌ಶಿಪ್ ಟ್ರೋಫಿಯ ಗೆಲುವು ನಿಜಕ್ಕೂ ವಿಶೇಷವೆನಿಸಿತು.

**ಐಸಿಸಿ ಟೂರ್ನಿಗಳಲ್ಲಿ ಭಾರತದ ಪಾರಮ್ಯ:** ಭಾರತ ಕ್ರಿಕೆಟ್ ತಂಡವು ಕಳೆದ ಮೂರು ಐಸಿಸಿ ಟ್ರೋಫಿ ಟೂರ್ನಿಗಳ ಒಟ್ಟು ಆಡಿದ 23 ಪಂದ್ಯಗಳಲ್ಲಿ 22 ಪಂದ್ಯಗಳಲ್ಲಿ ಜಯ ದಾಖಲಿಸಿದರೆ, ಸೋತಿರುವುದು ಬರೀ ಒಂದೇ ಒಂದು ಪಂದ್ಯ ಮಾತ್ರ. 2023 ನವೆಂಬರ್‌ನಲ್ಲಿ ಅಹಮ್ಮದಾಬಾದ್‌ನಲ್ಲಿ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದ ಸೋಲನ್ನು ಹೊರತುಪಡಿಸಿದರೆ ಉಳಿದ ಐಸಿಸಿ ಪಂದ್ಯಗಳೆಲ್ಲವೂ ಭಾರತದ ಮಟ್ಟಿಗೆ ನಿಜಕ್ಕೂ ಯಶೋಗಾಥೆ. ಹೋದ ವರ್ಷ ಜೂನ್ ತಿಂಗಳಿನಲ್ಲಿ ಅಮೆರಿಕದಲ್ಲಿ ಜಯಿಸಿದ್ದ ಐಸಿಸಿ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಟೀಮ್ ಇಂಡಿಯಾ 9-0 ಗೆಲುವಿನ ಅಜೇಯ ದಾಖಲೆ ಮಾಡಿದರೆ, ಈ ಸಲದ ಐಸಿಸಿ ಟ್ರೋಫಿಯ ಸರಣಿಯಲ್ಲಿ ಭಾರತಕ್ಕೆ ದಕ್ಕಿದ್ದು ಅಜೇಯ 5-0 ಅಂತರದ ಸ್ಮರಣೀಯ ಗೆಲುವಾಗಿದೆ.

#### ಸಂಘಟಿತ ಪ್ರಯತ್ನದ ಗೆಲುವು

**'ನಾವು ಐದು ಪಂದ್ಯಗಳಲ್ಲೂ ಟಾಸ್‌ಗಳಲ್ಲಿ ಸೋತೆವು, ಆದರೆ ಒಂದೇ ಒಂದು ಪಂದ್ಯವನ್ನು ಕಳೆದುಕೊಳ್ಳದೆ ಚಾಂಪಿಯನ್ಸ್ ಟ್ರೋಫಿಯನ್ನು ಗೆದ್ದೆವು. ಯಾವುದೇ ಸರಣಿಯಲ್ಲಿ ಸೋಲಿಲ್ಲದೆ ಕೊನೆಯವರೆಗೆ ಹೋಗುವುದು ನಿಜಕ್ಕೂ ದೊಡ್ಡ ಸವಾಲು, ಆದರೆ ನಾವು ಅದನ್ನು ಸಾಧಿಸಿದ್ದೇವೆ. ಚಾಂಪಿಯನ್ ಪಟ್ಟವನ್ನು ಗೆದ್ದ ನಂತರವೇ ಅದರ ವಿಶಿಷ್ಟತೆಯನ್ನು ಅರಿತಿದ್ದು, ಅದನ್ನು ಪದಗಳಲ್ಲಿ ವಿವರಿಸುವುದು ಕಷ್ಟ. ಪ್ರತಿಯೊಬ್ಬರೂ ತಮ್ಮ ಪಾತ್ರ ಮತ್ತು ಜವಾಬ್ದಾರಿಗಳನ್ನು ಸ್ಪಷ್ಟವಾಗಿ ಅರಿತು ಕಾರ್ಯನಿರ್ವಹಿಸಿದರು. ನಮ್ಮ ತಂಡದ ಮುಖ್ಯ ಗುರಿಯು ಗೆಲುವನ್ನು ಸಾಧಿಸುವುದಾಗಿತ್ತು' ಎಂದು ಟೀಮ್ ಇಂಡಿಯಾ ನಾಯಕ ರೋಹಿತ್ ಶರ್ಮಾ ದೆಹಲಿಯಲ್ಲಿ ಹೇಳಿದ್ದಾರೆ. ನಾನು ಈಗಲೇ ನಿವೃತ್ತಿಯ ಬಗ್ಗೆ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿಲ್ಲ. 2027 ವಿಶ್ವಕಪ್‌ಗೆ ಆಡುತ್ತೇನೆಯೇ ಎಂಬುದರ ಬಗ್ಗೆ ಸದ್ಯ ಏನನ್ನೂ ಹೇಳಲು ಇಷ್ಟಪಡುವುದಿಲ್ಲ. ಈಗ ನನ್ನ ಗಮನ ಆಟದ ಮೇಲೆ ಮತ್ತು ತಂಡದೊಂದಿಗೆ ಸಮಯವನ್ನು ಕಳೆಯುವುದರ ಮೇಲಿದೆ. ನನ್ನ ತಂಡದ ಸಹ ಆಟಗಾರರು ನನ್ನನ್ನು ತಂಡದಲ್ಲಿ ಬಯಸುತ್ತಾರೆಯೇ ಎಂಬುದೇ ನನಗೆ ಮುಖ್ಯವಾದ ವಿಷಯ' ಎಂದರು.**

ಮಹಿಳಾ ಪ್ರೀಮಿಯರ್ ಲೀಗ್ | ಸ್ಮೃತಿ ಮಂಧಾನ ಅರ್ಧ ಶತಕ

# ಮುಂಬೈಗೆ 200 ರನ್ ಗುರಿ

**ಲಕ್ನೋ:** ಸತತ ಐದು ಪಂದ್ಯಗಳನ್ನು ಸೋತು ನಾಕೌಟ್ ರೇಸ್‌ನಿಂದ ಹೊರ ಬಿದ್ದಿರುವ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಇಲ್ಲಿ ನಡೆಯುತ್ತಿರುವ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡಕ್ಕೆ 200 ರನ್‌ಗಳ ಗೆಲುವಿನ ಗುರಿ ನೀಡಿದೆ.

ಟಾಸ್ ಗೆದ್ದ ಮುಂಬೈ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬ್ಯಾಟಿಂಗ್‌ಗೆ ಇಳಿದ ಆರ್‌ಸಿಬಿ, ಪಂದ್ಯದಲ್ಲಿ ಉತ್ತಮ ಆರಂಭವನ್ನು ಪಡೆಯಿತು. ಆರಂಭಿಕ ಆಟಗಾರರಾದ ಎಸ್. ಮೇಘನಾ ಹಾಗೂ ನಾಯಕಿ ಸ್ಮೃತಿ ಮಂಧಾನ ಬಿರುಸಿನ ಬ್ಯಾಟಿಂಗ್ ಆರಂಭಿಸಿದರು. ಮೊದಲ ವಿಕೆಟ್‌ಗೆ

ಅವರಿಬ್ಬರೂ 3.4 ಓವರ್‌ಗಳಲ್ಲಿ 41 ರನ್ ಕೂಡಿ ಹಾಕಿದರು. 13 ಬಾಲ್‌ಗಳಲ್ಲಿ 26 ರನ್ ಗಳಿಸಿದ್ದ ಮೇಘನಾ, ಹೇಲಿ ಮ್ಯಾಥ್ಯೂಸ್ ಬೌಲಿಂಗ್‌ನಲ್ಲಿ ಪುರಾಣಿಕ ಸಿಸೋಡಿಯಾಗೆ ಕ್ಯಾಚ್ ನೀಡಿ ತಮ್ಮ ವಿಕೆಟ್ ಒಪ್ಪಿಸಿದರು.

ಆ ಬಳಿಕ ನಾಯಕಿ ಮಂಧಾನ ಜೊತೆ ಬ್ಯಾಟಿಂಗ್ ಮುಂದುವರಿಸಿದ ಲೇಸ್ಸಿ ಪೆರ‍್ರಿ ಕೂಡ ಉತ್ತಮ ಲಯವನ್ನು ಕಂಡುಕೊಂಡರು. ಆರ್‌ಸಿಬಿ ತಂಡದ ಮೊತ್ತ 100 ರನ್ ಆದಾಗ 37 ಬಾಲ್‌ಗಳಲ್ಲಿ 53 ರನ್ ಗಳಿಸಿದ ತಂಡದ ನಾಯಕಿ ಸ್ಮೃತಿ ಮಂಧಾನರವರು ಅಮೇಲಿಯಾ ಕೆರ್‌ಗೆ ತಮ್ಮ ವಿಕೆಟ್ ಒಪ್ಪಿಸಿದರು. ಆ ಬಳಿಕ ಬ್ಯಾಟಿಂಗ್‌ಗೆ ಬಂದ ವಿಕೆಟ್ ಕೀಪರ್ ರಿಚಾ ಘೋಷ್, ಕೆರ್ ಜೊತೆ ಸೇರಿ ಆರ್‌ಸಿಬಿಯ ಮೊತ್ತವನ್ನು ಇನ್ನಷ್ಟು ಹಿಗ್ಗಿಸಲು ಯತ್ನಿಸಿದರು.



22 ಬಾಲ್‌ಗಳಲ್ಲಿ 36 ರನ್ ಗಳಿಸಿದ ರಿಚಾ ಘೋಷ್‌ರವರು ನ್ಯಾಟ್ ಸ್ಕಿವರ್ ಬ್ರಂಟ್‌ಗೆ ಕ್ಯಾಚ್ ಕೊಟ್ಟು, ಹೇಲಿ ಮ್ಯಾಥ್ಯೂ ಬೌಲಿಂಗ್‌ನಲ್ಲಿ ಔಟ್ ಆಗಿ ಪೆವಿಲಿಯನ್ ಕಡೆ ತೆರಳಿದರು. ಪಂದ್ಯದ ಕೊನೆಯಲ್ಲಿ 38 ಬಾಲ್‌ಗಳಲ್ಲಿ 49 ರನ್ ಗಳಿಸಿದ್ದ ಎಲಿಸ್ ಪೆರ‍್ರಿ ಮತ್ತು 10 ಬಾಲ್‌ಗಳಲ್ಲಿ 31 ರನ್ ಗಳಿಸಿದ ಜಾರ್ಜಿಯಾ ಅಜೇಯರಾಗುಳಿದರು. ಆರ್‌ಸಿಬಿ ನಿಗದಿತ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಿತು.

ಮುಂಬೈ ಇಂಡಿಯನ್ಸ್ ತಂಡದ ಪರವಾಗಿ 37 ರನ್ ನೀಡಿ ಹೇಲಿ ಮ್ಯಾಥ್ಯೂಸ್ 2 ವಿಕೆಟ್‌ಗಳನ್ನು ಮತ್ತು ಅಮೇಲಿಯಾ ಕೆರ್, 47 ರನ್ ನೀಡಿ ಒಂದು ವಿಕೆಟ್ ಪಡೆದರು.

## ಕೆಕೆಆರ್ ವಿರುದ್ಧ ಅಯ್ಯರ್ ಕಿಡಿ

**ದೆಹಲಿ:** ಪಂಜಾಬ್ ಕಿಂಗ್ಸ್ ತಂಡದ ಪರ ಮುಂಬರುವ 2025ರ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯನ್ನು ಆಡಲು ಎದುರು ನೋಡುತ್ತಿರುವ ಭಾರತ ತಂಡದ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್ ಶ್ರೇಯಸ್ ಅಯ್ಯರ್, ತಮ್ಮ ಕಳೆದ ವರ್ಷದ ತಂಡ ಕೋಲ್ಕತಾ ನೈಟ್ ರೈಡರ್ಸ್ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ. ತನ್ನ ನಾಯಕತ್ವದಲ್ಲಿ ಕೆಕೆಆರ್ ತಂಡಕ್ಕೆ ಪ್ರಶಸ್ತಿಯನ್ನು ತಂದುಕೊಟ್ಟಿದ್ದರ ಹೊರತಾಗಿಯೂ, ಕೋಲ್ಕತಾ ಫ್ರಾಂಚೈಸಿಯಲ್ಲಿ ನನ್ನನ್ನು ಯಾರೂ ಗುರಿತಿಸಲಿಲ್ಲ ಎಂದು ಶ್ರೇಯಸ್ ಅಯ್ಯರ್ ದೂರಿದ್ದಾರೆ. 2025ರ ಐಪಿಎಲ್‌ಗಾಗಿ ಡಿಸೆಂಬರ್‌ನಲ್ಲಿ ನಡೆದಿದ್ದ ಮೆಗಾ ಹರಾಜಿನಲ್ಲಿ ಶ್ರೇಯಸ್ ಅಯ್ಯರ್ ಅವರನ್ನು ಕೋಲ್ಕತಾ ಫ್ರಾಂಚೈಸಿ ಉಳಿಸಿಕೊಂಡಿರಲಿಲ್ಲ, ಆ ಹಿನ್ನೆಲೆಯಲ್ಲಿ ಅವರನ್ನು ಪಂಜಾಬ್ ಕಿಂಗ್ಸ್ ತಂಡ ಮೆಗಾ ಹರಾಜಿನಲ್ಲಿ 26.75 ಕೋಟಿ ರು. ಗಳಿಗೆ ಖರೀದಿಸಿತ್ತು.

## ಕುಸ್ತಿ ಒಕ್ಕೂಟದ ಅಮಾನತು ಆದೇಶ ರದ್ದು

**ದೆಹಲಿ:** ಭಾರತೀಯ ಕುಸ್ತಿ ಒಕ್ಕೂಟದ ಮೇಲಿನ ಅಮಾನತು ಆದೇಶವನ್ನು ಕೇಂದ್ರ ಕ್ರೀಡಾ ಸಚಿವಾಲಯವು ರದ್ದುಗೊಳಿಸಿದೆ. ಡಿಸೆಂಬರ್ 2023ರಲ್ಲಿ ಸಚಿವಾಲಯವು ಆತುರದ ನಿರ್ಧಾರ ತೆಗೆದುಕೊಂಡಿದ್ದಕ್ಕಾಗಿ ಮತ್ತು ಅಸ್ತಿತ್ವದಲ್ಲಿರುವ ನಿಯಮಗಳು ಮತ್ತು ನಿಬಂಧನೆಗಳನ್ನು ನಿರ್ಲಕ್ಷಿಸಿದ್ದಕ್ಕಾಗಿ ಭಾರತೀಯ ಕುಸ್ತಿ ಒಕ್ಕೂಟವನ್ನು ಅಮಾನತುಗೊಳಿಸಿತ್ತು, ಇದೀಗ ಅಮಾನತು ಆದೇಶವನ್ನು ತಕ್ಷಣಕ್ಕೆ ಜಾರಿಗೆ ಬರುವಂತೆ ಕ್ರೀಡಾ ಸಚಿವಾಲಯ ರದ್ದುಗೊಳಿಸಿದೆ.

ಮಾರ್ಚ್ 10ರಂದು ಕುಸ್ತಿ ಒಕ್ಕೂಟಕ್ಕೆ ಹೊಸದಾಗಿ ಆಯ್ಕೆಯಾದ ಕಾರ್ಯಕಾರಿ ಸಮಿತಿಗೆ ಮುಂದಿನ ಸೂಚನೆ ಬರುವವರೆಗೆ ದೈನಂದಿನ ಕಾರ್ಯಾಚರಣೆಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆಯಿಂದ ದೂರವಿರಲು

ಸೂಚನೆ ನೀಡಿ ನಿರ್ದೇಶನ ನೀಡಿದೆ. ತಾತ್ಕಾಲಿಕ ಸಮಿತಿಗೆ ಭೂಪಿಂದರ್ ಸಿಂಗ್ ಬಜ್ವಾ ಮುಖ್ಯಸ್ಥರಾಗಿ, ಎಂ.ಎಂ ಸೋಮಯಾ ಮತ್ತು ಮಂಜುಷಾ ಕನ್ವರ್ ಸದಸ್ಯರಾಗಿದ್ದರು.

ಹೊಸದಾಗಿ ಆಯ್ಕೆಯಾದ ಸಂಸ್ಥೆಯ ಆಡಳಿತ ವೈಫಲ್ಯಗಳು ಮತ್ತು ಕಾರ್ಯವಿಧಾನದ ಅಕ್ರಮಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ ನಂತರ ಕ್ರೀಡಾ ಸಚಿವಾಲಯವು ಈ ನಿರ್ಧಾರವನ್ನು ತೆಗೆದುಕೊಂಡಿತು. ಈ ಸಂಸ್ಥೆಯು ಸ್ಪಷ್ಟವಾಗಿ ಹಿಂದಿನ ಪದಾಧಿಕಾರಿಗಳ ನಿಯಂತ್ರಣದಲ್ಲಿದ್ದು, ಭಾರತದ ರಾಷ್ಟ್ರೀಯ ಕ್ರೀಡಾ ಅಭಿವೃದ್ಧಿ ಸಂಹಿತೆ, 2011ವನ್ನು (ಕ್ರೀಡಾ ಸಂಹಿತೆ) ಉಲ್ಲಂಘಿಸಿದೆ. ಹಿಂದಿನ ಐಒಎ ನೇಮಿಸಿದ ತಾತ್ಕಾಲಿಕ ಸಮಿತಿಯು ತೆಗೆದುಕೊಂಡ ಎಲ್ಲಾ ನಿರ್ಧಾರಗಳನ್ನು ಸಚಿವಾಲಯವು ರದ್ದುಗೊಳಿಸಿದೆ.

ಕ್ರೀಡಾ ಸಂಹಿತೆಗೆ ಅನುಗುಣವಾಗಿ ಮತ್ತು ಕ್ರೀಡಾಪಟುಗಳನ್ನು ಕಿರುಕುಳ ಮತ್ತು ನಿಂದನೆಯಿಂದ ರಕ್ಷಿಸುವ ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ ನೀತಿಗಳಿಗೆ ಹಾಗೂ ಉತ್ತಮ ಆಡಳಿತದ ತತ್ವಗಳಿಗೆ ಮತ್ತು ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆಗಟ್ಟುವಿಕೆ ಕಾಯ್ದೆ, 2013ಕ್ಕೆ ಅನುಗುಣವಾಗಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಡಿಸೆಂಬರ್ 2023ರಲ್ಲಿ, ಸಂಜಯ್ ಸಿಂಗ್ ನೇತೃತ್ವದ ಕುಸ್ತಿ ಒಕ್ಕೂಟವನ್ನು ಕ್ರೀಡಾ ಸಚಿವಾಲಯ ರದ್ದುಗೊಳಿಸಿತ್ತು.

## ಅಕ್ಷರ್ ಪಟೇಲ್ ಡೆಲ್ಲಿ ಕ್ಯಾಪ್ಟನ್?

**ದೆಹಲಿ:** ಭಾರತ ತಂಡದ ಐಸಿಸಿ ಚಾಂಪಿಯನ್ಸ್ ಟ್ರೋಫಿ ಗೆಲುವಿನಲ್ಲಿ ಆಲ್‌ರೌಂಡ್ ಪ್ರದರ್ಶನದ ಮೂಲಕ ಪ್ರಮುಖ ಪಾತ್ರ ವಹಿಸಿದ್ದ ಅಕ್ಷರ್ ಪಟೇಲ್ 2025ರ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ನಿಮಿತ್ತ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ನೂತನ ನಾಯಕನಾಗಿ ನೇಮಕಗೊಳ್ಳುವ ಸಾಧ್ಯತೆಯಿದೆ. 2024ರ ಟೂರ್ನಿಯಲ್ಲಿ ಒಂದೇ ಒಂದು ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಅಕ್ಷರ್ ಪಟೇಲ್ ಮುನ್ನಡೆಸಿದ್ದರು. ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧದ ಆ ನಿರ್ಣಾಯಕ ಪಂದ್ಯದಲ್ಲಿ ಓವರ್ ರೇಟ್ ಅಪರಾಧದಿಂದಾಗಿ ಡೆಲ್ಲಿ ಮಾಜಿ ನಾಯಕ ರಿಷಭ್ ಪಂತ್ ಒಂದು ಪಂದ್ಯದಿಂದ ನಿಷೇಧ ಹೇರಿದ ಹಿನ್ನೆಲೆಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಅಕ್ಷರ್ ಮುನ್ನಡೆಸಿದ್ದು, ಇದೀಗ ಅವರು ಪೂರ್ಣ ಪ್ರಮಾಣದ ನಾಯಕರಾಗಲಿದ್ದಾರೆಂದು ವರದಿಯಾಗಿದೆ.

2025ರ ಐಪಿಎಲ್ ಟೂರ್ನಿಗೆ ಫ್ರಾಂಚೈಸಿಯು ಕೆಎಲ್ ರಾಹುಲ್ ಅವರನ್ನು ತಂಡದ ನಾಯಕರನ್ನಾಗಿ ಮಾಡುವಂತೆ ಕೇಳಿಕೊಂಡಿತ್ತು ಆದರೆ ಅವರ ಅವರ ಪತ್ನಿ ಅತಿಯಾ ಶೆಟ್ಟಿ ಗರ್ಭಿಣಿಯಾಗಿರುವ ಕಾರಣ ಕೆಲವು ಪಂದ್ಯಗಳಿಂದ ರಾಹುಲ್‌ಗೆ ವಿನಾಯಿತಿ ಬೇಕಿರುವ ಹಿನ್ನೆಲೆಯಲ್ಲಿ, ಈ ಸಲದ ಐಪಿಎಲ್ ಟೂರ್ನಿಯಲ್ಲಿ ಕೆಎಲ್ ರಾಹುಲ್ ಆಟಗಾರನಾಗಿ ತಂಡಕ್ಕೆ ಕೊಡುಗೆ ನೀಡಲು ಬಯಸುತ್ತಾರೆ ಎಂದು ಮೂಲಗಳು ತಿಳಿಸಿವೆ ಎಂಬುದನ್ನು ಸುದ್ದಿಸಂಸ್ಥೆಯೊಂದು ವರದಿ ಮಾಡಿದೆ. ಹಾಗಾಗಿ ಅಕ್ಷರ ಪಟೇಲ್ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್ ತಂಡ ನಾಯಕನಾಗಿ ಆಯ್ಕೆ ಮಾಡುವ ಸಾಧ್ಯತೆಗಳೇ ಸದ್ಯದ ಮಟ್ಟಿಗಿನ ಸುದ್ದಿ.

## ವಿಟಾಕೀಸ್

# ಕಿರುತೆರೆಗೆ ಮರಳಿದ ಕಿರಣ್

ಕಿರಣ್ ರಾಜ್ ಕಿರುತೆರೆಯ ಮೂಲಕ ನಟನಾಗಿ ಪ್ರಸಿದ್ಧಿ ಪಡೆದಿದ್ದರು. ಕಿರಣ್ ಅಭಿನಯದ ಕನ್ನಡ ಧಾರಾವಾಹಿ ಭರ್ಜರಿ ಯಶಸ್ಸು ಪಡೆದಿತ್ತು. ಈ ಧಾರಾವಾಹಿಯಿಂದ ಕಿರಣ್‌ಗೆ ಸಿನಿಮಾಗಳಲ್ಲಿಯೂ ನಟಿಸುವ ಅವಕಾಶ ಸಿಕ್ಕಿತ್ತು. ಕನ್ನಡ ಮೂರು ನಾಲ್ಕು ಸಿನಿಮಾಗಳಲ್ಲಿ ಕಿರಣ್ ನಟಿಸಿದ್ದರು. ಆದರೆ ಅದ್ಯಾಕೋ ಅದ್ಯಾವ ಸಿನಿಮಾಗಳು ತೆರೆಯಲ್ಲಿ ಸದ್ದು ಮಾಡಲೇ ಇಲ್ಲ, ಯಶಸ್ಸು ತಂದುಕೊಡಲೇ ಇಲ್ಲ. ಚಾಕಲೇಟ್ ಹೀರೊ ಎಂದೇ ಖ್ಯಾತಿ ಪಡೆದಿದ್ದ ಕಿರಣ್ ಆ್ಯಕ್ಷನ್ ಸಿನಿಮಾಗಳಲ್ಲಿ ನಟಿಸಿ, ರಗಡ್ ಲುಕ್‌ನಲ್ಲಿ ಮಿಂಚಿದ್ದರು. ಆದರೆ ಆ ಪಾತ್ರಗಳು ಸಿನಿಪ್ರಿಯರಿಗೆ ರುಚಿಸಲೇ ಇಲ್ಲ.

ಹಾಗಾಗಿ ಕಿರಣ್ ಸಿನಿಮಾಗಳಲ್ಲಿ ಸಕ್ಸಸ್ ಕಾಣಲಿಲ್ಲ. ಈಗ ಕನ್ನಡತಿ ಕಿರಣ್ ಮತ್ತೆ ಕಿರುತೆರೆಗೆ ಮರಳಿದ್ದಾರೆ. ಕರ್ಣ ಶೀರ್ಷಿಕೆಯಲ್ಲಿ ಹೊಸ ಧಾರಾವಾಹಿ ಪ್ರಸಾರ ಆರಂಭಿಸಲಿದ್ದು, ಈ ಧಾರಾವಾಹಿಯಲ್ಲಿ ಕಿರಣ್ ನಾಯಕನಾಗಿ ನಟಿಸಲಿದ್ದಾರೆ. ಕರ್ಣ ಖ್ಯಾತ ಸ್ತ್ರೀ ರೋಗ ತಜ್ಞ, ಎಲ್ಲರಿಂದ ಗೌರವಕ್ಕೆ ಪಾತ್ರವಾಗಿರುವ ನಾಯಕ ಮನೆಯಲ್ಲಿ ಮಾತ್ರ ಸಾಮಾನ್ಯ ವ್ಯಕ್ತಿಯಂತಿರುತ್ತಾನೆ. ಅಲ್ಲದೆ ಮನೆಯವರು ಹೇಳಿದ ಕೆಲಸವನ್ನು ಚಾಚು ತಪ್ಪದೇ ಮಾಡುತ್ತಾನೆ. ಅಷ್ಟಕ್ಕೂ ಈ ಕರ್ಣ ಈ ಮನೆಯವನ ಅಥವಾ ದತ್ತು ಪುತ್ರನ ಎಂಬುದೇ ಕರ್ಣ ಧಾರಾವಾಹಿಯ ಸಸ್ಪೆನ್ಸ್. ಇನ್ನೇನು ಈ ಧಾರಾವಾಹಿ ಪ್ರಸಾರ ಆರಂಭಿಸಲಿದೆ. ಕಿರುತೆರೆಯ ಸೀರಿಯಲ್ ಮೂಲಕ ಕಿರಣ್ ರಾಜ್ ಮತ್ತೆ ಬಿಗ್ ಬ್ರೇಕ್ ಪಡೆಯುವ ನಿರೀಕ್ಷೆಯಲ್ಲಿದ್ದಾರೆ.

# ಬೆಳ್ಳಿತೆರೆಯಲ್ಲಿ ಚಾಮಯ್ಯ ಮಾಸ್ಟರ್

ಎಪ್ಪತ್ತರ ದಶಕದಲ್ಲಿ ಬಿಡುಗಡೆಯಾದ ನಾಗರ ಹಾವು ಚಿತ್ರ ಸೂಪರ್ ಹಿಟ್ ಆಗಿತ್ತು. ಈ ಸಿನಿಮಾದಲ್ಲಿನ ಚಾಮಯ್ಯ ಮಾಸ್ಟರ್ ಪಾತ್ರ ಗಮನಸೆಳೆದಿತ್ತು. ಪ್ರೇಕ್ಷಕರ ಮನದಲ್ಲಿ ಅಚ್ಚಳಿಯದೇ ಉಳಿದಿತ್ತು. ಈಗ ಚಾಮಯ್ಯ ಸನ್ ಆಫ್ ರಾಮಾಚಾರಿ ಚಿತ್ರ ಸದ್ದಿಲ್ಲದೆ ಸೆಟ್ಟೇರಿದ್ದು ಈಗ ಚಿತ್ರೀಕರಣವೂ ಮುಕ್ತಾಯವಾಗಿದೆ. ಕೋಟೆ ನಾಡಿನ ನಾಗರ ಹಾವು ಎಂಬ ಅಡಿಬರಹ ಈ ಚಿತ್ರಕ್ಕಿದೆ. ರಾಧಾಕೃಷ ಪಲ್ಲಕ್ಕಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುವುದರ ಜತೆಗೆ ಜೋಳಿಗೆ ಸಿನಿಮಾಸ್ ಬ್ಯಾನರ್‌ನಲ್ಲಿ ಬಂಡವಾಳ ಹೂಡಿದ್ದಾರೆ. ಪ್ರಮುಖ ಪಾತ್ರದಲ್ಲಿಯೂ ನಟಿಸಿದ್ದಾರೆ.

ಮೂಲ ಸಿನಿಮಾದ ಕ್ಲೈಮಾಕ್ಸ್‌ದಲ್ಲಿ ರಾಮಾಚಾರಿ ಸಾಯುತ್ತಾನೆ. ಇದರಲ್ಲಿ ಬದುಕಿ ಊರಿಗೆ ಬಂದಾಗ ಎಲ್ಲರು ಛೀಮಾರಿ ಹಾಕುತ್ತಾರೆ. ಪೈಲ್ವಾನ್ ಬಸಪ್ಪ ಈತನನ್ನು ಕಂಪನಿ ನಾಟಕಕ್ಕೆ ಸೇರಿಸುತ್ತಾರೆ. ಎಪ್ಪತ್ತರ ದಶಕದಿಂದ ಆರಂಭವಾಗುವ ಕಥೆ, ಪ್ರಸ್ತುತ ಕಾಲಘಟ್ಟದವರೆಗೂ ಸಾಗುತ್ತದೆ. ಮುಂದೆ ಒಂದು ಘಟ್ಟದಲ್ಲಿ ರಾಮಾಚಾರಿ ಬದುಕಿನಲ್ಲಿ ಘೋರ ದುರಂತ ನಡೆಯುತ್ತದೆ. ಆಗ ಏನು ಮಾಡುತ್ತಾನೆ ಎಂಬುದೇ ಚಿತ್ರದ ಸಸ್ಪೆನ್ಸ್. ಕೆಲವು ಸನ್ನಿವೇಶದಲ್ಲಿ ಚಿತ್ರದುರ್ಗದ ಕೋಟೆಯನ್ನು ಬಳಸದೆ, ಹಿನ್ನೆಲೆಯಲ್ಲಿರುವ ಮಹಾನ್ ನಾಯಕರ ಕೋಟೆಗಳ ದೃಶ್ಯಗಳನ್ನು ಸೆರೆ ಹಿಡಿಯಲಾಗಿದೆ. ಇವರೆಲ್ಲರ ಚರಿತ್ರೆಗಳು ಸಣ್ಣದಾಗಿ ಬಂದು ಹೋಗುತ್ತವೆ. ಬೆಂಗಳೂರು, ಬಾದಾಮಿ, ಬನಶಂಕರಿ,

ಐಹೊಳೆ ಸುಂದರ ತಾಣಗಳಲ್ಲಿ ಶೂಟಿಂಗ್ ನಡೆಸಲಾಗಿದೆ. ಜಲೀಲ್ ಮಗನಾಗಿ ಚೋಟಾ ಜಲೀಲ್ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕಾಣಿಸಿಕೊಂಡಿದ್ದಾರೆ. ಚಾಮಯ್ಯನಾಗಿ ಪ್ರದೀಪ್ ಶಾಸ್ತ್ರೀ, ಮಗಳಾಗಿ ಚೈತ್ರಾ, ಪ್ರಿನ್ಸಿಪಾಲ್ ಪಾತ್ರದಲ್ಲಿ ಪ್ರಕಾಶ್ ಅರಸು ಅಭಿನಯಿಸಿದ್ದಾರೆ. ಉಳಿದಂತೆ ಪ್ರೇಮಾಗೌಡ, ವಿನುತಾ, ರಾಘವೇಂದ್ರ, ಸುಧಾಕರ, ಸೂರ್ಯತೇಜ, ಕಾರ್ತಿಕ್, ಗುರುಕಿರಣ್, ಸಂದೀಪ್ ಹಾಗೂ ಹಲವು ರಂಗಭೂಮಿ ಪ್ರತಿಭೆಗಳು ಚಿತ್ರದಲ್ಲಿ ನಟಿಸಿದ್ದಾರೆ.

ಡಾ.ಕುಮಾರ್‌ಚಲ್ಯಾ ಮತ್ತು ಹೈತೋ ಸಾಹಿತ್ಯದ ಗಜಲ್ ಗೀತೆಗಳಿಗೆ ಸ್ಯಾಮ್ ಸಂಗೀತ ಸಂಯೋಜಿಸಿದ್ದಾರೆ. ಛಾಯಾಗ್ರಹಣ ಎಂ.ಆರ್.ಸೀನು, ಸಂಕಲನ ಶಿವಕುಮಾರ್ ನಿರ್ವಹಿಸಿದ್ದಾರೆ. ಚಾಮಯ್ಯ ಮೇಸ್ಟ್ರು ಏಪ್ರಿಲ್‌ನಲ್ಲಿ ತೆರೆಗೆ ಬರಲಿದೆ.

**ಈ ಬಂಧನ ಚಿತ್ರೀಕರಣ ಸಂದರ್ಭದಲ್ಲಿ ಡಾ.ವಿಷ್ಣು ಸರ್ ಅವರನ್ನು ಭೇಟಿ ಮಾಡಿ, ಈ ಚಿತ್ರದ ಸಣ್ಣದೊಂದು ಎಳೆ ಹೇಳಿದ್ದೆ. ಅವರು ಸ್ಟೋರಿ ಕೇಳಿ ಮೆಚ್ಚಿದ್ದರು. ಅವರು ಕಾಲವಾದ ನಂತರ ಇದನ್ನು ಮಾಡುವುದು ಬೇಡವೆಂದು ಸುಮ್ಮನಿದ್ದೆ. ಒಮ್ಮೆ ಉತ್ತರ ಕರ್ನಾಟಕದಲ್ಲಿ ನಾಟಕ ನೋಡಲು ಹೋದಾಗ ಅಲ್ಲಿ ರಂಗಭೂಮಿಯ ಹಿರಿಯ ಕಲಾವಿದ ಜಯಶ್ರೀ ರಾಜ್ ನಟನೆ ನೋಡಿದಾಗ, ಈ ಸಿನಿಮಾ ಮಾಡುವ ಬಗ್ಗೆ ಚಿಂತನೆ ಹೊಳೆಯಿತು. ಅಂದುಕೊಂಡಂತೆ ಸಿನಿಮಾ ಸಿದ್ಧವಾಗಿದೆ.**

-ರಾಧಾಕೃಷ್ಣ ಪಲ್ಲಕ್ಕಿ ನಿರ್ದೇಶಕ

# ಬ್ಯಾಡ್ ಚಿತ್ರದ ಪ್ರೇಮಗೀತೆ

ಪಿ.ಸಿ.ಶೇಖರ್ ನಿರ್ದೇಶನದ ಬ್ಯಾಡ್ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ಸದ್ಯ ಈ ಚಿತ್ರದ ಹಾಡು ಬಿಡುಗಡೆಯಾಗಿದ್ದು ಸಖತ್ ಸದ್ದು ಮಾಡುತ್ತಿದೆ. ಎಸ್.ಆರ್.ವೆಂಕಟೇಶ್ ಗೌಡ ನಿರ್ಮಿಸಿರುವ ಹಾಗೂ ನಕುಲ್ ಗೌಡ ನಾಯಕನಾಗಿ ನಟಿಸಿರುವ ಬಹು ನಿರೀಕ್ಷಿತ ಬ್ಯಾಡ್ ಚಿತ್ರಕ್ಕಾಗಿ ಚಿತ್ರ ಸಾಹಿತಿ ಕವಿರಾಜ್ ಬರೆದಿರುವ ನೀ ಬರುವೆ ಅಂತ ನಾ ಕಾದು ಕುಂತ.. ಎಂಬ ಸುಂದರ ಪ್ರೇಮಗೀತೆ ಬಿಡುಗಡೆಯಾಗಿದೆ. ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿರುವ ಈ ಹಾಡನ್ನು ಸರಿಗಮಪ ಖ್ಯಾತಿಯ ಪೃಥ್ವಿ ಭಟ್ ಹಾಡಿದ್ದಾರೆ. ಈ ಹಾಡು ಬಿಡುಗಡೆಯಾದ ಕೆಲವೇ ಗಂಟೆಗಳಲ್ಲಿ ಲಕ್ಷಾಂತರ ವೀಕ್ಷಣೆ ಕಂಡಿದೆ. ನಾಯಕನ ಬರುವಿಕೆಗಾಗಿ ಕಾದು ಕುಳಿತಿರುವ ನಾಯಕಿ, ಕಾಯುವಿಕೆಯ ಆ ಸಮಯದಲ್ಲಿ ಏನೆಲ್ಲಾ ಕಲ್ಪಿಸಿಕೊಳ್ಳುತ್ತಾಳೆ ಎಂಬುದನ್ನು ಈ ಹಾಡಿನ ಮೂಲಕ ಕಟ್ಟಿಕೊಡಲಾಗಿದೆ. ಕಾಮ, ಕ್ರೋಧ ಮೊದಲಾದ ಅರಿಷಡ್ವರ್ಗಗಳನ್ನು ಪ್ರತಿನಿಧಿಸುವ ಆರು ಪಾತ್ರಗಳಲ್ಲಿ ಆರು ಜನ ಕಲಾವಿದರು ಅಭಿನಯಿಸಿರುವುದು ಈ ಚಿತ್ರದ ವಿಶೇಷ ಎನ್ನುತ್ತಾರೆ ನಿರ್ದೇಶಕರು.

ನಕುಲ್ ಗೌಡ ನಾಯಕನಾಗಿ ನಟಿಸಿದ್ದು, ಮಾನ್ವಿತಾ ಹರೀಶ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಸಾಯಿ ಕೃಷ್ಣ, ಅಪೂರ್ವಾ ಭಾರದ್ವಾಜ್, ಮಂಜುನಾಥ್, ಅಶ್ವಿನಿ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ಚಿತ್ರೀಕರಣ ಮುಗಿಸಿರುವ ಬ್ಯಾಡ್ ಟೀಸರ್ ಹಾಗೂ ಹಾಡುಗಳಲ್ಲಿ ಮನಗೆದ್ದಿದ್ದು, ಶೀಘ್ರದಲ್ಲಿಯೇ ತೆರೆಗೆ ಬರಲಿದೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನವಿರುವ ಚಿತ್ರಕ್ಕೆ ನಿರ್ದೇಶಕ ಪಿ.ಸಿ.ಶೇಖರ್ ಅವರೆ ಸಂಕಲನ ಕಾರ್ಯ ನಿರ್ವಹಿಸಿದ್ದಾರೆ. ಜಿ.ರಾಜಶೇಖರ್ ಕಲಾ ನಿರ್ದೇಶನ ಹಾಗೂ ಶಕ್ತಿ ಶೇಖರ್ ಛಾಯಾಗ್ರಹಣವಿದ್ದು, ಸಚಿನ್ ಜಗದೀಶ್ವರ್ ಸಂಭಾಷಣೆ ಬರೆದಿದ್ದಾರೆ.

# ಮಹಿಳಾ ಪ್ರಧಾನ ಚಿತ್ರದಲ್ಲಿ ನಿಮಿಕಾ

ಶೇಕ್ ಇಟ್ ಪುಷ್ಪವತಿ ಹಾಡಿನ ಮೂಲಕ ಭಾರೀ ಕ್ರೇಜ್ ಹುಟ್ಟು ಹಾಕಿದ ಕರಾವಳಿ ಬೆಡಗಿ ನಿಮಿಕಾ ರತ್ನಾಕರ್ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಈ ನಡುವೆ ಮತ್ತೊಂದು ಹೊಸ ಚಿತ್ರದಲ್ಲಿ ನಟಿಸಲು ಸಿದ್ಧವಾಗಿದ್ದಾರೆ. ವಿಶೇಷವೆಂದರೆ ಈ ಬಾರಿ ನಿಮಿಕಾ ಮಹಿಳಾ ಪ್ರಧಾನ ಸಿನಿಮಾದಲ್ಲಿ ಅಭಿನಯಿಸುತ್ತಿದ್ದಾರೆ. ವೈಲ್ಡ್ ಟೈಗರ್ ಸಫಾರಿ ಶೀರ್ಷಿಕೆಯಲ್ಲಿ ಸಿನಿಮಾ ಸೆಟ್ಟೇರಿದೆ. ವೈಲ್ಡ್ ಟೈಗರ್ ಸಫಾರಿ ಚಿತ್ರವನ್ನು ಚಂದ್ರಮೌಳಿ ನಿರ್ದೇಶನ ಮಾಡಲಿದ್ದಾರೆ. ಸಿನಿಮಾದಲ್ಲಿ ಶಿಥಿಲ್ ಪೂಜಾರಿ ನಾಯಕನಾಗಿ ನಟಿಸುತ್ತಿದ್ದು, ಈ ಚಿತ್ರದ ಮೂಲಕ ನಾಯಕನಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಬಾಲಿವುಡ್‌ನಲ್ಲಿ ಪ್ರಸಿದ್ಧಿ ಪಡೆದಿರುವ ಧರ್ಮೇಶ್ ಹಾಗೂ ಸುಶಾಂತ್ ಪೂಜಾರಿ ಈ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಲಿದ್ದಾರೆ. ನಿಮಿಕಾ ಪಾತ್ರಕ್ಕೆ ಸಾಕಷ್ಟು ಮಹತ್ವವಿದ್ದು, ಚಿತ್ರದುದ್ದಕ್ಕೂ ಮಿಂಚಲಿದ್ದಾರೆ.

ಕೆಜಿಎಫ್ ಭಾಗವಾಗಿದ್ದ ಪ್ರತಿಭಾನ್ವಿತರ ತಂಡ ಈ ಚಿತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವೈಲ್ಡ್ ಟೈಗರ್ ಸಫಾರಿ ಸೆಟ್ಟೇರುವ ಮೊದಲೇ ಕುತೂಹಲ ಮೂಡಿಸಿದೆ. ನಿಮಿಕಾ, ಓಂಪ್ರಕಾಶ್ ರಾವ್ ನಿರ್ದೇಶನದ ತ್ರಿಶೂಲಂ ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ್ದಾರೆ. ರಿಯಲ್ ಸ್ಟಾರ್ ಉಪೇಂದ್ರ ಹಾಗೂ ರವಿಚಂದ್ರನ್ ಈ ಚಿತ್ರದ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಇದರ ಜತೆಗೆ ಫೀನಿಕ್ಸ್ ಎಂಬ ಚಿತ್ರದಲ್ಲಿಯೂ ನಾಯಕಿಯಾಗಿ ಅಭಿನಯಿಸುತ್ತಿದ್ದಾರೆ. ಫೀನಿಕ್ಸ್ ಚಿತ್ರವನ್ನು ಓಂಪ್ರಕಾಶ್ ರಾವ್ ನಿರ್ದೇಶನ ಮಾಡುತ್ತಿದ್ದಾರೆ. ಇದು ಮಹಿಳಾ ಪ್ರಧಾನ ಕಥಾ ಹಂದರದ ಚಿತ್ರವಾಗಿದ್ದು, ಇದರಲ್ಲಿ ನಿಮಿಕಾ ವಿಭಿನ್ನ ಪಾತ್ರದಲ್ಲಿ ನಟಿಸುತ್ತಿದ್ದಾರೆ.